INSIGHTSIAS
SIMPLIFYING IAS EXAM PREPARATION

INSTAKAS

# 'ಅನನ್ಯ ಸಾಧನಾ'

ಮೌಲ್ಯವರ್ಧಿತ ಉನ್ನತೀಕರಣ...

**ಸಮಗ್ರ ಪ್ರಚಲಿತ ವಿದ್ಯಮಾನಗಳ ಕನ್ನಡ ಮಾಸಪತ್ರಿಕೆ** | **ಡಿಸೆಂಬರ್ 2025**

**Essential for success in**
KAS,
FDA/SDA/PDO/
GROUP C, PSI/PC,
TEACHER'S EXAMS









## Coverage

- ರಾಜಕೀಯ ಮತ್ತು ಆಡಳಿತ
- ಆರ್ಥಿಕತೆ
- ಆರೋಗ್ಯ ಮತ್ತು ಸಮಾಜ
- ಪರಿಸರ
- ವಿಜ್ಞಾನ ಮತ್ತು ತಂತ್ರಜ್ಞಾನ
- ಸಂಸ್ಕೃತಿ
- ಭದ್ರತೆ
- ಅಂತರರಾಷ್ಟ್ರೀಯ
- ಕರ್ನಾಟಕ ದರ್ಶನ
- ಅಭ್ಯಾಸ ಪ್ರಶ್ನೆಗಳು


080 69 405 206

www.insightsonindia.com

t.me/InstaKASforKPSC



Subscribe to our channel
**INSTA KAS**



**ಶ್ರೀ ವಿನಯ್ ಕುಮಾರ್ ಜಿ ಬಿ**
ಸಂಸ್ಥಾಪಕರು ಮತ್ತು ನಿರ್ದೇಶಕರು
ಇನ್‌ಸೈಟ್ಸ್ ಐಎಎಸ್, ಬೆಂಗಳೂರು

# *Editor's page*



What began in June 2013 as a small Daily Answer Writing Challenge soon grew into the Secure Initiative — connecting aspirants worldwide to learn and improve together. Over time, Insights IAS has become a trusted friend and guide for lakhs of UPSC aspirants, helping thousands achieve success. Your feedback, support, and trust have shaped our journey.

As we continue to evolve, our goal remains the same — to simplify your preparation, remove distractions, and help you give your best effort with confidence and clarity.

That's what matters most to us — your growth and satisfaction.

**Best Regards,**
**Vinay Kumar GB**
Founder & Director, Insights IAS



To the future administrators of Karnataka,

Success in KPSC and other state exams demands more than facts—it requires a Karnataka-centric mindset: understanding how state schemes shape districts, how budgets affect people, and how heritage connects to progress.

Ananya Sadhana is your focused companion in this journey—delivering analytical, state-specific content to strengthen your preparation for Prelims, Mains, and Interview.
Your goal isn't just to clear an exam, but to help build Karnataka's future.

Let's shape a prosperous Karnataka, together.

Best,
**Sharath Kumar S**
Managing Director, Insights IAS | INSTA KAS

# Sources

# About the Magazine

The magazine is a must-read for competitive exam aspirants of KAS, FDA/SDA, PSI/PC, Group C, PDO, Teacher Recruitment & Asst Prof Exams. It provides a 360-degree overview, covering both the current and the static part of the topics.

This magazine has been divided into two main parts. The first part consists of the analysis of the current affairs topics and associated information. The topics have been divided into different sections like Polity and Governance, Economy, Science and Technology etc for focussed approach.

The second part consists of fact oriented current affairs which is useful for all exams. This will act as a ready reckoner for most important facts.

The USP of the book is presentation of information in crisp format. Efforts have been made by the team to provide information in a very precise way.

# The Team


- **Nandan R**(Faculty for Current affairs and Environment)
- **Dinesh**(Mentor)
- **Vishwaprasanna Kumar** (Content contributor)

## ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ 8

1. ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿ (NCLAT)
2. ತ್ಯಾಜ್ಯ ನಿಕ್ಷೇಪಣೆ ಸ್ಥಳ (ಡಂಪಿಂಗ್ ಸೈಟ್) ದ ಪುನಶ್ಚೇತನ ವೇಗವರ್ಧಕ ಕಾರ್ಯಕ್ರಮ (DRAP)
3. ಅಸ್ಸಾಂ ಬಹುಪತಿತ್ವ/ಬಹುಪತ್ನಿತ್ವ ನಿಷೇಧ ಮಸೂದೆ-2025
4. ಭಾರತ ಅಭಿವೃದ್ಧಿ ಮತ್ತು ಕಾರ್ಯತಂತ್ರ ನಿಧಿ (IDSF)
5. ಡಿಜಿಟಲ್ ಸಾಗರಿಕ ಮೀನುಗಾರಿಕೆ ಗಣತಿ, 2025
6. ಭೂ ವ್ಯವಸ್ಥೆ ವಿಜ್ಞಾನ ಮಂಡಳಿ
7. ಅಸ್ಸಾಂ ಒಪ್ಪಂದ (1985)
8. ಸಂವಿಧಾನದ ವಿಧಿ 240

## ಆರ್ಥಿಕತೆ 10

1. ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ
2. ಭಾರತೀಯ ಕಲ್ಲಿದ್ದಲು ನಿಗಮ ನಿಯಮಿತ (CIL)
3. ಈಶಾನ್ಯ ಭಾರತದ ವಿಜ್ಞಾನ ಮತ್ತು ತಂತ್ರಜ್ಞಾನ (NEST) ಸಮೂಹ
4. ನೀಲಿ ನಗರಗಳು
5. ಸ್ಟೇಬಲ್‌ಕಾಯಿನ್‌ಗಳು (ಸ್ಥಿರ ನಾಣ್ಯಗಳು)
6. ರಾಷ್ಟ್ರೀಯ ಜೇನುಸಾಕಣೆ ಮತ್ತು ಜೇನುತುಪ್ಪ ಗುರಿ
7. ಮೋಲ್ಯಾಸಿಸ್ (ಕಾಕಂಬಿ)
8. ಹಣ ಅಮಾನ್ಯೀಕರಣವಾಗಿ ಒಂಬತ್ತು ವರ್ಷಗಳ ನಂತರ
9. ಭೌಗೋಳಿಕ ಸೂಚ್ಯಂಕ ಪಟ್ಟಿಯ ಅರ್ಜಿ  ಶುಲ್ಕ ಕಡಿತ
10. ನಗರ ಸಹಕಾರಿ ಬ್ಯಾಂಕುಗಳು (UCB's)
11. ನೌಕರರ ನೋಂದಣಿ ಯೋಜನೆ, 2025
12. 'ಆಭಾರ್' ಆನ್‌ಲೈನ್ ಮಳಿಗೆ
13. ಭಾರತ ಅಂತರರಾಷ್ಟ್ರೀಯ ವ್ಯಾಪಾರ ಮೇಳ (IITF)
14. ಕೋಡೆಕ್ಸ್ ಅಲಿಮೆಂಟರಿಯಸ್ ಆಯೋಗ (Codex Alimentarius Commission)
15. ಜಲ ಆಯವ್ಯಯ (Water Budgeting)
16. ಪರಿಷ್ಕೃತ "ಉಡಾನ್" (UDAN) ಪ್ರಾದೇಶಿಕ ವಾಯು ಸಂಪರ್ಕ ಯೋಜನೆ
17. ಗಂಭೀರ ವಂಚನೆ ತನಿಖಾ ಕಚೇರಿ (SFIO)
18. ಮೀರತ್ ಬ್ಯೂಗಲ್ ವಾದ್ಯ
19. ಸರ್ಕಾರಿ ಭದ್ರತಾ ಪತ್ರಗಳು (G-Secs)
20. ವಿದ್ಯುನ್ಮಾನ ಅಭಿವೃದ್ಧಿ ನಿಧಿ (EDF)

## ಆರೋಗ್ಯ ಮತ್ತು ಸಮಾಜ 18

1. ಮಾಲ್ದೀವ್ಸ್ ಒಂದು ಪೀಳಿಗೆಯ ಮಟ್ಟದ ತಂಬಾಕು ನಿಷೇಧವನ್ನು ಜಾರಿಗೆ ತಂದ ಮೊದಲ ದೇಶ
2. ಎನ್ಸೆಫಲೋಮಯೋಕಾರ್ಡಿಟಿಸ್ ವೈರಸ್ (EMCV)
3. ಸಾರ್ವತ್ರಿಕ ಆರೋಗ್ಯ ವ್ಯಾಪ್ತಿ (UHC)
4. ಕೆಲಸದ ಸ್ಥಳದ ಒತ್ತಡ ಮತ್ತು ಮಧುಮೇಹ
5. ಹೆಪಟೈಟಿಸ್ ಎ
6. ರಿಫ್ಟ್ ವ್ಯಾಲಿ ಜ್ವರ
7. ನಿಫಾ ವೈರಸ್
8. ಕೇಂದ್ರ ಆರೋಗ್ಯ ಸಚಿವಾಲಯದಿಂದ 3 ಗಿನ್ನೆಸ್ ವಿಶ್ವ ದಾಖಲೆಗಳ ನಿರ್ಮಾಣ
9. ತಪ್ಪುದಾರಿಗೆ ಎಳೆಯುವ ಒಆರ್‌ಎಸ್ (ORS) ಗುರುತು ಪಟ್ಟಿ ಹೊಂದಿರುವ ಪಾನೀಯಗಳನ್ನು ತಕ್ಷಣವೇ ತೆಗೆದುಹಾಕುವಂತೆ FSSAI ಆದೇಶಿಸಿದೆ
10. ಅಕಾಂಥೋಸಿಸ್ ನಿಗ್ರಿಕಾನ್ಸ್ (Acanthosis Nigricans)
11. ಎಎಂಆರ್ 2.0 ಮೇಲಿನ ರಾಷ್ಟ್ರೀಯ ಕಾರ್ಯ ಯೋಜನೆ ಬಿಡುಗಡೆ ಮಾಡಲಾಗಿದೆ
12. ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ (NFSA) ಯ ಪಟ್ಟಿಯಿಂದ ಅನರ್ಹ ಫಲಾನುಭವಿಗಳನ್ನು ತೆಗೆದು ಹಾಕಲಾಗುವುದು
13. ಭಾರತೀಯ ಆಹಾರದಲ್ಲಿ ಔರಮೈನ್
14. ಸಮಗ್ರ ಶಿಶು ಅಭಿವೃದ್ಧಿ ಸೇವೆಗಳ ಕಾರ್ಯಕ್ರಮ (ICDS)
15. ಅಮಿಬಿಕ್ ಮೆನಿಂಗೊ ಎನ್ಸೆಫಾಲಿಟಿಸ್

## ಭೂಗೋಳ ಮತ್ತು ಪರಿಸರ 26

1. ರಾಷ್ಟ್ರೀಯ ಅಧಿಕಾರ ವ್ಯಾಪ್ತಿಯಾಚೆಗಿರುವ ಜೀವ ವೈವಿಧ್ಯತೆ (ಹೈ ಸೀಸ್ ಒಪ್ಪಂದ)
2. ಅಂತರರಾಷ್ಟ್ರೀಯ ಜೀವಗೋಳ ಮೀಸಲು ದಿನ
3. ಸರಂಡಾ ಅರಣ್ಯ
4. ವಿದ್ಯುತ್ ವಾಹನಗಳ ಉತ್ತೇಜನಕ್ಕಾಗಿ NEMMP, 2020 ಅನ್ನು ಪುನರ್ ಪರಿಶೀಲಿಸುವುದು
5. ಹವಾಮಾನ ಅಪಾಯ ಸೂಚ್ಯಂಕ (CRI), 2026
6. ಲೂಸಿಫರ್ ಜೇನು ಹುಳ
7. ಅಂತರರಾಷ್ಟ್ರೀಯ ಕ್ರಯೋಸ್ಫಿಯರ್ ( ಹಿಮ ಮಂಡಲ) ಹವಾಮಾನ ಉಪಕ್ರಮ

8. ಹಸಿರು ಜಲಜನಕದ ಕುರಿತು 3ನೇ ಅಂತರರಾಷ್ಟ್ರೀಯ ಸಮ್ಮೇಳನ (ICGH 2025)
9. ರೌಮಾರಿ-ದೊಂಡುವಾ ಜೌಗು ಸಂಕೀರ್ಣ
10. ನಿವ್ವಳ-ಶೂನ್ಯ ಹೊರಸೂಸುವಿಕೆಯ ಭಾರತದ ನಿರ್ಮಾಣಕ್ಕಾಗಿ ಇಂಗಾಲದ ಸೆರೆಹಿಡಿಯುವಿಕೆ
11. ಜಂಟಿ ಸಾಲದ ಕಾರ್ಯವಿಧಾನ (JCM)
12. ಜಾಗತಿಕ ಮೀಥೇನ್ ಸ್ಥಿತಿಗತಿ ವರದಿ, 2025
13. ಸಸ್ಯ ತಳಿ ಸಂರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯಿದೆ (PPV&FRA Act))
14. ಅಪಾಯದಲ್ಲಿರುವ ಭಾರತದ ಡುಗಾಂಗ್‌ಗಳು (ಕಡಲ ಹಸುಗಳು)
15. ಗಿಂಕ್ಗೊ-ಹಲ್ಲಿನ ಕೊಕ್ಕಿನ ತಿಮಿಂಗಿಲಗಳು
16. ಲೀಡ್ ಐಟಿ (LeadIT)
17. ಭಾರತದ ಹೊಸ ಕಾರು ಮೌಲ್ಯಮಾಪನ ಕಾರ್ಯಕ್ರಮ (Bharat NCAP)
18. ಆಫ್ರಿಕಾದ ಬೂದು ಗಿಳಿ
19. ಸೆಮೆರು ಪರ್ವತ (Mount Semeru)
20. ಭಾರತೀಯ ಭೂವೈಜ್ಞಾನಿಕ ಸಮೀಕ್ಷಾ ಸಂಸ್ಥೆ (GSI)
21. ಸಾಲುಮರದ ತಿಮ್ಮಕ್ಕ
22. ಸರ್ವೋಚ್ಚ ನ್ಯಾಯಾಲಯವು ಹುಲಿಯ ಮೂಲ ವಾಸಸ್ಥಳಗಳಲ್ಲಿ ಹುಲಿ ಸಫಾರಿ ನಡೆಸುವುದನ್ನು ನಿಷೇಧಿಸಿದೆ
23. ರೀಸೆಸ್ ಮಂಗಗಳು (ರೀಸೆಸ್ ಮಕಾಕ್)

## ವಿಜ್ಞಾನ ಮತ್ತು ತಂತ್ರಜ್ಞಾನ 36

1. ರೂಮೇಟಾಯ್ಡ್ ಸಂಧಿವಾತ
2. ರೈಸಿನ್
3. ಆದಿತ್ಯ–ಎಲ್ 1 ಮಿಷನ್
4. ಗಗನಯಾನ ಮಿಷನ್
5. ಸಂಶೋಧನೆ, ಅಭಿವೃದ್ಧಿ ಮತ್ತು ನಾವೀನ್ಯತೆ (RDI) ಯೋಜನಾ ನಿಧಿ
6. ಇಸ್ರೋದ ಎಲ್ ವಿಎಂ 3 ರಾಕೆಟ್ ಮೂಲಕ ‘ಜಿ ಸ್ಯಾಟ್ -7 R’ ಉಪಗ್ರಹ ಉಡಾವಣೆ
7. ಎಲ್ಲರಿಗಾಗಿ ಯುವ ಎ ಐ (AI)
8. ಹನೋಯಿ ಸಮಾವೇಶ
9. ಕಾಂಡ ಕೋಶ ಚಿಕಿತ್ಸೆ (ಸ್ಟೇಮ್ ಸೆಲ್ ಥೆರೇಪಿ)
10. ಕ್ರಿಸ್ಪರ್-ಕ್ಯಾಸ್ ವ್ಯವಸ್ಥೆಗಳು (CRISPR-Cas systems)
11. ಸೆಂಟಿನೆಲ್ -6B

## ಭದ್ರತೆ 43

1. ಸಿಲಿಗುರಿ ಕಾರಿಡಾರ್
2. ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ (CISF)
3. ಮುಧ್-ನ್ಯೋಮಾ ವಾಯುನೆಲೆ
4. ರಷ್ಯಾದ ‘ಡೂಮ್ಸ್‌ಡೇ ಕ್ಷಿಪಣಿ’
5. ಅಜೇಯ ವಾರಿಯರ್-25
6. ಇಂಡೋ-ಟಿಬೆಟಿಯನ್ ಬಾರ್ಡರ್ ಪೊಲೀಸ್ (ITBP)

## ಅಂತರರಾಷ್ಟ್ರೀಯ ಸಂಬಂಧಗಳು 45

1. ಭಾರತ ಮತ್ತು ಬಹ್ರೇನ್ ದ್ವಿಪಕ್ಷೀಯ ಸಂಬಂಧಗಳು
2. ತೋರ್ಖಾಮ್ ಗಡಿ
3. ಭಾರತ-ನೇಪಾಳ ವ್ಯಾಪಾರ ಸಂಬಂಧಗಳ ಬಲವರ್ಧನೆಗೆ ಒಪ್ಪಂದ
4. ಭೂತಾನಿಗೆ ಭೇಟಿ ನೀಡಿದ ಪ್ರಧಾನಿ
5. ಏಷ್ಯಾ-ಪೆಸಿಫಿಕ್ ಆರ್ಥಿಕ ಸಹಕಾರ (APEC) ಶೃಂಗಸಭೆ, 2025
6. ಭಾರತ - ಅಮೇರಿಕಾ ನಡುವೆ ರಕ್ಷಣಾ ಒಪ್ಪಂದ
7. ಭಾರತ-ಬ್ರೆಜಿಲ್-ದಕ್ಷಿಣ ಆಫ್ರಿಕಾ (IBSA) ನಾಯಕರ ಶೃಂಗಸಭೆ
8. ದಕ್ಷಿಣ ಆಫ್ರಿಕಾ ಜಿ-20 ಶೃಂಗಸಭೆ
9. ಆಪರೇಷನ್ ಸದರ್ನ್ ಸ್ಪಿಯರ್
10. ಕೊಲಂಬೊ ಭದ್ರತಾ ಸಮಾವೇಶ (CSC)
11. ಏಷ್ಯಾ–ಪೆಸಿಫಿಕ್ ಆರ್ಥಿಕ ಸಹಕಾರ (APEC) ಶೃಂಗಸಭೆ, 2025

## ಇತರೆ 50

## ಪ್ರಶಸ್ತಿಗಳು 50

1. ಬೂಕರ್ ಪ್ರಶಸ್ತಿ, 2025
2. ರಾಷ್ಟ್ರೀಯ ಜಲ ಪ್ರಶಸ್ತಿಗಳು, 2024
3. ಕೇಂದ್ರೀಯ ಗೃಹಮಂತ್ರಿ ದಕ್ಷತಾ ಪದಕ
4. ಇಂದಿರಾ ಗಾಂಧಿ ಶಾಂತಿ ಪ್ರಶಸ್ತಿ
5. ರಾಷ್ಟ್ರೀಯ ಗೋಪಾಲ ರತ್ನ ಪ್ರಶಸ್ತಿಗಳು (NGRA), 2025

## ಸುದ್ದಿಯಲ್ಲಿರುವ ಸ್ಥಳಗಳು 52

1. ಸೆಂಕಾಕು ದ್ವೀಪಗಳು
2. ಅಂಗೋಲಾ

## ಇತಿಹಾಸ ಮತ್ತು ಸಂಸ್ಕೃತಿ 53

1. ಜಾಗತಿಕ ಶಾಂತಿ ಪ್ರಾರ್ಥನಾ ಉತ್ಸವ
2. ಆರ್ಯ ಸಮಾಜ ಸ್ಥಾಪನೆಯಾಗಿ 150 ವರ್ಷಗಳು
3. ಬಿರ್ಸಾ ಮುಂಡಾ ಅವರ 150ನೇ ಜನ್ಮವಾರ್ಷಿಕೋತ್ಸವ
4. ಲಕ್ನೋವನ್ನು ಯುನೆಸ್ಕೋದ ಪಾಕಶಾಸ್ತ್ರ (ಅನುಗುಣವಾದ ಆಹಾರ ಸಂಸ್ಕೃತಿ) ವಿಭಾಗದ ಸೃಜನಾತ್ಮಕ ನಗರವಾಗಿ ಘೋಷಿಸಲಾಗಿದೆ.
5. ಚಿತ್ತರಂಜನ್ ದಾಸ್

## ಕರ್ನಾಟಕ ದರ್ಶನ 55

1. ರಾಜ್ಯೋತ್ಸವ ಪ್ರಶಸ್ತಿ
2. ರಾಜ್ಯ ಚಲನಚಿತ್ರ ಜೀವಮಾನ ಸಾಧನೆ ಪ್ರಶಸ್ತಿಗಳು ಮತ್ತು ಸಾಹಿತ್ಯ ಪ್ರಶಸ್ತಿಗಳು, 2019
3. ರಾಜ್ಯ ಜಲ ಆಯೋಗ
4. ನಿರ್ಮಾಣ ಹಂತದಲ್ಲಿರುವ ಅತೀ ಹೆಚ್ಚು ಪವನ ವಿದ್ಯುತ್ ಸಾಮರ್ಥ್ಯಕ್ಕಾಗಿ ಕರ್ನಾಟಕಕ್ಕೆ ರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ
5. 'ಮರ್ಟ್ಸ್ ಸಹಾಯಕ್' ಟಿಕೆಟ್ ವಿತರಣಾ ಯೋಜನೆ
6. ಹೊನ್ನಾವರ ಬಂದರು ಯೋಜನೆ
7. "ಕೋಬ್ರಾ ಬೀಟ್"
8. ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆ (CMKKY)
9. ಬೆಂಗಳೂರು ಕೌಶಲ್ಯ ಶೃಂಗಸಭೆ 2025
10. ಕಬ್ಬಿನ ಬೆಳೆಗೆ - ನ್ಯಾಯಯುತ ಮತ್ತು ಲಾಭದಾಯಕ ಬೆಲೆ (FRP)
11. ಮೈಸೂರಿನ ಹೊರವಲಯದಲ್ಲಿ ಗಂಗರ ಕಾಲದ 10ನೇ ಶತಮಾನದ ಶಾಸನ ಪತ್ತೆಯಾಗಿದೆ
12. ಕರ್ನಾಟಕ ನವೋದ್ಯಮ ನೀತಿ, 2025-30
13. ಸಂಪನ್ಮೂಲ ಕ್ರೂಢೀಕರಣ ಸಮಿತಿ (RMC) ಯ ವರದಿ
14. ಕೃಷಿ ಮೇಳ, 2025
15. ಗೃಹ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ಮಸೂದೆ, 2025
16. ರಾಜ್ಯದ ಕಾರಾಗೃಹಗಳ ಕಾರ್ಯನಿರ್ವಹಣೆಯನ್ನು ಪರಿಶೀಲಿಸಲು ಉನ್ನತ ಮಟ್ಟದ ಸಮಿತಿ ರಚನೆ
17. ಕರ್ನಾಟಕದಲ್ಲಿ ತಾಯಿಯ ಮರಣ ದರದ ಪ್ರಮಾಣದಲ್ಲಿ ಶೇ. 24 ರಷ್ಟು ಇಳಿಕೆಯ ದಾಖಲು
18. ಕೋಟಿ ವೃಕ್ಷ ಅಭಿಯಾನ
19. "ಕಲಾಲೋಕ" ಮಳಿಗೆ
20. ದತ್ತು ಮಕ್ಕಳ ಸಂಖ್ಯೆ: ದೇಶದಲ್ಲಿ ಕರ್ನಾಟಕಕ್ಕೆ 4ನೇ ಸ್ಥಾನ
21. ಬೆಂಗಳೂರು ಸೇಫ್ ಸಿಟಿ (ಸುರಕ್ಷಿತ ನಗರ) ಯೋಜನೆ
22. ರಾಷ್ಟ್ರೀಯ ಜಂಟಿ ಸುಧಾರಿತ ಪ್ರತಿರೋಧ ಸ್ಫೋಟಕ ಸಾಧನ (IED) ಸ್ಪರ್ಧೆ
23. KEO (ಜ್ಞಾನ ಚಾಲಿತ, ಆರ್ಥಿಕವಾಗಿ, ಮುಕ್ತ ಮೂಲ) ಗಣಕಯಂತ್ರ
24. ಡಿಜಿಟಲ್ ನಾಗರೀಕ್ ಕಾರ್ಯಕ್ರಮ
25. ಮೆಂಟರಿಂಗ್ ಸಮ್ಮಿಟ್ ಇಂಡಿಯಾ (ಭಾರತ ಮಾರ್ಗದರ್ಶನ ಶೃಂಗಸಭೆ), 2025
26. ಬೆಳಗಾವಿ ಮೃಗಾಲಯದಲ್ಲಿ 28 ಕೃಷ್ಣಮೃಗಗಳ ಸಾವು; ಸೋಂಕಿನ ಶಂಕೆ
27. ಏಕ್ಯಾವನ : ದೇಶದ ಮೊದಲ ನಿಸರ್ಗ-ಪ್ರೇರಿತ ಶಾಲೆ
28. ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (KPME) ಕಾಯಿದೆ, 2007
29. ಆಗುಂಬೆಯಲ್ಲಿ ಹೆಲ್ತ್ (HEALTH) ಉಪಕ್ರಮದ ಉತ್ತೇಜನ
30. "ಫ್ಲೈಬಸ್" ಸೇವೆ
31. ನಾಡೋಜ ಬರಗೂರು ಪ್ರಶಸ್ತಿ
32. ಕರ್ನಾಟಕ ಮಾಹಿತಿ ತಂತ್ರಜ್ಞಾನ ನೀತಿ, 2025-2030
33. ಕರ್ನಾಟಕ ಬಾಹ್ಯಾಕಾಶ ತಂತ್ರಜ್ಞಾನ ನೀತಿ, 2025-2030
34. ಮೇಕೆದಾಟು ಜಲಾಶಯ ಯೋಜನೆ
35. ಇನ್ಫೋಸಿಸ್ ಪ್ರಶಸ್ತಿ, 2025
36. ಕರ್ನಾಟಕ ಋತು ಸ್ರಾವ ರಜೆ ನೀತಿ, 2025
37. "ಸನ್ಮಿತ್ರ" ಉಪಕ್ರಮ
38. ಟಾಟಾ ಟ್ರಾನ್ಸ್‌ಫಾರ್ಮೇಷನ್ (ಪರಿವರ್ತನಾ) ಪ್ರಶಸ್ತಿ, 2025
39. ಮಕ್ಕಳ ಹಕ್ಕುಗಳ ಸೂಚ್ಯಂಕ
40. ಬೆಂಗಳೂರು ತಂತ್ರಜ್ಞಾನ ಶೃಂಗಸಭೆ, 2025 (BTS)
41. ಮಲೆನಾಡು ಜೇಡ
42. ಹಂತ -3 ರ 'ಪ್ರವೇಶಸಾಧ್ಯತೆ ವರ್ಧನೆ ಮಾನ್ಯತೆ' ಪಡೆದ ಭಾರತದ ಮೊದಲ ವಿಮಾನ ನಿಲ್ದಾಣ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಾಗಿದೆ
43. ಮೀನುಗಾರರ ಸಂಕಷ್ಟ ಪರಿಹಾರ ನಿಧಿ
44. ಉಡುಪಿ ಜಿಲ್ಲೆಯಲ್ಲಿ ಬೃಹತ್ ಶಿಲಾಯುಗದ ಮೆನ್ಹಿರ್‌ಗಳ ಪತ್ತೆ
45. ಕರ್ನಾಟಕ ವಿಕಲಚೇತನರ ಹಕ್ಕುಗಳ ಮಸೂದೆ, 2025
46. ಚಾಮರಾಜನಗರದಲ್ಲಿ ಬೃಹತ್ ಶಿಲಾಯುಗದ ಉತ್ಖನನ: ಅಪರೂಪದ ಶವಸಂಸ್ಕಾರ ಪದ್ಧತಿ ಮತ್ತು ಶಿಲಾ ಕಲೆ ಪತ್ತೆ
47. ಸಾಲುಮರದ ತಿಮ್ಮಕ್ಕ

# ಅನನ್ಯ ಸಾಧನ - ಸಂಕ್ಷಿಪ್ತ ಸುದ್ದಿಗಳು 76


## ಪ್ರಮುಖ ದಿನಾಚರಣೆಗಳು 76

1. ವಿಶ್ವ ಸುನಾಮಿ ಜಾಗೃತಿ ದಿನ
2. ಶಾಂತಿ ಮತ್ತು ಅಭಿವೃದ್ಧಿಗಾಗಿ ವಿಶ್ವ ವಿಜ್ಞಾನ ದಿನ
3. ರಾಷ್ಟ್ರೀಯ ಶಿಕ್ಷಣ ದಿನ
4. ಸಾರ್ವಜನಿಕ ಸೇವಾ ಪ್ರಸಾರ ದಿನ (ಭಾರತ)
5. ವಿಶ್ವ ಮಧುಮೇಹ ದಿನ
6. ಮಕ್ಕಳ ದಿನಾಚರಣೆ
7. ಅಂತರರಾಷ್ಟ್ರೀಯ ಸಹಿಷ್ಣುತಾ ದಿನ
8. ಅಂತರರಾಷ್ಟ್ರೀಯ ಪುರುಷರ ದಿನ
9. ವಿಶ್ವ ಶೌಚಾಲಯ ದಿನ
10. ವಿಶ್ವ ಮಕ್ಕಳ ದಿನ
11. ವಿಶ್ವ ದೂರದರ್ಶನ ದಿನ
12. ಮಹಿಳೆಯರ ಮೇಲಿನ ದೌರ್ಜನ್ಯ ನಿರ್ಮೂಲನೆಗಾಗಿ ಅಂತರರಾಷ್ಟ್ರೀಯ ದಿನ
13. ಭಾರತದ ಸಂವಿಧಾನದ ದಿನ

## ಪ್ರಶಸ್ತಿ-ಪುರಸ್ಕಾರಗಳು 77

1. ನಗರ ಸಾರಿಗೆಯಲ್ಲಿನ ಉತ್ಕೃಷ್ಟತೆಗಾಗಿ ಕೆಎಸ್‌ಆರ್‌ಟಿಸಿ ಗೆ ರಾಷ್ಟ್ರೀಯ ಪ್ರಶಸ್ತಿ – 2025
2. ಅಂತರರಾಷ್ಟ್ರೀಯ ಎಮ್ಮಿ ಪ್ರಶಸ್ತಿಗಳು, 2025
3. ಮಿಸ್ ಯೂನಿವರ್ಸ್ 2025 :
4. ಕ್ವಾಲಿಟಿ ರತ್ನ ಪ್ರಶಸ್ತಿ 2025
5. ಚೆವಲಿಯರ್ ಪ್ರಶಸ್ತಿ
6. ಬಾಲ ಸಾಹಿತ್ಯ ಪುರಸ್ಕಾರ 2025

## ರಕ್ಷಣೆ 82

1. ಐಎನ್‌ಎಸ್ ಇಕ್ಷಕ್
2. ವಾಯು ಸಮನ್ವಯ-II
3. ತೇಜಸ್ ಯುದ್ಧ ವಿಮಾನಗಳು
4. ಸೇನಾ ಸಮರಾಭ್ಯಾಸಗಳು
5. ಮಲಬಾರ್ ಸಮರಾಭ್ಯಾಸ 2025
6. ಐಎನ್‌ಎಸ್ ಸಾವಿತ್ರಿ
7. ವಿನ್‌ಬ್ಯಾಕ್ಸ್ 2025
8. ಅಖಂಡ ಪ್ರಹಾರ್ ಸಮರಾಭ್ಯಾಸ
9. ಐಎನ್‌ಎಸ್ ಮಾಹೆ

## ಕ್ರೀಡೆ 84

1. ಏಷ್ಯನ್ ಯೂತ್ ಗೇಮ್ಸ್ 2025
2. ಡೇವಿಸ್ ಕಪ್ 2025
3. ಆಸ್ಟ್ರೇಲಿಯನ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಮೆಂಟ್
4. ದೃಷ್ಟಿಚೇತನ ಮಹಿಳೆಯರ ಟಿ20 ವಿಶ್ವಕಪ್ 2025
5. ವಿಶ್ವ ಬಾಕ್ಸಿಂಗ್ ಕಪ್ ಫೈನಲ್ಸ್ 2025
6. ಏಷ್ಯನ್ ಆರ್ಚರಿ ಚಾಂಪಿಯನ್‌ಶಿಪ್ 2025
7. ಅಕ್ಟೋಬರ್ 2025 ರ ಐಸಿಸಿ ತಿಂಗಳ ಆಟಗಾರರು
8. ಸರ್ ಡೇವಿಡ್ ಬೆಕ್‌ಹ್ಯಾಮ್ ಅವರಿಗೆ ನೈಟ್‌ಹುಡ್ ಗೌರವ
9. ಐಸಿಸಿ ಮಹಿಳಾ ಏಕದಿನ ವಿಶ್ವಕಪ್ 2025: ಭಾರತಕ್ಕೆ ಐತಿಹಾಸಿಕ ಜಯ

## ನೇಮಕಾತಿಗಳು 92

1. ಚೀಫ್ ಆಫ್ ಮೆಟೀರಿಯಲ್ ಆಗಿ ವೈಸ್ ಅಡ್ಮಿರಲ್ ಬಿ. ಶಿವಕುಮಾರ್ ಅಧಿಕಾರ ಸ್ವೀಕಾರ
2. ಬಿಐಎಸ್ (BIS) ನ ಮಹಾನಿರ್ದೇಶಕರಾಗಿ ಸಂಜಯ್ ಗರ್ಗ್ ಅಧಿಕಾರ ಸ್ವೀಕಾರ
3. ಮಕ್ಕಳ ಹಕ್ಕುಗಳಿಗಾಗಿ ಯುನಿಸೆಫ್ ಇಂಡಿಯಾದ ಸೆಲೆಬ್ರಿಟಿ ಅಡ್ವೊಕೇಟ್ ಆಗಿ ಕೀರ್ತಿ ಸುರೇಶ್
4. ನಾಲ್ಸಾ (NALSA) ಕಾರ್ಯಕಾರಿ ಅಧ್ಯಕ್ಷರಾಗಿ ನ್ಯಾಯಮೂರ್ತಿ ವಿಕ್ರಮ್ ನಾಥ್ ನೇಮಕ


# ನವೆಂಬರ ತಿಂಗಳ ವಸ್ತುನಿಷ್ಠ ಮಾದರಿಯ ಬಹು ಆಯ್ಕೆಯ ಪ್ರಶ್ನೋತ್ತರಗಳು 93

# ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ

## 1. ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿ (NCLAT)

### ಸಂದರ್ಭ:

- ಬೈಜೂಸ್‌ನ ಅಂಗಸಂಸ್ಥೆಯಾದ ಆಕಾಶ್ ಶಿಕ್ಷಣ ಸೇವಾ ನಿಯಮಿತ ತನ್ನ ಪ್ರಸ್ತಾವಿತ ಹಕ್ಕುಗಳ ವಿತರಣೆಯನ್ನು ಮುಂದುವರಿಸಲು ಅನುಮತಿ ನೀಡಿದ ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿ (NCLAT) ಯ ಆದೇಶದಲ್ಲಿ ಮಧ್ಯಪ್ರವೇಶಿಸಲು ಸರ್ವೋಚ್ಚ ನ್ಯಾಯಾಲಯ ನಿರಾಕರಿಸಿತು.

### ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿ (NCLAT) ಯ ಬಗ್ಗೆ:

- **2013ರ ಕಂಪನಿಗಳ ಕಾಯ್ದೆಯ ಸೆಕ್ಷನ್ 410** ಅಡಿಯಲ್ಲಿ ಸ್ಥಾಪಿತವಾಗಿ, 2016ರಿಂದ ಜಾರಿಗೆ ಬಂದಿದೆ.
- ಕಾನೂನು ಸ್ಥಿತಿ - ಇದು **ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ (NCLT) ಹಾಗೂ ಇತರೆ ಹಲವು ನಿಯಂತ್ರಣ ಸಂಸ್ಥೆಗಳ ಆದೇಶಗಳ ವಿರುದ್ಧ** ಸಲ್ಲಿಸಲಾದ ಮೇಲ್ಮನವಿಗಳನ್ನು ವಿಚಾರಿಸಲು ಕಾರ್ಯನಿರ್ವಹಿಸುವ **ಅರೆ-ನ್ಯಾಯಾಂಗ** ಸಂಸ್ಥೆಯಾಗಿದೆ.
- ಈ ಕೆಳಕಂಡ ಸಂಸ್ಥೆಗಳಿಂದ ಜಾರಿಗೊಳಿಸಲಾದ ಆದೇಶಗಳ ವಿರುದ್ಧಸಲ್ಲಿಸಲಾದ ಮೇಲ್ಮನವಿಗಳನ್ನುವಿಚಾರಿಸುವ **ಮೇಲ್ಮನವಿ ನ್ಯಾಯಮಂಡಳಿಯಾಗಿಯೂ** ಕಾರ್ಯನಿರ್ವಹಿಸುತ್ತದೆ:

1. **ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ (ದಿವಾಳಿತನ ಮತ್ತು ದಿವಾಳಿತನ ಸಂಹಿತೆ, 2016** ರ ಕಲಂ 61 ರ ಅಡಿಯಲ್ಲಿ ಸ್ಥಾಪಿತವಾಗಿದೆ),
2. **ಭಾರತೀಯ ದಿವಾಳಿತನ ಮತ್ತು ದಿವಾಳಿತನ ಮಂಡಳಿ** (ದಿವಾಳಿತನ ಮತ್ತು ದಿವಾಳಿತನ ಸಂಹಿತೆ, ಕಲಂ 202 ಮತ್ತು 211 ರ ಅಡಿಯಲ್ಲಿ ಸ್ಥಾಪಿತವಾಗಿದೆ).

## 2. ತ್ಯಾಜ್ಯ ನಿಕ್ಷೇಪಣೆ ಸ್ಥಳ (ಡಂಪಿಂಗ್ ಸೈಟ್) ದ ಪುನಶ್ಚೇತನ ವೇಗವರ್ಧಕ ಕಾರ್ಯಕ್ರಮ (DRAP)

### ಇದೀಗ ಸುದ್ದಿಯಲ್ಲಿದೆ:

- **ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ** (MoHUA) ವು ತ್ಯಾಜ್ಯ ನಿಕ್ಷೇಪಣೆ ಸ್ಥಳದ ಪುನಶ್ಚೇತನ ವೇಗವರ್ಧಕ ಕಾರ್ಯಕ್ರಮವನ್ನು (DRAP) ಪ್ರಾರಂಭಿಸಿದೆ.

### ಪುನಶ್ಚೇತನ vs ಜೈವಿಕ ಪುನಶ್ಚೇತನ ಎಂದರೇನು?

- ಪುನಶ್ಚೇತನವು, **ಪರಿಸರ ಮಾಲಿನ್ಯಕಾರಕಗಳನ್ನು ತೆಗೆದುಹಾಕುವ ಅಥವಾ ಒಳಗೊಂಡಿರುವ ವಿಶಾಲ ಪ್ರಕ್ರಿಯೆಯಾಗಿದೆ.**
- ಜೈವಿಕ ಪುನಶ್ಚೇತನವು, ಪುನಶ್ಚೇತನದ ಉಪ-ವರ್ಗವಾಗಿದ್ದು, ಇದು ಮಾಲಿನ್ಯಕಾರಕಗಳನ್ನು ವಿಘಟಿಸಲು ಅಥವಾ ಪರಿವರ್ತಿಸಲು **ಬ್ಯಾಕ್ಟೀರಿಯಾ ಮತ್ತು ಶಿಲೀಂಧ್ರಗಳಂತಹ** ಸೂಕ್ಷ್ಮಜೀವಿಗಳನ್ನು ಬಳಸಿಕೊಳ್ಳುತ್ತದೆ.

### ತ್ಯಾಜ್ಯ ನಿಕ್ಷೇಪಣೆ ಸ್ಥಳ (ಡಂಪಿಂಗ್ ಸೈಟ್) ದ ಪುನಶ್ಚೇತನ ವೇಗವರ್ಧಕ ಕಾರ್ಯಕ್ರಮ (DRAP) ದ ಬಗ್ಗೆ:

- **ಉಳಿದಿರುವ ಕಸದ ರಾಶಿಗಳ ಪುನಶ್ಚೇತನವನ್ನು ವೇಗಗೊಳಿಸಿ, ಸಮುದಾಯ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಅಗತ್ಯವಾದ ನಗರ ಭೂಮಿಯನ್ನು ಪುನಃ ಪಡೆದಿಕೊಳ್ಳುವ** ಉದ್ದೇಶವಾಗಿದೆ.
- ಇದು **ಸೆಪ್ಟೆಂಬರ್ 2026 ರ ವೇಳೆಗೆ "ಲಕ್ಷ್ಯ ಶೂನ್ಯ ತ್ಯಾಜ್ಯ ನಿಕ್ಷೇಪಣೆ ಸ್ಥಳ" ವನ್ನು** ಸಾಧಿಸುವ ಭಾರತದ ದೃಷ್ಟಿಕೋನವನ್ನು ಸಾಧಿಸಲು ಸಹಾಯ ಮಾಡುತ್ತದೆ.

## 3. ಅಸ್ಸಾಂ ಬಹುಪತಿತ್ವ/ಬಹುಪತ್ನಿತ್ವ ನಿಷೇಧ ಮಸೂದೆ-2025

### ಇದೀಗ ಸುದ್ದಿಯಲ್ಲಿದೆ:

- ಅಸ್ಸಾಂ ಬಹುಪತ್ನಿತ್ವ ನಿಷೇಧ ಮಸೂದೆ-2025 ಅನ್ನು ವಿಧಾನಸಭೆಯಲ್ಲಿ ಮಂಡಿಸಲಾಗುವುದು ಎಂದು ಅಸ್ಸಾಂ ಮುಖ್ಯಮಂತ್ರಿ ಘೋಷಿಸಿದ್ದಾರೆ.

### ಅಸ್ಸಾಂ ಬಹುಪತ್ನಿತ್ವ ನಿಷೇಧ ಮಸೂದೆ-2025

- **ಉದ್ದೇಶ:** ತಮ್ಮ ಸಂಗಾತಿಯು ಜೀವಂತವಿರುವಾಗಲೇ, ಮತ್ತೊಂದು ಮದುವೆಯಾಗುವುದನ್ನು ಶಿಕ್ಷಾರ್ಹ ಅಪರಾಧವನ್ನಾಗಿ ಮಾಡಲು ಇದು ಪ್ರಸ್ತಾಪಿಸುತ್ತದೆ. ಈ ಅಪರಾಧಕ್ಕೆ **7 ವರ್ಷಗಳವರೆಗೆ ಜೈಲು ಶಿಕ್ಷೆಯನ್ನು** ವಿಧಿಸಬಹುದಾಗಿದೆ.
- ಈ ಅಪರಾಧವನ್ನು **'ಗಂಭೀರ ಸ್ವರೂಪದ** ಅಪರಾಧ'ವನ್ನಾಗಿ ಮಾಡಲಾಗಿದೆ. ಇದರರ್ಥ ಆರೋಪಿಗಳಿಗೆ **ತಕ್ಷಣವೇ ಜಾಮೀನು ನೀಡಲಾಗುವುದಿಲ್ಲ.**
- ಸಂವಿಧಾನದ **ಆರನೇ ಅನುಸೂಚಿಯ** ಅಡಿಯಲ್ಲಿ ಬರುವ ಬುಡಕಟ್ಟು ಜಿಲ್ಲೆಗಳಲ್ಲಿ ಮತ್ತು **ರಾಜ್ಯದ ಪರಿಶಿಷ್ಟ ಪಂಗಡದ** ಸಮುದಾಯಗಳಿಗೆ ಈ ಕಾನೂನು ಅನ್ವಯಿಸುವುದಿಲ್ಲ.
- **ವಿಶೇಷ ನಿಧಿ:** ಬಹುಪತ್ನಿತ್ವದ ಸಂತ್ರಸ್ತೆಯರಾಗಿರುವ **ಮಹಿಳೆಯರಿಗೆ ಪರಿಹಾರವನ್ನು** ನೀಡಲು, ರಾಜ್ಯ ಸರ್ಕಾರವು ವಿಶೇಷ ನಿಧಿಯೊಂದನ್ನು ಸ್ಥಾಪಿಸುವ ಅವಕಾಶವನ್ನೂ ಈ ಮಸೂದೆಯು ಒಳಗೊಂಡಿದೆ.

## 4. ಭಾರತ ಅಭಿವೃದ್ಧಿ ಮತ್ತು ಕಾರ್ಯತಂತ್ರ ನಿಧಿ (IDSF)

### ಇದೀಗ ಸುದ್ದಿಯಲ್ಲಿದೆ:

- ದೀರ್ಘಕಾಲೀನ ಬೆಳವಣಿಗೆ ಮತ್ತು ಜಾಗತಿಕ ಆರ್ಥಿಕ ಭದ್ರತೆಯನ್ನು ಬೆಂಬಲಿಸುವ ನಿಟ್ಟಿನಲ್ಲಿ, 'ಭಾರತ ಅಭಿವೃದ್ಧಿ ಮತ್ತು ಕಾರ್ಯತಂತ್ರ ನಿಧಿ'ಯನ್ನು ಸ್ಥಾಪಿಸಲು **"ಭಾರತೀಯ ಕೈಗಾರಿಕಾ ಒಕ್ಕೂಟ" (CII)** ಸಲಹೆ ನೀಡಿದೆ.

### ಭಾರತ ಅಭಿವೃದ್ಧಿ ಮತ್ತು ಕಾರ್ಯತಂತ್ರ ನಿಧಿಯ ಬಗ್ಗೆ:

- ಉದ್ದೇಶ: **ದೀರ್ಘಕಾಲೀನ ಬೆಳವಣಿಗೆ ಮತ್ತು ಜಾಗತಿಕ ಆರ್ಥಿಕ ಭದ್ರತೆಯನ್ನು** ಬೆಂಬಲಿಸುವುದು ಇದರ ಪ್ರಮುಖ ಗುರಿಯಾಗಿದೆ.
- ಇದು ವಾರ್ಷಿಕ ಆಯವ್ಯಯಗಳ ಮಿತಿಯನ್ನು ಮೀರಿ, ದೀರ್ಘಕಾಲೀನ **ರಾಷ್ಟ್ರೀಯ ಅಭಿವೃದ್ಧಿಗಾಗಿ ಶಾಶ್ವತವಾದ ಅಥವಾ ಸುಸ್ಥಿರವಾದ ಆರ್ಥಿಕ ಚಾಲಕ ಶಕ್ತಿಯನ್ನು** ನಿರ್ಮಿಸಲಿದೆ.
- **ವಲಯಗಳು:** ಮೂಲಸೌಕರ್ಯ, ಶುದ್ಧ ಇಂಧನ, ಲಾಜಿಸ್ಟಿಕ್ಸ್ ಮತ್ತು ಕೈಗಾರಿಕಾ ಕಾರಿಡಾರ್‌ಗಳು, ಎಂ.ಎಸ್.ಎಂ.ಇ ವಲಯದ ವಿಸ್ತರಣೆ ಅಥವಾ ಉನ್ನತೀಕರಣ, ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಆರೋಗ್ಯ ಸೇವೆ ಮತ್ತು ನಗರ ಮೂಲಸೌಕರ್ಯ ವಲಯಗಳು ಇದರಲ್ಲಿ ಸೇರಿವೆ.

### ಭಾರತೀಯ ಕೈಗಾರಿಕಾ ಒಕ್ಕೂಟ (CII) ದ ಬಗ್ಗೆ:

- ಇದೊಂದು **ಸರ್ಕಾರೇತರ, ಲಾಭರಹಿತ, ಉದ್ಯಮದ ನೇತೃತ್ವದಲ್ಲಿ ನಡೆಯುವ ಮತ್ತು ಉದ್ಯಮದಿಂದಲೇ ನಿರ್ವಹಿಸಲ್ಪಡುವ** ಸಂಸ್ಥೆಯಾಗಿದೆ.
- **ಸ್ಥಾಪನೆ:** 1895.
- ಕೇಂದ್ರ ಕಚೇರಿ: **ನವದೆಹಲಿ.**

## 5. ಡಿಜಿಟಲ್ ಸಾಗರಿಕ ಮೀನುಗಾರಿಕೆ ಗಣತಿ, 2025

### ಇದೀಗ ಸುದ್ದಿಯಲ್ಲಿದೆ:

- **ಕೇಂದ್ರ ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯವು "ವ್ಯಾಸ್-ನಾವ್ (VYAS –NAV), ವ್ಯಾಸ್-ಭಾರತ್ (VYAS – BHARAT) ಮತ್ತು ವ್ಯಾಸ್-ಸೂತ್ರ (VYAS- SUTRA)"** ಆ್ಯಪ್‌ಗಳನ್ನು ಬಳಸುವ ಮೂಲಕ 'ಡಿಜಿಟಲ್ ಸಾಗರಿಕ ಮೀನುಗಾರಿಕೆ ಗಣತಿ, 2025' ಕ್ಕೆ ಚಾಲನೆ ನೀಡಿತು.

### ಡಿಜಿಟಲ್ ಸಾಗರಿಕ ಮೀನುಗಾರಿಕೆ ಗಣತಿ, 2025 ರ ಬಗ್ಗೆ:

- ಡಿಜಿಟಲ್ ರಚನೆ:- ಈ ಡಿಜಿಟಲ್ ಪ್ರಕ್ರಿಯೆಯು **ಐಸಿಎಆರ್-ಕೇಂದ್ರ ಸಾಗರಿಕ ಮೀನುಗಾರಿಕೆ ಸಂಶೋಧನಾ ಸಂಸ್ಥೆ** (ICAR-CMFRI) ಅಭಿವೃದ್ಧಿಪಡಿಸಿದ 3 ಬಹುಭಾಷಾ ಆಂಡ್ರಾಯ್ಡ್ ಅಪ್ಲಿಕೇಶನ್‌ಗಳ ಮೂಲಕ ಕಾರ್ಯನಿರ್ವಹಿಸುತ್ತದೆ:

1. **ವ್ಯಾಸ್-ನಾವ್ :** ಇದನ್ನು **ಮೀನುಗಾರಿಕಾ ಗ್ರಾಮಗಳು ಮತ್ತು ಬಂದರುಗಳ** ದೃಢೀಕರಣಕ್ಕಾಗಿ ಬಳಸಲಾಗುತ್ತದೆ.
2. **ವ್ಯಾಸ್-ಭಾರತ್:** ಇದನ್ನು **ಕುಟುಂಬಗಳು ಮತ್ತು ಮೂಲಸೌಕರ್ಯಗಳ** ಗಣತಿಗಾಗಿ ಬಳಸಲಾಗುತ್ತದೆ.
3. **ವ್ಯಾಸ್-ಸೂತ್ರ :** ಇದನ್ನು **ದತ್ತಾಂಶ ಸಂಗ್ರಹಣೆಯ ನೈಜ ಸಮಯದ ಮೇಲ್ವಿಚಾರಣೆ ಮತ್ತು ಉಸ್ತುವಾರಿಗಾಗಿ** ಬಳಸಲಾಗುತ್ತದೆ.

## 6. ಭೂ ವ್ಯವಸ್ಥೆ ವಿಜ್ಞಾನ ಮಂಡಳಿ

### ಸಂದರ್ಭ:

**ಭೂ ವಿಜ್ಞಾನ ಸಚಿವಾಲಯದ** ಅಡಿಯಲ್ಲಿರುವ **ಐದು ಪ್ರತ್ಯೇಕ ಸಂಸ್ಥೆಗಳನ್ನು ವಿಲೀನಗೊಳಿಸಿ,** ಭೂ ವ್ಯವಸ್ಥೆ ವಿಜ್ಞಾನ ಮಂಡಳಿ ಎಂದು ಏಕೀಕೃತಗೊಳಿಸಿ ಒಂದೇ ಸೂರಿನಡಿ ತರಲಾಗಿದೆ.

**ಭೂ ವ್ಯವಸ್ಥೆ ವಿಜ್ಞಾನ ಮಂಡಳಿ ("ಅರ್ತ್ ಸಿಸ್ಟಮ್ ಸೈನ್ಸ್ ಕೌನ್ಸಿಲ್" -ESSC) ಯ ಬಗ್ಗೆ:**

- **ಗುರಿ:** ಆಡಳಿತವನ್ನು ಸುಗಮಗೊಳಿಸುವುದು ಮತ್ತು ಬದಲಾಗುತ್ತಿರುವ ಹವಾಮಾನ, ಏರುಪೇರಾಗುವ ಮಾನ್ಸೂನ್ (ಮುಂಗಾರು) ಮತ್ತು ಕರಗುತ್ತಿರುವ ಧ್ರುವ ಪ್ರದೇಶಗಳಿಂದ ಎದುರಾಗುವ ವೈಜ್ಞಾನಿಕ ಮತ್ತು ಮಾನವೀಯ ಸಮಸ್ಯೆಗಳನ್ನು ಒಗ್ಗೂಡಿಸಿ ಪರಿಹರಿಸುವುದು.

### ವಿಲೀನಗೊಂಡ ಸಂಸ್ಥೆಗಳು:

- ಭಾರತೀಯ ಉಷ್ಣವಲಯದ ಹವಾಮಾನಶಾಸ್ತ್ರ ಸಂಸ್ಥೆ (IITM), ಪುಣೆ
- ರಾಷ್ಟ್ರೀಯ ಧ್ರುವೀಯ ಮತ್ತು ಸಾಗರ ಸಂಶೋಧನಾ ಕೇಂದ್ರ (NCPOR), ಗೋವಾ
- ರಾಷ್ಟ್ರೀಯ ಸಾಗರ ತಂತ್ರಜ್ಞಾನ ಸಂಸ್ಥೆ (NIOT), ಚೆನ್ನೈ
- ರಾಷ್ಟ್ರೀಯ ಭೂ ವಿಜ್ಞಾನ ಅಧ್ಯಯನ ಕೇಂದ್ರ (NCESS), ತಿರುವನಂತಪುರಂ
- ಭಾರತೀಯ ರಾಷ್ಟ್ರೀಯ ಸಾಗರ ಮಾಹಿತಿ ಮತ್ತು ಸೇವೆಗಳ ಕೇಂದ್ರ (INCOIS), ಹೈದರಾಬಾದ

### ಭೂ ವ್ಯವಸ್ಥೆ ವಿಜ್ಞಾನ ಮಂಡಳಿ (ESSC) ಯು ಎರಡು ಅಧೀನ ಕಚೇರಿಗಳನ್ನು ಒಳಗೊಂಡಿದೆ:

- **ಭಾರತೀಯ ಹವಾಮಾನ ಇಲಾಖೆ** (IMD) ಮತ್ತು **ಮಧ್ಯಮ ಶ್ರೇಣಿಯ ಹವಾಮಾನ ಮುನ್ಸೂಚನೆಗಾಗಿ ರಾಷ್ಟ್ರೀಯ ಕೇಂದ್ರ** (NCMRWF).
- ESSC 2023 ರಲ್ಲಿ ಔಪಚಾರಿಕವಾಗಿ ಒಂದು ಮಂಡಳಿಯಾಗಿ ನೋಂದಾಯಿಸಲ್ಪಟ್ಟಿತು. ಭೂ ವಿಜ್ಞಾನ ಸಚಿವಾಲಯದ (MoES) ಕಾರ್ಯದರ್ಶಿಯವರು ESSC ಯ ಮುಖ್ಯಸ್ಥರಾಗಿರುತ್ತಾರೆ ಮತ್ತು **ಭೂ ವಿಜ್ಞಾನ ಸಚಿವರು** ESSC ಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಾರೆ.

## 7. ಅಸ್ಸಾಂ ಒಪ್ಪಂದ (1985)

### ಇದೀಗ ಸುದ್ದಿಯಲ್ಲಿದೆ:

1985 ರ ಅಸ್ಸಾಂ ಒಪ್ಪಂದದ **6ನೇ ಉಪಬಂಧದ** ಅನುಷ್ಠಾನದ ಕುರಿತು ವಿಸ್ತಾರವಾದ ಒಮ್ಮತವನ್ನು ಸಾಧಿಸಲಾಗಿದೆ ಎಂದು ಇತ್ತೀಚೆಗೆ ಅಸ್ಸಾಂ ಸರ್ಕಾರವು ಘೋಷಿಸಿದೆ.

### ಅಸ್ಸಾಂ ಒಪ್ಪಂದ, 1985 ರ ಬಗ್ಗೆ:

- **ಭಾರತ ಸರ್ಕಾರ, ಆಲ್ ಅಸ್ಸಾಂ ಸ್ಟೂಡೆಂಟ್ಸ್ ಯೂನಿಯನ್ (AASU) ಮತ್ತು ಆಲ್ ಅಸ್ಸಾಂ ಗಣ ಸಂಗ್ರಾಮ್ ಪರಿಷತ್**

**(AAGSP) ನಡುವೆ 1985 ರ ಆಗಸ್ಟ್ 15** ರಂದು ಈ ಒಪ್ಪಂದಕ್ಕೆ ಸಹಿ ಹಾಕಲಾಯಿತು.

- **ಬಾಂಗ್ಲಾದೇಶದಿಂದ ಬಂದ ಅಕ್ರಮ ವಲಸಿಗರ** ವಿರುದ್ಧ 1979 ರಿಂದ 1985 ರವರೆಗೆ ಅಸ್ಸಾಂನಲ್ಲಿ ನಡೆದ ಆರು ವರ್ಷಗಳ ಸುದೀರ್ಘ ಆಂದೋಲನಕ್ಕೆ (ವಿದೇಶಿಯರ ವಿರೋಧಿ ಆಂದೋಲನ) ಈ ಒಪ್ಪಂದವು ಅಂತ್ಯ ಹಾಡಿತು. ಅಕ್ರಮ ವಲಸೆಯು ರಾಜ್ಯದ ಜನಸಂಖ್ಯಾ ಸ್ವರೂಪ, ಸಂಸ್ಕೃತಿ ಮತ್ತು ಆರ್ಥಿಕತೆಯ ಮೇಲೆ ಗಂಭೀರ ಪರಿಣಾಮ ಬೀರಿತ್ತು.
- **ಅಸ್ಸಾಂ ಒಪ್ಪಂದದ 6ನೇ ಉಪಬಂಧ :** ಅಸ್ಸಾಮಿ ಜನರ 'ಸಾಂಸ್ಕೃತಿಕ, ಸಾಮಾಜಿಕ ಮತ್ತು ಭಾಷಾ ಅಸ್ಮಿತೆಯನ್ನು' ಸಂರಕ್ಷಿಸಲು ಅಗತ್ಯವಾದ '**ಸಂವಿಧಾನಾತ್ಮಕ, ಶಾಸಕಾಂಗೀಯ** ಮತ್ತು **ಆಡಳಿತಾತ್ಮಕ** ರಕ್ಷಣೆಗಳನ್ನು' ಒದಗಿಸುವ ಭರವಸೆಯನ್ನು ಇದು ನೀಡುತ್ತದೆ.
- **ಗಡಿ ಭದ್ರತೆ:** ಅಕ್ರಮ ವಲಸೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ, **ಭಾರತ-ಬಾಂಗ್ಲಾದೇಶ** ಗಡಿಯನ್ನು ಸಂಪೂರ್ಣವಾಗಿ ಮುಚ್ಚಲು ಮತ್ತು ತಂತಿ ಬೇಲಿ ಹಾಕಲು ಈ ಒಪ್ಪಂದವು ಹೇಳುತ್ತದೆ.

## 8. ಸಂವಿಧಾನದ ವಿಧಿ 240

### ಇದೀಗ ಸುದ್ದಿಯಲ್ಲಿದೆ:

- ಮುಂಬರುವ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ, ಚಂಡೀಗಢವನ್ನು ಸಂವಿಧಾನದ **'ವಿಧಿ 240'** ರ ವ್ಯಾಪ್ತಿಗೆ ತರಲು ಯಾವುದೇ 'ಸಂವಿಧಾನ ತಿದ್ದುಪಡಿ ಮಸೂದೆ'ಯನ್ನು ಮಂಡಿಸುವುದಿಲ್ಲ ಎಂದು ಕೇಂದ್ರ ಗೃಹ ಸಚಿವಾಲಯವು ಸ್ಪಷ್ಟಪಡಿಸಿದೆ.

### 131 ನೇ ಸಂವಿಧಾನ ತಿದ್ದುಪಡಿ ಮಸೂದೆ, 2025 ರ ಬಗ್ಗೆ:

- ಈ ಮಸೂದೆಯು **ಚಂಡೀಗಢವನ್ನು ವಿಧಿ 240** ರ ಅಡಿಯಲ್ಲಿ ತರಲು ಪ್ರಸ್ತಾಪಿಸುತ್ತದೆ. ಈ ಮೂಲಕ **ಶಾಸಕಾಂಗಗಳನ್ನು ಹೊಂದಿರದ ಕೇಂದ್ರಾಡಳಿತ ಪ್ರದೇಶಗಳ ಗುಂಪಿಗೆ** ಇದನ್ನು ಸೇರಿಸುತ್ತದೆ ಮತ್ತು ಅದಕ್ಕಾಗಿ ನಿಯಮಾವಳಿಗಳನ್ನು ರೂಪಿಸಲು **ರಾಷ್ಟ್ರಪತಿಯವರಿಗೆ** ಅಧಿಕಾರ ನೀಡುತ್ತದೆ.
- ಇದು ಚಂಡೀಗಢ ಕೇಂದ್ರಾಡಳಿತ ಪ್ರದೇಶದಲ್ಲಿ **ಸ್ವತಂತ್ರ 'ಆಡಳಿತಾಧಿಕಾರಿ'ಯ** ನೇಮಕಕ್ಕೆ ದಾರಿ ಮಾಡಿಕೊಡುತ್ತದೆ.
- ಪ್ರಸ್ತುತ, **ಪಂಜಾಬ್‌ನ ರಾಜ್ಯಪಾಲರೇ** ಚಂಡೀಗಢದ ಆಡಳಿತಾಧಿಕಾರಿಯಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ.
- **ಚಂಡೀಗಢಕ್ಕಾಗಿ ಕೇಂದ್ರ ಸರ್ಕಾರದ ಕಾನೂನು ರಚನಾ ಪ್ರಕ್ರಿಯೆಯನ್ನು ಸರಳಗೊಳಿಸುವುದು** ಈ ಕ್ರಮದ ಉದ್ದೇಶವಾಗಿದೆ.
- **ಶಾಸಕಾಂಗಗಳನ್ನು ಹೊಂದಿರದ ಕೇಂದ್ರಾಡಳಿತ ಪ್ರದೇಶಗಳಾದ್ಯಂತ ಆಡಳಿತದಲ್ಲಿ ಏಕರೂಪತೆಯನ್ನು ಖಚಿತಪಡಿಸುವುದು** ಇದರ ಗುರಿಯಾಗಿದೆ.
- ಸಂಸತ್ತಿನ ಕಾಯಿದೆಗಳಿಗೆ ಸಮನಾದ ನಿಯಮಾವಳಿಗಳನ್ನು ಚಂಡೀಗಢಕ್ಕಾಗಿ ರೂಪಿಸಲು **ರಾಷ್ಟ್ರಪತಿಯವರಿಗೆ** ಅಧಿಕಾರ ನೀಡುವುದು ಇದರ ಉದ್ದೇಶವಾಗಿದೆ.

### ಸಂವಿಧಾನದ 240 ನೇ ವಿಧಿಯ ಬಗ್ಗೆ:

- **ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಲಕ್ಷದ್ವೀಪ, ಹಾಗೂ ದಾದ್ರಾ ಮತ್ತು ನಗರ ಹವೇಲಿ ಮತ್ತು ದಮನ್ ಮತ್ತು ದಿಯು** ಸೇರಿದಂತೆ, ನಿರ್ದಿಷ್ಟ ಕೇಂದ್ರಾಡಳಿತ ಪ್ರದೇಶಗಳ **ಶಾಂತಿ, ಪ್ರಗತಿ ಮತ್ತು ಪರಿಣಾಮಕಾರಿ ಆಡಳಿತಕ್ಕಾಗಿ ನಿಯಮಾವಳಿಗಳನ್ನು** ರೂಪಿಸುವ ಅಧಿಕಾರವನ್ನು ಸಂವಿಧಾನದ 240 ನೇ ವಿಧಿಯು **ರಾಷ್ಟ್ರಪತಿಯವರಿಗೆ** ನೀಡುತ್ತದೆ.

# ಆರ್ಥಿಕತೆ

## 1. ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ

### ಇದೀಗ ಸುದ್ದಿಯಲ್ಲಿದೆ:

- ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ ಅತ್ಯಂತ ಕಡಿಮೆ **ಬೆಳೆ ವಿಮಾ** ಪಾವತಿಗಳ ಬಗ್ಗೆ ತಳ ಮಟ್ಟದಲ್ಲಿ ಸಮಗ್ರ ತನಿಖೆ ನಡೆಸುವಂತೆ **ಕೇಂದ್ರ ಕೃಷಿ ಸಚಿವರು** ಆದೇಶಿಸಿದ್ದಾರೆ.

### ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ (PMFBY) ಯ ಬಗ್ಗೆ:

- ಅನುಷ್ಠಾನ:- **ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ.**
- ಪ್ರಾರಂಭ:- ಇದು 2016 ರಲ್ಲಿ, **ರೈತರ ಇಳುವರಿಗಾಗಿ ವಿಮಾ ಸೇವೆಯಾಗಿ** ಪ್ರಾರಂಭವಾಯಿತು.
- ಉದ್ದೇಶಗಳು: **ಪ್ರಕೃತಿವಿಕೋಪಗಳು, ಕೀಟಗಳು ಅಥವಾ ರೋಗಗಳ ಪರಿಣಾಮದಿಂದಾಗಿ, ಅಧಿಸೂಚಿಸಲಾದ ಬೆಳೆಗಳು ವಿಫಲವಾದ ಸಂದರ್ಭದಲ್ಲಿ, ರೈತರಿಗೆ ವಿಮಾ ರಕ್ಷಣೆ ಮತ್ತು ಆರ್ಥಿಕ ಬೆಂಬಲವನ್ನು ಒದಗಿಸುವುದು.**
- ರೈತರು ಕೃಷಿಯಲ್ಲಿ ಮುಂದುವರಿಯುವುದನ್ನು ಖಚಿತಪಡಿಸಿಕೊಳ್ಳಲು ಅವರ **ಆದಾಯವನ್ನು ಸ್ಥಿರಗೊಳಿಸುವುದು.**
- **ರೈತರು ನವೀನ ಮತ್ತು ಆಧುನಿಕ ಕೃಷಿ ಪದ್ಧತಿಗಳನ್ನು** ಅಳವಡಿಸಿಕೊಳ್ಳಲು ಪ್ರೋತ್ಸಾಹಿಸುವುದು.
- **ಕೃಷಿ ವಲಯಕ್ಕೆ ಸಾಲದ ಹರಿವನ್ನು** ಖಚಿತಪಡಿಸಿಕೊಳ್ಳುವುದು.

### PMFBY ನ ಪ್ರಮುಖ ಲಕ್ಷಣಗಳು:

### ಪ್ರೀಮಿಯಂ ದರಗಳು

- ಎಲ್ಲಾ **ಖಾರಿಫ್ ಬೆಳೆಗಳಿಗೆ ರೈತರು ಕೇವಲ 2%** ಮತ್ತು ಎಲ್ಲಾ **ರಾಬಿ ಬೆಳೆಗಳಿಗೆ (ಚಳಿಗಾಲದ ಬಿತ್ತನೆ) 1.5% ಏಕರೂಪದ ಪ್ರೀಮಿಯಂ** ಅನ್ನು ಪಾವತಿಸಬೇಕಾಗುತ್ತದೆ.
- **ವಾರ್ಷಿಕ ವಾಣಿಜ್ಯ ಮತ್ತು ತೋಟಗಾರಿಕಾ ಬೆಳೆಗಳಿಗೆ,** ರೈತರು ಪಾವತಿಸಬೇಕಾದ ಪ್ರೀಮಿಯಂ ಕೇವಲ **5%** ಆಗಿರುತ್ತದೆ.
- ಬಾಕಿ ಪ್ರೀಮಿಯಂ ಅನ್ನು ಸರ್ಕಾರ ಪಾವತಿಸುತ್ತದೆ **(ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮಾನವಾಗಿ ಹಂಚಿಕೊಳ್ಳುತ್ತವೆ).**
- **ನೈಸರ್ಗಿಕ ವಿಕೋಪಗಳಿಂದ** ಉಂಟಾಗುವ ಬೆಳೆ ನಷ್ಟದ ವಿರುದ್ಧ **ರೈತರಿಗೆ ಸಂಪೂರ್ಣ ವಿಮೆ** ಮೊತ್ತವನ್ನು ಒದಗಿಸುವುದು ಇದರ ಉದ್ದೇಶವಾಗಿದೆ.

## 2. ಭಾರತೀಯ ಕಲ್ಲಿದ್ದಲು ನಿಗಮ ನಿಯಮಿತ (CIL)

### ಸಂದರ್ಭ:

- ಭಾರತೀಯ ಕಲ್ಲಿದ್ದಲು ನಿಗಮ ನಿಯಮಿತ ತನ್ನ ಸಂಸ್ಥಾಪನೆಯ 50 ವರ್ಷಗಳನ್ನು ಪೂರ್ಣಗೊಳಿಸುತ್ತಿದೆ.

### ಭಾರತೀಯ ಕಲ್ಲಿದ್ದಲು ನಿಗಮ ನಿಯಮಿತ (CIL) ದ ಬಗ್ಗೆ:

- ಇದು **ಕಲ್ಲಿದ್ದಲು ಸಚಿವಾಲಯದ** ಅಡಿಯಲ್ಲಿ ಬರುವ **ಮಹಾರತ್ನ ಸಾರ್ವಜನಿಕ ವಲಯದ ಉದ್ಯಮವಾಗಿದೆ.**
- ಇದನ್ನು **ನವೆಂಬರ್ 1975** ರಲ್ಲಿ ಸ್ಥಾಪಿಸಲಾಯಿತು.
- ಪ್ರಧಾನ ಕಚೇರಿ: **ಕೋಲ್ಕತ್ತಾ.**
- **ಉತ್ಪನ್ನಗಳು:** ಕೋಕಿಂಗ್ ಕಲ್ಲಿದ್ದಲು, ಅರೆ ಕೋಕಿಂಗ್ ಕಲ್ಲಿದ್ದಲು, ಕೋಕಿಂಗ್ ಅಲ್ಲದ ಕಲ್ಲಿದ್ದಲು, ತೊಳೆಯಲಾದ ಮತ್ತು ಶುದ್ಧಗೊಳಿಸಲಾದ ಕಲ್ಲಿದ್ದಲು, ಕಲ್ಲಿದ್ದಲು ಪುಡಿ, ಮತ್ತು ಕೋಕ್ ಉತ್ಪಾದಿಸುತ್ತದೆ.
- ಕಾರ್ಯತಂತ್ರದ ಪ್ರಸ್ತುತತೆ: ಇದು ಒಟ್ಟು ದೇಶೀಯ ಕಲ್ಲಿದ್ದಲು ಉತ್ಪಾದನೆಯ **80%** ಮತ್ತು ಒಟ್ಟು ಕಲ್ಲಿದ್ದಲು ಆಧಾರಿತ ಉತ್ಪಾದನೆಯ 75% ಗೆ ಕೊಡುಗೆ ನೀಡುತ್ತದೆ.

### ಸಾರ್ವಜನಿಕ ವಲಯದ ಉದ್ಯಮಗಳ (PSU's) ಬಗ್ಗೆ:

- ಇವು ಸರ್ಕಾರಿ ಸ್ವಾಮ್ಯದ ಕಂಪನಿಗಳು ಅಥವಾ ನಿಗಮಗಳಾಗಿದ್ದು, ಇದರಲ್ಲಿ **ಕೇಂದ್ರ ಅಥವಾ ರಾಜ್ಯ ಸರ್ಕಾರವು ಬಹುಪಾಲನ್ನು ಹೊಂದಿದೆ** (51% ಅಥವಾ ಅದಕ್ಕಿಂತ ಹೆಚ್ಚು).
- ಭಾರತದ ಜಿಡಿಪಿಗೆ ಕೊಡುಗೆ: ಹಣಕಾಸು ಸಚಿವಾಲಯದ ವರದಿಯ ಪ್ರಕಾರ ಸುಮಾರು **13–14% ಕೊಡುಗೆ ನೀಡುತ್ತದೆ.**
- ಉದ್ಯೋಗ ಸೃಷ್ಟಿಯಲ್ಲಿ ಪಾತ್ರ : ಸುಮಾರು **9–10 ಲಕ್ಷ ಜನರಿಗೆ ನೇರ ಉದ್ಯೋಗ** ದೊರೆಯುತ್ತದೆ, ಕೇಂದ್ರ ಮತ್ತು ಮೂಲಸೌಕರ್ಯ ವಲಯಗಳಲ್ಲಿ ಪರೋಕ್ಷ ಉದ್ಯೋಗದ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತದೆ.
- ಒಟ್ಟು CPSUಗಳು: ಭಾರತವು **250 ಕ್ಕೂ ಹೆಚ್ಚು ಕೇಂದ್ರ ಸಾರ್ವಜನಿಕ ವಲಯದ ಉದ್ಯಮಗಳನ್ನು** ಹೊಂದಿದ್ದು, ಅವುಗಳನ್ನು **ಮಹಾರತ್ನ, ನವರತ್ನ ಮತ್ತು ಮಿನಿರತ್ನ** ಎಂದು ವರ್ಗೀಕರಿಸಲಾಗಿದೆ.
- ಪ್ರಮುಖ ವಲಯದ ಪ್ರಾಬಲ್ಯ: ಪಿಎಸ್‌ಯುಗಳು **ಇಂಧನ, ಗಣಿಗಾರಿಕೆ, ರಕ್ಷಣೆ ಮತ್ತು ಸಾರಿಗೆಯಲ್ಲಿ** ಪ್ರಮುಖ ಪಾತ್ರವನ್ನು ಉಳಿಸಿಕೊಂಡಿವೆ , ಆದರೆ ಖಾಸಗಿ ವಲಯದ ಉಪಸ್ಥಿತಿಯು ಹೆಚ್ಚುತ್ತಿದೆ.

## 3. ಈಶಾನ್ಯ ಭಾರತದ ವಿಜ್ಞಾನ ಮತ್ತು ತಂತ್ರಜ್ಞಾನ (NEST) ಸಮೂಹ

### ಸಂದರ್ಭ:

- **ಭಾರತೀಯ ತಂತ್ರಜ್ಞಾನ ಸಂಸ್ಥೆ (IIT) ಗುವಾಹಟಿಯಲ್ಲಿ** ಈಶಾನ್ಯ ಭಾರತದ ವಿಜ್ಞಾನ ಮತ್ತು ತಂತ್ರಜ್ಞಾನ (NEST) ದ ಸಮೂಹವನ್ನು, **ಕೇಂದ್ರ ಈಶಾನ್ಯ ಪ್ರದೇಶದ ಸಂವಹನ ಮತ್ತು ಅಭಿವೃದ್ಧಿ ಸಚಿವರು** ಉದ್ಘಾಟಿಸಿದರು.

### ಈಶಾನ್ಯ ಭಾರತದ ವಿಜ್ಞಾನ ಮತ್ತು ತಂತ್ರಜ್ಞಾನ (NEST) ಸಮೂಹದ ಬಗ್ಗೆ:

- ಕಾರ್ಯಾದೇಶ:- ಇದು ಈಶಾನ್ಯ ಭಾರತದ **ನಾವೀನ್ಯತೆ ಪರಿಸರದ ಕೇಂದ್ರವಾಗಿ** ಕಾರ್ಯನಿರ್ವಹಿಸುತ್ತದೆ, ಸ್ಥಳೀಯ ಬುದ್ಧಿವಂತಿಕೆಯನ್ನು ಜಾಗತಿಕ ಪರಿಹಾರಗಳಾಗಿ ಪರಿವರ್ತಿಸುತ್ತದೆ.
- **ಇದು ನಾಲ್ಕು ಪ್ರಮುಖ ವಿಭಾಗಗಳ ಮೇಲೆ ಕೇಂದ್ರೀಕರಿಸುತ್ತದೆ:**

1. ಮೂಲಸ್ತರದ ಹೊಸ ನಾವೀನ್ಯತೆ.
2. ಅರೆವಾಹಕಗಳು ಮತ್ತು ಕೃತಕ ಬುದ್ಧಿಮತ್ತೆ.
3. ಬಿದಿರು ಆಧಾರಿತ ತಂತ್ರಜ್ಞಾನಗಳು.
4. ಜೈವಿಕ ವಿಘಟನೀಯ ಪ್ಲಾಸ್ಟಿಕ್‌ಗಳು.

## 4. ನೀಲಿ ನಗರಗಳು




### ಸಂದರ್ಭ:

- ಪ್ರಪಂಚದಾದ್ಯಂತ, ಪ್ರಮುಖ **ಸಮುದ್ರ ಸಾರಿಗೆ ಕೇಂದ್ರಗಳು** "ನೀಲಿ ನಗರ" ಗಳಾಗಿ ರೂಪಾಂತರಗೊಳ್ಳುತ್ತಿವೆ.

### ನೀಲಿ ನಗರಗಳ ಬಗ್ಗೆ:

- ಇದು ಸಾಗರ ಆಧಾರಿತ ಆರ್ಥಿಕ ಚಟುವಟಿಕೆಗಳನ್ನು ಸುಸ್ಥಿರ ನಗರ ಅಭಿವೃದ್ಧಿಯೊಂದಿಗೆ ಸಂಯೋಜಿಸುವ **ಕರಾವಳಿ ಅಥವಾ ಬಂದರು ನಗರಗಳನ್ನು** ಸೂಚಿಸುತ್ತದೆ.
- ಈ ಪರಿಕಲ್ಪನೆಯು **"ನೀಲಿ ಆರ್ಥಿಕತೆ"**ಯ ಕಲ್ಪನೆಯಲ್ಲಿ ಬೇರೂರಿದೆ - ಅಂದರೆ ಸಮುದ್ರ ಪರಿಸರ ವ್ಯವಸ್ಥೆಗಳ ಆರೋಗ್ಯವನ್ನು ಕಾಪಾಡುವಾಗ ಆರ್ಥಿಕ ಬೆಳವಣಿಗೆಗೆ ಸಾಗರ ಸಂಪನ್ಮೂಲಗಳನ್ನು ಬಳಸುವುದು.

### ಭಾರತಕ್ಕೆ ಅವಕಾಶ

- ಭಾರತವು 11,098.81 ಕಿ.ಮೀ ಕರಾವಳಿಯನ್ನು, 13 ಪ್ರಮುಖ ಬಂದರುಗಳನ್ನು, 200+ ಅಪ್ರಮುಖ ಬಂದರುಗಳನ್ನು ಹೊಂದಿದೆ.

### ಭಾರತದಲ್ಲಿ ಪ್ರಯೋಗಾತ್ಮಕವಾಗಿ ಆಯ್ದ ನೀಲಿ ನಗರಗಳು:

1. **ಮುಂಬೈ:-** ಬಂದರು ಲಾಜಿಸ್ಟಿಕ್ಸ್ ಅನ್ನು ಸುಸ್ಥಿರ ಹಣಕಾಸು ಮತ್ತು ನಾವೀನ್ಯತೆಯೊಂದಿಗೆ ಸಂಯೋಜಿಸುವುದು.
2. **ವೈಜಾಗ್:-** ನೌಕಾ ಮತ್ತು ಹಡಗು ನಿರ್ಮಾಣ ಪರಿಣತಿ.
3. **ಚೆನ್ನೈ:-** ತಂತ್ರಜ್ಞಾನ ಮತ್ತು ಮುಂದುವರಿದ ಉತ್ಪಾದನಾ ಏಕೀಕರಣ.
4. **ಮುಂದ್ರಾ:-** ಖಾಸಗಿ ಹೂಡಿಕೆ ಮತ್ತು ಶುದ್ಧ ಇಂಧನ ಜಾರಿ ವ್ಯವಸ್ಥೆ.
5. **ಕೊಚ್ಚಿ:-** ಸಮುದ್ರ ಸಾರಿಗೆ ಸೇವೆಗಳು ಮತ್ತು ಕಡಲಾಚೆಯ ನವೀಕರಿಸಬಹುದಾದ ಇಂಧನ.

**ಭಾರತದ ಬಂದರು ವಲಯದ ಬಗ್ಗೆ:**

- ಭಾರತವು **ಕೇಂದ್ರ ಸರ್ಕಾರದ ನಿಯಂತ್ರಣದ ಅಡಿಯಲ್ಲಿ 13 ಪ್ರಮುಖ ಬಂದರುಗಳು** ಮತ್ತು ರಾಜ್ಯ ಸರ್ಕಾರದ ನಿಯಂತ್ರಣದ ಅಡಿಯಲ್ಲಿ 217 ಸಣ್ಣ ಬಂದರುಗಳನ್ನು ಹೊಂದಿದೆ.
- **ಬಂದರುಗಳು, ಹಡಗು ಸಾಗಣೆ ಮತ್ತು ಜಲಮಾರ್ಗಗಳ ಸಚಿವಾಲಯವು** ಬಂದರುಗಳನ್ನು ನಿರ್ವಹಿಸುತ್ತದೆ.
- ಭಾರತದ ಸಮುದ್ರ ಸಾರಿಗೆಯ ಅವಲೋಕನ:- ಭಾರತದ ವ್ಯಾಪಾರದ **95% ರಷ್ಟು ಪರಿಮಾಣದ ಪ್ರಕಾರ ಮತ್ತು 70% ಮೌಲ್ಯದ ಪ್ರಕಾರ** ವ್ಯಾಪಾರವನ್ನು ನಿರ್ವಹಿಸುತ್ತದೆ, ಆರ್ಥಿಕತೆಗೆ ನಿರ್ಣಾಯಕವಾದ ಬಂದರು ಮೂಲಸೌಕರ್ಯವನ್ನು ಹೊಂದಿದೆ.
- ಬಂದರು ಶ್ರೇಯಾಂಕ ಸುಧಾರಣೆ:- ಭಾರತದ ಬಂದರು ಶ್ರೇಯಾಂಕವು 2014 ರಲ್ಲಿ 54 ನೇ ಸ್ಥಾನದಿಂದ **2023 ರಲ್ಲಿ 38 ನೇ ಸ್ಥಾನಕ್ಕೆ ಸುಧಾರಿಸಿದೆ,** ಈಗ ಭಾರತದ **ಒಂಬತ್ತು ಬಂದರುಗಳು ಜಾಗತಿಕವಾಗಿ ಅಗ್ರ 100 ರಲ್ಲಿ ಸ್ಥಾನ ಪಡೆದಿವೆ.**
- ಸಮುದ್ರ ಸಾರಿಗೆ ಕ್ಷೇತ್ರದ ಪ್ರಾಮುಖ್ಯತೆ:- **ಭಾರತವು 16 ನೇ ಅತಿದೊಡ್ಡ ಸಮುದ್ರ ಸಾರಿಗೆ ರಾಷ್ಟ್ರವಾಗಿದ್ದು,** ಜಾಗತಿಕ ಸಾಗಣೆಯಲ್ಲಿ ಪ್ರಮುಖ ಸ್ಥಾನವನ್ನು ಹೊಂದಿದೆ, ಪ್ರಮುಖ ವ್ಯಾಪಾರ ಮಾರ್ಗಗಳು ಅದರ ನೀರಿನ ಮೂಲಕ ಹಾದುಹೋಗುತ್ತವೆ.

## 5. ಸ್ಟೇಬಲ್‌ಕಾಯಿನ್‌ಗಳು (ಸ್ಥಿರ ನಾಣ್ಯಗಳು)

**ಸಂದರ್ಭ:**

- **ಭಾರತೀಯ ರಿಸರ್ವ್ ಬ್ಯಾಂಕ್ (RBI) ನಿಯಂತ್ರಿಸುವ ರೂಪಾಯಿ ಬೆಂಬಲಿತ ಸ್ಟೇಬಲ್‌ಕಾಯಿನ್‌ಗಳು** ಪಾವತಿ, ಹಣ ರವಾನೆ ಮತ್ತು ಗಡಿಯಾಚೆಗಿನ ವಹಿವಾಟುಗಳಲ್ಲಿ ಕ್ರಾಂತಿಯನ್ನುಂಟು ಮಾಡಬಹುದು.

**ರೂಪಾಯಿ ಸ್ಟೇಬಲ್‌ಕಾಯಿನ್ (ಸ್ಥಿರ ನಾಣ್ಯ) ಗಳ ಬಗ್ಗೆ:**

- ಸ್ಟೇಬಲ್‌ಕಾಯಿನ್‌ಗಳು ಎಂದರೆ, **ಸಾಮಾನ್ಯವಾಗಿ ಅಮೇರಿಕ ಡಾಲರ್ ಅಥವಾ ಭಾರತೀಯ ರೂಪಾಯಿ ಮುಂತಾದ ಫಿಯಾಟ್ ಕರೆನ್ಸಿಗಳಂತಹ ಮೀಸಲು ಆಸ್ತಿಗಳಿಗೆ ಜೋಡಿಸುವ ಮೂಲಕ ಸ್ಥಿರ ಮೌಲ್ಯವನ್ನು ಕಾಯ್ದುಕೊಳ್ಳಲು ವಿನ್ಯಾಸಗೊಳಿಸಿರುವ ಕ್ರಿಪ್ಟೋಕರೆನ್ಸಿಗಳು.**
- ರೂಪಾಯಿ ಸ್ಟೇಬಲ್‌ಕಾಯಿನ್ ಅನ್ನು **ಭಾರತೀಯ ರೂಪಾಯಿಗೆ 1:1 ರಲ್ಲಿ ಕಡ್ಡಾಯವಾಗಿ ಜೋಡಿಸುವ** ಗುರಿಯನ್ನು ಹೊಂದಿದೆ. ಇದರಿಂದ ಕ್ರಿಪ್ಟೊ ನೀಡುವ ವೇಗ, ಪ್ರೋಗ್ರಾಮೆಬಿಲಿಟಿ, ಜಾಗತಿಕ ವ್ಯಾಪ್ತಿ ಮುಂತಾದ ಪ್ರಯೋಜನಗಳನ್ನು, ಅದರ **ಅಸ್ಥಿರತೆ ಇಲ್ಲದೆ ಪಡೆಯಬಹುದು.**
- ಸ್ಟೇಬಲ್‌ಕಾಯಿನ್‌ಗಳನ್ನು **ಉಪಯುಕ್ತತೆಗಾಗಿ** ನಿರ್ಮಿಸಲಾಗಿದೆ, **ಊಹಾತ್ಮಕ ಕ್ರಿಪ್ಟೋ ಸ್ವತ್ತುಗಳಂತೆ ಹೂಡಿಕೆಗಾಗಿ ಅಲ್ಲ.**

**ಅವುಗಳನ್ನು ಇದಕ್ಕಾಗಿ ಬಳಸಬಹುದು:**

- ತ್ವರಿತ ದೇಶೀಯ ಮತ್ತು ಅಂತರರಾಷ್ಟ್ರೀಯ ಪಾವತಿಗಳು.
- ಸ್ಮಾರ್ಟ್ ಒಪ್ಪಂದ ಆಧಾರಿತ ಹಣಕಾಸು ಸೇವೆಗಳು.
- ಹಣ ರವಾನೆಯಲ್ಲಿ ವಹಿವಾಟು ವೆಚ್ಚವನ್ನು ಕಡಿಮೆ ಮಾಡುವುದು.

**ಮೂಲ ವಿಷಯಗಳೊಂದಿಗೆ ಅವಲೋಕಿಸಿ:**

- **ಕ್ರಿಪ್ಟೋಕರೆನ್ಸಿ**:- ಇದು **ಹಣಕಾಸಿನ ವಹಿವಾಟುಗಳಿಗಾಗಿ ಬಳಸುವ ವರ್ಚುವಲ್ ಕರೆನ್ಸಿಯಾಗಿದೆ.** ಇದು ವಿವಿಧ ವಹಿವಾಟುಗಳಿಗೆ **ಬ್ಲಾಕ್‌ಚೈನ್ ತಂತ್ರಜ್ಞಾನವನ್ನು** ಬಳಸುತ್ತದೆ.
- **ಬ್ಲಾಕ್‌ಚೈನ್**:- ಬ್ಲಾಕ್‌ಚೈನ್ ಎಂಬುದು **ಭ್ರಷ್ಟಗೊಳಿಸಲಾಗದ ಡಿಜಿಟಲ್ ವಹಿವಾಟು ದಾಖಲೆ** ಆಗಿದ್ದು, **ಮೌಲ್ಯ ಹೊಂದಿರುವ ಬಹುಪಾಲು ಮಾಹಿತಿಯನ್ನು ದಾಖಲಿಸುವಂತೆ ಇದನ್ನು ಪ್ರೋಗ್ರಾಮ್ ಮಾಡಬಹುದು.** ಬ್ಲಾಕ್‌ಚೈನ್‌ನಲ್ಲಿ **ದಾಖಲೆಗಳ ಪ್ರತಿಯೊಂದು ಪಟ್ಟಿಯನ್ನು 'ಬ್ಲಾಕ್'** ಎಂದು ಕರೆಯಲಾಗುತ್ತದೆ.
- **ಬಿಟ್‌ಕಾಯಿನ್**:- ಇದು ಒಂದು ರೀತಿಯ **ಕ್ರಿಪ್ಟೋಕರೆನ್ಸಿಯಾಗಿದ್ದು** ಅದು ಯಾರಿಗಾದರೂ **ತ್ವರಿತ ಪಾವತಿಗಳನ್ನು** ಸಕ್ರಿಯಗೊಳಿಸುತ್ತದೆ.

## 6. ರಾಷ್ಟ್ರೀಯ ಜೇನುಸಾಕಣೆ ಮತ್ತು ಜೇನುತುಪ್ಪ ಗುರಿ

**ಇದೀಗ ಸುದ್ದಿಯಲ್ಲಿದೆ:**

- ರಾಷ್ಟ್ರೀಯ ಜೇನುಸಾಕಣೆ ಮತ್ತು ಜೇನುತುಪ್ಪ ಗುರಿ (NBHM) ದೇಶದಾದ್ಯಂತ **ವೈಜ್ಞಾನಿಕ ಜೇನುಸಾಕಣೆಯನ್ನು** ಹೆಚ್ಚಿಸುತ್ತಿರುವುದರಿಂದ ಭಾರತದ ಜೇನು ವಲಯವು ರಚನಾತ್ಮಕ ಪರಿವರ್ತನೆಗೆ ಒಳಗಾಗುತ್ತಿದೆ.

**ರಾಷ್ಟ್ರೀಯ ಜೇನುಸಾಕಣೆ ಮತ್ತು ಜೇನುತುಪ್ಪ ಗುರಿ (NBHM) ಯ ಬಗ್ಗೆ:**

- ಇದು **ಕೇಂದ್ರ ವಲಯದ ಯೋಜನೆಯಾಗಿದೆ.**
- **ಉದ್ದೇಶ**-ವೈಜ್ಞಾನಿಕ ಜೇನುಸಾಕಣೆ ಮತ್ತು ಗುಣಮಟ್ಟದ ಜೇನುತುಪ್ಪ ಮತ್ತು ಇತರ ಜೇನು ಗೂಡು ಉತ್ಪನ್ನಗಳ ಉತ್ಪಾದನೆಯನ್ನು ಉತ್ತೇಜಿಸುವುದು ಮತ್ತು ಅಭಿವೃದ್ಧಿಪಡಿಸುವುದು.
- ಅನುಷ್ಠಾನ- **ರಾಷ್ಟ್ರೀಯ ಜೇನುನೊಣ ಮಂಡಳಿ (NBB).**
- **ಮಹತ್ವ** - ಜೇನುಸಾಕಣೆಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿರುವ ಮಹತ್ವಾಕಾಂಕ್ಷೆಯ ಉಪಕ್ರಮವಾದ **" ಸಿಹಿ ಕ್ರಾಂತಿ"** ಯ ಭಾಗವಾಗಿ ಇದನ್ನು ಪ್ರಾರಂಭಿಸಲಾಯಿತು.
- ಜೇನುತುಪ್ಪ ಉತ್ಪಾದಿಸುವ ಪ್ರಮುಖ ರಾಜ್ಯಗಳು: **ಉತ್ತರ ಪ್ರದೇಶ (17%),** ಪಶ್ಚಿಮ ಬಂಗಾಳ (16%), ಪಂಜಾಬ್ (14%), ಬಿಹಾರ (12%) ಮತ್ತು ರಾಜಸ್ಥಾನ (9%) ರಾಜ್ಯಗಳನ್ನು ಒಳಗೊಂಡಿದೆ.

## 7. ಮೋಲ್ಯಾಸಿಸ್ (ಕಾಕಂಬಿ)



**ಸಂದರ್ಭ:**

- ಕೇಂದ್ರ ಸರ್ಕಾರವು 2025–26ರಲ್ಲಿ ಸುಮಾರು 15 ಲಕ್ಷ ಟನ್ ಸಕ್ಕರೆ ರಫ್ತಿಗೆ ಅನುಮತಿ ನೀಡುವುದನ್ನು ಹಾಗೂ ಮೋಲ್ಯಾಸಿಸ್ ಮೇಲೆ ಇರುವ 50% ರಫ್ತು ತೆರಿಗೆಯನ್ನು ರದ್ದುಪಡಿಸುವುದನ್ನು ಪರಿಗಣಿಸುತ್ತಿದೆ. ಇದರಿಂದ ರೈತರಿಗೆ ಆದಾಯ ಹೆಚ್ಚಳವಾಗಲು ಮತ್ತು ವೇಗವಾಗಿ ಪಾವತಿಗಳು ದೊರಕಲು ಸಹಕಾರಿಯಾಗುತ್ತದೆ.


**ಮೊಲಾಸಸ್ (ಕಾಕಂಬಿ) ನ ಬಗ್ಗೆ:**

- ಮೊಲಾಸಸ್ ಎಂಬುದು **ಕಬ್ಬು ಅಥವಾ ಸಕ್ಕರೆಯುಕ್ತ ಬೀಟ್ಗಡ್ಡೆಗಳನ್ನು ಸಕ್ಕರೆಯಾಗಿ ಸಂಸ್ಕರಿಸುವ ಪ್ರಕ್ರಿಯೆಯಲ್ಲಿ ಉಪಉತ್ಪನ್ನವಾಗಿ ಪಡೆದ ದಪ್ಪದಾದ, ಗಾಢ ಕಂದು ಬಣ್ಣದ ದ್ರವವಾಗಿದೆ.**

**ಉಪಯೋಗಗಳು:**

- ಆಹಾರ ಉದ್ಯಮ:- **ಬೇಕರಿ ಉತ್ಪನ್ನಗಳು, ಮದ್ಯದ ಉತ್ಪಾದನೆ ಮತ್ತು ಪಶು ಆಹಾರವಾಗಿ** ಬಳಸಲಾಗುತ್ತದೆ.
- ಕೈಗಾರಿಕಾ ಬಳಕೆ: **ಎಥೆನಾಲ್, ಸಿಟ್ರಿಕ್ ಆಮ್ಲ ಮತ್ತು ಯೀಸ್ಟ್ ಉತ್ಪಾದನೆಯಲ್ಲಿ** ಬಳಕೆ.
- ಕೃಷಿ : ಜಾನುವಾರುಗಳ ಆಹಾರವಾಗಿ ಮತ್ತು ಮಣ್ಣಿನ ಸುಧಾರಣೆಗೆ ಬಳಕೆ.
- ಕಚ್ಚಾ ತೈಲ ಆಮದುಗಳನ್ನು ಕಡಿಮೆ ಮಾಡಲು ಭಾರತದ **ಎಥೆನಾಲ್ ಮಿಶ್ರಣ ಕಾರ್ಯಕ್ರಮದ** ಅಡಿಯಲ್ಲಿ ಎಥೆನಾಲ್ ಉತ್ಪಾದನೆಗೆ ಇದು ಪ್ರಮುಖ ಕಚ್ಚಾ ವಸ್ತುವಾಗಿದೆ.

## 8. ಹಣ ಅಮಾನ್ಯೀಕರಣವಾಗಿ ಒಂಬತ್ತು ವರ್ಷಗಳ ನಂತರ



Source: Ministry of Electronics and Information Technology

**ಸಂದರ್ಭ:**

- 2016ರಲ್ಲಿ ಕೇಂದ್ರ ಸರ್ಕಾರ ಹಣ ಅಮಾನ್ಯೀಕರಣವನ್ನು ಘೋಷಿಸಿದ ನಂತರ, **ಸಾರ್ವಜನಿಕರ ಕೈಯಲ್ಲಿರುವ ನಗದು ಪ್ರಮಾಣವು ದ್ವಿಗುಣಕ್ಕಿಂತ ಹೆಚ್ಚಾಗಿದೆ.**

**ಹಣ ಅಮಾನ್ಯೀಕರಣದ ಬಗ್ಗೆ:**

- ಪ್ರಧಾನ ಮಂತ್ರಿಯವರು **ನವೆಂಬರ್ 8, 2016** ರಂದು ಹಣ ಅಮಾನ್ಯೀಕರಣವನ್ನು ಘೋಷಿಸಿದರು.
- ಆ ಸಮಯದಲ್ಲಿ ಒಟ್ಟಾರೆ ಚಲಾವಣೆಯಲ್ಲಿದ್ದ ಹಣದಲ್ಲಿ ಸುಮಾರು 86% ಹೊಂದಿದ್ದ **ಎಲ್ಲಾ ₹500 ಮತ್ತು ₹1000** ಮುಖಬೆಲೆಯ ನೋಟುಗಳನ್ನು ಇನ್ನು ಮುಂದೆ ಕಾನೂನುಬದ್ಧ ಹಣವಲ್ಲ ಎಂದು ಅದು ಘೋಷಿಸಿತು.
- **ಕಪ್ಪು ಹಣವನ್ನು ತೊಡೆದುಹಾಕಲು, ನಕಲಿ ಹಣವನ್ನು ನಿಗ್ರಹಿಸಲು, ಡಿಜಿಟಲ್ ಪಾವತಿಗಳನ್ನು ಉತ್ತೇಜಿಸಲು ಮತ್ತು ಆರ್ಥಿಕತೆಯನ್ನು ಔಪಚಾರಿಕಗೊಳಿಸಲು** ಉದ್ದೇಶಿಸಲಾಗಿತ್ತು.

## 9. ಭೌಗೋಳಿಕ ಸೂಚ್ಯಂಕ ಪಟ್ಟಿಯ ಅರ್ಜಿ ಶುಲ್ಕ ಕಡಿತ

**ಇದೀಗ ಸುದ್ದಿಯಲ್ಲಿದೆ:**

- ಇತ್ತೀಚೆಗೆ, ಸರ್ಕಾರವು ಭೌಗೋಳಿಕ ಸೂಚ್ಯಂಕ ಪಟ್ಟಿಯ ಅರ್ಜಿ ಶುಲ್ಕವನ್ನು ₹5,000 ರಿಂದ ₹1,000 ಕ್ಕೆ ಇಳಿಸುವುದಾಗಿ ಘೋಷಿಸಿತು, ಇದು ಬುಡಕಟ್ಟು ಕುಶಲಕರ್ಮಿಗಳ ಸಾಂಪ್ರದಾಯಿಕ ಕರಕುಶಲ ವಸ್ತುಗಳನ್ನು ಸಂರಕ್ಷಿಸಲು ಪ್ರೋತ್ಸಾಹಿಸುತ್ತದೆ.

**ಭೌಗೋಳಿಕ ಸೂಚ್ಯಂಕ ಪಟ್ಟಿಯ ಶುಲ್ಕ ಕಡಿತ:**

- ಈ ಕೆಳಗಿನ ಕರಕುಶಲ ವಸ್ತು ಮತ್ತು ಉತ್ಪನ್ನಗಳಿಗೆ ಭೌಗೋಳಿಕ ಸೂಚ್ಯಂಕ ಪಟ್ಟಿಯ ಪ್ರಮಾಣಪತ್ರಗಳನ್ನು ವಿತರಿಸಲಾಗಿದೆ.

**1. ಕನ್ನಡಿಪ್ಪಯ (ಕೇರಳ)**



**2. ಅಪತಾನಿ ಜವಳಿ (ಅರುಣಾಚಲ)**



### 3. ಮಾರ್ತಾಂಡಂ ಜೇನು (ತಮಿಳುನಾಡು)




### 4. ಲೆಪ್ಚಾ ತುಂಗ್‌ಬುಕ್ (ಸಿಕ್ಕಿಂ)



### 5. ಬೋಡೋ ಅರೋನೈ (ಅಸ್ಸಾಂ)



### 6. ಅಂಬಾಜಿ ಮಾರ್ಬಲ್ (ಗುಜರಾತ್)



### 7. ಬದ್ರಿ ಹಸುವಿನ ತುಪ್ಪ (ಉತ್ತರಾಖಂಡ)




### ಭೌಗೋಳಿಕ ಸೂಚ್ಯಂಕ ಪಟ್ಟಿಯ ಬಗ್ಗೆ:

- **ಇದು ಒಂದು ನಿರ್ದಿಷ್ಟ ಭೌಗೋಳಿಕ ಸ್ಥಳ ಅಥವಾ ಪ್ರದೇಶ, ಪಟ್ಟಣ ಅಥವಾ ದೇಶದಂತಹ ಮೂಲಗಳಿಗೆ ಸಂಬಂಧಿಸಿದ ಕೆಲವು ಉತ್ಪನ್ನಗಳಿಗೆ ನೀಡಲಾಗುವ ಹೆಸರು ಅಥವಾ ಸಂಕೇತವಾಗಿದೆ.**
- **ವಿಶಿಷ್ಟ ಉತ್ಪನ್ನಗಳಿಗೆ ಪ್ರಮಾಣೀಕರಣ:-** ಭೌಗೋಳಿಕ ಸೂಚ್ಯಂಕ ಪಟ್ಟಿಯನ್ನು ಕೆಲವು **ನಿರ್ದಿಷ್ಟ ಗುಣಗಳನ್ನು** ಹೊಂದಿರುವ ಅಥವಾ ಅದರ **ಭೌಗೋಳಿಕ ಮೂಲದ** ಕಾರಣದಿಂದಾಗಿ **ನಿರ್ದಿಷ್ಟ ಖ್ಯಾತಿಯನ್ನು ಹೊಂದಿರುವ ನಿರ್ದಿಷ್ಟ ಉತ್ಪನ್ನಕ್ಕೆ** ಪ್ರಮಾಣೀಕರಣವೆಂದು ಪರಿಗಣಿಸಬಹುದು.
- **ವೈನ್ ಮತ್ತು ತಂಪು ಪಾನೀಯಗಳು, ಆಹಾರ ಪದಾರ್ಥಗಳು, ಕೃಷಿ ಉತ್ಪನ್ನಗಳು, ಕರಕುಶಲ ವಸ್ತುಗಳು ಮತ್ತು ಕೈಗಾರಿಕಾ ಉತ್ಪನ್ನಗಳಿಗೆ** ಭೌಗೋಳಿಕ ಸೂಚ್ಯಂಕಗಳನ್ನು ನೀಡಬಹುದು.
- **ಬೌದ್ಧಿಕ ಆಸ್ತಿ ಹಕ್ಕುಗಳ ವ್ಯಾಪಾರ-ಸಂಬಂಧಿತ ಅಂಶಗಳು (TRIPS):-** ಅಂತರರಾಷ್ಟ್ರೀಯ ಮಟ್ಟದಲ್ಲಿ, ಭೌಗೋಳಿಕ ಸೂಚ್ಯಂಕಗಳನ್ನು **ವಿಶ್ವ ವ್ಯಾಪಾರ ಸಂಸ್ಥೆಯ** (WTO) ಯ ಬೌದ್ಧಿಕ ಆಸ್ತಿ ಹಕ್ಕುಗಳ ವ್ಯಾಪಾರ-ಸಂಬಂಧಿತ ಅಂಶಗಳ ಒಪ್ಪಂದ (TRIPS) ನಿಯಂತ್ರಿಸುತ್ತದೆ.
- **ಸರಕುಗಳ ಭೌಗೋಳಿಕ ಸೂಚ್ಯಂಕ (ನೋಂದಣಿ ಮತ್ತು**

**ಸಂರಕ್ಷಣೆ) ಕಾಯ್ದೆ, 1999:-** ಭಾರತದಲ್ಲಿ, ಭೌಗೋಳಿಕ ಸೂಚ್ಯಂಕಗಳ **ನೋಂದಣಿಯನ್ನು** ಸೆಪ್ಟೆಂಬರ್ 2003 ರಲ್ಲಿ ಜಾರಿಗೆ ಬಂದ ಸರಕುಗಳ ಭೌಗೋಳಿಕ ಸೂಚನೆಗಳು (ನೋಂದಣಿ ಮತ್ತು ಸಂರಕ್ಷಣೆ) ಕಾಯ್ದೆ, 1999 ರಿಂದ ನಿರ್ವಹಿಸಲಾಗುತ್ತದೆ.

- **ಡಾರ್ಜಿಲಿಂಗ್ ಚಹಾ - 2004-05ರಲ್ಲಿ** ಭಾರತದಲ್ಲಿ ಭೌಗೋಳಿಕ ಸೂಚ್ಯಂಕ ಪಟ್ಟಿಯನ್ನು ಪಡೆದ ಮೊದಲ ಉತ್ಪನ್ನವಾಗಿದೆ.

## 10.ನಗರ ಸಹಕಾರಿ ಬ್ಯಾಂಕುಗಳು (UCB's)

### ಸಂದರ್ಭ:

- ಇತ್ತೀಚೆಗೆ, **ಕೇಂದ್ರ ಗೃಹ ಮತ್ತು ಸಹಕಾರ ಸಚಿವರು, 'ಕೋ -ಒಪ್ ಕುಂಭ 2025' ರಲ್ಲಿ,** ಭಾರತದ ಯುವಜನರು ಮತ್ತು ಹಿಂದುಳಿದ ಸಮುದಾಯಗಳನ್ನು ಸಬಲೀಕರಣಗೊಳಿಸುವಲ್ಲಿ ಪರಿವರ್ತನಾತ್ಮಕ ಪಾತ್ರ ವಹಿಸುವಂತೆ ನಗರ ಸಹಕಾರಿ ಬ್ಯಾಂಕುಗಳಿಗೆ (ಯುಸಿಬಿ) ಕರೆ ನೀಡಿದರು.

### 'ಕೋ -ಒಪ್ ಕುಂಭ 2025' ರ ಪ್ರಮುಖ ಮುಖ್ಯಾಂಶಗಳು:

- **'ದೆಹಲಿ ಘೋಷಣೆ 2025':-** ಸಹಕಾರಿ ಬ್ಯಾಂಕಿಂಗ್ ಜಾಲದೊಳಗೆ **ಆರ್ಥಿಕ ಸ್ಥಿರತೆ, ಆಡಳಿತ ಮತ್ತು ಡಿಜಿಟಲೀಕರಣವನ್ನು** ಹೆಚ್ಚಿಸುವತ್ತ ಗಮನಹರಿಸುವುದು ಮತ್ತು **ರಾಷ್ಟ್ರೀಯ ನಗರ ಸಹಕಾರಿ ಬ್ಯಾಂಕುಗಳು ಮತ್ತು ಸಾಲ ಸಂಘಗಳ ಒಕ್ಕೂಟ** (NAFCUB) ಅಂಗೀಕರಿಸುವುದು.

### ನಗರ ಸಹಕಾರಿ ಬ್ಯಾಂಕುಗಳ (UCB's) ಬಗ್ಗೆ:

- ಇವು ಪ್ರಾಥಮಿಕವಾಗಿ **ನಗರ ಮತ್ತು ಅರೆ ನಗರದ ಜನರಿಗೆ ಸೇವೆಯನ್ನು ಒದಗಿಸುವ ಹಣಕಾಸು ಸಂಸ್ಥೆಗಳಾಗಿವೆ.**
- ಸಹಕಾರದ ತತ್ವಗಳು:- ವಾಣಿಜ್ಯ ಬ್ಯಾಂಕುಗಳಿಗಿಂತ ಭಿನ್ನವಾಗಿ **ಪರಸ್ಪರ ಸಹಾಯ, ಪ್ರಜಾಪ್ರಭುತ್ವ ನಿರ್ಧಾರ ತೆಗೆದುಕೊಳ್ಳುವಿಕೆ ಮತ್ತು ಮುಕ್ತ ಸದಸ್ಯತ್ವ.**
- ಮಹತ್ವ:- ಇವು **ಸಣ್ಣ ವ್ಯವಹಾರಗಳಿಗೆ, ಸಂಬಳ ಪಡೆಯುವ ವ್ಯಕ್ತಿಗಳಿಗೆ ಮತ್ತು ಕಡಿಮೆ ಆದಾಯದ ಗುಂಪುಗಳಿಗೆ ಠೇವಣಿ, ಸಾಲ ಮತ್ತು ಸಾಲ ಸೌಲಭ್ಯಗಳಂತಹ ಬ್ಯಾಂಕಿಂಗ್** ಸೇವೆಗಳನ್ನು ನೀಡುತ್ತವೆ.
- ಇವು **ಒಳಗೊಳ್ಳುವಿಕೆಯಿಂದ ಕೂಡಿದ ಆರ್ಥಿಕ ಬೆಳವಣಿಗೆಯನ್ನು** ಉತ್ತೇಜಿಸುವಲ್ಲಿ, ಸಣ್ಣ ವ್ಯಾಪಾರಿಗಳಿಗೆ, ಉದ್ಯಮಿಗಳಿಗೆ ಮತ್ತು ಸಮಾಜದ ದುರ್ಬಲ ವರ್ಗಗಳಿಗೆ ಬೆಂಬಲಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

## 11.ನೌಕರರ ನೋಂದಣಿ ಯೋಜನೆ, 2025

### ಇದೀಗ ಸುದ್ದಿಯಲ್ಲಿದೆ:

- ಕೇಂದ್ರ ಸರ್ಕಾರವು 'ನೌಕರರ ನೋಂದಣಿ ಯೋಜನೆ 2025'ಕ್ಕೆ ಚಾಲನೆ ನೀಡಿದೆ. ನೌಕರರನ್ನು **'ನೌಕರರ ಭವಿಷ್ಯ ನಿಧಿ ಸಂಘಟನೆ'ಯ** (EPFO) ಅಡಿಯಲ್ಲಿ **ಸ್ವಯಂಪ್ರೇರಿತವಾಗಿ ನೋಂದಾಯಿಸುವುದು** ಇದರ ಉದ್ದೇಶವಾಗಿದೆ.

### ನೌಕರರ ನೋಂದಣಿ ಯೋಜನೆ, 2025 ರ ಬಗ್ಗೆ:

- ಇದನ್ನು 'ನೌಕರರ ಭವಿಷ್ಯ ನಿಧಿ ಸಂಘಟನೆ'ಯ 73 ನೇ ಸ್ಥಾಪನಾ ದಿನಾಚರಣೆಯ ಸಂದರ್ಭದಲ್ಲಿ **ಕೇಂದ್ರ ಕಾರ್ಮಿಕ ಸಚಿವರು** ಉದ್ಘಾಟಿಸಿದರು.
- **ಅರ್ಹ ನೌಕರರನ್ನು ಸ್ವಯಂಪ್ರೇರಿತವಾಗಿ ಘೋಷಿಸಲು ಮತ್ತು ನೋಂದಾಯಿಸಲು ಉದ್ಯೋಗದಾತರನ್ನು ಪ್ರೋತ್ಸಾಹಿಸುವುದು** ಇದರ ಗುರಿಯಾಗಿದೆ.
- **ಜುಲೈ 1, 2017 ಮತ್ತು ಅಕ್ಟೋಬರ್ 31, 2025** ರ ನಡುವೆ ಸಂಸ್ಥೆಗೆ ಸೇರಿದ, ಆದರೆ ಯಾವುದೇ ಕಾರಣಕ್ಕಾಗಿ 'ನೌಕರರ ಭವಿಷ್ಯ ನಿಧಿ' (EPF) ಅಡಿಯಲ್ಲಿ ನೋಂದಾಯಿಸಲ್ಪಡದ ಕೆಲಸಗಾರರನ್ನು ಉದ್ಯೋಗದಾತರು ಈ ಯೋಜನೆಯಡಿ ನೋಂದಾಯಿಸಬಹುದು.
- ಮಹತ್ವ: ಈ ಯೋಜನೆಯು **ಉದ್ಯೋಗದಾತರಿಗೆ ಭಾರಿ ದಂಡಗಳು ಅಥವಾ ಕಾನೂನು ಕ್ರಮಗಳ ಭಯವಿಲ್ಲದೆ ತಮ್ಮ ಉದ್ಯೋಗಿಗಳನ್ನು ಸಕ್ರಮಗೊಳಿಸಲು** ಅವಕಾಶವನ್ನು ಒದಗಿಸುತ್ತದೆ.

### ನೌಕರರ ಭವಿಷ್ಯ ನಿಧಿ ಸಂಘಟನೆ (EPFO) ಯ ಬಗ್ಗೆ:

- ಇದು **ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯದ** ಅಡಿಯಲ್ಲಿರುವ ಒಂದು ಶಾಸನಬದ್ಧ ಸಂಸ್ಥೆಯಾಗಿದೆ.
- ಸ್ಥಾಪನೆ: **ನೌಕರರ ಭವಿಷ್ಯ ನಿಧಿ ಮತ್ತು ಇತರೆ ನಿಬಂಧನೆಗಳ ಕಾಯಿದೆ, 1952** ರ ಅಡಿಯಲ್ಲಿ ಇದನ್ನು ಸ್ಥಾಪಿಸಲಾಗಿದೆ.
- **ಉದ್ದೇಶಗಳು:**
  - **ನಿವೃತ್ತಿಯ ನಂತರ ನೌಕರರ ಆರ್ಥಿಕ ಭದ್ರತೆ ಮತ್ತು ಸಾಮಾಜಿಕ ಕಲ್ಯಾಣವನ್ನು** ಖಚಿತಪಡಿಸುವುದು.
  - ನೌಕರರಲ್ಲಿ ಸ್ವಯಂಪ್ರೇರಿತ ಉಳಿತಾಯವನ್ನು ಉತ್ತೇಜಿಸುವುದು.
  - ಭವಿಷ್ಯ ನಿಧಿ, ಪಿಂಚಣಿ ಮತ್ತು ವಿಮಾ ಯೋಜನೆಗಳನ್ನು ನಿಯಂತ್ರಿಸುವುದು ಮತ್ತು ಮೇಲ್ವಿಚಾರಣೆ ಮಾಡುವುದು.

## 12. 'ಆಭಾರ್' ಆನ್‌ಲೈನ್ ಮಳಿಗೆ

### ಇದೀಗ ಸುದ್ದಿಯಲ್ಲಿದೆ:

- **ಭಾರತೀಯ ರೈಲ್ವೆಯು** ಹೊಸ 'ಆಭಾರ್' ಆನ್‌ಲೈನ್ ಮಳಿಗೆಗೆ ಪ್ರೋತ್ಸಾಹ ಮತ್ತು ಸಹಾಯ ಒದಗಿಸುತ್ತಿದೆ.
- **ಆಯೋಜಕರು:-** ಸರ್ಕಾರಿ ಇ-ಮಾರುಕಟ್ಟೆ ವೇದಿಕೆ (GeM).
- **ಉದ್ದೇಶ:-** ಈ ಆನ್‌ಲೈನ್ ಮಳಿಗೆಯು ಪ್ರಧಾನವಾಗಿ ಈ ಕೆಳಗಿನ ವರ್ಗದ ತಯಾರಕರಿಂದ ಸಿದ್ಧಪಡಿಸಿದ ಉಡುಗೊರೆ ವಸ್ತುಗಳನ್ನು ಪ್ರದರ್ಶಿಸುತ್ತದೆ:
  1. ಸ್ಥಳೀಯ ಬುಡಕಟ್ಟು ಜನಾಂಗದವರು ಮತ್ತು ಕೈಮಗ್ಗ ನೇಕಾರರು.
  2. "ಒಂದು ಜಿಲ್ಲೆ ಒಂದು ಉತ್ಪನ್ನ" (ODOP) ಯೋಜನೆಯ ತಯಾರಕರು.
  3. **ಭೌಗೋಳಿಕ ಸೂಚ್ಯಂಕ (GI)** ಟ್ಯಾಗ್ ಹೊಂದಿರುವ ಉತ್ಪನ್ನಗಳ ತಯಾರಕರು.
  4. **ಕೇಂದ್ರ ಗುಡಿ ಕೈಗಾರಿಕೆಗಳ ಮಳಿಗೆ** (CCIE).
  5. **ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ** (KVIC).

**ಮಹತ್ವ:**

- ಇದನ್ನು **'ವೋಕಲ್ ಫಾರ್ ಲೋಕಲ್'** ('ಸ್ಥಳೀಯ ಉತ್ಪನ್ನಗಳಿಗೆ ದನಿಯಾಗಿ') ಅಭಿಯಾನದೊಂದಿಗೆ ಉತ್ತೇಜಿಸಲಾಗಿದೆ.
- **ಸಾಮಾಜಿಕ ಒಳಗೊಳ್ಳುವಿಕೆಯನ್ನು** ಉತ್ತೇಜಿಸುವುದು ಮತ್ತು **ಗ್ರಾಮೀಣ ಕುಶಲಕರ್ಮಿಗಳು, ಮಹಿಳಾ ನೇತೃತ್ವದ ಉದ್ದಿಮೆಗಳು ಹಾಗೂ ಸಾಂಪ್ರದಾಯಿಕ ಕೈಗಾರಿಕೆಗಳಿಗೆ** ಬೆಂಬಲ ನೀಡುವುದು ಇದರ ಪ್ರಮುಖ ಗುರಿಯಾಗಿದೆ.

**ನಿಮಗಿದು ಗೊತ್ತೇ ?**

- **ಭಾರತೀಯ ರೈಲ್ವೇ ಇಲಾಖೆಯು** ಸ್ಥಳೀಯ ಮತ್ತು ಸ್ವದೇಶಿ ಉತ್ಪನ್ನಗಳನ್ನು ಉತ್ತೇಜಿಸಲು ಮತ್ತು ಅಂಚಿನಲ್ಲಿರುವ ಸಮುದಾಯಗಳಿಗೆ ಹೆಚ್ಚುವರಿ ಆದಾಯದ ಅವಕಾಶಗಳನ್ನು ಒದಗಿಸಲು **"ಒಂದು ನಿಲ್ದಾಣ ಒಂದು ಉತ್ಪನ್ನ" (OSOP)** ಯೋಜನೆಯನ್ನು ಪ್ರಾರಂಭಿಸಿದೆ.

## 13. ಭಾರತ ಅಂತರರಾಷ್ಟ್ರೀಯ ವ್ಯಾಪಾರ ಮೇಳ (IITF)

**ಸಂದರ್ಭ:**

- **ದೆಹಲಿಯ ಭಾರತ ಮಂಟಪದಲ್ಲಿ** ನಡೆದ ಭಾರತ ಅಂತರರಾಷ್ಟ್ರೀಯ ವ್ಯಾಪಾರ ಮೇಳವು (IITF), ಭಾರತದ ಅತೀ ದೊಡ್ಡ ಮತ್ತು ಸಾಂಸ್ಕೃತಿಕವಾಗಿ ಶ್ರೀಮಂತ ಪ್ರದರ್ಶನಗಳಲ್ಲಿ ಒಂದಾಗಿ ಗುರುತಿಸಿಕೊಂಡಿದೆ.

**ಭಾರತ ಅಂತರರಾಷ್ಟ್ರೀಯ ವ್ಯಾಪಾರ ಮೇಳ (IITF) ದ ಬಗ್ಗೆ:**

- ಆಯೋಜಕರು: **ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ.**
- ಉದ್ದೇಶ: ಈ ವಾರ್ಷಿಕ ಮೇಳವು **ತಯಾರಕರಿಗೆ, ವ್ಯಾಪಾರಿಗಳಿಗೆ, ರಫ್ತುದಾರರಿಗೆ ಮತ್ತು ಆಮದುದಾರರಿಗೆ ಒಂದೇ ಸೂರಿನಡಿ ಸಾಮಾನ್ಯ ವೇದಿಕೆಯನ್ನು** ಒದಗಿಸುತ್ತದೆ.
- ಇದನ್ನು **ಪ್ರತಿ ವರ್ಷ** ನವದೆಹಲಿಯ ಪ್ರಗತಿ ಮೈದಾನದಲ್ಲಿ ಆಯೋಜಿಸಲಾಗುತ್ತದೆ.
- ಇದು **ದಕ್ಷಿಣ ಏಷ್ಯಾದಲ್ಲೇ ಅತಿದೊಡ್ಡ ಸಮಗ್ರ ವ್ಯಾಪಾರ ಮೇಳಗಳಲ್ಲಿ ಒಂದೆಂದು** ಗುರುತಿಸಲ್ಪಟ್ಟಿದೆ.
- ಇದನ್ನು ಮೊದಲ ಬಾರಿಗೆ **1980ರಲ್ಲಿ** ಆಯೋಜಿಸಲಾಗಿತ್ತು.
- ಘೋಷವಾಕ್ಯ: **'ಏಕ್ ಭಾರತ್ ಶ್ರೇಷ್ಠ ಭಾರತ್'** (ಒಂದೇ ಭಾರತ, ಶ್ರೇಷ್ಠ ಭಾರತ).

## 14. ಕೋಡೆಕ್ಸ್ ಅಲಿಮೆಂಟರಿಯಸ್ ಆಯೋಗ (Codex Alimentarius Commission)

**ಇದೀಗ ಸುದ್ದಿಯಲ್ಲಿದೆ:**

- **ಭಾರತವು ಏಷ್ಯಾ ಪ್ರದೇಶಕ್ಕಾಗಿ** ಕೋಡೆಕ್ಸ್ ಅಲಿಮೆಂಟೇರಿಯಸ್ ಆಯೋಗದ ಕಾರ್ಯಕಾರಿ ಸಮಿತಿಗೆ 2027ರ CAC50 (50ನೇ ಅಧಿವೇಶನ) ಮುಕ್ತಾಯದವರೆಗೆ ಮರುಚುನಾಯಿತವಾಗಿದೆ.

**ಕೋಡೆಕ್ಸ್ ಅಲಿಮೆಂಟರಿಯಸ್ ಆಯೋಗ (CAC) ದ ಬಗ್ಗೆ:**

- ಸ್ಥಾಪನೆ: 1963 ರಲ್ಲಿ **ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ** (FAO) ಮತ್ತು **ವಿಶ್ವ ಆರೋಗ್ಯ ಸಂಸ್ಥೆ** (WHO) ಜಂಟಿಯಾಗಿ ಸ್ಥಾಪಿಸಿದವು.
- **ಉದ್ದೇಶ:** ಗ್ರಾಹಕರ ಆರೋಗ್ಯವನ್ನು ರಕ್ಷಿಸುವುದು ಮತ್ತು ಆಹಾರ ವ್ಯಾಪಾರದಲ್ಲಿ ನ್ಯಾಯಯುತ ಅಭ್ಯಾಸಗಳನ್ನು ಉತ್ತೇಜಿಸುವುದು.
- ಸದಸ್ಯರು: ಯುರೋಪಿಯನ್ ಒಕ್ಕೂಟವೂ ಸೇರಿದಂತೆ **ಒಟ್ಟು 189 ದೇಶಗಳು.**
- ಸಭೆಗಳು: **ವಾರ್ಷಿಕ ಅಧಿವೇಶನಗಳು ಜಿನೇವಾ ಮತ್ತು ರೋಮ್** ನಡುವೆ ಪರ್ಯಾಯವಾಗಿ ನಡೆಯುತ್ತವೆ.

## 15. ಜಲ ಆಯವ್ಯಯ (Water Budgeting)

**ಸಂದರ್ಭ:**

- **ಸ್ಥಳೀಯ ಜಲ ಭದ್ರತೆಯನ್ನು** ಹೆಚ್ಚಿಸಲು ಮಹತ್ವಾಕಾಂಕ್ಷಿ ವಲಯಗಳಲ್ಲಿ (Aspiration Blocks) ಜಲ ಆಯವ್ಯಯದ ಕುರಿತು **ನೀತಿ ಆಯೋಗವು** ವರದಿಯನ್ನು ಬಿಡುಗಡೆ ಮಾಡಿದೆ.

**ಜಲ ಆಯವ್ಯಯ (ವಾಟರ್ ಬಜೆಟಿಂಗ್) ಬಗ್ಗೆ:**

- **ವ್ಯಾಖ್ಯಾನ:** ಕೃಷಿ, ಮನೆಬಳಕೆ, ಜಾನುವಾರು, ಕೈಗಾರಿಕೆ ಮತ್ತು ಪರಿಸರ ವ್ಯವಸ್ಥೆ ಸೇರಿದಂತೆ ಎಲ್ಲಾ ವಲಯಗಳಲ್ಲಿ **ನೀರಿನ ಲಭ್ಯತೆ ಮತ್ತು ನೀರಿನ ಬೇಡಿಕೆಯನ್ನು ವ್ಯವಸ್ಥಿತವಾಗಿ ಅಂದಾಜು** ಮಾಡುವುದಾಗಿದೆ.
- ಇದು ಸುಸ್ಥಿರ ಅಭಿವೃದ್ಧಿ ಗುರಿ - **SDG 6 (ಶುದ್ಧ ನೀರು ಮತ್ತು ನೈರ್ಮಲ್ಯ)** ಮತ್ತು ನೀರಿನ ಬಳಕೆಯ ದಕ್ಷತೆಯ ಕಡೆಗಿನ ರಾಷ್ಟ್ರೀಯ ಪ್ರಯತ್ನಗಳಿಗೆ ನೇರವಾಗಿ ಬೆಂಬಲ ನೀಡುತ್ತದೆ.
- ಮಹತ್ವ: **ಜಲ ಜೀವನ್ ಮಿಷನ್, ಜಲ ಶಕ್ತಿ ಅಭಿಯಾನ ಮತ್ತು ಅಟಲ್ ಭೂಜಲ ಯೋಜನೆಯಡಿ** ವಿಕೇಂದ್ರೀಕೃತ ಯೋಜನೆಯನ್ನು ಬಲಪಡಿಸಲು ಇದು ಸಹಕಾರಿಯಾಗಿದೆ.

## 16. ಪರಿಷ್ಕೃತ "ಉಡಾನ್" (UDAN) ಪ್ರಾದೇಶಿಕ ವಾಯು ಸಂಪರ್ಕ ಯೋಜನೆ

**ಸಂದರ್ಭ:**

- ಪರಿಷ್ಕೃತ ಉಡಾನ್ (UDAN) ಪ್ರಾದೇಶಿಕ ವಾಯು ಸಂಪರ್ಕ ಯೋಜನೆಯನ್ನು ಏಪ್ರಿಲ್ 2027 ರ ನಂತರವೂ ವಿಸ್ತರಿಸಲು ಕೇಂದ್ರ ಸರ್ಕಾರವು 30,000 ಕೋಟಿ ರೂಪಾಯಿಗಳ ವೆಚ್ಚವನ್ನು ಪ್ರಸ್ತಾಪಿಸಿದೆ.
- ಇದರಲ್ಲಿ, **ಹೊಸ ವಿಮಾನ ನಿಲ್ದಾಣ ಅಭಿವೃದ್ಧಿಗಾಗಿ** 18,000 ಕೋಟಿ ರೂ.ಗಳನ್ನು ಮತ್ತು ಸೇವೆ ಲಭ್ಯವಿಲ್ಲದ ಪ್ರದೇಶಗಳನ್ನು ಸಂಪರ್ಕಿಸುವ ವಿಮಾನಯಾನ ಸಂಸ್ಥೆಗಳನ್ನು ಬೆಂಬಲಿಸಲು **"ಲಾಭದಾಯಕತೆಯ ಅಂತರದ ಧನಸಹಾಯ"** (ವಯಬಿಲಿಟಿ ಗ್ಯಾಪ್ ಫಂಡಿಂಗ್ -VGF) ಕ್ಕಾಗಿ 12,000 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ.

### ಉಡಾನ್ ಯೋಜನೆಯ ಬಗ್ಗೆ:

- ಇದು 2016 ರಲ್ಲಿ ಪ್ರಾರಂಭಿಸಲಾದ **ಪ್ರಾದೇಶಿಕ ಸಂಪರ್ಕ ಯೋಜನೆಯಾಗಿದೆ.**
- ಮೊದಲ ಉಡಾನ್ ವಿಮಾನವು 2017 ರಲ್ಲಿ **ಶಿಮ್ಲಾ ಮತ್ತು ದೆಹಲಿ** ನಡುವೆ ಹಾರಾಟ ನಡೆಸಿತು.
- ಸಚಿವಾಲಯ: **ನಾಗರಿಕ ವಿಮಾನಯಾನ ಸಚಿವಾಲಯ.**
- **ಗುರಿ: ಎರಡನೇ (Tier-2) ಮತ್ತು ಮೂರನೇ ಸ್ತರದ (Tier-3) ನಗರಗಳನ್ನು ಪ್ರಮುಖ ಕೇಂದ್ರಗಳಿಗೆ ಸಂಪರ್ಕಿಸುವ** ಮೂಲಕ ಸಾಮಾನ್ಯ ನಾಗರಿಕರಿಗೆ ವಿಮಾನ ಪ್ರಯಾಣವನ್ನು **ಕೈಗೆಟುಕುವ ಮತ್ತು ಸುಲಭವಾಗಿ** ಸಿಗುವಂತೆ ಮಾಡುವುದು.

### ಅನುಷ್ಠಾನ :

- **"ಲಾಭದಾಯಕತೆಯ ಅಂತರದ ಧನಸಹಾಯ" (ವಯಬಿಲಿಟಿ ಗ್ಯಾಪ್ ಫಂಡಿಂಗ್ -VGF):** ಇದು ಕೈಗೆಟುಕುವ ದರಗಳನ್ನು ಖಚಿತಪಡಿಸಿಕೊಳ್ಳಲು ವಿಮಾನಯಾನ ಸಂಸ್ಥೆಗಳಿಗೆ ನೀಡುವ ಆರ್ಥಿಕ ಬೆಂಬಲವಾಗಿದೆ.
- ದರಗಳು ಕೈಗೆಟುಕುವಂತೆ ನೋಡಿಕೊಳ್ಳಲು ವಿಮಾನ ಪ್ರಯಾಣ **ದರಗಳ ಮೇಲೆ ಗರಿಷ್ಠ ಮಿತಿ** ನಿಗದಿಪಡಿಸಲಾಗಿದೆ.

## 17. ಗಂಭೀರ ವಂಚನೆ ತನಿಖಾ ಕಚೇರಿ (SFIO)

### ಇದೀಗ ಸುದ್ದಿಯಲ್ಲಿದೆ:

- 'ಗಂಭೀರ ವಂಚನೆ ತನಿಖಾ ಕಚೇರಿ' (SFIO) ಯು ತನ್ನ **ಹಾಜರಾಗುವ ಕರೆ (ಸಮನ್ಸ್) ಮತ್ತು ಸೂಚನೆ (ನೋಟಿಸ್) ಗಳ ದುರ್ಬಳಕೆಯನ್ನು ತಡೆಯಲು ಹಾಗೂ ಅಧಿಕಾರಿಗಳ ಸೋಗಿನಲ್ಲಿ ನಡೆಯುವ ವಂಚನೆಯನ್ನು ನಿಯಂತ್ರಿಸಲು,** ನೂತನ ತಾಂತ್ರಿಕ ಮತ್ತು ಪ್ರಕ್ರಿಯಾತ್ಮಕ ಸುರಕ್ಷತಾ ಕ್ರಮಗಳನ್ನು ಅಳವಡಿಸಿದೆ.

### ಗಂಭೀರ ವಂಚನೆ ತನಿಖಾ ಕಚೇರಿ (SFIO) ಯ ಬಗ್ಗೆ:

- ಸ್ಥಾಪನೆ: **ಕಂಪನಿಗಳ ಕಾಯ್ದೆ, 2013ರ** ಅಡಿಯಲ್ಲಿ ಇದನ್ನು ಸ್ಥಾಪಿಸಲಾಗಿದೆ.
- ಕಾರ್ಯನಿರ್ವಹಣೆ: ಇದು **ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ** ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ.
- **ಕಾರ್ಯವ್ಯಾಪ್ತಿ:** ಇದು ಕೇವಲ ಸಾಮಾನ್ಯ ಕಂಪನಿ ಕಾನೂನು ಉಲ್ಲಂಘನೆಗಳಿಗಿಂತ ಭಿನ್ನವಾಗಿ, **'ವೈಟ್ ಕಾಲರ್' ಅಪರಾಧಗಳ (ಗಂಭೀರ ಆರ್ಥಿಕ ಅಪರಾಧಗಳ) ತನಿಖೆಗಾಗಿಯೇ ರಚಿಸಲಾದ ವಿಶೇಷ ಸಂಸ್ಥೆಯಾಗಿದೆ.**
- **ಮಹತ್ವ:** ಸಂಕೀರ್ಣ ಸ್ವರೂಪದ ಮತ್ತು ಗಂಭೀರವಾದ ಕಂಪನಿಗೆ ಸಂಬಂಧಿಸಿದ ವಂಚನೆಗಳನ್ನು ಭೇದಿಸಲು, ಇದು ಲೆಕ್ಕಪತ್ರ ನಿರ್ವಹಣೆ, ವಿಧಿವಿಜ್ಞಾನ ಲೆಕ್ಕಪರಿಶೋಧನೆ, ಬ್ಯಾಂಕಿಂಗ್, ಕಾನೂನು, ಮಾಹಿತಿ ತಂತ್ರಜ್ಞಾನ, ಬಂಡವಾಳ ಮಾರುಕಟ್ಟೆಗಳು ಹಾಗೂ ತೆರಿಗೆ ಕ್ಷೇತ್ರಗಳ ತಜ್ಞರನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸುತ್ತದೆ.

## 18. ಮೀರತ್ ಬ್ಯೂಗಲ್ ವಾದ್ಯ




### ಇದೀಗ ಸುದ್ದಿಯಲ್ಲಿದೆ:

- ದಶಕಗಳಿಂದಲೂ ಸಶಸ್ತ್ರ ಪಡೆಗಳ ಕಸರತ್ತು, ಯುದ್ಧಗಳು, ಸಮಾರಂಭಗಳು ಮತ್ತು ಪಥಸಂಚಲನಗಳಲ್ಲಿ ಅವಿಭಾಜ್ಯ ಸಾಧನವಾಗಿ ಬಳಕೆಯಾಗುತ್ತಿದ್ದ **'ಬ್ಯೂಗಲ್'** ವಾದ್ಯವು ಇತ್ತೀಚೆಗೆ ಪ್ರತಿಷ್ಠಿತ **"ಭೌಗೋಳಿಕ ಸೂಚ್ಯಂಕ" (GI) ಟ್ಯಾಗ್‌ಗೆ** ಭಾಜನವಾಗಿದೆ.

### ಮೀರತ್ ಬ್ಯೂಗಲ್ ವಾದ್ಯದ ಬಗ್ಗೆ:

- ಮೀರತ್‌ನಲ್ಲಿ ಬ್ಯೂಗಲ್ ತಯಾರಿಕೆಯು **19ನೇ ಶತಮಾನದಷ್ಟು** ಹಳೆಯ ಇತಿಹಾಸವನ್ನು ಹೊಂದಿದೆ.
- ಭಾರತದ ಸೇನಾ ಸಂಸ್ಕೃತಿ ಬೆಳೆದಂತೆಲ್ಲಾ, ಈ ವಾದ್ಯದ ಇತಿಹಾಸವೂ ಅದರೊಂದಿಗೇ ಸಾಗಿಬಂದಿದೆ.
- ಬ್ರಿಟಿಷರ ಕಾಲದಲ್ಲಿ ಇದನ್ನು **'ಆದೇಶ ನೀಡುವ ಸಾಧನ'ವಾಗಿ** ಬಳಸುತ್ತಿದ್ದರು. ಸೇನೆ ಎಷ್ಟೇ ಆಧುನಿಕವಾದರೂ, ಬ್ಯೂಗಲ್ ತನ್ನ ಗೌರವದ ಸ್ಥಾನವನ್ನು ಇಂದಿಗೂ ಉಳಿಸಿಕೊಂಡಿದೆ.

## 19. ಸರ್ಕಾರಿ ಭದ್ರತಾ ಪತ್ರಗಳು (G-Secs)

### ಇದೀಗ ಸುದ್ದಿಯಲ್ಲಿದೆ:

- ಇತ್ತೀಚೆಗೆ, ಭಾರತೀಯ ರಿಸರ್ವ್ ಬ್ಯಾಂಕ್ **ರೆಪೋ ದರವನ್ನು ಕಡಿತಗೊಳಿಸಿದ್ದರೂ** ಸಹ, **ಸರ್ಕಾರಿ ಭದ್ರತಾ ಪತ್ರಗಳ ಇಳುವರಿಯು** ಸ್ವಲ್ಪಮಟ್ಟಿಗೆ **ಏರುಗತಿಯನ್ನು** ಸಾಧಿಸಿದೆ.

### ಸರ್ಕಾರಿ ಭದ್ರತಾ ಪತ್ರ (G-Sec) ಗಳ ಬಗ್ಗೆ:

- ವ್ಯಾಖ್ಯಾನ:- ಈ ಪತ್ರಗಳು **ಕೇಂದ್ರ ಸರ್ಕಾರ** ಇಲ್ಲವೇ **ರಾಜ್ಯ ಸರ್ಕಾರಗಳಿಂದ ಹೊರಡಿಸಲ್ಪಡುವ** ಒಂದು **ವ್ಯಾಪಾರಾರ್ಹ**

ಭದ್ರತಾ ಸಾಧನಗಳಾಗಿವೆ.

- ಹೊಣೆಗಾರಿಕೆ:- ಈ ಪತ್ರಗಳು **ಸರ್ಕಾರದ ಸಾಲದ ಹೊಣೆಗಾರಿಕೆಯನ್ನು** ಔಪಚಾರಿಕವಾಗಿ ಅಥವಾ ಅಧಿಕೃತವಾಗಿ ಅಂಗೀಕರಿಸುತ್ತವೆ.
- **ಸ್ವರೂಪ:** ಈ ಪತ್ರಗಳು **ಅಲ್ಪಾವಧಿ** ಮತ್ತು **ದೀರ್ಘಾವಧಿ** ಸ್ವರೂಪಗಳನ್ನು ಒಳಗೊಂಡಿರುತ್ತವೆ:
  - **ಅಲ್ಪಾವಧಿ ಭದ್ರತಾ ಪತ್ರಗಳು:** ಇವುಗಳನ್ನು ಸಾಮಾನ್ಯವಾಗಿ **ಖಜಾನೆ ಬಿಲ್ಲುಗಳು** ಎಂದು ಕರೆಯಲಾಗುತ್ತದೆ. ಇವುಗಳ ಮೂಲದ ಮುಕ್ತಾಯ ಅವಧಿಯು **ಒಂದು ವರ್ಷಕ್ಕಿಂತ ಕಡಿಮೆ ಇರುತ್ತದೆ.**
  - **ದೀರ್ಘಾವಧಿ ಭದ್ರತಾ ಪತ್ರಗಳು:** ಇವುಗಳನ್ನು ಸಾಮಾನ್ಯವಾಗಿ **ಸರ್ಕಾರಿ ಬಾಂಡ್‌ಗಳು** ಅಥವಾ **ದಿನಾಂಕ ಸಹಿತ ಭದ್ರತಾ ಪತ್ರಗಳು** ಎಂದು ಕರೆಯಲಾಗುತ್ತದೆ. ಇವುಗಳ ಮೂಲದ ಮುಕ್ತಾಯ ಅವಧಿಯು **ಒಂದು ವರ್ಷ ಅಥವಾ ಅದಕ್ಕಿಂತ ಹೆಚ್ಚು** ಇರುತ್ತದೆ.

## 20. ವಿದ್ಯುನ್ಮಾನ ಅಭಿವೃದ್ಧಿ ನಿಧಿ (EDF)

### ಇದೀಗ ಸುದ್ದಿಯಲ್ಲಿದೆ:

- ಇತ್ತೀಚೆಗೆ, ಭಾರತ ಸರ್ಕಾರವು ವಿದ್ಯುನ್ಮಾನ/ಎಲೆಕ್ಟ್ರಾನಿಕ್ಸ್ ಅಭಿವೃದ್ಧಿ ನಿಧಿಯನ್ನು (EDF) ಪ್ರಾರಂಭಿಸಿದೆ.

### ವಿದ್ಯುನ್ಮಾನ/ ಎಲೆಕ್ಟ್ರಾನಿಕ್ಸ್ ಅಭಿವೃದ್ಧಿ ನಿಧಿಯ ಬಗ್ಗೆ:


- ಪ್ರಾರಂಭ: **ಡಿಜಿಟಲ್ ಇಂಡಿಯಾ ಮತ್ತು ಮೇಕ್ ಇನ್ ಇಂಡಿಯಾ** ಅಭಿಯಾನಗಳ ಪ್ರಮುಖ ಅಂಗವಾಗಿ, **ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ** ಅಡಿಯಲ್ಲಿ 2016 ರಲ್ಲಿ ಇದನ್ನು ಪ್ರಾರಂಭಿಸಲಾಯಿತು.
- **ಉದ್ದೇಶ :** ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ವಲಯಗಳಲ್ಲಿ **ನಾವೀನ್ಯತೆ, ಸಂಶೋಧನೆ ಮತ್ತು ಉದ್ಯಮಶೀಲತೆಯನ್ನು** ಉತ್ತೇಜಿಸುವುದು ಇದರ ಪ್ರಮುಖ ಗುರಿಯಾಗಿದೆ.

### ಕಾರ್ಯತಂತ್ರದ ಮಹತ್ವ:

- **ಆಮದು ಅವಲಂಬನೆ ತಗ್ಗಿಸುವಿಕೆ:** ಎಲೆಕ್ಟ್ರಾನಿಕ್ಸ್ ಸರಕುಗಳಿಗಾಗಿ ಭಾರತವು ಇತರ ದೇಶಗಳ ಆಮದಿನ ಮೇಲೆ ಹೊಂದಿರುವ ಅವಲಂಬನೆಯನ್ನು ಕಡಿಮೆ ಮಾಡುವುದು.
- **ದೇಶೀಯ ನಾವೀನ್ಯತೆಗೆ ಉತ್ತೇಜನ:** ಸೆಮಿಕಂಡಕ್ಟರ್‌ಗಳು (ಅರೆವಾಹಕಗಳು), ಇಂಟರ್ನೆಟ್ ಆಫ್ ಥಿಂಗ್ಸ್, ಕೃತಕ ಬುದ್ಧಿಮತ್ತೆ ಮತ್ತು ರೊಬೊಟಿಕ್ಸ್‌ಗಳಂತಹ ನಿರ್ಣಾಯಕ ತಂತ್ರಜ್ಞಾನಗಳಲ್ಲಿ ದೇಶೀಯ ನಾವೀನ್ಯತೆಯನ್ನು ಪ್ರೋತ್ಸಾಹಿಸುವುದು.
- **ಜಾಗತಿಕ ತಾಣವಾಗಿ ಭಾರತ:** ಎಲೆಕ್ಟ್ರಾನಿಕ್ಸ್ ವಿನ್ಯಾಸ ಮತ್ತು ಉತ್ಪಾದನೆಯಲ್ಲಿ ಭಾರತವನ್ನು ಜಾಗತಿಕ ಕೇಂದ್ರವನ್ನಾಗಿ ರೂಪಿಸುವುದು.

# ಆರೋಗ್ಯ ಮತ್ತು ಸಮಾಜ

## 1. ಮಾಲ್ದೀವ್ಸ್ ಒಂದು ಪೀಳಿಗೆಯ ಮಟ್ಟದ ತಂಬಾಕು ನಿಷೇಧವನ್ನು ಜಾರಿಗೆ ತಂದ ಮೊದಲ ದೇಶ




### ಇದೀಗ ಸುದ್ದಿಯಲ್ಲಿದೆ:

- ಮಾಲ್ದೀವ್ಸ್ ವಿಶ್ವದಲ್ಲೇ ಮೊದಲ ಬಾರಿಗೆ ಐತಿಹಾಸಿಕ ಪೀಳಿಗೆ ಮಟ್ಟದ ತಂಬಾಕು ಮತ್ತು ವೇಪಿಂಗ್ ನಿಷೇಧವನ್ನು ಜಾರಿಗೊಳಿಸಿದ ವಿಶ್ವದ ಮೊದಲ ದೇಶವಾಗಿದೆ.

### ಪೀಳಿಗೆಯ ಮಟ್ಟದ ನಿಷೇಧ:

- ತಂಬಾಕು ಮೇಲಿನ ಪೀಳಿಗೆಯ ಮಟ್ಟದ ನಿಷೇಧವು ಒಂದು ಪ್ರಗತಿಪರ **ಕಾನೂನು ನಿರ್ಬಂಧವಾಗಿದ್ದು , ನಿರ್ದಿಷ್ಟ ದಿನಾಂಕದ ನಂತರ ಜನಿಸಿದ ಎಲ್ಲ ವ್ಯಕ್ತಿಗಳಿಗೆ ತಂಬಾಕು ಮಾರಾಟ ಮತ್ತು ಬಳಕೆಯನ್ನು** ನಿಷೇಧಿಸುವ **ಮೂಲಕ ತಂಬಾಕು ರಹಿತ ಪೀಳಿಗೆಯನ್ನು** ನಿರ್ಮಿಸುವ ಉದ್ದೇಶವನ್ನು ಹೊಂದಿದೆ.

### ಮಾಲ್ದೀವ್ಸ್ ದೇಶದ ಬಗ್ಗೆ:

- ರಾಜಧಾನಿ: **ಮಾಲೆ**
- ಅಧಿಕೃತ ಭಾಷೆ: **ಧಿವೇಹಿ** (ಇಂಡೋ-ಯುರೋಪಿಯನ್ ಭಾಷೆ); ಅರೇಬಿಕ್, ಹಿಂದಿ ಮತ್ತು ಇಂಗ್ಲಿಷ್ ಸಹ ಮಾತನಾಡುತ್ತಾರೆ.
- ಧರ್ಮ: **ಇಸ್ಲಾಂ** ಈ ರಾಷ್ಟ್ರದ ಧರ್ಮ.
- ಆರ್ಥಿಕತೆ: **ಪ್ರವಾಸೋದ್ಯಮದ ಜೊತೆಗೆ ಮೀನುಗಾರಿಕೆ** ಮತ್ತು ವಿದೇಶಿ ನೆರವಿನ ಮೇಲೆ ಹೆಚ್ಚು ಅವಲಂಬಿತವಾಗಿದೆ.
- ಸಂವಿಧಾನಿಕತೆ: 2008 ರ ಸಂವಿಧಾನವು ಗರಿಷ್ಠ **ಐದು ವರ್ಷಗಳ ಎರಡು ಅವಧಿಗೆ ನೇರ ಚುನಾವಣೆಗಳನ್ನು** ಹೊಂದಿರುವ ಅಧ್ಯಕ್ಷೀಯ ವ್ಯವಸ್ಥೆಯನ್ನು ವ್ಯಾಖ್ಯಾನಿಸುತ್ತದೆ.

### ಭೌಗೋಳಿಕ ಲಕ್ಷಣಗಳು:

- ವಿಶ್ವದ **7 ನೇ ಅತಿದೊಡ್ಡ ಹವಳದ ದಿಬ್ಬಗಳ ವ್ಯವಸ್ಥೆಗೆ** ನೆಲೆಯಾಗಿದ್ದು , ಜಾಗತಿಕವಾಗಿ ಹವಳದ ದಿಬ್ಬಗಳ ಪ್ರದೇಶದ 3.14% ರಷ್ಟು ಪ್ರದೇಶವನ್ನು ಒಳಗೊಂಡಿದೆ.
- ದೇಶದಲ್ಲಿ ಯಾವುದೇ **ನದಿಗಳು ಅಥವಾ ಹೊಳೆಗಳಿಲ್ಲ** ಮತ್ತು

ಸರಾಸರಿ ಎತ್ತರ **2 ಮೀಟರ್‌ಗಿಂತ ಕಡಿಮೆ** ಇರುವುದರಿಂದ **ಸಮುದ್ರ ಮಟ್ಟ ಏರಿಕೆಗೆ** ಇದು ಹೆಚ್ಚು ಗುರಿಯಾಗುತ್ತದೆ.

- ಮಾಲ್ಡೀವ್ಸ್ **ಉತ್ತರ-ಮಧ್ಯ ಹಿಂದೂ ಮಹಾಸಾಗರದಲ್ಲಿರುವ** 26 ಹವಳ ದ್ವೀಪಗಳಲ್ಲಿ ಸುಮಾರು 1,200 ಹವಳ ದ್ವೀಪಗಳನ್ನು ಒಳಗೊಂಡಿರುವ ಒಂದು ದ್ವೀಪಸಮೂಹ ರಾಷ್ಟ್ರವಾಗಿದೆ.
- ಇದು **ಹಿಂದೂ ಮಹಾಸಾಗರ ಪ್ರದೇಶ (IOR)** ದಲ್ಲಿ ಸಮುದ್ರದ ವ್ಯಾಪಾರ ಮತ್ತು ಭದ್ರತೆಗೆ ಪ್ರಮುಖವಾಗುವಂತಹ ಕಾರ್ಯತಂತ್ರದ ಸ್ಥಾನದಲ್ಲಿದೆ.

## 2. ಎನ್ಸೆಫಲೋಮಯೋಕಾರ್ಡಿಟಿಸ್ ವೈರಸ್ (EMCV)

### ಇದೀಗ ಸುದ್ದಿಯಲ್ಲಿದೆ:

- ದೆಹಲಿಯಮೃಗಾಲಯದಲ್ಲಿದ್ದಏಕೈಕಆಫ್ರಿಕಾದಆನೆಅಪರೂಪದ ದಂಶಕ-ಹರಡುವ ಎನ್ಸೆಫಲೋಮಯೋಕಾರ್ಡಿಟಿಸ್ ವೈರಸ್ (EMCV) ನಿಂದ ಮೃತಪಟ್ಟಿದೆ — ಇದು ಭಾರತದಲ್ಲಿನ ಯಾವುದೇ ಮೃಗಾಲಯದಲ್ಲಿ ವರದಿಯಾದ ಮೊದಲ ಪ್ರಕರಣ.

### ಎನ್ಸೆಫಲೋಮಯೋಕಾರ್ಡಿಟಿಸ್ ವೈರಸ್ (EMCV) ನ ಬಗ್ಗೆ:

- ರೋಗಕಾರಕ:- ಇದು ಒಂದು ಸಣ್ಣ, ಏಕ-ಸೂತ್ರದ RNA ವೈರಸ್ ಆಗಿದೆ.
- ಇದು ವಿವಿಧ **ಸಸ್ತನಿ ಪ್ರಭೇದಗಳಲ್ಲಿ ಮಯೋಕಾರ್ಡಿಟಿಸ್, ಎನ್ಸೆಫಾಲಿಟಿಸ್, ನರವೈಜ್ಞಾನಿಕ ಅಸ್ವಸ್ಥತೆಗಳು, ಸಂತಾನೋತ್ಪತ್ತಿ ಸಮಸ್ಯೆಗಳು ಮತ್ತು ಮಧುಮೇಹವನ್ನು** ಉಂಟುಮಾಡುತ್ತದೆ.
- ಪ್ರಸರಣ: **ದಂಶಕಗಳ ಮೂತ್ರ ಅಥವಾ ಮಲದಿಂದ ಕಲುಷಿತಗೊಂಡ ಆಹಾರ ಮತ್ತು ನೀರಿನ ಸೇವನೆಯಿಂದ.**
- ಮೊದಲು ಪತ್ತೇಯಾಗಿದ್ದು: **1945 ರಲ್ಲಿ ಫ್ಲೋರಿಡಾದ ಗಿಬ್ಬನ್‌ನಲ್ಲಿ** ಪತ್ತೇಹಚ್ಚಲಾಯಿತು.

## 3. ಸಾರ್ವತ್ರಿಕ ಆರೋಗ್ಯ ವ್ಯಾಪ್ತಿ (UHC)

### ಇದೀಗ ಸುದ್ದಿಯಲ್ಲಿದೆ:

- ಆರೋಗ್ಯ ರಕ್ಷಣೆಯಲ್ಲಿ ಹೂಡಿಕೆ ಮಾಡುವುದರಿಂದ ಸ್ಥಿತಿಸ್ಥಾಪಕತ್ವ ಮತ್ತು ಉತ್ಪಾದಕತೆ ಹೆಚ್ಚಾಗುತ್ತದೆ, **2047 ರ ವೇಳೆಗೆ ಭಾರತವು ಕೈಗೆಟುಕುವ ಸಾರ್ವತ್ರಿಕ ಆರೈಕೆ ಮತ್ತು ವಿಕಸಿತ ಭಾರತವನ್ನು ಸಾಧಿಸಲು ಸಹಾಯ** ಮಾಡುತ್ತದೆ.


### ಸಾರ್ವತ್ರಿಕ ಆರೋಗ್ಯ ವ್ಯಾಪ್ತಿ (UHC) ಯ ಬಗ್ಗೆ:

- ಸಾರ್ವತ್ರಿಕ ಆರೋಗ್ಯ ವ್ಯಾಪ್ತಿ (UHC) ಎಂದರೆ, **ಎಲ್ಲಾ ಜನರು ಯಾವುದೇ ಆರ್ಥಿಕ ತೊಂದರೆಯಿಲ್ಲದೆ ಅವರಿಗೆ ಅಗತ್ಯವಿರುವ ಗುಣಮಟ್ಟದ ಆರೋಗ್ಯ ಸೇವೆಗಳನ್ನು ಪಡೆಯಬಹುದು.**

### ವಿವಿಧ ಹಂತಗಳು:

- **ರಾಷ್ಟ್ರೀಯ ಆರೋಗ್ಯ ಗುರಿ:-** ಇದನ್ನು **2005 ರಲ್ಲಿ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಗುರಿಯಾಗಿ** ಪ್ರಾರಂಭಿಸಲಾಯಿತು. ಇದು ಸಮುದಾಯದ ಸ್ವಾಮ್ಯದಲ್ಲಿರುವ ಮತ್ತು ವಿಕೇಂದ್ರೀಕೃತ ಆರೋಗ್ಯ ವ್ಯವಸ್ಥೆಗಳನ್ನು ಸ್ಥಾಪಿಸಿ, ದುರ್ಬಲ ವರ್ಗದ ಜನರಿಗೆ ಸುಲಭವಾಗಿ ಲಭಿಸುವ, ಕಡಿಮೆ ವೆಚ್ಚದ ಮತ್ತು ಗುಣಮಟ್ಟದ ಆರೋಗ್ಯ ಸೇವೆಗಳನ್ನು ಒದಗಿಸುತ್ತದೆ.
- **ಆಯುಷ್ಮಾನ್ ಭಾರತ - ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ (AB-PMJAY):-** ಸಾರ್ವತ್ರಿಕ ಆರೋಗ್ಯ ರಕ್ಷಣೆಯನ್ನು ಸಾಧಿಸಲು ಇದು **ವಿಶ್ವದ ಅತಿದೊಡ್ಡ ಸಾರ್ವಜನಿಕ ಆರೋಗ್ಯ ರಕ್ಷಣೆ ಯೋಜನೆಯಾಗಿದ್ದು**, ಇದರಲ್ಲಿ ಕೋಟ್ಯಂತರ ದುರ್ಬಲ ವರ್ಗದ ಭಾರತೀಯ ಕುಟುಂಬಗಳು ದಾಖಲಾಗಿವೆ.
- **ರಾಷ್ಟ್ರೀಯ ಆರೋಗ್ಯ ನೀತಿ, 2017:-** ಇದು ಭಾರತದಲ್ಲಿ ಉಂಟಾಗುತ್ತಿರುವ **ಹೊಸ ಆರೋಗ್ಯ ಸವಾಲುಗಳನ್ನು**, ಜೀವನ ಶೈಲಿಗೆ ಸಂಬಂಧಿಸಿದ ರೋಗಗಳು ವಿಶೇಷವಾಗಿ **ಸಾಂಕ್ರಾಮಿಕವಲ್ಲದ ರೋಗಗಳು** ಹೆಚ್ಚುತ್ತಿರುವ ಸಮಸ್ಯೆಯನ್ನು ಪರಿಹರಿಸುತ್ತದೆ.

## 4. ಕೆಲಸದ ಸ್ಥಳದ ಒತ್ತಡ ಮತ್ತು ಮಧುಮೇಹ




### ಸಂದರ್ಭ:

- **ICMR–INDIAB, 2023 ರ ವರದಿಯ** ಪ್ರಕಾರ ಭಾರತದಲ್ಲಿ ಅಂದಾಜು **10.1 ಕೋಟಿ ಜನರು** ಮಧುಮೇಹದಿಂದ ಬಳಲುತ್ತಿದ್ದಾರೆ ಮತ್ತು ಕೆಲಸದ ಸ್ಥಳದಲ್ಲಿನ ಒತ್ತಡವು ಈ ಹೊರೆಯನ್ನು ಹೆಚ್ಚಿಸುವ ಅಂಶಗಳಲ್ಲಿ ಒಂದಾಗಿರಬಹುದು.
- **ನವೆಂಬರ್ 14** ರಂದು ವಿಶ್ವ ಮಧುಮೇಹ ದಿನವನ್ನು ಆಚರಿಸಲಾಗುತ್ತದೆ.

### ಭಾರತದಲ್ಲಿ ಮಧುಮೇಹದ ದುಸ್ಥಿತಿ:

- ಭಾರತವನ್ನು ಕೆಲವುಬಾರಿ **ವಿಶ್ವದ ಮಧುಮೇಹದ ರಾಜಧಾನಿ** ಎಂದು ಕರೆಯಲಾಗುತ್ತದೆ.
- **ICMR–INDIAB ಅಧ್ಯಯನದ ಪ್ರಕಾರ,** 2000ನೇ ಇಸವಿಯಲ್ಲಿ ಸುಮಾರು 3.2 ಕೋಟಿಗೆ ಇದ್ದ ಮಧುಮೇಹಿಗಳ ಸಂಖ್ಯೆ **2024 ರಲ್ಲಿ ಸುಮಾರು 9 ಕೋಟಿ ವಯಸ್ಕರ ವರೆಗೆ ಏರಿದೆ**.
- ಇತ್ತೀಚಿನ ವರದಿಗಳ ಪ್ರಕಾರ, **9 ಜನ ಭಾರತೀಯ ವಯಸ್ಕರಲ್ಲಿ ಒಬ್ಬರು ಮಧುಮೇಹದಿಂದ ಬಳಲುತ್ತಿದ್ದಾರೆ.**

### ಮಧುಮೇಹದ ಬಗ್ಗೆ:

- ಮಧುಮೇಹವು **ದೀರ್ಘಕಾಲದ ಚಯಾಪಚಯ ಅಸ್ವಸ್ಥತೆಯಾಗಿದ್ದು, ಇದರಲ್ಲಿ ದೇಹವು ಸಾಕಷ್ಟು ಇನ್ಸುಲಿನ್ ಉತ್ಪಾದಿಸುವುದಿಲ್ಲ ಅಥವಾ ಅದು ಉತ್ಪಾದಿಸುವ ಇನ್ಸುಲಿನ್ ಅನ್ನು ಪರಿಣಾಮಕಾರಿಯಾಗಿ ಬಳಸಲು ಸಾಧ್ಯವಾಗುವುದಿಲ್ಲ.**
- ಇದರಿಂದಾಗಿ **ರಕ್ತದಲ್ಲಿ ಗ್ಲೂಕೋಸ್ (ಸಕ್ಕರೆ) ನ ಪ್ರಮಾಣ ಹೆಚ್ಚಾಗಲು** ಕಾರಣವಾಗುತ್ತದೆ.
- ಇನ್ಸುಲಿನ್: **ಇನ್ಸುಲಿನ್ ಮೇದೋಜ್ಜೀರಕ ಗ್ರಂಥಿಯಿಂದ**

**ಉತ್ಪತ್ತಿಯಾಗುವ ಹಾರ್ಮೋನ್ ಆಗಿದೆ.**

- ಇದು **ಆಹಾರದ ಮೂಲಕ ಗ್ಲೂಕೋಸ್ ಜೀವಕೋಶಗಳನ್ನು ಪ್ರವೇಶಿಸಲು** ಸಹಾಯ ಮಾಡುತ್ತದೆ, ಅಲ್ಲಿ ಇದನ್ನು **ಶಕ್ತಿಗಾಗಿ** ಬಳಸಲಾಗುತ್ತದೆ.

### ಮಧುಮೇಹದ ವಿಧಗಳು:

- ಇದು **ಸ್ವಯಂಪ್ರತಿರಕ್ಷಣಾ (autoimmune) ರೋಗವಾಗಿದ್ದು, ದೇಹದ ರೋಗನಿರೋಧಕ ವ್ಯವಸ್ಥೆಯು ಇನ್ಸುಲಿನ್ ಉತ್ಪಾದಿಸುವ ಕೋಶಗಳನ್ನು ನಾಶಪಡಿಸುತ್ತದೆ. ದೇಹವು ಬಹಳ ಕಡಿಮೆ ಅಥವಾ ಯಾವುದೇ ಇನ್ಸುಲಿನ್ ಅನ್ನು ಉತ್ಪಾದಿಸುವುದಿಲ್ಲ.**
- ಇದು ಸಾಮಾನ್ಯವಾಗಿ **ಬಾಲ್ಯವಸ್ಥೆ ಅಥವಾ ಹದಿಹರೆಯದಲ್ಲಿ** ಪ್ರಾರಂಭವಾಗುತ್ತದೆ.
- ಇದಕ್ಕಾಗಿ **ಜೀವನಪರ್ಯಂತ ಇನ್ಸುಲಿನ್ ಚುಚ್ಚುಮದ್ದು** ಬೇಕಾಗುತ್ತದೆ.

### ಟೈಪ್ 2 ಮಧುಮೇಹದ ಬಗ್ಗೆ:

- **ಇದು ಅತ್ಯಂತ ಸಾಮಾನ್ಯವಾದ ಮಧುಮೇಹ. ದೇಹವು ಸಾಕಷ್ಟು ಇನ್ಸುಲಿನ್ ಉತ್ಪಾದಿಸುವುದಿಲ್ಲ.**
- ಇದು ಸಾಮಾನ್ಯವಾಗಿ **ಬೊಜ್ಜು, ಜಡ ಜೀವನಶೈಲಿ, ಅನಾರೋಗ್ಯಕರ ಆಹಾರ ಪದ್ಧತಿ ಮತ್ತು ಕುಟುಂಬದ ಹಿರಿಯರಿಂದ ಬಂದ ರೋಗಗಳೊಂದಿಗೆ** ಸಂಬಂಧ ಹೊಂದಿದೆ.
- ಇದನ್ನು **ಆಹಾರ, ವ್ಯಾಯಾಮ, ಮೌಖಿಕ ಔಷಧಿಗಳು ಮತ್ತು ಕೆಲವೊಮ್ಮೆ ಇನ್ಸುಲಿನ್** ಮೂಲಕ ನಿರ್ವಹಣೆ ಮಾಡಬಹುದು.

### ಗರ್ಭಾವಸ್ಥೆಯ ಮಧುಮೇಹದ ಬಗ್ಗೆ:

- ಇದು **ಗರ್ಭಾವಸ್ಥೆಯಲ್ಲಿ ಕಾಣಿಸಿಕೊಳ್ಳುತ್ತದೆ ಮತ್ತು ಸಾಮಾನ್ಯವಾಗಿ ಹೆರಿಗೆಯ ನಂತರ ಕಣ್ಮರೆಯಾಗುತ್ತದೆ,** ಆದರೆ ನಂತರದ ವರ್ಷಗಳಲ್ಲಿ **ಟೈಪ್ 2 ಮಧುಮೇಹ** ಬರುವ ಅಪಾಯವನ್ನು ಹೆಚ್ಚಿಸುತ್ತದೆ.

## 5. ಹೆಪಟೈಟಿಸ್ ಎ

**Types of Hepatitis**

| | TRANSMISSION | PREVENTION | TREATMENT |
|---|---|---|---|
| Hepatitis A | Eating contaminated food or drinking contaminated water | • Practicing good hygiene<br>• Vaccine | No treatment |
| Hepatitis B | Through contact with the blood or bodily fluids of an infected person | • Practicing good hygiene<br>• Vaccine<br>• Blood screening | • Alpha interferon<br>• Peginterferon |
| Hepatitis C | Blood-to-blood contact | • Practicing good hygiene<br>• Avoid sharing needles, toothbrushes, razors or nail scissors | Direct-acting antiviral drugs |
| Hepatitis D | Contact with infected blood (only occurs in people already infected with hepatitis B) | • Hepatitis B vaccine<br>• Avoid sharing needles, toothbrushes, razors or nail scissors | Interferon |
| Hepatitis E | Eating contaminated food or drinking contaminated water | • Practicing good hygiene<br>• Avoid drinking water that has come from a potentially unsafe source | No treatment |

### ಸಂದರ್ಭ:

- ಭಾರತವು ತನ್ನ **ಸಾರ್ವತ್ರಿಕ ರೋಗನಿರೋಧಕ ಕಾರ್ಯಕ್ರಮದಲ್ಲಿ ಟೈಫಾಯಿಡ್ ಕಾಂಜುಗೇಟ್ ಲಸಿಕೆಯನ್ನು** ಸೇರಿಸುವ ಬಗ್ಗೆ ಚರ್ಚಿಸುತ್ತಿರುವಾಗ, ಹೆಪಟೈಟಿಸ್ A ಲಸಿಕೆಯು ಸೇರ್ಪಡೆಯ ಆದ್ಯತೆಗೆ ಅರ್ಹವೇ ಎಂಬ ಪ್ರಶ್ನೆಯನ್ನು ಹುಟ್ಟುಹಾಕುತ್ತದೆ.

### ಹೆಪಟೈಟಿಸ್:

- ಹೆಪಟೈಟಿಸ್ ಕಾಯಿಲೆ ಎಂಬುದು, **ಯಕೃತ್ತಿನ ಉರಿಯೂತವಾಗಿದೆ.** ಹೆಪಟೈಟಿಸ್ ವೈರಸ್‌ನಲ್ಲಿ **5 ಪ್ರಮುಖ ತಳಿಗಳಿವೆ,** ಇವುಗಳನ್ನು **ಹೆಪಟೈಟಿಸ್ -A, ಹೆಪಟೈಟಿಸ್- B, ಹೆಪಟೈಟಿಸ್ -C, ಹೆಪಟೈಟಿಸ್- D ಮತ್ತು ಹೆಪಟೈಟಿಸ್- E** ಎಂದು ಕರೆಯಲಾಗುತ್ತದೆ.
- **ಹೆಪಟೈಟಿಸ್ -B ಮತ್ತು ಹೆಪಟೈಟಿಸ್ -C ಪ್ರಕಾರಗಳು ದೀರ್ಘಕಾಲಿಕ ರೋಗಗಳಿಗೆ** ಕಾರಣವಾಗುತ್ತವೆ ಮತ್ತು ಒಟ್ಟಿಗೆ ಅವು **ಯಕೃತ್ತಿನ ಸಿರೋಸಿಸ್, ಯಕೃತ್ತಿನ ಕ್ಯಾನ್ಸರ್ ಮತ್ತು ವೈರಲ್ ಹೆಪಟೈಟಿಸ್-ಸಂಬಂಧಿತ ಸಾವುಗಳಿಗೆ** ಸಾಮಾನ್ಯ ಕಾರಣಗಳಾಗಿವೆ.

### ಹೆಪಟೈಟಿಸ್ A ಕಾಯಿಲೆಯ ಬಗ್ಗೆ:

- ಇದು **ಹೆಪಟೈಟಿಸ್ A ವೈರಸ್** (HAV) ನಿಂದ ಉಂಟಾಗುತ್ತದೆ. ಇದು **ದೀರ್ಘಕಾಲಿಕ ಸೋಂಕನ್ನು ಉಂಟುಮಾಡುವುದಿಲ್ಲ** ಮತ್ತು ಸಾಮಾನ್ಯವಾಗಿ **ಸ್ವಯಂ-ನಿಯಂತ್ರಿತವಾಗುತ್ತದೆ.**
- ಇದು **ಅಶುದ್ಧ ಆಹಾರ ಮತ್ತು ಅಶುದ್ಧ ನೀರಿನ** ಮೂಲಕ (ಮಲ–ಮೌಖಿಕ ಮಾರ್ಗಗಳ) ಹರಡುತ್ತದೆ.
- ಇದು **ಸಂಪೂರ್ಣವಾಗಿ ತಡೆಗಟ್ಟಬಹುದಾದ** ರೋಗವಾಗಿದ್ದು, ಲಸಿಕೆಗಳು 90% ರಿಂದ 95% ವರೆಗೆ ರಕ್ಷಣೆಯನ್ನು ಒದಗಿಸುತ್ತವೆ.

### ಹೆಪಟೈಟಿಸ್ B ಕಾಯಿಲೆಯ ಬಗ್ಗೆ:

- ಇದು **ತೀವ್ರವಾದ ಸೋಂಕನ್ನು** ಉಂಟುಮಾಡುತ್ತದೆ, ತೀವ್ರವಾದ ಪ್ರಕರಣಗಳಲ್ಲಿ **ಯಕೃತ್ತು ವೈಫಲ್ಯ** ಸಂಭವಿಸುತ್ತದೆ.
- ಹರಡುವಿಕೆ: **ರಕ್ತ ಮತ್ತು ದೇಹದ ದ್ರವಗಳ** ಮೂಲಕ, **ಲೈಂಗಿಕ ಸಂಪರ್ಕ, ತಾಯಿಯಿಂದ ಮಗುವಿಗೆ** ಹರಡುತ್ತದೆ.
- ಚಿಕಿತ್ಸೆ: **ಲಸಿಕೆ ಹಾಕಿಸುವುದರಿಂದ ತಡೆಗಟ್ಟಬಹುದು,** ಇದು ವೈರಸ್ ವಿರುದ್ಧ ಸುಮಾರು 100% ರಕ್ಷಣೆ ನೀಡುತ್ತದೆ. ಲಸಿಕೆಯನ್ನು ಸಾಮಾನ್ಯವಾಗಿ **ಜನನದ ನಂತರ ತಕ್ಷಣವೇ ನೀಡಲಾಗುತ್ತದೆ** ಮತ್ತು ಕೆಲವು ವಾರಗಳ ನಂತರ ಬೂಸ್ಟರ್‌ಗಳನ್ನು ನೀಡಲಾಗುತ್ತದೆ.

### ಹೆಪಟೈಟಿಸ್ C ಕಾಯಿಲೆಯ ಬಗ್ಗೆ:

- ಸಣ್ಣ ಪ್ರಮಾಣದ **ಅನಾರೋಗ್ಯದಿಂದ ಹಿಡಿದು ಯಕೃತ್ತಿನ ಸಿರೋಸಿಸ್ ಮತ್ತು ಯಕೃತ್ತಿನ ಕ್ಯಾನ್ಸರ್** ಸೇರಿದಂತೆ **ಜೀವನಪರ್ಯಂತ ಅನುಭವಿಸುವ ಗಂಭೀರವಾದ ಅನಾರೋಗ್ಯದವರೆಗೆ** ತೀವ್ರತೆ ಕಂಡುಬರುತ್ತದೆ.
- ಹರಡುವಿಕೆ:- ಇದು **ರಕ್ತದಿಂದ ಹರಡುವ ವೈರಸ್** ಆಗಿದ್ದು, ಹೆಚ್ಚಿನ ಸೋಂಕುಗಳು **ಅಸುರಕ್ಷಿತ ಇಂಜೆಕ್ಷನ್** ಪದ್ಧತಿಗಳಿಂದ ರಕ್ತಕ್ಕೆ ಒಡ್ಡಿಕೊಳ್ಳುವುದರಿಂದ ಸಂಭವಿಸುತ್ತವೆ.

- ಚಿಕಿತ್ಸೆ:- **ನೇರ-ಕಾರ್ಯನಿರ್ವಹಿಸುವ ಆಂಟಿವೈರಲ್ ಔಷಧಿಗಳು** (DAAs ) ಬಾಧಿತ 95% ಕ್ಕಿಂತ ಹೆಚ್ಚು ಜನರನ್ನು ಗುಣಪಡಿಸಬಹುದು, ಪ್ರಸ್ತುತ ಯಾವುದೇ ಪರಿಣಾಮಕಾರಿ **ಲಸಿಕೆ ಇರುವುದಿಲ್ಲ.**

### ಹೆಪಟೈಟಿಸ್ D ಕಾಯಿಲೆಯ ಬಗ್ಗೆ:

- ಇದು **ಹೆಪಟೈಟಿಸ್ B ವೈರಸ್‌ನಿಂದ ಬಳಲುತ್ತಿರುವವರಿಗೆ ಮಾತ್ರ** ಪರಿಣಾಮ ಬೀರುತ್ತದೆ, ಏಕೆಂದರೆ ದೇಹದಲ್ಲಿ ಉಳಿಯಲು ಇದಕ್ಕೆ **ಹೆಪಟೈಟಿಸ್ B ವೈರಸ್‌ನ ಅಗತ್ಯವಿರುತ್ತದೆ.**
- ಇದು ಸಾಮಾನ್ಯವಾಗಿ **ರಕ್ತ ಸಂಪರ್ಕದಿಂದ ಅಥವಾ ಲೈಂಗಿಕ ಸಂಪರ್ಕದ** ಮೂಲಕ ಹರಡುತ್ತದೆ.
- ಹೆಪಟೈಟಿಸ್ Dಗೆ **ವಿಶೇಷ ಲಸಿಕೆ ಇಲ್ಲ**, ಆದರೆ **ಹೆಪಟೈಟಿಸ್ B ಲಸಿಕೆಯೇ ಇದನ್ನು ತಡೆಗಟ್ಟಲು ಸಹಾಯ** ಮಾಡುತ್ತದೆ..
- ಹೆಪಟೈಟಿಸ್ E ಕಾಯಿಲೆಯ ಬಗ್ಗೆ:
- ಇದು ಸಾಮಾನ್ಯವಾಗಿ **ಸಣ್ಣ ಪ್ರಮಾಣದ ಮತ್ತು ಅಲ್ಪಾವಧಿಯ ಸೋಂಕಾಗಿದ್ದು, ಯಾವುದೇ ಚಿಕಿತ್ಸೆಯ ಅಗತ್ಯವಿಲ್ಲ,** ಆದರೆ ರೋಗನಿರೋಧಕ ಶಕ್ತಿ ದುರ್ಬಲಗೊಂಡವರಲ್ಲಿ ಇದು ಗಂಭೀರವಾಗಬಹುದು.
- ಹೆಪಟೈಟಿಸ್ E ಗೆ ಯಾವುದೇ **ಲಸಿಕೆ ಇಲ್ಲ.**

## 6. ರಿಫ್ಟ್ ವ್ಯಾಲಿ ಜ್ವರ


### ಇದೀಗ ಸುದ್ದಿಯಲ್ಲಿದೆ:

- ಪಶ್ಚಿಮ ಆಫ್ರಿಕಾದ **ಮೌರಿಟಾನಿಯಾ ಮತ್ತು ಸೆನೆಗಲ್‌ನಲ್ಲಿ** ರಿಫ್ಟ್ ವ್ಯಾಲಿ ಜ್ವರ (RVF) ಏಕಾಏಕಿ ಹರಡಿರುವುದನ್ನು **ವಿಶ್ವ ಆರೋಗ್ಯ ಸಂಸ್ಥೆ** (WHO) ದೃಢಪಡಿಸಿದೆ.

### ರಿಫ್ಟ್ ವ್ಯಾಲಿ ಜ್ವರ (RVF) ದ ಬಗ್ಗೆ:

- ರಿಫ್ಟ್ ವ್ಯಾಲಿ ಜ್ವರ (Rift Valley Fever) ಎಂಬ ಹೆಸರಿನ ಮೂಲ **ಕೀನ್ಯಾದ ರಿಫ್ಟ್ ವ್ಯಾಲಿಯಿಂದ ಬಂದಿದೆ. 1930ರ** ದಶಕದ ಆರಂಭದಲ್ಲಿ ಈ ರೋಗವನ್ನು ಮೊದಲ ಬಾರಿ ಅಲ್ಲಿ ಗುರುತಿಸಲಾಯಿತು.
- ರೋಗಕಾರಕ:- ಇದು ಫೆನುಯಿವಿರಿಡೆ ಕುಟುಂಬಕ್ಕೆ ಸೇರಿದ **ಫ್ಲೆಬೋವೈರಸ್‌ನಿಂದ** ಬರುತ್ತದೆ.
- ಇದು ಪ್ರಾಥಮಿಕವಾಗಿ **ಕುರಿ, ಮೇಕೆ, ಜಾನುವಾರು ಮತ್ತು ಒಂಟೆಗಳಂತಹ ಪ್ರಾಣಿಗಳ** ಮೇಲೆ ಪರಿಣಾಮ ಬೀರುತ್ತದೆ.
- ಹರಡುವಿಕೆ:- **ಸೋಂಕಿತ ಪ್ರಾಣಿಗಳ ನಿಕಟ ಸಂಪರ್ಕದಿಂದ ಅಥವಾ ಸೋಂಕಿತ ಸೊಳ್ಳೆಗಳ ಕಡಿತದಿಂದ** ಮನುಷ್ಯರಿಗೆ ಸೋಂಕು ಹರಡುತ್ತದೆ.
- **ಮನುಷ್ಯರಿಂದ ಮನುಷ್ಯರಿಗೆ ಹರಡುತ್ತದೆ ಎಂಬ ಯಾವುದೇ ಪುರಾವೆಗಳಿಲ್ಲ.**
- ಪ್ರಸ್ತುತ, **ಯಾವುದೇ ನಿರ್ದಿಷ್ಟ ವೈರಸ್ ವಿರೋಧಿ ಚಿಕಿತ್ಸೆ ಇರುವುದಿಲ್ಲ.**

## 7. ನಿಫಾ ವೈರಸ್




### ಇದೀಗ ಸುದ್ದಿಯಲ್ಲಿದೆ:

ನಿಫಾ ವೈರಾಣು ಕಾಯಿಲೆಯ ವಿರುದ್ಧ **"ಏಕಕೋಶೀಯ (ಮೊನೊಕ್ಲೋನಲ್) ಪ್ರತಿಕಾಯಗಳ"** (mAbs) ಅಭಿವೃದ್ಧಿ ಮತ್ತು ಉತ್ಪಾದನೆಯನ್ನು **'ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ'** (ICMR) ಉತ್ತೇಜಿಸುತ್ತಿದೆ.

### ನಿಫಾ ವೈರಾಣುವಿನ ಬಗ್ಗೆ:

- ನಿಫಾ ಒಂದು **ಪ್ರಾಣಿಜನ್ಯ ರೋಗವಾಗಿದೆ.** ಇದರರ್ಥ ಇದು ಸೋಂಕಿತ ಪ್ರಾಣಿಗಳು ಅಥವಾ ಕಲುಷಿತ ಆಹಾರದ ಮೂಲಕ ಮನುಷ್ಯರಿಗೆ ಹರಡುತ್ತದೆ.
- **ಮೊದಲು ಪತ್ತೆಯಾಗಿದ್ದು:** ಮನುಷ್ಯರಲ್ಲಿ ನಿಫಾ ವೈರಸ್‌ನ ಮೊದಲ ಹರಡುವಿಕೆಯು **ಮಲೇಷ್ಯಾ (1998)** ಮತ್ತು ಸಿಂಗಾಪುರಗಳಲ್ಲಿ (1999) ವರದಿಯಾಯಿತು.
- **ಮೂಲ ಆಶ್ರಯದಾತ:** ಸಾಮಾನ್ಯವಾಗಿ **ತೊಗಲು ಬಾವಲಿ ('ಫ್ಲೈಯಿಂಗ್ ಫಾಕ್ಸ್')** ಎಂದು ಕರೆಯಲ್ಪಡುವ **ಹಣ್ಣು ತಿನ್ನುವ ಬಾವಲಿಗಳು** ಈ ವೈರಸ್‌ನ ನೈಸರ್ಗಿಕ ಆಶ್ರಯದಾತಗಳಾಗಿವೆ.
- ಹಣ್ಣು ತಿನ್ನುವ ಬಾವಲಿಗಳಿಂದ **ಹಂದಿಗಳಿಗೆ, ನಾಯಿಗಳಿಗೆ, ಬೆಕ್ಕುಗಳಿಗೆ, ಮೇಕೆಗಳಿಗೆ, ಕುದುರೆಗಳಿಗೆ ಮತ್ತು ಕುರಿಗಳಂತಹ** ಇತರ ಪ್ರಾಣಿಗಳಿಗೆ ಈ ವೈರಸ್ ಹರಡುತ್ತದೆ ಎಂದು ತಿಳಿದುಬಂದಿದೆ.
- **ರೋಗಲಕ್ಷಣಗಳು:** ಜ್ವರ, ತಲೆನೋವು, ಕೆಮ್ಮು, ಗಂಟಲು ನೋವು, ಉಸಿರಾಟದ ತೊಂದರೆ ಮತ್ತು ವಾಂತಿ. ಗಂಭೀರ ಪ್ರಕರಣಗಳಲ್ಲಿ, **ದಿಗ್ಭ್ರಮೆ , ಅರೆ ನಿದ್ರಾವಸ್ಥೆ, ಸೆಳವು (seizures), ಮೆದುಳಿನ ಉರಿಯೂತ (ಎನ್ಸೆಫಾಲಿಟಿಸ್)** ಸಂಭವಿಸಬಹುದು ಮತ್ತು ಇದು ಕೋಮಾ ಹಂತಕ್ಕೂ ತಲುಪಿ ಸಾವಿಗೆ ಕಾರಣವಾಗಬಹುದು.

- **ಹರಡುವಿಕೆ : ಸೋಂಕಿತ ವ್ಯಕ್ತಿಯ ನಿಕಟ ಸಂಪರ್ಕದ ಮೂಲಕ ಇದು ನೇರವಾಗಿ ಒಬ್ಬ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಗೆ ಹರಡಬಹುದು.** ಬಾವಲಿಗಳು ಸಾಮಾನ್ಯವಾಗಿ ವಾಸಿಸುವ ಮರಗಳನ್ನು ಏರುವ ಜನರಲ್ಲಿಯೂ ಸೋಂಕು ಕಂಡುಬಂದಿರುವ ಕೆಲವು ಪ್ರಕರಣಗಳು ವರದಿಯಾಗಿವೆ.

## 8. ಕೇಂದ್ರ ಆರೋಗ್ಯ ಸಚಿವಾಲಯದಿಂದ 3 ಗಿನ್ನೆಸ್ ವಿಶ್ವ ದಾಖಲೆಗಳ ನಿರ್ಮಾಣ

### ಇದೀಗ ಸುದ್ದಿಯಲ್ಲಿದೆ:

- ರಾಷ್ಟ್ರವ್ಯಾಪಿ **"ಸ್ವಸ್ಥ ನಾರಿ, ಸಶಕ್ತ ಪರಿವಾರ್ ಅಭಿಯಾನ"**ದ (SNSPA) ಅಡಿಯಲ್ಲಿ ಕೇಂದ್ರ ಆರೋಗ್ಯ ಸಚಿವಾಲಯವು ಮೂರು ಗಿನ್ನೆಸ್ ವಿಶ್ವ ದಾಖಲೆಗಳ ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿದೆ.

### 3 ಗಿನ್ನೆಸ್ ವಿಶ್ವ ದಾಖಲೆಗಳು:

- ಒಂದು ತಿಂಗಳಲ್ಲಿ ಅತೀ ಹೆಚ್ಚಿನ ಜನರು **"ಆರೋಗ್ಯ ರಕ್ಷಣಾ ವೇದಿಕೆ"ಯಲ್ಲಿ ನೋಂದಾಯಿಸಿಕೊಂಡಿರುವುದು.**
- ಒಂದು ವಾರದಲ್ಲಿ ಆನ್‌ಲೈನ್ ಮೂಲಕ **ಸ್ತನ ಕ್ಯಾನ್ಸರ್** ತಪಾಸಣೆಗಾಗಿ ಅತಿ ಹೆಚ್ಚು ಜನರು ನೋಂದಾಯಿಸಿಕೊಂಡಿರುವುದು.
- ಒಂದು ವಾರದಲ್ಲಿ ಆನ್‌ಲೈನ್ ಮೂಲಕ **ಪ್ರಮುಖ ಆರೋಗ್ಯ ಲಕ್ಷಣಗಳ ತಪಾಸಣೆಗಾಗಿ** (ರಾಜ್ಯ ಮಟ್ಟದಲ್ಲಿ) ಅತಿ ಹೆಚ್ಚು ಜನರು ನೋಂದಾಯಿಸಿಕೊಂಡಿರುವುದು.

### ಸ್ವಸ್ಥ ನಾರಿ, ಸಶಕ್ತ ಪರಿವಾರ್ ಅಭಿಯಾನದ ಬಗ್ಗೆ:

- ಚಾಲನೆ: 'ರಾಷ್ಟ್ರೀಯ ಪೋಷಣಾ ಮಾಸಾಚರಣೆ'ಯ **(ಪೋಷಣ್ ಮಾಹ್)** ಅಂಗವಾಗಿ, 2025 ರ ಸೆಪ್ಟೆಂಬರ್ 17 ರಿಂದ ಅಕ್ಟೋಬರ್ 2 ರ ಅವಧಿಯಲ್ಲಿ ಈ ರಾಷ್ಟ್ರವ್ಯಾಪಿ ಅಭಿಯಾನವನ್ನು ಅನುಷ್ಠಾನಗೊಳಿಸಲಾಯಿತು.
- **ಉದ್ದೇಶ:** ದೇಶದ **ಮಹಿಳೆಯರು, ಕಿಶೋರಿಯರು** ಮತ್ತು **ಮಕ್ಕಳ ಆರೋಗ್ಯ ಹಾಗೂ ಸಮಗ್ರ ಪೋಷಣೆಯ** ಮಟ್ಟವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಈ ಅಭಿಯಾನವು ಪ್ರಮುಖವಾಗಿ ಗಮನ ಹರಿಸುತ್ತದೆ.

## 9. ತಪ್ಪುದಾರಿಗೆ ಎಳೆಯುವ ಒಆರ್‌ಎಸ್ (ORS) ಗುರುತು ಪಟ್ಟಿ ಹೊಂದಿರುವ ಪಾನೀಯಗಳನ್ನು ತಕ್ಷಣವೇ ತೆಗೆದುಹಾಕುವಂತೆ FSSAI ಆದೇಶಿಸಿದೆ




### ಇದೀಗ ಸುದ್ದಿಯಲ್ಲಿದೆ:

- **ಹಣ್ಣಿನ ಆಧಾರಿತ ಪಾನೀಯಗಳು, ಕುಡಿಯಲು ಸಿದ್ಧವಿರುವ ಪಾನೀಯಗಳು, ಶಕ್ತಿವರ್ಧಕ ಪಾನೀಯಗಳು, ವಿದ್ಯುತ್ಲವಣ (ಎಲೆಕ್ಟ್ರೋಲೈಟ್) ಪಾನೀಯಗಳು** ಮತ್ತು ಇದೇ ಮಾದರಿಯ ಇತರೆ ಉತ್ಪನ್ನಗಳನ್ನು **'ಒಆರ್‌ಎಸ್' (ORS)** ಎಂಬ ಹೆಸರಿನಲ್ಲಿ ತಪ್ಪಾಗಿ ಮಾರಾಟ ಮಾಡುತ್ತಿರುವುದನ್ನು ತಕ್ಷಣವೇ ನಿಲ್ಲಿಸುವಂತೆ ಮತ್ತು ಅಂತಹ ಸರಕುಗಳನ್ನು ಮಾರುಕಟ್ಟೆಯಿಂದ ತೆರವುಗೊಳಿಸುವಂತೆ **ಭಾರತೀಯ ಆಹಾರ ಸುರಕ್ಷತೆ ಮತ್ತು ಮಾನದಂಡ ಪ್ರಾಧಿಕಾರವು (FSSAI)** ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದೆ.

### ಮೌಖಿಕ ಪುನರ್ಜಲೀಕರಣ ದ್ರಾವಣ (ORS - Oral Rehydration Salts) ದ ಬಗ್ಗೆ:

- ಇದನ್ನು **"ವಿಶ್ವ ಆರೋಗ್ಯ ಸಂಸ್ಥೆ ಮತ್ತು ವಿಶ್ವ ಸಂಸ್ಥೆಯ ಮಕ್ಕಳ ನಿಧಿ"** (UNICEF) ಶಿಫಾರಸು ಮಾಡಿದ ಲವಣಗಳ ಮಿಶ್ರಣದ ಪ್ಯಾಕೆಟ್‌ಗಳಾಗಿವೆ. ಇವುಗಳನ್ನು ಶುದ್ಧ ನೀರಿನಲ್ಲಿ ಕರಗಿಸಿ **"ಮೌಖಿಕ ಪುನರ್ಜಲೀಕರಣ ದ್ರಾವಣ"** (ORS) ವನ್ನಾಗಿ ತಯಾರಿಸಲಾಗುತ್ತದೆ.
- ಉದ್ದೇಶ:- ಎಲ್ಲಾ ವಯಸ್ಸಿನವರಲ್ಲಿ **ಕಾಲರಾ ಸೇರಿದಂತೆ, ತೀವ್ರ ಅತಿಸಾರದಿಂದ ಉಂಟಾಗುವ ನಿರ್ಜಲೀಕರಣವನ್ನು** (ದೇಹದಲ್ಲಿ ನೀರಿನಂಶ ಕಡಿಮೆಯಾಗುವುದು) ತಡೆಗಟ್ಟಲು ಮತ್ತು ಚಿಕಿತ್ಸೆ ನೀಡಲು ಇದನ್ನು ಬಳಸಲಾಗುತ್ತದೆ.
- ಒಆರ್‌ಎಸ್ ಸಂಯೋಜನೆಯು ನಿರ್ದಿಷ್ಟ ಪ್ರಮಾಣದಲ್ಲಿ **ಸೋಡಿಯಂ ಕ್ಲೋರೈಡ್, ನಿರ್ಜಲೀಕೃತ ಗ್ಲೂಕೋಸ್, ಪೊಟ್ಯಾಸಿಯಮ್ ಕ್ಲೋರೈಡ್** ಮತ್ತು **ಟ್ರೈಸೋಡಿಯಂ ಸಿಟ್ರೇಟ್ ಡೈಹೈಡ್ರೇಟ್‌ಗಳನ್ನು** ಒಳಗೊಂಡಿರುತ್ತದೆ.

### ಭಾರತೀಯ ಆಹಾರ ಸುರಕ್ಷತೆ ಮತ್ತು ಮಾನದಂಡ ಪ್ರಾಧಿಕಾರ (FSSAI) ದ ಕುರಿತು:

- ಸ್ಥಾಪನೆ: **2006ರ ಆಹಾರ ಸುರಕ್ಷತೆ ಮತ್ತು ಮಾನದಂಡಗಳ ಕಾಯ್ದೆಯ** ಅಡಿಯಲ್ಲಿ 2011ರಲ್ಲಿ ಸ್ಥಾಪಿಸಲಾದ ಸ್ವಾಯತ್ತ ಸಂಸ್ಥೆಯಾಗಿದೆ.
- **ಕಾರ್ಯವ್ಯಾಪ್ತಿ:** ಇದು ಭಾರತ ಸರ್ಕಾರದ **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ** ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ.
- ಉದ್ದೇಶ: ಭಾರತದಲ್ಲಿ **ಆಹಾರ ಸುರಕ್ಷತೆ ಮತ್ತು ನಿಯಂತ್ರಣಕ್ಕೆ** ಸಂಬಂಧಿಸಿದ ಶಾಸನಬದ್ಧ ಸಂಸ್ಥೆಯಾಗಿದೆ.
- ಪ್ರಧಾನ ಕಚೇರಿ: **ನವದೆಹಲಿ.**

### FSSAI ನ ಪ್ರಮುಖ ಉಪಕ್ರಮಗಳು:

- **ಈಟ್ ರೈಟ್ ಮೂವ್‌ಮೆಂಟ್ ಅಭಿಯಾನ:** ಎಲ್ಲಾ ಭಾರತೀಯರಿಗೆ ಸುರಕ್ಷಿತ, ಆರೋಗ್ಯಕರ ಮತ್ತು ಸುಸ್ಥಿರ ಆಹಾರವನ್ನು ಖಚಿತಪಡಿಸುವುದು ಇದರ ಗುರಿಯಾಗಿದೆ.
- **ಕ್ಲೀನ್ ಸ್ಟ್ರೀಟ್ ಫುಡ್:** ಬೀದಿ ಬದಿಯ ಆಹಾರ ಮಾರಾಟಗಾರರಿಗೆ ತರಬೇತಿ ನೀಡುವುದು ಮತ್ತು ಆಹಾರ ಸುರಕ್ಷತೆ ಮತ್ತು ಮಾನದಂಡಗಳ ಕಾಯ್ದೆಯ ಉಲ್ಲಂಘನೆಗಳ ಬಗ್ಗೆ ಅವರಲ್ಲಿ ಜಾಗೃತಿ ಮೂಡಿಸುವುದು.
- **ಡಯಟ್ ಫಾರ್ ಲೈಫ್ (Diet4Life):** ವಿವಿಧ ರೀತಿಯ ಚಯಾಪಚಯ ಅಸ್ವಸ್ಥತೆ ಮತ್ತು ಅವುಗಳನ್ನು ತಡೆಯುವ ಬಗ್ಗೆ ಜಾಗೃತಿ ಮೂಡಿಸುವುದು.

- **ಆಹಾರ ಉಳಿಸಿ, ಆಹಾರ ಹಂಚಿ, ಸಂತೋಷ ಹಂಚಿ (Save Food, Share Food, Share Joy):** ಆಹಾರ ವ್ಯರ್ಥವಾಗುವುದನ್ನು ತಡೆಯಲು ಮತ್ತು ಆಹಾರ ದಾನವನ್ನು ಉತ್ತೇಜಿಸಲು ಜನರನ್ನು ಪ್ರೇರೇಪಿಸುವುದು.
- **ಹಾರ್ಟ್ ಅಟ್ಯಾಕ್ ರಿವೈಂಡ್:** ಇದು **2022ರ ವೇಳೆಗೆ ಭಾರತದಲ್ಲಿ ಟ್ರಾನ್ಸ್ ಫ್ಯಾಟ್ (ಕೆಟ್ಟ ಕೊಬ್ಬು) ಅನ್ನು ನಿರ್ಮೂಲನೆ ಮಾಡುವ** ಗುರಿಯನ್ನು ಬೆಂಬಲಿಸಲು ನಡೆಸಿದ ಸಮೂಹ ಮಾಧ್ಯಮ ಅಭಿಯಾನವಾಗಿದೆ.

## 10.ಅಕಾಂಥೋಸಿಸ್ ನಿಗ್ರಿಕಾನ್ಸ್ (Acanthosis Nigricans)




### ಸಂದರ್ಭ:

- ಅಕಾಂಥೋಸಿಸ್ ನಿಗ್ರಿಕಾನ್ಸ್ ತ್ವಚೆಯ (ಚರ್ಮದ) ಮಡಿಚುಗಳ ಮತ್ತು ಮುದುಡಿನ ಭಾಗಗಳಲ್ಲಿ ಕಾಣಿಸಿಕೊಳ್ಳಬಹುದು ಮತ್ತು ಇದು ಇನ್ಸುಲಿನ್ ಪ್ರತಿರೋಧದೊಂದಿಗೆ ನಿಕಟವಾಗಿ ಸಂಬಂಧಿಸಿದೆ ಎಂದು ಇತ್ತೀಚಿನ ಅಧ್ಯಯನವೊಂದರಿಂದ ತಿಳಿದುಬಂದಿದೆ.

### ಅಕಾಂಥೋಸಿಸ್ ನಿಗ್ರಿಕಾನ್ಸ್ (AN) ನ ಬಗ್ಗೆ:

- ಇದು ಚರ್ಮದ ಒಂದು ಸ್ಥಿತಿಯಾಗಿದ್ದು, ಚರ್ಮದ ಮಡಿಚುಗಳ ಮೇಲೆ **ಕಪ್ಪಾದ, ನಯವಾದ ಕಲೆಗಳು** ಕಾಣಿಸಿಕೊಳ್ಳುವುದು ಇದರ ಲಕ್ಷಣವಾಗಿದೆ.
- ಚರ್ಮದಲ್ಲಿನ ಈ ಬದಲಾವಣೆಗಳು ರಾತ್ರೋರಾತ್ರಿ ಕಾಣಿಸಿಕೊಳ್ಳುವುದಿಲ್ಲ, ಬದಲಿಗೆ **ಕೆಲವು ತಿಂಗಳುಗಳ ಅವಧಿಯಲ್ಲಿ ನಿಧಾನವಾಗಿ ಬೆಳೆಯುತ್ತವೆ.**
- ಇದು **ಇನ್ಸುಲಿನ್ ಪ್ರತಿರೋಧದೊಂದಿಗೆ** ಬಲವಾದ ನಂಟನ್ನು ಹೊಂದಿದೆ. ಆದ್ದರಿಂದ, ಇದು **ಮಧುಮೇಹಪೂರ್ವ ಮತ್ತು ಮಧುಮೇಹದ** ಪ್ರಮುಖ ಮುನ್ಸೂಚನೆಯಾಗಿದೆ.
- ಕಾರಣಗಳು:- **ಸ್ಥೂಲಕಾಯತೆ (ಬೊಜ್ಜು), ಇನ್ಸುಲಿನ್ ಪ್ರತಿರೋಧ, ಚಯಾಪಚಯ ಲಕ್ಷಣ, ಮಧುಮೇಹ ಮತ್ತು ಬಹಳ ಅಪರೂಪವಾಗಿ ಮೆಲನೋಮಾಗಳು, ಹೊಟ್ಟೆ ಅಥವಾ ಯಕೃತ್ತಿನ ಕ್ಯಾನ್ಸರ್** ನಿಂದಲೂ ಇದು ಉಂಟಾಗಬಹುದು.
- ಚಿಕಿತ್ಸೆ: ಬೊಜ್ಜಿಗೆ ಅಥವಾ ಇನ್ಸುಲಿನ್ ಪ್ರತಿರೋಧಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ, **ಚಯಾಪಚಯ ಆರೋಗ್ಯವನ್ನು ಸುಧಾರಿಸಿಕೊಳ್ಳುವ** ಮೂಲಕ ಚರ್ಮದ ಬಣ್ಣವನ್ನು ತಿಳಿಯಾಗಿಸಲು ಸಹಾಯವಾಗುತ್ತದೆ.

## 11.ಎಎಂಆರ್ 2.0 ಮೇಲಿನ ರಾಷ್ಟ್ರೀಯ ಕಾರ್ಯ ಯೋಜನೆ ಬಿಡುಗಡೆ ಮಾಡಲಾಗಿದೆ




### ಸಂದರ್ಭ:

- ಇತ್ತೀಚೆಗೆ, **ಕೇಂದ್ರ ಆರೋಗ್ಯ ಸಚಿವರು ಸೂಕ್ಷ್ಮಾಣುಜೀವಿ ಪ್ರತಿರೋಧ (ಆಂಟಿಮೈಕ್ರೊಬಿಯಲ್ ರೆಸಿಸ್ಟೆನ್ಸ್)** ದ ಮೇಲಿನ ರಾಷ್ಟ್ರೀಯ ಕಾರ್ಯ ಯೋಜನೆಯ ಎರಡನೇ ಆವೃತ್ತಿಯನ್ನು (NAP - AMR, 2025–29) ಬಿಡುಗಡೆ ಮಾಡಿದರು.

### ಸೂಕ್ಷ್ಮಾಣುಜೀವಿ ಪ್ರತಿರೋಧ (ಆಂಟಿಮೈಕ್ರೊಬಿಯಲ್ ರೆಸಿಸ್ಟೆನ್ಸ್) ದ ಮೇಲಿನ ರಾಷ್ಟ್ರೀಯ ಕಾರ್ಯ ಯೋಜನೆ 2.0 ದ ಬಗ್ಗೆ:

- ಇದು ಎನ್‌ಎಪಿ-ಎಎಂಆರ್ 1.0 (2017–2021) ರಲ್ಲಿದ್ದ ಲೋಪದೋಷಗಳನ್ನು ಸರಿಪಡಿಸುತ್ತದೆ. ಇದರಲ್ಲಿ **ಕಣ್ಗಾವಲು ವ್ಯವಸ್ಥೆಯನ್ನು ಬಲಪಡಿಸುವುದು, ಸಾರ್ವಜನಿಕ ಜಾಗೃತಿಯನ್ನು ವಿಸ್ತರಿಸುವುದು, ಖಾಸಗಿ ವಲಯದ ಸಹಭಾಗಿತ್ವವನ್ನು ಹೆಚ್ಚಿಸುವುದು ಮತ್ತು ನಿಯಂತ್ರಣ ಹಾಗೂ ಪ್ರಯೋಗಾಲಯಗಳ ಸಾಮರ್ಥ್ಯವನ್ನು ಸುಧಾರಿಸುವುದು** ಸೇರಿದಂತೆ ಅನೇಕ ಅಂಶಗಳು ಸೇರಿವೆ.

### ಸೂಕ್ಷ್ಮಾಣುಜೀವಿ ಪ್ರತಿರೋಧ (ಆಂಟಿಮೈಕ್ರೊಬಿಯಲ್ ರೆಸಿಸ್ಟೆನ್ಸ್) ದ ಕುರಿತ:

- ವ್ಯಾಖ್ಯಾನ: **ಬ್ಯಾಕ್ಟೀರಿಯಾ, ವೈರಸ್‌ಗಳು, ಶಿಲೀಂಧ್ರಗಳು ಮತ್ತು ಪರಾವಲಂಬಿ ಜೀವಿಗಳು ಕಾಲಕ್ರಮೇಣ ಬದಲಾವಣೆಗೆ ಒಳಗಾಗಿ, ಔಷಧಿಗಳಿಗೆ ಸ್ಪಂದಿಸುವುದನ್ನು ನಿಲ್ಲಿಸಿದಾಗ ಈ ಸ್ಥಿತಿ ಉಂಟಾಗುತ್ತದೆ.** ಇದರಿಂದ ಸೋಂಕಿನ ಚಿಕಿತ್ಸೆ ಕಷ್ಟಕರವಾಗುತ್ತದೆ ಹಾಗೂ ರೋಗ ಹರಡುವಿಕೆ, ತೀವ್ರ ಅನಾರೋಗ್ಯ ಮತ್ತು ಸಾವಿನ ಅಪಾಯ ಹೆಚ್ಚಾಗುತ್ತದೆ.
- **ಪ್ರತಿ ವರ್ಷ ಸುಮಾರು 700,000 ಜನರು ಎಎಂಆರ್ (AMR) ನಿಂದ ಸಾವನ್ನಪ್ಪುತ್ತಿದ್ದಾರೆ.** 2050 ರ ಹೊತ್ತಿಗೆ ಈ ಸಂಖ್ಯೆ 1 ಕೋಟಿಗೆ ಏರಬಹುದು ಮತ್ತು ಜಾಗತಿಕ ಒಟ್ಟು ಆಂತರಿಕ

ಉತ್ಪನ್ನದ (GDP) ಶೇಕಡಾ 3.8 ರಷ್ಟು ಈ ಸಮಸ್ಯೆಯಿಂದಲೇ ವ್ಯಾಪಿಸಬಹುದು.

### ಸೂಕ್ಷ್ಮಾಣುಜೀವಿ ಪ್ರತಿರೋಧಕ್ಕೇ ಕಾರಣಗಳು:

- ಪ್ರತಿಜೀವಕ ಔಷಧಿಗಳ (Antibiotics) ಅತಿಯಾದ ಮತ್ತು ದುರ್ಬಳಕೆ.
- ಅಸಮರ್ಪಕ ಔಷಧದ ಪ್ರಮಾಣ ಮತ್ತು ಅವಧಿ.
- ವೈದ್ಯರ ಸಲಹೆಯಿಲ್ಲದೆ ಔಷಧಿ ಸೇವನೆ (ಸ್ವಯಂ-ಚಿಕಿತ್ಸೆ).
- ಆಹಾರಕ್ಕಾಗಿ ಬಳಸುವ ಪ್ರಾಣಿಗಳಲ್ಲಿ ಪ್ರತಿಜೀವಕ ಔಷಧಿಗಳ ಬಳಕೆ.
- ಅಸಮರ್ಪಕ ಸ್ವಚ್ಛತೆ.

### ಸೂಕ್ಷ್ಮಾಣುಜೀವಿ ಪ್ರತಿರೋಧದ ವಿರುದ್ಧ ಜಾಗತಿಕ ಪ್ರಯತ್ನಗಳು:

- ಸೂಕ್ಷ್ಮಾಣುಜೀವಿ ಪ್ರತಿರೋಧ(AMR) ದ ಮೇಲಿನ ಜಾಗತಿಕ ಕಾರ್ಯ ಯೋಜನೆ.
- ವಿಶ್ವ ಸೂಕ್ಷ್ಮಾಣುಜೀವಿ ಪ್ರತಿರೋಧದ ಜಾಗೃತಿ ಸಪ್ತಾಹ (WAAW).
- ಜಾಗತಿಕ ಸೂಕ್ಷ್ಮಾಣುಜೀವಿ ಪ್ರತಿರೋಧ ಮತ್ತು ಬಳಕೆಯ ಕಣ್ಗಾವಲು ವ್ಯವಸ್ಥೆ (GLASS).
- ಜಾಗತಿಕ ಪ್ರತಿಜೀವಕ ಔಷಧಿ ಸಂಶೋಧನೆ ಮತ್ತು ಅಭಿವೃದ್ಧಿ ಪಾಲುದಾರಿಕೆ (GARDP).

### ಭಾರತದಲ್ಲಿ ಸೂಕ್ಷ್ಮಾಣುಜೀವಿ ಪ್ರತಿರೋಧದ ವಿರುದ್ಧ ತೆಗೆದುಕೊಂಡ ಕ್ರಮಗಳು:

- ಸೂಕ್ಷ್ಮಾಣುಜೀವಿ ಪ್ರತಿರೋಧ (AMR) ದ ಮೇಲಿನ ರಾಷ್ಟ್ರೀಯ ಕಾರ್ಯ ಯೋಜನೆ (NAP - AMR)
- ಸೂಕ್ಷ್ಮಾಣುಜೀವಿ ಪ್ರತಿರೋಧ (AMR) ದ ಕಣ್ಗಾವಲು ಜಾಲ.
- **ಭಾರತದ 'ರೆಡ್ ಲೈನ್' ಅಭಿಯಾನ: ವೈದ್ಯರ ಚೀಟಿ ಇದ್ದರೆ ಮಾತ್ರ ಮಾರಾಟ ಮಾಡಬೇಕಾದ ಪ್ರತಿಜೀವಕ ಔಷಧಿಗಳ ಪ್ಯಾಕೆಟ್ ಮೇಲೆ 'ಕೆಂಪು ಗೆರೆ'ಯನ್ನು ಕಡ್ಡಾಯವಾಗಿ ಮುದ್ರಿಸಬೇಕೆಂದು** ಈ ಅಭಿಯಾನವು ಪ್ರತಿಪಾದಿಸುತ್ತದೆ. ಔಷಧ ಅಂಗಡಿಗಳಲ್ಲಿ ನೇರವಾಗಿ (ವೈದ್ಯರ ಸಲಹೆಯಿಲ್ಲದೆ) ಪ್ರತಿಜೀವಕ ಔಷಧಿಗಳನ್ನು ಮಾರಾಟ ಮಾಡುವುದನ್ನು ತಡೆಯಲು ಇದೊಂದು ದಿಟ್ಟ ಕ್ರಮವಾಗಿದೆ.

## 12. ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ (NFSA) ಯ ಪಟ್ಟಿಯಿಂದ ಅನರ್ಹ ಫಲಾನುಭವಿಗಳನ್ನು ತೆಗೆದು ಹಾಕಲಾಗುವುದು

### ಸಂದರ್ಭ:

- ಕಳೆದ ನಾಲ್ಕೈದು ತಿಂಗಳುಗಳಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ (NFSA) ಯ ಅಡಿಯಲ್ಲಿ **ಉಚಿತ ಮಾಸಿಕ ಪಡಿತರ ಯೋಜನೆಯಿಂದ** ಸುಮಾರು 2.25 ಕೋಟಿ ಅನರ್ಹ ಫಲಾನುಭವಿಗಳನ್ನು ಕೇಂದ್ರ ಸರ್ಕಾರವು ತೆಗೆದುಹಾಕಿದೆ.

### ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ (NFSA), 2013 ರ ಬಗ್ಗೆ:

- ಭಾರತದ ಸಂವಿಧಾನದ **21 ನೇ ವಿಧಿಯ** ಅಡಿಯಲ್ಲಿ ಬರುವ "ಜೀವಿಸುವ ಹಕ್ಕಿ"ನ ಅಡಿಯಲ್ಲಿ **"ಆಹಾರದ ಹಕ್ಕು"** ಅಂತರ್ಗತವಾಗಿದೆ.
- ಗುರಿ: ಇದು ಭಾರತದ ಜನಸಂಖ್ಯೆಯ ಹೆಚ್ಚಿನ ವರ್ಗಕ್ಕೆ **ರಿಯಾಯಿತಿ ದರದಲ್ಲಿ ಆಹಾರ ಧಾನ್ಯಗಳನ್ನು** ಒದಗಿಸುವುದು.
- **2011 ರ ಜನಗಣತಿ** ದತ್ತಾಂಶದ ಆಧಾರದ ಮೇಲೆ, **ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯ** (TPDS) ಅಡಿಯಲ್ಲಿ ಇದು ಸರಿಸುಮಾರು 81.35 ಕೋಟಿ ಜನರಿಗೆ ನೆರವಾಗಿದೆ.

### ಇಷ್ಟು ಫಲಾನುಭವಿಗಳನ್ನು ಒಳಗೊಂಡಿದೆ:

- ಗ್ರಾಮೀಣ ಜನಸಂಖ್ಯೆಯ 75% ರಷ್ಟು.
- ನಗರ ಜನಸಂಖ್ಯೆಯ 50% ರಷ್ಟು.

### ಫಲಾನುಭವಿಗಳ ವರ್ಗಗಳು:

ಈ ಕಾಯ್ದೆಯು ಫಲಾನುಭವಿಗಳನ್ನು ಎರಡು ಮುಖ್ಯ ಗುಂಪುಗಳಾಗಿ ವಿಂಗಡಿಸುತ್ತದೆ, ಅವುಗಳೆಂದರೆ-

- **ಅಂತ್ಯೋದಯ ಅನ್ನ ಯೋಜನೆ (AAY) ಕುಟುಂಬಗಳು:** ಪ್ರತಿ ಕುಟುಂಬ **ತಿಂಗಳಿಗೆ 35 ಕೆಜಿ** ಆಹಾರ ಧಾನ್ಯಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.
- **ಆದ್ಯತಾ ಕುಟುಂಬದ (PHH) ವ್ಯಕ್ತಿಗಳು:** ಪ್ರತಿ ವ್ಯಕ್ತಿಗೆ **ತಿಂಗಳಿಗೆ 5 ಕೆಜಿ** ಆಹಾರ ಧಾನ್ಯಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.
- ಪ್ರಸ್ತುತ, ಈ ವರ್ಗಗಳ ಅಡಿಯಲ್ಲಿ ಬರುವ ಬಡ ಕುಟುಂಬಗಳಿಗೆ ಪ್ರತಿ ತಿಂಗಳು ಉಚಿತ ಆಹಾರ ಧಾನ್ಯಗಳನ್ನು (ಗೋಧಿ ಮತ್ತು ಅಕ್ಕಿ) ವಿತರಿಸಲಾಗುತ್ತಿದೆ.

### ವಿತರಣೆಯ ಪ್ರಮಾಣ:

- ಭಾರತವು ಪ್ರಸ್ತುತ **19 ಕೋಟಿಗೂ ಹೆಚ್ಚು ಪಡಿತರ ಚೀಟಿದಾರರನ್ನು** ಹೊಂದಿದೆ ಮತ್ತು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಸುಮಾರು **5 ಲಕ್ಷ ನ್ಯಾಯಬೆಲೆ ಅಂಗಡಿಗಳು** ಕಾರ್ಯನಿರ್ವಹಿಸುತ್ತಿವೆ.
- ಇದು **ಸಾರ್ವಜನಿಕ ವಿತರಣಾ ವ್ಯವಸ್ಥೆಯ** (PDS) ಅಸ್ತಿತ್ವದಲ್ಲಿರುವ ಮೂಲಸೌಕರ್ಯವನ್ನು ಬಳಸಿಕೊಳ್ಳುತ್ತದೆ ಮತ್ತು **ಮಧ್ಯಾಹ್ನದ ಬಿಸಿಯೂಟ ಯೋಜನೆ ಹಾಗೂ ಸಮಗ್ರ ಮಕ್ಕಳ ಅಭಿವೃದ್ಧಿ ಸೇವೆಗಳಂತಹ** (ICDS) ಯೋಜನೆಗಳನ್ನು ಸಂಯೋಜಿಸುತ್ತದೆ.

### ಕೇವಲ 'ಅರ್ಹ' ಫಲಾನುಭವಿಗಳನ್ನು ಗುರುತಿಸುವುದು:

- **ಕೇವಲ ನೈಜ ಫಲಾನುಭವಿಗಳು** ಅಂದರೆ, ನಿಜವಾಗಿಯೂ ಸಹಾಯದ ಅಗತ್ಯವಿರುವವರು ಮಾತ್ರ ಪ್ರಯೋಜನಗಳನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳುವುದು ಸರ್ಕಾರದ ಉದ್ದೇಶವಾಗಿದೆ.
- **ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆಯು** ವಿವಿಧ ಮಾನದಂಡಗಳನ್ನು ಉಪಯೋಗಿಸಿಕೊಂಡು ಅನರ್ಹ

ವ್ಯಕ್ತಿಗಳನ್ನು ಗುರುತಿಸಿ ಮತ್ತು ಪರಿಶೀಲನೆ ಹಾಗೂ ಪಟ್ಟಿಯಿಂದ ಹೆಸರುಗಳನ್ನು ತೆಗೆದುಹಾಕಲು ರಾಜ್ಯ ಸರ್ಕಾರಗಳೊಂದಿಗೆ ಪಟ್ಟಿಗಳನ್ನು ಹಂಚಿಕೊಂಡಿದೆ.

- ಅನರ್ಹ ಹೆಸರುಗಳನ್ನು ಗುರುತಿಸಿ ತೆಗೆದುಹಾಕಲು ಇದು **ಆಧಾರ್-ಆಧಾರಿತ ಪರಿಶೀಲನೆಯನ್ನು** ಬಳಸಿದೆ.

### ಪಟ್ಟಿಯಿಂದ ಹೆಸರುಗಳನ್ನುತೆಗೆದುಹಾಕಲು ಪ್ರಮುಖ ಕಾರಣಗಳು:

- ನಾಲ್ಕು ಚಕ್ರದ ವಾಹನಗಳ ಒಡೆತನ ಹೊಂದಿದ್ದರೆ.
- ಅರ್ಹತೆ ಮಿತಿ ಮೀರಿ ಹೆಚ್ಚಿನ ಆದಾಯ ಹೊಂದಿದ್ದರೆ.
- ಕಂಪನಿಯ ನಿರ್ದೇಶಕ ಸ್ಥಾನಗಳನ್ನು ಹೊಂದಿದ್ದರೆ.
- ಮೃತಪಟ್ಟ ಫಲಾನುಭವಿಗಳು.

## 13. ಭಾರತೀಯ ಆಹಾರದಲ್ಲಿ ಔರಮೈನ್

### ಇದೀಗ ಸುದ್ದಿಯಲ್ಲಿದೆ:

- ಭಾರತದಲ್ಲಿ ಆಹಾರ ಪದಾರ್ಥಗಳಲ್ಲಿ **ರಾಸಾಯನಿಕ ಕಲಬೆರಕೆ** ಪ್ರಕರಣಗಳು ಮರುಕಳಿಸುತ್ತಲೇ ಇದ್ದು, ಇದು ವಿಶೇಷವಾಗಿ, **'ಔರಮೈನ್ O'** ನಂತಹ **ನಿಷೇಧಿತ ಕೃತಕ ವರ್ಣದ್ರವ್ಯಗಳ** ಬಳಕೆಯ ಮೂಲಕ ಇದು ಹೆಚ್ಚುತ್ತಿದೆ.

### 'ಔರಮೈನ್ O' ನ ಬಗ್ಗೆ:

- ಇದೊಂದು **ಕೃತಕ, ವಾಸನೆ ರಹಿತ, ಹಳದಿ ಬಣ್ಣದ ವರ್ಣದ್ರವ್ಯವಾಗಿದ್ದು. ಇದನ್ನು ಜವಳಿ, ಚರ್ಮ ಸಂಸ್ಕರಣೆ, ಮುದ್ರಣಕ್ಕೆ ಬಳಸುವ ಮಸಿ ಮತ್ತು ಕಾಗದ** ತಯಾರಿಕೆಯಂತಹ ಕೈಗಾರಿಕೆಗಳಲ್ಲಿ ವ್ಯಾಪಕವಾಗಿ ಬಳಸಲಾಗುತ್ತದೆ.
- **ಭಾರತ, ಯುರೋಪಿಯನ್ ಒಕ್ಕೂಟ, ಅಮೇರಿಕಾ** ಸಹಿತ ಇತರ ಪ್ರಮುಖ ನಿಯಂತ್ರಕ ವ್ಯಾಪ್ತಿಗಳಲ್ಲಿ 'ಔರಮೈನ್ O' ಬಣ್ಣವನ್ನು **ಆಹಾರದಲ್ಲಿ ಬಳಸಲು ಅನುಮೋದನೆ ನೀಡಲಾಗಿಲ್ಲ.**
- ಸಿಹಿ ತಿನಿಸುಗಳ ಮಾದರಿಗಳಲ್ಲಿ **ಮೆಟಾನಿಲ್ ಹಳದಿ, ರೋಡಮೈನ್ ಬಿ ಮತ್ತು ಮಲಾಕೈಟ್ ಹಸಿರಿನಂತಹ** ಇತರ **ಅನುಮೋದನೆ ನೀಡದ ಬಣ್ಣಗಳೂ** ಕಂಡುಬರುತ್ತಿವೆ.
- ಇದು **ಯಕೃತ್ತು ಮತ್ತು ಮೂತ್ರಪಿಂಡದ ಹಾನಿ, ಗುಲ್ಮದ ಹಿಗ್ಗುವಿಕೆ, ಆನುವಂಶಿಕ ದ್ರವ್ಯವನ್ನು ಬದಲಾಯಿಸಬಲ್ಲ ವಿಕೃತಿಜನ್ಯ ಪರಿಣಾಮಗಳು ಮತ್ತು ಸಂಭಾವ್ಯ ಕ್ಯಾನ್ಸರ್** ಕಾರಕ ಅಪಾಯಗಳನ್ನು ಒಳಗೊಂಡಿದೆ.

## 14. ಸಮಗ್ರ ಶಿಶು ಅಭಿವೃದ್ಧಿ ಸೇವೆಗಳ ಕಾರ್ಯಕ್ರಮ (ICDS)

### ಇದೀಗ ಸುದ್ದಿಯಲ್ಲಿದೆ:

- **ಅಂಗನವಾಡಿಗಳ ಮುಖಾಂತರ ಪೌಷ್ಟಿಕಾಂಶ, ಶಿಕ್ಷಣ ಮತ್ತು ಬಾಲ್ಯಾವಸ್ಥೆಯ ಆರೈಕೆಯನ್ನು** ಬಲಪಡಿಸುವ ನಿಟ್ಟಿನಲ್ಲಿ, 'ಸಮಗ್ರ ಶಿಶು ಅಭಿವೃದ್ಧಿ ಸೇವೆಗಳ (ICDS) ಕಾರ್ಯಕ್ರವನ್ನು ವ್ಯಾಪಕವಾಗಿ ವಿಸ್ತರಣೆಗೊಂಡಿದೆ.

### ಸಮಗ್ರ ಶಿಶು ಅಭಿವೃದ್ಧಿ ಸೇವೆಗಳ (ICDS) ಕಾರ್ಯಕ್ರಮದ ಬಗ್ಗೆ:

- ಆರಂಭ: **1975ರ ಅಕ್ಟೋಬರ್ 2**
- ಇದೊಂದು ದೇಶದ ಮಹತ್ವಾಕಾಂಕ್ಷೆಯ **'ಪೂರ್ವ ಬಾಲ್ಯಾವಸ್ಥೆಯ ಆರೈಕೆ ಮತ್ತು ಅಭಿವೃದ್ಧಿ'** (ECCD) ಯೋಜನೆಯಾಗಿದೆ.
- ಇದು ದೇಶಾದ್ಯಂತದ ಅಂಗನವಾಡಿ ಕೇಂದ್ರಗಳ ಜಾಲದ ಮೂಲಕ, **6 ವರ್ಷದೊಳಗಿನ ಮಕ್ಕಳು** ಹಾಗೂ **ತಾಯಂದಿರಿಗೆ ಪೌಷ್ಟಿಕಾಂಶ, ಆರೋಗ್ಯ ರಕ್ಷಣೆ ಮತ್ತು ಶಾಲಾ ಪೂರ್ವ ಶಿಕ್ಷಣದಂತಹ** ಸಮಗ್ರ ಸೇವೆಗಳನ್ನು ಒದಗಿಸುತ್ತದೆ.
- ಹಣಕಾಸು: ಇದೊಂದು **ಕೇಂದ್ರ ಪ್ರಾಯೋಜಿತ ಯೋಜನೆಯಾಗಿದೆ.**
- ಪೌಷ್ಟಿಕಾಂಶ ಮತ್ತು ಬಾಲ್ಯದ ಆರಂಭಿಕ ಆರೈಕೆಯನ್ನು ಏಕೀಕರಿಸುವ ಸಲುವಾಗಿ, ಪ್ರಸ್ತುತ ಇದನ್ನು **'ಸಕ್ಷಮ್ ಅಂಗನವಾಡಿ ಮತ್ತು ಪೋಷಣ್ 2.0'** ಅಭಿಯಾನದ ವ್ಯಾಪ್ತಿಗೆ ತರಲಾಗಿದೆ.

## 15. ಅಮಿಬಿಕ್ ಮೆನಿಂಗೊ ಎನ್ಸೆಫಾಲಿಟಿಸ್

### ಇದೀಗ ಸುದ್ದಿಯಲ್ಲಿದೆ:

- ಅಮಿಬಿಕ್ ಮೆನಿಂಗೊ ಎನ್ಸೆಫಾಲಿಟಿಸ್ ಅಥವಾ **ಮೆದುಳು ಜ್ವರದ** ಪ್ರಕರಣಗಳು ವರದಿಯಾದ ಹಿನ್ನೆಲೆಯಲ್ಲಿ, ಶಬರಿಮಲೆ ಯಾತ್ರಾರ್ಥಿಗಳಿಗೆ ಕರ್ನಾಟಕ ಸರ್ಕಾರವು ಮಾರ್ಗಸೂಚಿಗಳನ್ನು ಹೊರಡಿಸಿದೆ.

### ಅಮಿಬಿಕ್ ಮೆನಿಂಗೊ ಎನ್ಸೆಫಾಲಿಟಿಸ್ ನ ಬಗ್ಗೆ:

- **ರೋಗಕಾರಕ** - ಇದು 'ನೇಗ್ಲೆರಿಯಾ ಫೌಲೆರಿ' ಎಂಬ ರೋಗಕಾರಕದಿಂದ ಉಂಟಾಗುವ ಅಪರೂಪದ **ಮೆದುಳಿನ ಸೋಂಕಾಗಿದೆ.**
- 'ನೇಗ್ಲೆರಿಯಾ ಫೌಲೆರಿ' ಎಂಬುದು **ಬೆಚ್ಚಗಿನ ಸಿಹಿನೀರು ಮತ್ತು ಮಣ್ಣಿನಲ್ಲಿ** ಕಂಡುಬರುವ **ಸ್ವತಂತ್ರವಾಗಿ ಬದುಕುವ ಅಮೀಬಾ** ಆಗಿದೆ.
- ಹರಡುವಿಕೆ: **ಈಜುವುದು, ಧಾರ್ಮಿಕ ಆಚರಣೆಗಳಲ್ಲಿ ಮೂಗನ್ನು ಸ್ವಚ್ಛಗೊಳಿಸುವುದು** ಇತ್ಯಾದಿ ಚಟುವಟಿಕೆಗಳ ಸಂದರ್ಭದಲ್ಲಿ, **ಕಲುಷಿತ ನೀರು ಮೂಗಿನ ಮೂಲಕ** ಪ್ರವೇಶಿಸಿದಾಗ ಸಾಮಾನ್ಯವಾಗಿ ಈ ಸೋಂಕು ಉಂಟಾಗುತ್ತದೆ.
- ಇದು **ನೀರನ್ನು ಕುಡಿಯುವುದರಿಂದ ಅಥವಾ ವ್ಯಕ್ತಿಯಿಂದ ವ್ಯಕ್ತಿಗೆ ನೇರ ಸಂಪರ್ಕದ ಮೂಲಕ ಹರಡುವುದಿಲ್ಲ.**
- **ಲಕ್ಷಣಗಳು:** ಇದು ಮೆದುಳಿಗೆ ಸಂಚರಿಸಿ, ಅಲ್ಲಿನ ಅಂಗಾಂಶಗಳನ್ನು ನಾಶಪಡಿಸುತ್ತದೆ ಮತ್ತು **ಮೆದುಳಿನ ಊತಕ್ಕೆ** ಕಾರಣವಾಗುತ್ತದೆ.
- **ಚಿಕಿತ್ಸೆ ಮತ್ತು ಮುನ್ನೆಚ್ಚರಿಕೆಗಳು:** ಅಪಾಯವನ್ನು ತಗ್ಗಿಸಲು, ನೀರಿನ ಚಟುವಟಿಕೆಗಳ ಸಮಯದಲ್ಲಿ ಮೂಗಿನೊಳಗೆ ನೀರು ಹೋಗದಂತೆ ನಿಯಂತ್ರಿಸಬೇಕು.

# ಭೂಗೋಳ ಮತ್ತು ಪರಿಸರ

## 1. ರಾಷ್ಟ್ರೀಯ ಅಧಿಕಾರ ವ್ಯಾಪ್ತಿಯಾಚೆಗಿರುವ ಜೀವ ವೈವಿಧ್ಯತೆ (ಹೈ ಸೀಸ್ ಒಪ್ಪಂದ)

### ಇದೀಗ ಸುದ್ದಿಯಲ್ಲಿದೆ:

- ರಾಷ್ಟ್ರೀಯ ಅಧಿಕಾರ ವ್ಯಾಪ್ತಿಯಾಚೆಗಿರುವ ಜೀವ ವೈವಿಧ್ಯತೆ ಅಥವಾ ಹೈ ಸೀಸ್ ಒಪ್ಪಂದವು ಜನವರಿ 2026 ರಲ್ಲಿ ಜಾರಿಗೆ ಬಂದು 60 ಕ್ಕೂ ಹೆಚ್ಚು ದೇಶಗಳು ಅಂಗೀಕರಿಸಿವೆ.

### ರಾಷ್ಟ್ರೀಯ ಅಧಿಕಾರ ವ್ಯಾಪ್ತಿಯಾಚೆಗಿರುವ ಜೀವ ವೈವಿಧ್ಯತೆ (BBNJ) ಅಥವಾ ಹೈಸೀಸ್ ಒಪ್ಪಂದದ ಬಗ್ಗೆ:

- ಉದ್ದೇಶ - ಇದು ರಾಷ್ಟ್ರೀಯ ವ್ಯಾಪ್ತಿಯನ್ನು ಮೀರಿದ ಪ್ರದೇಶಗಳಲ್ಲಿನ **ಸಮುದ್ರದ ಜೀವ ವೈವಿಧ್ಯತೆಯ ಸಂರಕ್ಷಣೆ ಮತ್ತು ಸುಸ್ಥಿರ ಬಳಕೆಯನ್ನು** ಗುರಿಯಾಗಿಟ್ಟುಕೊಂಡ ಒಂದು ಐತಿಹಾಸಿಕ ಅಂತರರಾಷ್ಟ್ರೀಯ ಒಪ್ಪಂದವಾಗಿದೆ.
- ಮಹತ್ವ - **ಸಾಗರ ಸಂರಕ್ಷಣೆ, ಸಮಾನತೆ ಮತ್ತು ನ್ಯಾಯಸಮ್ಮತತೆಯನ್ನು ಉತ್ತೇಜಿಸುವುದು, ಪರಿಸರ ವಿನಾಶವನ್ನು ನಿಭಾಯಿಸುವುದು ಮತ್ತು ಸಮುದ್ರಗಳಲ್ಲಿ ಜೀವವೈವಿಧ್ಯತೆಯ ನಷ್ಟವನ್ನು ತಡೆಗಟ್ಟುವ** ನಿಟ್ಟಿನಲ್ಲಿ ಇದು ಒಂದು ಮಹತ್ವದ ಹೆಜ್ಜೆಯಾಗಿದೆ.
- ಅಳವಡಿಕೆ - **ಮಾರ್ಚ್ 2023 ರಲ್ಲಿ ನ್ಯೂಯಾರ್ಕ್‌ನಲ್ಲಿ ನಡೆದ 5 ನೇ BBNJ** ಅಂತರ ಸರ್ಕಾರಿ ಸಮ್ಮೇಳನದಲ್ಲಿ ಇದನ್ನು ಒಮ್ಮತದಿಂದ ಅಂಗೀಕರಿಸಲಾಯಿತು.
- ಸದಸ್ಯ ರಾಷ್ಟ್ರಗಳು - ಪ್ರಸ್ತುತವಾಗಿ, ಇದರಲ್ಲಿ **80 ಕ್ಕೂ ಹೆಚ್ಚು ದೇಶಗಳ ಪ್ರತಿನಿಧಿಗಳು ಸಹಿ ಹಾಕಿದ್ದಾರೆ.**

## 2. ಅಂತರರಾಷ್ಟ್ರೀಯ ಜೀವಗೋಳ ಮೀಸಲು ದಿನ

### ಸಂದರ್ಭ:

- ಅಂತರರಾಷ್ಟ್ರೀಯ ಜೀವಗೋಳ ಮೀಸಲು ದಿನವನ್ನು **ನವೆಂಬರ್ 3 ರಂದು** ಆಚರಿಸಲಾಯಿತು.

### ಅಂತರರಾಷ್ಟ್ರೀಯ ಜೀವಗೋಳ ಮೀಸಲು ದಿನದ ಬಗ್ಗೆ:
### ಜೀವಗೋಳ ಮೀಸಲುಗಳು

- ವ್ಯಾಖ್ಯಾನ:- ಅವು **ಜೀವವೈವಿಧ್ಯತೆಯನ್ನು ಸಂರಕ್ಷಿಸಲು ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಉತ್ತೇಜಿಸಲು ರಾಷ್ಟ್ರೀಯ ಸರ್ಕಾರಗಳು ಗುರುತಿಸಿದ ಸಂರಕ್ಷಿತ ಪ್ರದೇಶಗಳಾಗಿವೆ.**
- ಇವು **ಭೂಮಂಡಲ, ಸಮುದ್ರ ಮತ್ತು ಕರಾವಳಿ** ಪರಿಸರ ವ್ಯವಸ್ಥೆಗಳನ್ನು ಒಳಗೊಂಡಿದೆ.
- ಇವು **ರಾಷ್ಟ್ರೀಯ ಸರ್ಕಾರಗಳಿಂದ ನಾಮನಿರ್ದೇಶನಗೊಳ್ಳುತ್ತವೆ ಮತ್ತು ಸಂಭಂದಿಸಿದ ರಾಜ್ಯಗಳ ಸಾರ್ವಭೌಮ ನ್ಯಾಯವ್ಯಾಪ್ತಿಯಲ್ಲಿ ಉಳಿಯುತ್ತವೆ.**
- ಭಾರತದಲ್ಲಿ ಜೀವಗೋಳ ಮೀಸಲುಗಳು - ಭಾರತವು 91,425 ಚದರ ಕಿ.ಮೀ ವಿಸ್ತೀರ್ಣವನ್ನು ಹೊಂದಿರುವ **18 ಜೀವಗೋಳ ಮೀಸಲುಗಳನ್ನು ಹೊಂದಿದ್ದು, 13 ಯುನೆಸ್ಕೋದಿಂದ ಗುರುತಿಸಲ್ಪಟ್ಟಿದೆ.**
- ಗಮನಿಸಿ-2025 ರಲ್ಲಿ, **ಹಿಮಾಚಲ ಪ್ರದೇಶದ ಶೀತ ಮರುಭೂಮಿ ಜೀವಗೋಳ ಮೀಸಲು ಪ್ರದೇಶವನ್ನು** ಯುನೆಸ್ಕೋದ ವಿಶ್ವ ಜೀವಗೋಳ ಮೀಸಲು ಜಾಲದಲ್ಲಿ ಸೇರಿಸಲಾಯಿತು.

### ವಿಶ್ವ ಜೀವಗೋಳ ಮೀಸಲು ಜಾಲ (WNBR) ದ ಬಗ್ಗೆ:

- ಇದನ್ನು **ಯುನೆಸ್ಕೋ 1971 ರಲ್ಲಿ ಸ್ಥಾಪಿಸಿತು.**
- ಇದು **ಅಂತರರಾಷ್ಟ್ರೀಯವಾಗಿ ಗೊತ್ತುಪಡಿಸಿದ ಸಂರಕ್ಷಿತ ಪ್ರದೇಶಗಳನ್ನು** ಒಳಗೊಂಡಿದೆ, ಇದನ್ನು **ಜೀವಗೋಳ ಮೀಸಲು** ಎಂದು ಕರೆಯಲಾಗುತ್ತದೆ.
- ಅವುಗಳನ್ನು **ಮನುಷ್ಯ ಮತ್ತು ಜೀವಗೋಳ ಕಾರ್ಯಕ್ರಮ (MAB)** ದ ಅಡಿಯಲ್ಲಿ ರಚಿಸಲಾಗಿದೆ.
- ಗುರುತಿಸಲ್ಪಟ್ಟಿದೆ:- ಇವುಗಳನ್ನು **ಯುನೆಸ್ಕೋದ ಮನುಷ್ಯ ಮತ್ತು ಜೀವಗೋಳ ಕಾರ್ಯಕ್ರಮ** (MAB program) ದ ಅಡಿಯಲ್ಲಿ ಅಂತರರಾಷ್ಟ್ರೀಯವಾಗಿ ಗುರುತಿಸಲ್ಪಟ್ಟಿವೆ.

### ಮನುಷ್ಯ ಮತ್ತು ಜೀವಗೋಳ (MAB) ಕಾರ್ಯಕ್ರಮ:

- ಪ್ರಾರಂಭ - ಇದು **ಜನರು ಮತ್ತು ಅವರ ಪರಿಸರದ ನಡುವಿನ ಸಂಬಂಧವನ್ನು ಹೆಚ್ಚಿಸಿ,** ವೈಜ್ಞಾನಿಕ ಆಧಾರವನ್ನು ಹೊಂದಲು **1971 ರಲ್ಲಿ ಯುನೆಸ್ಕೋ** ಪ್ರಾರಂಭಿಸಿದ ಅಂತರ ಸರ್ಕಾರಿ ವೈಜ್ಞಾನಿಕ ಕಾರ್ಯಕ್ರಮವಾಗಿದೆ.
- **ವಿಶ್ವ ಜೀವಗೋಳ ಮೀಸಲು ಜಾಲ (WNBR)** - ಈ ಕಾರ್ಯಕ್ರಮದಡಿಯಲ್ಲಿ, **ಯುನೆಸ್ಕೋ** ವಿಶ್ವ ಜೀವಗೋಳ ಮೀಸಲು ಜಾಲವನ್ನು (WNBR) ಸ್ಥಾಪಿಸಿದೆ.
- **ಭಾರತದ 13 ಜೀವಗೋಳ ಮೀಸಲು ಪ್ರದೇಶಗಳು** - ಮಾನವ ಮತ್ತು ಜೀವಗೋಳ (MAB) ಮೀಸಲು ಕಾರ್ಯಕ್ರಮದಡಿಯಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲ್ಪಟ್ಟ ಭಾರತದ 13 ಜೀವಗೋಳ ಮೀಸಲು ಪ್ರದೇಶಗಳು.

  1) ನೀಲಗಿರಿ
  2) ಮನ್ನಾರ್ ಕೊಲ್ಲಿ
  3) ಸುಂದರಬನ
  4) ನಂದಾ ದೇವಿ
  5) ನೋಕ್ರೇಕ್
  6) ಪಚಮರಿ
  7) ಸಿಮಿಲಿಪಾಲ್
  8) ಅಚಾನಕ್ಮಾರ್ - ಅಮರಕಂಟಕ್
  9) ಗ್ರೇಟ್ ನಿಕೋಬಾರ್
  10) ಅಗಸ್ತ್ಯಮಾಲೈ
  11) ಕಾಂಚನಜುಂಗ (2018)
  12) ಪನ್ನಾ (2020)
  13) **ಶೀತ ಮರುಭೂಮಿ, ಹಿಮಾಚಲ ಪ್ರದೇಶ (2025)** - ಹೊಸದಾಗಿ ಸೇರಿಸಲಾಗಿದೆ.

### ಜೀವಗೋಳ ಸಂರಕ್ಷಣೆ

- **ಭಾರತ ಸರ್ಕಾರವು 1986 ರಿಂದ ಜೀವಗೋಳ ಮೀಸಲು** ಎಂಬ ಯೋಜನೆಯನ್ನು ಜಾರಿಗೆ ತಂದಿದೆ.
- **ರಾಜ್ಯ ಸರ್ಕಾರವು ನಿರ್ವಹಣಾ ಕ್ರಿಯಾ ಯೋಜನೆಯನ್ನು** ಸಿದ್ಧಪಡಿಸುತ್ತದೆ, ಇದನ್ನು ಕೇಂದ್ರ ಮನುಷ್ಯ ಮತ್ತು ಜೀವಗೋಳ ಕಾರ್ಯಕ್ರಮ (MAB) ಸಮಿತಿಯು ಅನುಮೋದಿಸುತ್ತದೆ ಮತ್ತು ಮೇಲ್ವಿಚಾರಣೆ ಮಾಡುತ್ತದೆ.

### ಭಾರತದಲ್ಲಿನ ಜೀವಗೋಳ ಮೀಸಲುಗಳು

- ಭಾರತದಲ್ಲಿ ಪ್ರಸ್ತುತ 18 ಜೀವಗೋಳ ಮೀಸಲುಗಳಿವೆ
  1. ಶೀತ ಮರುಭೂಮಿ, ಹಿಮಾಚಲ ಪ್ರದೇಶ
  2. ನಂದಾ ದೇವಿ, ಉತ್ತರಾಖಂಡ
  3. ಕಾಂಚನಜುಂಗ, ಸಿಕ್ಕಿಂ
  4. ದಿಹಾಂಗ್- ದಿಬಾಂಗ, ಅರುಣಾಚಲ ಪ್ರದೇಶ
  5. ಮಾನಸ್, ಅಸ್ಸಾಂ
  6. ದಿಬ್ರು-ಸೈಖೋವಾ, ಅಸ್ಸಾಂ
  7. ನೋಕ್ರೇಕ್, ಮೇಘಾಲಯ
  8. ಪನ್ನಾ, ಮಧ್ಯಪ್ರದೇಶ
  9. ಪಚಮಾರಿ , ಮಧ್ಯಪ್ರದೇಶ
  10. ಅಚಾನಕ್ಮಾರ್-ಅಮರ್ಕಂಟಕ್, ಮಧ್ಯಪ್ರದೇಶ-ಛತ್ತೀಸ್ಗಢ
  11. ಕಚ್ಛ್, ಗುಜರಾತ್ (ಅತ್ಯಂತ ದೊಡ್ಡದಾದ ಪ್ರದೇಶ)
  12. ಸಿಮಿಲಿಪಾಲ್, ಒಡಿಶಾ
  13. ಸುಂದರಬನ, ಪಶ್ಚಿಮ ಬಂಗಾಳ
  14. ಶೇಷಾಚಲಂ, ಆಂಧ್ರಪ್ರದೇಶ
  15. ಅಗಸ್ತ್ಯಮಾಲೈ, ಕರ್ನಾಟಕ-ತಮಿಳುನಾಡು-ಕೇರಳ
  16. ನೀಲಗಿರಿ, ತಮಿಳುನಾಡು-ಕೇರಳ
  17. ಮನ್ನಾರ್ ಕೊಲ್ಲಿ, ತಮಿಳುನಾಡು
  18. ಗ್ರೇಟ್ ನಿಕೋಬಾರ್, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು

## 3. ಸರಂಡಾ ಅರಣ್ಯ




### ಇದೀಗ ಸುದ್ದಿಯಲ್ಲಿದೆ:

- ಸರ್ವೋಚ್ಚ ನ್ಯಾಯಾಲಯವು ಪರಿಸರಸಂಪನ್ಮೂಲಗಳಲ್ಲಿ ಸಮೃದ್ಧವಾದ ಸರಂಡಾ ಅರಣ್ಯವನ್ನು ವನ್ಯಜೀವಿ ಅಭಯಾರಣ್ಯವಾಗಿ ಘೋಷಿಸಲು ಜಾರ್ಖಂಡ್ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

### ಸರಂಡಾ ಅರಣ್ಯದ ಬಗ್ಗೆ:

- **ಸ್ಥಳ - ಜಾರ್ಖಂಡ್**
- ಇದು **ಏಷ್ಯಾದ ಅತಿದೊಡ್ಡ ಸಾಲ್ (ಶೋರಿಯಾ ರೋಬಸ್ಟಾ) ಅರಣ್ಯವಾಗಿದ್ದು**, ಸುಮಾರು 820-900 ಚದರ ಕಿಲೋಮೀಟರ್ ವಿಸ್ತೀರ್ಣವನ್ನು ಹೊಂದಿದೆ.
- ಇದನ್ನು **"ಏಳುನೂರು ಬೆಟ್ಟಗಳ ನಾಡು"** ಎಂದು ಕರೆಯಲಾಗುತ್ತದೆ, ಇದು ಅದರ ಗುಡ್ಡಗಾಡು ಪ್ರದೇಶವನ್ನು ಪ್ರತಿಬಿಂಬಿಸುತ್ತದೆ.
- ಈ ಅರಣ್ಯವು **ಛೋಟಾನಾಗಪುರ ಜೈವಿಕ-ಭೌಗೋಳಿಕ ವಲಯದ ಭಾಗವಾಗಿದ್ದು**, ಒಡಿಶಾ ಮತ್ತು ಛತ್ತೀಸ್‌ಗಢದ ಅರಣ್ಯಗಳೊಂದಿಗೆ ನೈಸರ್ಗಿಕ ಸ್ವರೂಪದ ನಿರಂತರತೆಯನ್ನು ಹೊಂದಿದೆ.
- ಪ್ರಭೇದಗಳು:- ಇದು **ಸ್ಥಳೀಯ ಸಾಲ್ ಅರಣ್ಯದ ಆಮೆ, ನಾಲ್ಕು ಕೊಂಬಿನ ಹುಲ್ಲೆ, ಏಷ್ಯಾದ "ಪುನುಗು ಬೆಕ್ಕು" ಮತ್ತು ಕಾಡು ಆನೆಗಳು** ಸೇರಿದಂತೆ ತೀವ್ರವಾಗಿ ಅಳಿವಿನಂಚಿನಲ್ಲಿರುವ ಪ್ರಭೇದಗಳಿಗೆ ನೆಲೆಯಾಗಿದೆ.
- ಬುಡಕಟ್ಟುಗಳು:- ಇದು **ಹೋ, ಮುಂಡಾ, ಉರಾನ್** ಮತ್ತು ಇತರೆ ಆದಿವಾಸಿ ಸಮುದಾಯಗಳಿಂದ ನೆಲೆಸಿದೆ.
- ಭಾರತದ ಕಬ್ಬಿಣದ ಅದಿರಿನ ನಿಕ್ಷೇಪಗಳಲ್ಲಿ **26% ರಷ್ಟು ಈ ಪ್ರದೇಶದಲ್ಲಿದೆ.**

## 4. ವಿದ್ಯುತ್ ವಾಹನಗಳ ಉತ್ತೇಜನಕ್ಕಾಗಿ NEMMP, 2020 ಅನ್ನು ಪುನರ್ ಪರಿಶೀಲಿಸುವುದು

### ಇದೀಗ ಸುದ್ದಿಯಲ್ಲಿದೆ:

- ಇತ್ತೀಚೆಗೆ, ದೆಹಲಿಯಲ್ಲಿ ವಾಯು ಮಾಲಿನ್ಯ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸರ್ವೋಚ್ಚ ನ್ಯಾಯಾಲಯವು **"ರಾಷ್ಟ್ರೀಯ ವಿದ್ಯುತ್ ಸಂಚಾರಿಶೀಲತಾ ಗುರಿ ಯೋಜನೆ (NEMMP), 2020"** ಅನ್ನು ಮರುಪರಿಶೀಲಿಸುವಂತೆ ಸೂಚಿಸಿತು.

### ರಾಷ್ಟ್ರೀಯ ವಿದ್ಯುತ್ ಸಂಚಾರಿಶೀಲತಾ ಗುರಿ ಯೋಜನೆ (NEMMP), 2020 ರ ಬಗ್ಗೆ:

- ದೇಶದಲ್ಲಿ **ವಿದ್ಯುತ್ ಚಾಲಿತ ವಾಹನಗಳನ್ನು ವೇಗವಾಗಿ ಅಳವಡಿಸಿಕೊಳ್ಳುವುದು ಮತ್ತು ಅವುಗಳ ಉತ್ಪಾದನೆಗೆ ದೃಷ್ಟಿ ಮತ್ತು ಮಾರ್ಗಸೂಚಿಯನ್ನು ಒದಗಿಸುವ** ರಾಷ್ಟ್ರೀಯ ಗುರಿಯಾಗಿದೆ.

- ಭಾರತದಲ್ಲಿ ಹೈಬ್ರಿಡ್ ಮತ್ತು ಎಲೆಕ್ಟ್ರಿಕ್ ವಾಹನಗಳ ವೇಗದ ಅಳವಡಿಕೆ ಮತ್ತು ಉತ್ಪಾದನೆ **(FAME ಇಂಡಿಯಾ)** ಯೋಜನೆಯು 2015 ರಲ್ಲಿ NEMMP ಅಡಿಯಲ್ಲಿ **ಬೃಹತ್ ಕೈಗಾರಿಕಾ ಸಚಿವಾಲಯದಿಂದ** ರೂಪಿಸಲ್ಪಟ್ಟಿತು.
- ಭಾರತದಲ್ಲಿ ವಿದ್ಯುತ್ ಅಥವಾ ಹೈಬ್ರಿಡ್ ವಾಹನಗಳ (xEV) ಅಳವಡಿಕೆಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ.

## 5. ಹವಾಮಾನ ಅಪಾಯ ಸೂಚ್ಯಂಕ (CRI), 2026


### ಸಂದರ್ಭ:

- **ಜರ್ಮನ್‌ವಾಚ್‌ನಿಂದ** ಹೊಸ ಹವಾಮಾನ ಅಪಾಯ ಸೂಚ್ಯಂಕ (CRI) 2026 ರ ವರದಿಯನ್ನು ಬಿಡುಗಡೆ ಮಾಡಲಾಗಿದೆ.
- **ಬ್ರೆಜಿಲ್‌ನ ಬೆಲೆಮ್‌ನಲ್ಲಿ** ನಡೆಯುತ್ತಿರುವ **COP30** ನಲ್ಲಿ ಈ ವಿಶ್ಲೇಷಣೆಯನ್ನು ಪ್ರಸ್ತುತಪಡಿಸಲಾಯಿತು.

### ಪ್ರಮುಖ ಸಂಶೋಧನೆಗಳು:

- 1995 ರಿಂದ 2024 ರ ನಡುವೆ ಹವಾಮಾನ ವೈಪರೀತ್ಯದಿಂದ ಹೆಚ್ಚು ಪರಿಣಾಮ ಬೀರುವ ದೇಶಗಳ ಪಟ್ಟಿಯಲ್ಲಿ **ಭಾರತ ಒಂಬತ್ತನೇ ಸ್ಥಾನದಲ್ಲಿತ್ತು.**
- ಕಳೆದ ಮೂರು ದಶಕಗಳಲ್ಲಿ , ಭಾರತವು ಸುಮಾರು **430 ತೀವ್ರ ಹವಾಮಾನ ವೈಪರೀತ್ಯಗಳನ್ನು** ಎದುರಿಸಿದೆ, ಇದರ ಪರಿಣಾಮವಾಗಿ **ಹಣದುಬ್ಬರ-ಸರಿಹೊಂದಿಸಿದ ನಷ್ಟವು ಸುಮಾರು $170 ಬಿಲಿಯನ್ ಆಗಿದೆ.**
- ಹೆಚ್ಚಿನ ಜನರು ಪರಿಣಾಮ ಬೀರಿದ್ದಾರೆ: **ಭಾರತವು ಬಾಂಗ್ಲಾದೇಶ ಮತ್ತು ಫಿಲಿಪೈನ್ಸ್‌ಗಿಂತ ಮೂರನೇ ಸ್ಥಾನದಲ್ಲಿದೆ.**

### ಭಾರತ ಮತ್ತು ಬೋಟ್ಸ್ವಾನಾ ನಡುವೆ ಚಿರತೆ ಸ್ಥಳಾಂತರ ಒಪ್ಪಂದ




### ಇದೀಗ ಸುದ್ದಿಯಲ್ಲಿದೆ:

- **'ಪ್ರಾಜೆಕ್ಟ್ ಚಿರತೆ' ಯ** ಭಾಗವಾಗಿ ಎಂಟು ಚಿರತೆಗಳನ್ನು ಭಾರತಕ್ಕೆ ಸ್ಥಳಾಂತರಿಸುವುದಾಗಿ ಭಾರತ ಮತ್ತು ಬೋಟ್ಸ್ವಾನಾ ಔಪಚಾರಿಕವಾಗಿ ಘೋಷಿಸಿವೆ.

### 'ಪ್ರಾಜೆಕ್ಟ್ ಚಿರತೆ' ಯನ್ನು ಪ್ರಾರಂಭಿಸಿದರ ಬಗ್ಗೆ:

- ದಶಕಗಳ ಕಾಲದ ಅತಿಯಾದ ಬೇಟೆ, ಆವಾಸಸ್ಥಾನ ವಿಘಟನೆ ಮತ್ತು ಬೇಟೆಯ ಪ್ರಭೇದಗಳ ವಿನಾಶದ ನಂತರ, **1952 ರಲ್ಲಿ ಭಾರತವು ಚಿರತೆಗಳು ಅಳಿದುಹೋಗಿವೆ** ಎಂದು ಘೋಷಿಸಿತು.
- **2022 ರಲ್ಲಿ ಪ್ರಾಜೆಕ್ಟ್ ಚಿರತೆ** ಪ್ರಾರಂಭವಾದ ನಂತರ ಮತ್ತು **ನಮೀಬಿಯಾ ಮತ್ತು ದಕ್ಷಿಣ ಆಫ್ರಿಕಾದಿಂದ** ಚಿರತೆಗಳ ಆಗಮನವು ದೊಡ್ಡ ಮಾಂಸಾಹಾರಿ ಪ್ರಾಣಿ ಜಾತಿಗೆ ಸಂಬಂಧಿಸಿದ ವಿಶ್ವದ ಮೊದಲ ಅಂತರಖಂಡ ಸ್ಥಳಾಂತರ ಕಾರ್ಯಕ್ರಮವನ್ನು ಸೃಷ್ಟಿಸಲಾಯಿತು.
- **ಬೋಟ್ಸ್ವಾನಾ:-** ಇದು **ಭೂಆವೃತ** ದೇಶವಾಗಿದ್ದು, ಅದರ ಭೂಪ್ರದೇಶದ ಸುಮಾರು **70% ಕಲಹರಿ ಮರುಭೂಮಿಯಿಂದ** ಆವೃತವಾಗಿದೆ ಮತ್ತು ಜಗತ್ತಿನ ಅತಿ ಹೆಚ್ಚಿನ ಸಂಖ್ಯೆಯ ಕಾಡು ಚೀತಾಗಳನ್ನು ಹೊಂದಿರುವ ದೇಶಗಳಲ್ಲಿ ಒಂದಾಗಿದೆ.

### ಪ್ರಾಜೆಕ್ಟ್ ಚೀತಾ (ಚಿರತೆ ಯೋಜನೆ), 2022 ರ ಬಗ್ಗೆ:

- ಅವಲೋಕನ: ಪ್ರಾಜೆಕ್ಟ್ ಚೀತಾ ಎಂಬುದು ಭಾರತದ ಮಹತ್ವಾಕಾಂಕ್ಷೆಯ ಪ್ರಯತ್ನವಾಗಿದ್ದು, ಸೂಕ್ತವಾದ **ಮುಕ್ತ ಅರಣ್ಯ ಮತ್ತು ಹುಲ್ಲುಗಾವಲು** ಪರಿಸರ ವ್ಯವಸ್ಥೆಯಲ್ಲಿ ಚಿರತೆಯನ್ನು ಮರು ಪರಿಚಯಿಸುತ್ತದೆ.
- ಪ್ರಾರಂಭಿಸಿದವರು: **ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (NTCA),** ವನ್ಯಜೀವಿ (ಸಂರಕ್ಷಣೆ) ಕಾಯ್ದೆ, 1972 ರ ಅಡಿಯಲ್ಲಿ ಸ್ಥಾಪಿತವಾದ ಶಾಸನಬದ್ಧ ಸಂಸ್ಥೆಯಾಗಿದೆ.
- ವಿಶಿಷ್ಟತೆ - ಇದು **ವಿಶ್ವದ ಮೊದಲ ಖಂಡಾಂತರ ಮಟ್ಟದ ಅತಿ ದೊಡ್ಡ ಕಾಡು ಮಾಂಸಾಹಾರಿ ಪ್ರಾಣಿಯ ಸ್ಥಳಾಂತರವಾಗಿದೆ.**

### ಇದುವರೆಗಿನ ಸ್ಥಳಾಂತರಗಳು:

- 2022 ರಲ್ಲಿ ನಮೀಬಿಯಾದಿಂದ 8 ಚಿರತೆಗಳ ಸ್ಥಳಾಂತರ.
- 2023 ರಲ್ಲಿ ದಕ್ಷಿಣ ಆಫ್ರಿಕಾದಿಂದ 12 ಚಿರತೆಗಳ ಸ್ಥಳಾಂತರ.
- ಬೋಟ್ಸ್ವಾನಾದಿಂದ 8 ಚಿರತೆಗಳು (2025 ರ ಘೋಷಣೆ) ಸ್ಥಳಾಂತರ.

### ಚಿರತೆ (ಅಸಿನೋನಿಕ್ಸ್ ಜುಬಾಟಸ್) ಯ ಬಗ್ಗೆ:

- ಇದು **ವಿಶ್ವದ ಅತಿ ವೇಗದ ಸಸ್ತನಿ** ಮತ್ತು **ಭಾರತದಲ್ಲಿ ಅಳಿದುಹೋದ ಏಕೈಕ ದೊಡ್ಡ ಮಾಂಸಾಹಾರಿ ಪ್ರಭೇದವಾಗಿದೆ** (1952).
- ಇತರ ದೊಡ್ಡ ಬೆಕ್ಕುಗಳಂತೆ, **ಚಿರತೆಗಳು ಘರ್ಜಿಸುವುದಿಲ್ಲ.**
- ಎರಡು ಪ್ರಮುಖ ಪ್ರಭೇದಗಳಿವೆ:- **ಆಫ್ರಿಕಾದ ಚಿರತೆ (ದುರ್ಬಲವಾಗಿವೆ)** ಮತ್ತು **ಏಷ್ಯಾದ ಚಿರತೆ (ತೀವ್ರವಾಗಿ ಅಳಿವಿನಂಚಿನಲ್ಲಿವೆ),** ಇವು ಪೂರ್ವ ಇರಾನ್ ಮತ್ತು ಆಫ್ರಿಕಾದ ಕೆಲವು ಭಾಗಗಳಲ್ಲಿ ಮಾತ್ರ ಕಂಡುಬರುತ್ತವೆ.

## 6. ಲೂಸಿಫರ್ ಜೇನು ಹುಳ




### ಸಂದರ್ಭ:


- **ಆಸ್ಟ್ರೇಲಿಯಾದ** ವಿಜ್ಞಾನಿಗಳು ಲೂಸಿಫರ್ ಎಂಬ ಹೊಸ ಸ್ಥಳೀಯ ಜೇನುನೊಣದ ಪ್ರಭೇದವನ್ನು ಕಂಡುಹಿಡಿದಿದ್ದಾರೆ.

### ಲೂಸಿಫರ್ ಜೇನುನೊಣದ ಬಗ್ಗೆ:

- **"ಮೆಗಾಕೈಲ್ (ಹ್ಯಾಕೆರಿಯಾಪಿಸ್) ಲೂಸಿಫರ್"** ಎಂದು ಹೆಸರಿಸಲ್ಪಟ್ಟ ಈ ಹೊಸ ಪ್ರಭೇದವನ್ನು ಮೊದಲು **2019ರಲ್ಲಿ ಪಶ್ಚಿಮ ಆಸ್ಟ್ರೇಲಿಯಾ** ರಾಜ್ಯದಲ್ಲಿ ಕಂಡುಹಿಡಿಯಲಾಯಿತು.
- ಆಸ್ಟ್ರೇಲಿಯಾ ಸುಮಾರು **2,000 ಸ್ಥಳೀಯ ಜೇನುನೊಣ ಪ್ರಭೇದಗಳನ್ನು** ಹೊಂದಿದ್ದು, ಅವುಗಳಲ್ಲಿ 300 ಕ್ಕೂ ಹೆಚ್ಚು ಪ್ರಭೇದಗಳನ್ನು ಇನ್ನೂ ವೈಜ್ಞಾನಿಕವಾಗಿ ಹೆಸರಿಸಲಾಗಿಲ್ಲ ಮತ್ತು ವಿವರಿಸಲಾಗಿಲ್ಲ.
- **ಹೆಣ್ಣು ಪ್ರಭೇಧದ ಜೇನುನೊಣದ ಮುಖದಲ್ಲಿ** ಅತ್ಯಂತ ವೈಶಿಷ್ಟ್ಯಮಯವಾದ, **ಮೇಲ್ಮುಖವಾದ ಕೊಂಬುಗಳಿವೆ.**
- ಕುತೂಹಲಕಾರಿಯಾಗಿ, **ಗಂಡು ಪ್ರಭೇಧದ ಜೇನುನೊಣಗಳಿಗೆ ಕೊಂಬುಗಳಿರುವುದಿಲ್ಲ.**

## 7. ಅಂತರರಾಷ್ಟ್ರೀಯ ಕ್ರಯೋಸ್ಫಿಯರ್ ( ಹಿಮ ಮಂಡಲ) ಹವಾಮಾನ ಉಪಕ್ರಮ





### ಇದೀಗ ಸುದ್ದಿಯಲ್ಲಿದೆ:

- ಭೂಮಿಯ ಹಿಮನದಿಗಳು ಮತ್ತು ಮಂಜುಗಡ್ಡೆಗಳು ವೇಗವಾಗಿ ಕರಗುತ್ತಿವೆ ಎಂದು **"2025 ರ ಕ್ರಯೋಸ್ಫಿಯರ್ ವರದಿ"** ಯು ಒತ್ತಿ ಹೇಳುತ್ತದೆ.

### ಕ್ರಯೋಸ್ಫಿಯರ್ ( ಹಿಮ ಮಂಡಲ) ನ ಬಗ್ಗೆ:

- ಹಿಮ ಮಂಡಲವೆಂದರೆ, ಭೂಮಿಯ ಹವಾಮಾನ ವ್ಯವಸ್ಥೆಯ ಒಂದು ಭಾಗವಾಗಿದ್ದು, **ಘನಿಕೃತ ಮಳೆ, ಹಿಮ, ಸಮುದ್ರದ ಹಿಮ, ಸರೋವರ ಮತ್ತು ನದಿಯ ಹಿಮ, ಹಿಮಗುಡ್ಡಗಳು, ಹಿಮನದಿಗಳು, ಹಿಮಮುಡುಗಳು, ಹಿಮಪರತೆಗಳು, ಹಿಮದ ಬಂಡೆಗಳು, ಶಾಶ್ವತವಾಗಿ ಹಿಮಗೊಂಡ ಮಣ್ಣು (ಪರ್ಮಾಫ್ರಾಸ್ಟ್) ಹಾಗೂ ಋತುಮಾನಿಕವಾಗಿ ಹಿಮವಾಗುವ ನೆಲಗಳನ್ನು** ಒಳಗೊಂಡಿರುತ್ತದೆ.
- "ಕ್ರಯೋಸ್ಫಿಯರ್" ಎಂಬ ಪದವು **ಗ್ರೀಕ್ ಪದ 'ಕ್ರಯೋಸ್'** ನಿಂದ ಬಂದಿದೆ, ಇದರರ್ಥ **ಹಿಮ ಅಥವಾ ತೀವ್ರ ಶೀತ.**
- ಹಿಮ ಮಂಡಲವು ಆರ್ಕ್ಟಿಕ್, ಅಂಟಾರ್ಕ್ಟಿಕ್ ಮತ್ತು ಪರ್ವತ ಪ್ರದೇಶಗಳಲ್ಲಿ ಮಾತ್ರವಲ್ಲದೆ ಜಾಗತಿಕವಾಗಿ ವ್ಯಾಪಿಸಿದೆ ಮತ್ತು ಸುಮಾರು ನೂರು ದೇಶಗಳಲ್ಲಿ ವ್ಯಾಪಿಸಿಕೊಂಡಿದೆ.
- **ಅಂಟಾರ್ಕ್ಟಿಕಾದಲ್ಲಿ** ಅತಿದೊಡ್ಡ ಭೂಖಂಡದ ಹಿಮಗಡ್ಡೆಗಳು ಮತ್ತು ಹಿಮಪರತೆಗಳು ಕಂಡುಬರುತ್ತವೆ.
- **ಭೂಮಿಯ ಮೇಲಿನ ಸುಮಾರು 70% ರಷ್ಟು ಸಿಹಿನೀರು** ಹಿಮ ಅಥವಾ ಮಂಜುಗಡ್ಡೆಯ ರೂಪದಲ್ಲಿ ಅಸ್ತಿತ್ವದಲ್ಲಿದೆ.

## 8. ಹಸಿರು ಜಲಜನಕದ ಕುರಿತು 3ನೇ ಅಂತರರಾಷ್ಟ್ರೀಯ ಸಮ್ಮೇಳನ (ICGH 2025)



### ಇದೀಗ ಸುದ್ದಿಯಲ್ಲಿದೆ:

- ಹಸಿರು ಜಲಜನಕದ ಕುರಿತು 3ನೇ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ, ಕೇಂದ್ರ **ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವರು,** ಭಾರತದ ಹಸಿರು ಜಲಜನಕದ ಕ್ಷೇತ್ರದಲ್ಲಿ ಶುದ್ಧ ಇಂಧನ ಪರಿವರ್ತನೆಗೆ ಉತ್ತೇಜಕವಾಗಿ ಕಾರ್ಯನಿರ್ವಹಿಸುತ್ತಿರುವ **"ರಾಷ್ಟ್ರೀಯ ಹಸಿರು ಜಲಜನಕ ಗುರಿ"** (NGHM) ಯ ಬಗ್ಗೆ ಮುಖ್ಯವಾಗಿ ಪ್ರಸ್ತಾಪಿಸಿದರು.

### ಹಸಿರು ಜಲಜನಕದ ಬಗ್ಗೆ:

- ಹಸಿರು ಜಲಜನಕವನ್ನು, **ನವೀಕರಿಸಬಹುದಾದ ಶಕ್ತಿಯಿಂದ ಉತ್ಪತ್ತಿಯಾಗುವ ವಿದ್ಯುತ್‌ನೊಂದಿಗೆ ನೀರಿನ ವಿದ್ಯುದ್ವಿಭಜನೆಯನ್ನು ಬಳಸಿಕೊಂಡು ಉತ್ಪಾದಿಸಲಾಗುತ್ತದೆ.**
- ಪ್ರಯೋಜನ: ಇದು ಶುದ್ಧ ದಹನಶೀಲ ಅಂಶವಾಗಿದ್ದು, ಕಬ್ಬಿಣ ಮತ್ತು ಉಕ್ಕು, ರಾಸಾಯನಿಕ ಮತ್ತು ಸಾರಿಗೆ ಸೇರಿದಂತೆ ಹಲವು ಕ್ಷೇತ್ರಗಳ **ಇಂಗಾಲದ ಹೊರಸೂಸುವಿಕೆಯನ್ನು ಕಡಿಮೆ ಮಾಡಲು** ಸಹಾಯ ಮಾಡುತ್ತದೆ.
- ಜಲಜನಕವನ್ನು **ದೀರ್ಘಕಾಲದವರೆಗೆ ಸಂಗ್ರಹಿಸಬಹುದು,** ಇದರ ಇಂಧನ ಕೋಶಗಳನ್ನು ಬಳಸಿಕೊಂಡು **ವಿದ್ಯುತ್ ಉತ್ಪಾದನೆ ಮಾಡಬಹುದು.**

### ರಾಷ್ಟ್ರೀಯ ಹಸಿರು ಜಲಜನಕ ಗುರಿ (NGHM) ಯ ಬಗ್ಗೆ:

- ಗುರಿ:- **ಭಾರತವನ್ನು ಹಸಿರು ಜಲಜನಕ ಉತ್ಪಾದನೆಯ ಜಾಗತಿಕ ಕೇಂದ್ರವನ್ನಾಗಿ ಮಾಡುವುದು.**
- ಅನುಷ್ಠಾನಗೊಳಿಸುವ ಸಚಿವಾಲಯ: **ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ.**

### ಜಲಜನಕದ ಬಗ್ಗೆ:

- ಚಿಹ್ನೆ ಮತ್ತು ಪರಮಾಣು ಸಂಖ್ಯೆ:- ಜಲಜನಕ **H ಚಿಹ್ನೆ** ಮತ್ತು **ಪರಮಾಣು ಸಂಖ್ಯೆ 1** ಹೊಂದಿರುವ ರಾಸಾಯನಿಕ ಅಂಶವಾಗಿದೆ.
- ಜಲಜನಕವು **ವಿಶ್ವದಲ್ಲೇ ಅತ್ಯಂತ ಹಗುರವಾದ** ಮತ್ತು **ಅತ್ಯಂತ ಹೇರಳವಾಗಿರುವ ರಾಸಾಯನಿಕ ವಸ್ತುವಾಗಿದ್ದು**, ಎಲ್ಲಾ ಸಾಮಾನ್ಯ ವಸ್ತುವಿನ ಸರಿಸುಮಾರು **75% ರಷ್ಟಿದೆ.**
- ಇದು **ಬಣ್ಣವಿಲ್ಲದ, ವಾಸನೆಯಿಲ್ಲದ, ರುಚಿಯಿಲ್ಲದ, ವಿಷಕಾರಿಯಲ್ಲದ ಮತ್ತು ಹೆಚ್ಚು ದಹನಕಾರಿ ಅನಿಲವಾಗಿದೆ.**

## 9. ರೌಮಾರಿ-ದೊಂಡುವಾ ಜೌಗು ಸಂಕೀರ್ಣ

### ಇದೀಗ ಸುದ್ದಿಯಲ್ಲಿದೆ:

- **ಅಸ್ಸಾಂನ** ರೌಮಾರಿ ಮತ್ತು ದೊಂಡುವಾ ಜೌಗು ಪ್ರದೇಶಗಳನ್ನು 'ರಾಮ್ಸರ್ ತಾಣ'ವನ್ನಾಗಿ ಘೋಷಿಸಲು ಪ್ರಸ್ತಾಪ ಸಲ್ಲಿಸುವ ನಿಟ್ಟಿನಲ್ಲಿ, ವಿವಿಧ ಶೈಕ್ಷಣಿಕ ಸಂಸ್ಥೆಗಳು ಮತ್ತು ಸಂರಕ್ಷಣಾ ಗುಂಪುಗಳ ತಜ್ಞರು ಪರಸ್ಪರ ಸಹಕರಿಸುತ್ತಿದ್ದಾರೆ.

### ರೌಮಾರಿ-ದೊಂಡುವಾ ಜೌಗು ಸಂಕೀರ್ಣದ ಬಗ್ಗೆ:

- ಸ್ಥಳ : ಇದು ಕಾಜಿರಂಗ ಹುಲಿ ಸಂರಕ್ಷಿತ ಪ್ರದೇಶದ ಭಾಗವಾಗಿರುವ 'ಲಾವೊಖೋವಾ ವನ್ಯಜೀವಿ ಅಭಯಾರಣ್ಯ'ದ ವ್ಯಾಪ್ತಿಯಲ್ಲಿದೆ.
- ಲಾವೊಖೋವಾ ಮತ್ತು ಅದಕ್ಕೇ ಹತ್ತಿಕೊಂಡಿರುವ ಬುರಾಚಾಪೋರಿ ವನ್ಯಜೀವಿ ಅಭಯಾರಣ್ಯಗಳು, ಕಾಜಿರಂಗ ಹುಲಿ ಸಂರಕ್ಷಿತ ಪ್ರದೇಶ ಮತ್ತು ಒರಾಂಗ್ ರಾಷ್ಟ್ರೀಯ ಉದ್ಯಾನವನಗಳ (ಕಾಜಿರಂಗ-ಒರಾಂಗ್ ಭೂದೃಶ್ಯ) ನಡುವೆ ಸಂಚರಿಸುವ ವನ್ಯಜೀವಿಗಳಿಗೆ ಪ್ರಮುಖ 'ಸಂಪರ್ಕ ಮಾರ್ಗ'ಗಳಾಗಿ ಕಾರ್ಯನಿರ್ವಹಿಸುತ್ತವೆ.
- ಇದು ಜಾಗತಿಕವಾಗಿ ಅಪಾಯಕ್ಕೊಳಗಾದ 'ಗಂಟು ಕೊಕ್ಕಿನ ಬಾತುಕೋಳಿ', ಕಪ್ಪು ಕುತ್ತಿಗೆಯ ಕೊಕ್ಕರೆ ಮತ್ತು ಕೆಂಗಂದು ಬಾತುಕೋಳಿಗಳಂತಹ ಪ್ರಭೇದಗಳು ಸೇರಿದಂತೆ, ವಾರ್ಷಿಕವಾಗಿ ಸುಮಾರು 120 ಪ್ರಭೇದಗಳ ಸ್ಥಳೀಯ ಮತ್ತು ವಲಸೆ ಹಕ್ಕಿಗಳಿಗೆ ಆಶ್ರಯ ನೀಡುತ್ತದೆ.
- ಈ ಸಂಕೀರ್ಣವು ಈಶಾನ್ಯ ಭಾರತದ ಏಕೈಕ ಎರಡು ರಾಮ್ಸರ್ ತಾಣಗಳಾದ ಅಸ್ಸಾಂನ 'ದೀಪೋರ್ ಬೀಲ್' ಮತ್ತು ಮಣಿಪುರದ 'ಲೋಕ್ಟಕ್ ಸರೋವರ'ಗಳಲ್ಲಿ ಕಂಡುಬರುವುದಕ್ಕಿಂತ ಹೆಚ್ಚಿನ ಸಂಖ್ಯೆಯ ಪಕ್ಷಿಗಳನ್ನು ದಾಖಲಿಸಿದೆ.

### ರಾಮ್ಸರ್ ಸಮಾವೇಶದ ಬಗ್ಗೆ

- ರಾಮ್ಸರ್ ಸಮಾವೇಶದ ಅಡಿಯಲ್ಲಿ **ಅಂತರರಾಷ್ಟ್ರೀಯ ಪ್ರಾಮುಖ್ಯತೆ ಪಡೆದ ಜೌಗು ಪ್ರದೇಶವನ್ನು** 'ರಾಮ್ಸರ್ ತಾಣ' ಎಂದು ಗುರುತಿಸಲಾಗುತ್ತದೆ.
- ಅಂತರರಾಷ್ಟ್ರೀಯ ಪ್ರಾಮುಖ್ಯತೆ ಪಡೆದ ಜೌಗು ಪ್ರದೇಶಗಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ ರಾಮ್ಸರ್ ಸಮಾವೇಶವು ಒಂದು ಪ್ರಮುಖ **ಅಂತರ-ಸರ್ಕಾರಿ ಒಪ್ಪಂದವಾಗಿದೆ.**
- ಈ ಒಪ್ಪಂದಕ್ಕೆ **ಇರಾನ್‌ನ ರಾಮ್ಸರ್‌ನಲ್ಲಿ ಫೆಬ್ರವರಿ 2, 1971** ರಂದು ಸಹಿ ಹಾಕಲಾಯಿತು ಮತ್ತು ಇದು 1975 ರಲ್ಲಿ ಜಾರಿಗೆ ಬಂದಿತು.
- **ಭಾರತವು 1982 ರಲ್ಲಿ ರಾಮ್ಸರ್ ಸಮಾವೇಶಕ್ಕೆ ಸಹಿ** ಹಾಕುವ ಮೂಲಕ ಸದಸ್ಯ ರಾಷ್ಟ್ರವಾಗಿ ಸೇರ್ಪಡೆಯಾಯಿತು.

## 10. ನಿವ್ವಳ-ಶೂನ್ಯ ಹೊರಸೂಸುವಿಕೆಯ ಭಾರತದ ನಿರ್ಮಾಣಕ್ಕಾಗಿ ಇಂಗಾಲದ ಸೆರೆಹಿಡಿಯುವಿಕೆ

### ಇದೀಗ ಸುದ್ದಿಯಲ್ಲಿದೆ:

- ಸಾಗರ ಆಧಾರಿತ ಇಂಗಾಲದ ಸೆರೆಹಿಡಿಯುವಿಕೆ (ಕಾರ್ಬನ್ ಕ್ಯಾಪ್ಚರ್) ತಂತ್ರಜ್ಞಾನವು 2070ರೊಳಗೆ ಭಾರತವನ್ನು ನಿವ್ವಳ-ಶೂನ್ಯ ಹೊರಸೂಸುವಿಕೆ ಗುರಿ ತಲುಪಲು ಸಹಾಯ ಮಾಡಬಹುದು. ಈ ತಂತ್ರಜ್ಞಾನವು ಸಮುದ್ರಗಳನ್ನು ಇಂಗಾಲ ಹೀರಿಕೊಳ್ಳುವ ಸಾಮರ್ಥ್ಯವುಳ್ಳ ಮತ್ತು ನೀಲಿ ಬೆಳವಣಿಗೆಯ ಕೇಂದ್ರಗಳಾಗಿ ಪರಿವರ್ತಿಸುತ್ತವೆ.

### ಇಂಗಾಲದ ಸೆರೆಹಿಡಿಯುವಿಕೆ, ಬಳಸುವಿಕೆ ಮತ್ತು ಸಂಗ್ರಹಿಸುವಿಕೆ (CCUS) ಎಂದರೇನು?

- ಅಂತರರಾಷ್ಟ್ರೀಯ ಇಂಧನ ಸಂಸ್ಥೆ (IEA) ಯ ಪ್ರಕಾರ, CCUS ಎಂದರೆ, ಪಳೆಯುಳಿಕೆ ಇಂಧನ ಆಧಾರಿತ ವಿದ್ಯುತ್ ಸ್ಥಾವರಗಳು ಮತ್ತು ಇತರೆ ಕೈಗಾರಿಕೆಗಳಂತಹ **ದೊಡ್ಡ ಮತ್ತು ಸ್ಥಿರ ಇಂಗಾಲದ ಡೈ ಆಕ್ಸೈಡ್ ($CO_2$) ಹೊರಸೂಸುವ ಮೂಲಗಳಿಂದ $CO_2$ ಅನ್ನು ಸೆರೆಹಿಡಿಯುವ, ಬಳಸಿಕೊಳ್ಳುವ** ಮತ್ತು **ಸುರಕ್ಷಿತವಾಗಿ ಸಂಗ್ರಹಿಸುವ ತಂತ್ರಜ್ಞಾನಗಳ ಗುಂಪಾಗಿದೆ.** ಈ ಪ್ರಕ್ರಿಯೆಯು ವಾತಾವರಣಕ್ಕೆ $CO_2$ ಸೇರುವುದನ್ನು ತಡೆಯುತ್ತದೆ.

### ಇಂಗಾಲದ ಹೊರಸೂಸುವಿಕೆ ಕಡಿತದ ಕುರಿತು ಭಾರತದ ಬದ್ಧತೆಗಳು:

- ಭಾರತವು **'ಮಿಷನ್ ಲೈಫ್ '**(ಪರಿಸರಕ್ಕಾಗಿ ಜೀವನಶೈಲಿ) ಅನ್ನು ಪ್ರಾರಂಭಿಸಿದೆ ಮತ್ತು **ಪ್ಯಾರಿಸ್ ಒಪ್ಪಂದದ** ಅಡಿಯಲ್ಲಿ ತನ್ನ **ರಾಷ್ಟ್ರೀಯವಾಗಿ ನಿರ್ಧರಿಸಿದ ಕೊಡುಗೆಗಳನ್ನು** (NDCs) ನವೀಕರಿಸಿದೆ.

### ನವೀಕರಿಸಿದ ರಾಷ್ಟ್ರೀಯವಾಗಿ ನಿರ್ಧರಿಸಿದ ಕೊಡುಗೆ, 2022 ರ ಅಡಿಯಲ್ಲಿ ಭಾರತದ ಪ್ರಮುಖ ಬದ್ಧತೆಗಳು:

- **ಹೊರಸೂಸುವಿಕೆ ತೀವ್ರತೆಯ ಕಡಿತ:** 2005ರ ಮಟ್ಟಕ್ಕೆ ಹೋಲಿಸಿದರೆ, 2030ರ ವೇಳೆಗೆ ಒಟ್ಟು ದೇಶೀಯ ಉತ್ಪನ್ನದ ಪ್ರತಿ ಘಟಕಕ್ಕೆ $CO_2$ ಹೊರಸೂಸುವಿಕೆಯನ್ನು **45%ರಷ್ಟು ಕಡಿಮೆ ಮಾಡುವುದು.**
- **ಪಳೆಯುಳಿಕೆಯೇತರ ಇಂಧನ ಮೂಲಗಳು:** 2030ರ ವೇಳೆಗೆ ದೇಶದ ಒಟ್ಟು ಸ್ಥಾಪಿತ ವಿದ್ಯುತ್ ಸಾಮರ್ಥ್ಯದ **50% ಅನ್ನು** ಪಳೆಯುಳಿಕೆಯೇತರ ಇಂಧನ ಮೂಲಗಳಿಂದ ಪಡೆಯುವುದು.
- **ಇಂಗಾಲದ ತೊಟ್ಟಿ (ಕಾರ್ಬನ್ ಸಿಂಕ್) ಯ ಸೃಷ್ಟಿ: ಅರಣ್ಯ ಮತ್ತು ಮರಗಳ** ವ್ಯಾಪ್ತಿಯನ್ನು ಹೆಚ್ಚಿಸುವ ಮೂಲಕ 2.5 ರಿಂದ 3 ಶತಕೋಟಿ ಟನ್‌ಗಳಷ್ಟು $CO_2$ ಸಮಾನ ($GtCO_2e$) ಹೆಚ್ಚುವರಿ ಇಂಗಾಲದ ತೊಟ್ಟಿಯನ್ನು ಸೃಷ್ಟಿಸುವುದು.

### ಹೆಚ್ಚುವರಿ ಮಾಹಿತಿ:

- ಭಾರತವು **2070ರ ವೇಳೆಗೆ ನಿವ್ವಳ-ಶೂನ್ಯ ಹೊರಸೂಸುವಿಕೆಯ** ಗುರಿಯನ್ನು ತಲುಪುವ ಯೋಜನೆಯನ್ನು **2021ರ COP26ನಲ್ಲಿ** ಘೋಷಿಸಿತು.
- ಸಾಗರ ಆಧಾರಿತ CCUS ತಂತ್ರಜ್ಞಾನಗಳೊಂದಿಗೆ, **ಸಮುದ್ರದೊಳಗಿನ ಭೂವೈಜ್ಞಾನಿಕ ರಚನೆಗಳಲ್ಲಿ CO2 ಅನ್ನು ಸಂಗ್ರಹಿಸಬಹುದು,** ಇದು ಹೊರಸೂಸುವಿಕೆಯನ್ನು ಕಡಿಮೆ ಮಾಡಲು ಮತ್ತೊಂದು ಮಾರ್ಗ ಒದಗಿಸುತ್ತದೆ.

## 11.ಜಂಟಿ ಸಾಲದ ಕಾರ್ಯವಿಧಾನ (JCM)

### ಸಂದರ್ಭ

- **'ಬ್ರೆಜಿಲ್'ನ 'ಬೆಲೆಮ್'ನಲ್ಲಿ** ನಡೆಯಲಿರುವ COP30 ಶೃಂಗಸಭೆಯಲ್ಲಿ, ನ್ಯಾಯಯುತ ಮತ್ತು ತಂತ್ರಜ್ಞಾನ ಚಾಲಿತ ಹವಾಮಾನ ಪ್ರಕ್ರಿಯೆಯನ್ನು ವಿಸ್ತರಿಸಲು **"ಜಂಟಿ ಸಾಲದ ಕಾರ್ಯವಿಧಾನ" (JCM)** ಪ್ರಮುಖ ಸಾಧನವಾಗಿದೆ ಎಂದು ಭಾರತ ಬಣ್ಣಿಸಿದೆ.

### ಜಂಟಿ ಸಾಲದ ಕಾರ್ಯವಿಧಾನ (ಜಾಯಿಂಟ್ ಕ್ರೆಡಿಟಿಂಗ್ ಮೆಕ್ಯಾನಿಸಮ್ - JCM) ಯ ಬಗ್ಗೆ:

- ಇದು ಒಂದು **ದ್ವಿಪಕ್ಷೀಯ ಉಪಕ್ರಮವಾಗಿದ್ದು,** ಇದರ ಅಡಿಯಲ್ಲಿ ಭಾರತದಂತಹ ಪಾಲುದಾರ ರಾಷ್ಟ್ರವು **ಜಪಾನ್‌ನೊಂದಿಗೆ** ಸಹಕರಿಸಿ ಕಡಿಮೆ ಇಂಗಾಲದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಮತ್ತು ಅದಕ್ಕೆ ಪ್ರತಿಯಾಗಿ **ಇಂಗಾಲದ ಕ್ರೆಡಿಟ್‌ಗಳನ್ನು** (ಕಾರ್ಬನ್ ಕ್ರೆಡಿಟ್ಸ್) ಪಡೆಯಲು ಅವಕಾಶವಿದೆ.
- **ಹಸಿರುಮನೆ ಅನಿಲ** ಹೊರಸೂಸುವಿಕೆಯನ್ನು ಕಡಿಮೆ ಮಾಡುವ ಯೋಜನೆಗಳಿಂದ ಉತ್ಪತ್ತಿಯಾಗುವ ಈ 'ಕ್ರೆಡಿಟ್'ಗಳನ್ನು (ಸಾಲದ ಅಂಕಗಳನ್ನು), ಎರಡೂ ದೇಶಗಳು ತಮ್ಮ **ರಾಷ್ಟ್ರೀಯ ಹವಾಮಾನ ಗುರಿಗಳನ್ನು** ತಲುಪಲು ಬಳಸಿಕೊಳ್ಳಬಹುದು.
- ಇದು, ತಂತ್ರಜ್ಞಾನ ವರ್ಗಾವಣೆ ಮತ್ತು ಹಸಿರು ತಂತ್ರಜ್ಞಾನಗಳಲ್ಲಿ ಹೂಡಿಕೆಯನ್ನು ಸುಗಮಗೊಳಿಸುತ್ತದೆ ಹಾಗೂ ಪಾಲುದಾರ ರಾಷ್ಟ್ರದಲ್ಲಿ ಸುಸ್ಥಿರ ಅಭಿವೃದ್ಧಿಯನ್ನು ಉತ್ತೇಜಿಸುತ್ತದೆ.

## 12. ಜಾಗತಿಕ ಮೀಥೇನ್ ಸ್ಥಿತಿಗತಿ ವರದಿ, 2025

### ಸಂದರ್ಭ:

- **ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮ (UNEP)** ವು ಇತ್ತೀಚಿಗೆ ಬ್ರೆಜಿಲ್ ನ ಬೆಲೆಮ್‌ನಲ್ಲಿ ನಡೆದ COP30 ಶೃಂಗಸಭೆಯಲ್ಲಿ ಜಾಗತಿಕ ಮೀಥೇನ್ ಸ್ಥಿತಿಗತಿ ವರದಿಯನ್ನು ಬಿಡುಗಡೆ ಮಾಡಿದೆ.

### ವರದಿಯ ಮುಖ್ಯಾಂಶಗಳು:

- **ಮೀಥೇನ್ ಹೊರಸೂಸುವಿಕೆಯಲ್ಲಿ ಏರಿಕೆ:** ಕಠಿಣ ತ್ಯಾಜ್ಯ ನಿಯಂತ್ರಣ ಮತ್ತು ಸುಧಾರಿತ ಕಣ್ಗಾವಲು ವ್ಯವಸ್ಥೆಗಳ ಹೊರತಾಗಿಯೂ, **2030ರ ವೇಳೆಗೆ ಮೀಥೇನ್ ಪ್ರಮಾಣವನ್ನು 30% ರಷ್ಟು ಕಡಿಮೆ** ಮಾಡುವ ಗುರಿಯನ್ನು ತಲುಪುವಲ್ಲಿ ಜಾಗತಿಕ ಪ್ರಯತ್ನಗಳು ಇನ್ನೂ ಹಿಂದುಳಿದಿವೆ.
- **ತೀವ್ರತೆ ಮತ್ತು ಪರಿಣಾಮ:** 20 ವರ್ಷಗಳ ಅವಧಿಯಲ್ಲಿ ಮೀಥೇನ್, ಇಂಗಾಲದ ಡೈ ಆಕ್ಸೈಡ್ ($CO_2$) ಗಿಂತ ಸುಮಾರು **80 ಪಟ್ಟು ಹೆಚ್ಚು ಶಕ್ತಿಶಾಲಿಯಾಗಿದೆ.** ಪ್ರಸ್ತುತ ಸುಮಾರು **ಮೂರನೇ ಒಂದರಷ್ಟು** ಭಾಗ ಜಾಗತಿಕ ತಾಪಮಾನ ಏರಿಕೆಯಲ್ಲಿ ಇದು ಕಾರಣವಾಗಿದೆ.
- **ಮೀಥೇನ್ ಹೊರಸೂಸುವಿಕೆಯಲ್ಲಿ ಭಾರತದ ಪಾಲು:** 2020ರಲ್ಲಿ ಸುಮಾರು 31 ಮಿಲಿಯನ್ ಟನ್ ಮೀಥೇನ್ ಅನ್ನು ಹೊರಸೂಸಿದೆ, ಇದು ಜಾಗತಿಕ ಹೊರಸೂಸುವಿಕೆಯ **9% ರಷ್ಟಿದೆ.** ಜಾಗತಿಕ ಕೃಷಿ ಆಧಾರಿತ ಮೀಥೇನ್ ಹೊರಸೂಸುವಿಕೆಯಲ್ಲಿ ಭಾರತದ ಪಾಲು 12% ರಷ್ಟಿದ್ದು, ಇದು **ಪ್ರಪಂಚದಲ್ಲೇ ಅತ್ಯಧಿಕವಾಗಿದೆ.**
- ಕೃಷಿ ವಲಯದ ವಿವರಣೆ: ಜಾನುವಾರುಗಳು (**ಜಾನುವಾರುಗಳ ಜೀರ್ಣಕ್ರಿಯೆ**) ಮೀಥೇನ್‌ನ ಅತೀ ದೊಡ್ಡ ಮೂಲವಾಗಿದೆ. ಇದರ ನಂತರದ ಸ್ಥಾನದಲ್ಲಿ **ಭತ್ತದ ಕೃಷಿ** ಇದ್ದು, 2030ರ ವೇಳೆಗೆ ಇದರಿಂದಾಗುವ ಹೊರಸೂಸುವಿಕೆ 8% ರಷ್ಟು ಹೆಚ್ಚಾಗುವ ನಿರೀಕ್ಷೆಯಿದೆ. **ಬೆಳೆ ತ್ಯಾಜ್ಯ ಸುಡುವುದೂ** ಕೂಡ ಹೆಚ್ಚುತ್ತಿದ್ದು, ಇವೆಲ್ಲವೂ ಕೂಡ ಹೊರಸೂಸುವಿಕೆಯಲ್ಲಿ ಭಾರತವನ್ನು ಜಾಗತಿಕವಾಗಿ ಪ್ರಮುಖ ಕೇಂದ್ರವನ್ನಾಗಿಸಿವೆ.

### ಮೀಥೇನ್ ನ ಬಗ್ಗೆ:

- ಇದು **ಅಲ್ಪಾವಧಿಯ ಹವಾಮಾನ ಮಾಲಿನ್ಯಕಾರಕವಾಗಿದೆ** (ವಾತಾವರಣದಲ್ಲಿ ಇದರ ಜೀವಿತಾವಧಿ 12 ವರ್ಷಗಳು).
- 20 ವರ್ಷಗಳ ಅವಧಿಯಲ್ಲಿ ಇದು **ಇಂಗಾಲದ ಡೈ ಆಕ್ಸೈಡ್ ($CO_2$) ಗಿಂತ 80–84 ಪಟ್ಟು ಹೆಚ್ಚು** ಪ್ರಬಲವಾಗಿರುತ್ತದೆ.
- ಜಾಗತಿಕ ಪ್ರಮುಖ ಮೂಲಗಳು: **ಕೃಷಿ (40%),** ಇಂಧನ (35%), ಮತ್ತು ತ್ಯಾಜ್ಯ (20%).

### ಮೀಥೇನ್ ಮಾಲಿನ್ಯವನ್ನು ತಡೆಗಟ್ಟಲು ಜಾಗತಿಕ ಉಪಕ್ರಮಗಳು:

**ಜಾಗತಿಕ ಮೀಥೇನ್ ಪ್ರತಿಜ್ಞೆ (Global Methane Pledge), 2021:**

- ಇದು 2030ರ ವೇಳೆಗೆ ಮೀಥೇನ್ ಹೊರಸೂಸುವಿಕೆಯನ್ನು 2020ರ ಮಟ್ಟಕ್ಕಿಂತ 30% ರಷ್ಟು ಕಡಿಮೆ ಮಾಡುವ ಸ್ವಯಂಪ್ರೇರಿತ ಅಂತರರಾಷ್ಟ್ರೀಯ ಚೌಕಟ್ಟಾಗಿದೆ.
- ಇದನ್ನು COP26 ರಲ್ಲಿ ಅಮೆರಿಕ, ಯುರೋಪಿಯನ್ ಒಕ್ಕೂಟ ಮತ್ತು ಹವಾಮಾನ ಮತ್ತು ಶುದ್ಧ ವಾಯು ಒಕ್ಕೂಟ (CCAC) ಜಂಟಿಯಾಗಿ ಪ್ರಾರಂಭಿಸಿದವು.
- ಗಮನಿಸಿ: ಭಾರತವು ಈ ಒಪ್ಪಂದಕ್ಕೆ ಸಹಿ ಹಾಕಿಲ್ಲ.

### ಭಾರತದ ಉಪಕ್ರಮಗಳು:

**ಸುಸ್ಥಿರ ಕೃಷಿಗಾಗಿ ರಾಷ್ಟ್ರೀಯ ಗುರಿ (NMSA):**

- ಇದು **ಹವಾಮಾನ-ಸ್ಥಿತಿಸ್ಥಾಪಕ ಮತ್ತು ಕಡಿಮೆ ಹೊರಸೂಸುವಿಕೆಯ** ಕೃಷಿಯನ್ನು ಉತ್ತೇಜಿಸುತ್ತದೆ.
- **ಮಣ್ಣಿನ ಆರೋಗ್ಯ, ನೀರಿನ ದಕ್ಷತೆ ಮತ್ತು ಬೆಳೆ ವೈವಿಧ್ಯೀಕರಣದ** ಮೇಲೆ ಗಮನಹರಿಸುವ ಮೂಲಕ ಪರೋಕ್ಷವಾಗಿ ಮೀಥೇನ್ ಅನ್ನು ಕಡಿಮೆ ಮಾಡುತ್ತದೆ.
- ಭತ್ತದ ಕೃಷಿಯಿಂದ ಮೀಥೇನ್ ಹೊರಸೂಸಿಕೆಯನ್ನು ಕಡಿಮೆ ಮಾಡಲು ಆಧುನಿಕ ತಂತ್ರಜ್ಞಾನ ಮತ್ತು ಕೃಷಿ ಪದ್ಧತಿಗಳ ಬಳಕೆ.

## 13. ಸಸ್ಯ ತಳಿ ಸಂರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯಿದೆ (PPV&FRA Act))

### ಸಂದರ್ಭ:

- ಕೇಂದ್ರ ಸರ್ಕಾರವು 'ಸಸ್ಯ ತಳಿ ಸಂರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯಿದೆ' (PPV&FRA Act) ಯನ್ನು ಪಾಲುದಾರರಿಂದ ಸಲಹೆಗಳನ್ನು ಅಳವಡಿಸಿಕೊಳ್ಳಲು ತಿದ್ದುಪಡಿ ಮಾಡಲಿದೆ ಎಂದು **ಕೇಂದ್ರ ಕೃಷಿ ಸಚಿವರು** ತಿಳಿಸಿದ್ದಾರೆ.

### ಸಸ್ಯ ತಳಿ ಸಂರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯಿದೆ (ಪ್ರೊಟೆಕ್ಷನ್ ಆಫ್ ಪ್ಲಾಂಟ್ ವೆರೈಟಿ ಅಂಡ್ ಫಾರ್ಮರ್ಸ್ ರೈಟ್ಸ್ ಆಕ್ಟ್ - PPV&FRA Act), 2001 ರ ಬಗ್ಗೆ:

- **ಉದ್ದೇಶ:** ಈ ಕೆಳಗಿನವುಗಳಿಗೆ ಪರಿಣಾಮಕಾರಿ ವ್ಯವಸ್ಥೆಯನ್ನು ಸ್ಥಾಪಿಸುವುದು:
    1. ಸಸ್ಯ ತಳಿಗಳ ಸಂರಕ್ಷಣೆ.
    2. ರೈತರು ಮತ್ತು ಸಸ್ಯ ತಳಿಗಳನ್ನು ಅಭಿವೃದ್ಧಿಪಡಿಸುವವರ ಹಕ್ಕುಗಳ ರಕ್ಷಣೆ
    3. ಹೊಸ ತಳಿಯ ಸಸ್ಯಗಳ ಅಭಿವೃದ್ಧಿಯನ್ನು ಉತ್ತೇಜಿಸುವುದು.

### ಮಹತ್ವ :

- ಇದು ನಾವೀನ್ಯತೆ ಮತ್ತು ರೈತರ ಸಾಂಪ್ರದಾಯಿಕ ಹಕ್ಕುಗಳ ನಡುವೆ ಸಮತೋಲನವನ್ನು ಕಾಯ್ದುಕೊಳ್ಳುತ್ತದೆ.
- ಕೃಷಿ ಜೀವವೈವಿಧ್ಯದ ಸಂರಕ್ಷಣೆಯನ್ನು ಉತ್ತೇಜಿಸುತ್ತದೆ.
- ಗ್ರಾಮೀಣ ಜೀವನೋಪಾಯವನ್ನು ರಕ್ಷಿಸುವ ಜೊತೆಗೆ ಬೀಜ ಉದ್ಯಮದ ಬೆಳವಣಿಗೆಯನ್ನು ಹೆಚ್ಚಿಸುತ್ತದೆ.

## 14. ಅಪಾಯದಲ್ಲಿರುವ ಭಾರತದ ಡುಗಾಂಗ್‌ಗಳು (ಕಡಲ ಹಸುಗಳು)



### ಸಂದರ್ಭ:

- **ಅಬುಧಾಬಿಯಲ್ಲಿ** ನಡೆದ ಐಯುಸಿಎನ್ (IUCN) ಸಂರಕ್ಷಣಾ ಕಾಂಗ್ರೆಸ್‌ನಲ್ಲಿ ಬಿಡುಗಡೆಯಾದ ಇತ್ತೀಚಿನ ವರದಿಯು ಭಾರತದ ಡುಗಾಂಗ್ ಜನಸಂಖ್ಯೆಗೆ ಎದುರಾಗಿರುವ ಅಪಾಯದ ಬಗ್ಗೆ ಎಚ್ಚರಿಸಿದೆ.

### ಡುಗಾಂಗ್‌ಗಳು (ಡುಗಾಂಗ್ ಡುಗಾನ್)

- ಡುಗಾಂಗ್‌ಗಳು ಪ್ರಮುಖವಾಗಿ **ಸಸ್ಯಾಹಾರಿಗಳಾಗಿದ್ದು**, ದಿನಕ್ಕೆ 30 ರಿಂದ 40 ಕೆಜಿ ಕಡಲ ಹುಲ್ಲನ್ನು (seagrass) ತಿನ್ನುತ್ತವೆ.
- ಇವುಗಳನ್ನು **"ಕಡಲ ಹಸುಗಳು"** ಎಂದು ಕರೆಯಲಾಗುತ್ತದೆ. ಇವು **ಹಿಂದೂ ಮಹಾಸಾಗರ ಮತ್ತು ಪಶ್ಚಿಮ ಪೆಸಿಫಿಕ್ ಮಹಾಸಾಗರದ ಆಳವಿಲ್ಲದ ಕರಾವಳಿ ನೀರಿನಲ್ಲಿ ಶಾಂತಿಯಿಂದ ಕಡಲ ಹುಲ್ಲನ್ನು ಮೇಯುತ್ತವೆ.**
- ಕರಾವಳಿ ಪರಿಸರ ವ್ಯವಸ್ಥೆಗಳನ್ನು ಸಂರಕ್ಷಿಸುವಲ್ಲಿ ಮತ್ತು ಮೀನು ಉತ್ಪಾದನೆಗೆ ಸಹಾಯ ಮಾಡುವಲ್ಲಿ ಅವು ಪ್ರಮುಖ ಪಾತ್ರವಹಿಸುವುದರಿಂದ, ಇವುಗಳನ್ನು **"ಸಮುದ್ರದ ರೈತರು ಅಥವಾ ತೋಟಗಾರರು"** ಎಂದು ಕರೆಯಲಾಗುತ್ತದೆ.
- ಭೌಗೋಳಿಕ ವ್ಯಾಪ್ತಿ: ಈ ಶಾಂತ ಸ್ವಭಾವದ ದೈತ್ಯ ಜೀವಿಗಳು **ಕರಾವಳಿಯುದ್ದಕ್ಕೂ ಬೆಚ್ಚಗಿನ ನೀರಿನಲ್ಲಿ** ಕಂಡುಬರುತ್ತವೆ. ಇವು ಮುಖ್ಯವಾಗಿ ಕೊಲ್ಲಿಗಳು ಮತ್ತು ಲಗೂನ್‌ಗಳಂತಹ ಶಾಂತವಾದ ಆವಾಸಸ್ಥಾನಗಳಲ್ಲಿ ಕಂಡುಬರುವ **ಕಡಲ ಹುಲ್ಲು ಹಾಸುಗಳಿಗೆ** ಸೀಮಿತವಾಗಿವೆ.
- ಹಂಚಿಕೆ: ಇವು ಭಾರತದಲ್ಲಿ **ಮನ್ನಾರ್ ಕೊಲ್ಲಿ, ಪಾಕ್ ಕೊಲ್ಲಿ, ಕಚ್ ಕೊಲ್ಲಿ ಮತ್ತು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ** ಕಂಡುಬರುತ್ತವೆ.
- ಬೆದರಿಕೆಗಳು: **ಮಾಂಸಕ್ಕಾಗಿ ಬೇಟೆಯಾಡುವುದು, ವಾಣಿಜ್ಯ ಮೀನುಗಾರಿಕೆಯಿಂದಾಗಿ** ಆಕಸ್ಮಿಕವಾಗಿ ಬಲೆಯಲ್ಲಿ ಸಿಲುಕಿ ಸಾವು ಮತ್ತು **ಆವಾಸಸ್ಥಾನದ ನಾಶ** ಸೇರಿದಂತೆ ವಿವಿಧ ಕಾರಣಗಳಿಂದಾಗಿ ಕಳೆದ ಹಲವಾರು ದಶಕಗಳಲ್ಲಿ ಇವುಗಳ ಸಂಖ್ಯೆ ಕ್ಷೀಣಿಸುತ್ತಿದೆ.

### ಸಂರಕ್ಷಣಾ ಸ್ಥಿತಿ:

- IUCN ಕೆಂಪು ಪಟ್ಟಿ - **ದುರ್ಬಲ (Vulnerable)**.
- ವನ್ಯಜೀವಿ (ಸಂರಕ್ಷಣೆ) ಕಾಯಿದೆ, 1972 -**ಅನುಸೂಚಿ I**

### ಭಾರತದಲ್ಲಿ ಸಂರಕ್ಷಣಾ ಪ್ರಯತ್ನಗಳು

- ಡುಗಾಂಗ್ ಸಂರಕ್ಷಣಾ ಮೀಸಲು: **ತಮಿಳುನಾಡಿನ ಪಾಕ್ ಕೊಲ್ಲಿಯಲ್ಲಿ ಭಾರತದ ಮೊದಲ ಡುಗಾಂಗ್ ಸಂರಕ್ಷಣಾ ಮೀಸಲು** ಪ್ರದೇಶವನ್ನು ಸ್ಥಾಪಿಸಲಾಗಿದೆ. ಇದನ್ನು ಸಾಗರ ಜೀವವೈವಿಧ್ಯ ಸಂರಕ್ಷಣೆಗೆ ಜಾಗತಿಕ ಮಾದರಿ ಎಂದು ಐಯುಸಿಎನ್ (IUCN) ಗುರುತಿಸಿದೆ.
  - **ರಾಷ್ಟ್ರೀಯ ಡುಗಾಂಗ್ ಚೇತರಿಕೆ ಕಾರ್ಯಕ್ರಮ:** ಆವಾಸಸ್ಥಾನಗಳನ್ನು ಸಂರಕ್ಷಿಸಲು ಮತ್ತು ಡುಗಾಂಗ್ ಸಂರಕ್ಷಣೆಯನ್ನು ಉತ್ತೇಜಿಸಲು **ತಮಿಳುನಾಡು, ಗುಜರಾತ್ ಮತ್ತು ಅಂಡಮಾನ್ ಮತ್ತು ನಿಕೋಬಾರ್** ದ್ವೀಪಗಳ ಸಹಯೋಗದೊಂದಿಗೆ ಇದನ್ನು ಪ್ರಾರಂಭಿಸಲಾಗಿದೆ.
  - **ಅಂತರರಾಷ್ಟ್ರೀಯ ಸಹಕಾರ:** ಭಾರತದ ಪ್ರಯತ್ನಗಳು **CITES** ಮತ್ತು ವಲಸೆ ಪ್ರಭೇದಗಳ ಸಮಾವೇಶದಂತಹ **(CMS)** ಜಾಗತಿಕ ಸಂರಕ್ಷಣಾ ಚೌಕಟ್ಟುಗಳೊಂದಿಗೆ ಹೊಂದಿಕೆಯಾಗುತ್ತವೆ.

## 15. ಗಿಂಕ್ಗೊ-ಹಲ್ಲಿನ ಕೊಕ್ಕಿನ ತಿಮಿಂಗಿಲಗಳು



### ಸಂದರ್ಭ:

- ಇತ್ತೀಚೆಗೆ, ವಿಜ್ಞಾನಿಗಳ ತಂಡವೊಂದು **ಮೆಕ್ಸಿಕೋದ ಬಾಜಾ ಕ್ಯಾಲಿಫೋರ್ನಿಯಾ ಕರಾವಳಿಯಲ್ಲಿ** ಇದೇ ಮೊದಲ ಬಾರಿಗೆ ಅಪರೂಪದ 'ಗಿಂಕ್ಗೊ-ಹಲ್ಲಿನ ಕೊಕ್ಕಿನ ತಿಮಿಂಗಿಲಗಳನ್ನು' ಪತ್ತೆಹಚ್ಚಿದೆ.

### ಗಿಂಕ್ಗೊ-ಹಲ್ಲಿನ ಕೊಕ್ಕಿನ ತಿಮಿಂಗಿಲ (ಮೆಸೊಪ್ಲೋಡೊ ಗಿಂಕ್ಗೋಡೆನ್ಸ್) ಗಳ ಬಗ್ಗೆ:

- ಇವು ಕೊಕ್ಕಿನ ತಿಮಿಂಗಿಲಗಳ **24 ಪ್ರಭೇದಗಳಲ್ಲಿ** ಒಂದಾಗಿವೆ.
- ಕೊಕ್ಕಿನ ತಿಮಿಂಗಿಲಗಳು ಭೂಮಿಯ ಮೇಲಿರುವ **ಅತ್ಯಂತ ಆಳವಾಗಿ ಧುಮುಕುವ ಸಸ್ತನಿಗಳಾಗಿವೆ.**
- ಇವು ತಮ್ಮ ಜೀವನದ ಹೆಚ್ಚಿನ ಸಮಯವನ್ನು ಸಾಗರಗಳಲ್ಲಿ ಕಳೆಯುತ್ತವೆ. **ಉಸಿರಾಡಲು ಕೇವಲ ಕೆಲವೇ ನಿಮಿಷಗಳ ಕಾಲ ಮೇಲೆ ಬರುತ್ತವೆ,** ಸಾಮಾನ್ಯವಾಗಿ ಕರಾವಳಿಯಿಂದ ಬಹಳ ದೂರದಲ್ಲಿರುತ್ತವೆ.
- ಇವು **ಪಶ್ಚಿಮ ಪೆಸಿಫಿಕ್‌ನ ಉಷ್ಣವಲಯದ ಮತ್ತು ಬೆಚ್ಚಗಿನ-ಸಮಶೀತೋಷ್ಣ** ನೀರಿನಲ್ಲಿ ಕಂಡುಬರುತ್ತವೆ.
- IUCN ಸ್ಥಿತಿ: **ದತ್ತಾಂಶದ ಕೊರತೆ** (DD).

## 16.ಲೀಡ್ ಐಟಿ (LeadIT)

### ಸಂದರ್ಭ

- **ಬ್ರೆಜಿಲ್‌ನ ಬೆಲೆಮ್‌ನಲ್ಲಿ ನಡೆದ COP30** ಶೃಂಗಸಭೆಯಲ್ಲಿ, ಭಾರತದ ಕೇಂದ್ರ ಪರಿಸರ ಸಚಿವರು ಲೀಡ್‌ಐಟಿ **ಉದ್ಯಮ ನಾಯಕರ ದುಂಡುಮೇಜಿನ ಸಭೆ'** ಯನ್ನು ಉದ್ದೇಶಿಸಿ ಮಾತನಾಡಿದರು. **ಕಡಿಮೆ ಇಂಗಾಲದ ಕೈಗಾರಿಕಾ ಪರಿವರ್ತನೆಗಳನ್ನು** ಚಾಲನೆ ಮಾಡುವಲ್ಲಿ ಭಾರತದ ಪಾತ್ರವನ್ನು ಅವರು ಪುನರುಚ್ಚರಿಸಿದರು.

### ಲೀಡ್‌ಐಟಿ (LeadIT) ಯ ಬಗ್ಗೆ:

- **ಪ್ರಾರಂಭ:** ವಿಶ್ವಸಂಸ್ಥೆಯ ಹವಾಮಾನ ಕ್ರಿಯೆ ಶೃಂಗಸಭೆಯಲ್ಲಿ, ವಿಶ್ವ ಆರ್ಥಿಕ ವೇದಿಕೆಯ ಬೆಂಬಲದೊಂದಿಗೆ, **ಭಾರತ ಮತ್ತು ಸ್ವೀಡನ್** ಜಂಟಿಯಾಗಿ 2019 ರಲ್ಲಿ ಇದನ್ನು ಪ್ರಾರಂಭಿಸಿದವು.
- **ಉದ್ದೇಶ:** ಉಕ್ಕು, ಸಿಮೆಂಟ್, ಅಲ್ಯೂಮಿನಿಯಂ, ರಾಸಾಯನಿಕಗಳು ಮತ್ತು ಭಾರೀ ಸಾರಿಗೆಯಂತಹ **'ನಿಯಂತ್ರಿಸಲು ಕಷ್ಟಕರವಾದ' ಹಾಗೂ ಹೆಚ್ಚು ಇಂಗಾಲ ಹೊರಸೂಸುವ ಕೈಗಾರಿಕೆಗಳನ್ನು, 2050 ರ ವೇಳೆಗೆ 'ನಿವ್ವಳ-ಶೂನ್ಯ' ಹೊರಸೂಸುವಿಕೆ ಸ್ಥಿತಿಗೆ** ಪರಿವರ್ತಿಸುವುದನ್ನು ತ್ವರಿತಗೊಳಿಸುವುದು ಇದರ ಉದ್ದೇಶವಾಗಿದೆ.
- ಇದು ನಿರ್ದಿಷ್ಟವಾಗಿ **'ಕೈಗಾರಿಕಾ ಇಂಗಾಲ ಮುಕ್ತಗೊಳಿಸುವಿಕೆ'ಯ** ಮೇಲೆ ಗಮನಹರಿಸಿದ ಪ್ರಪ್ರಥಮ ಜಾಗತಿಕ ಉನ್ನತ ಮಟ್ಟದ ಉಪಕ್ರಮಗಳಲ್ಲಿ ಒಂದಾಗಿದೆ.
- **ಲೀಡ್‌ಐಟಿ 2.0 (2024–2026): ದುಬೈನಲ್ಲಿ ನಡೆದ COP28** ಶೃಂಗಸಭೆಯಲ್ಲಿ ಇದನ್ನು ಅಂಗೀಕರಿಸಲಾಯಿತು. ಇದು ಕೇವಲ **'ಸಂವಾದ'ದಿಂದ ಪ್ರಾಯೋಗಿಕ 'ಅನುಷ್ಠಾನ'ದ** ಹಂತಕ್ಕೆ ಸಾಗುವ ಧ್ಯೇಯವನ್ನು ಹೊಂದಿದೆ.

## 17. ಭಾರತದ ಹೊಸ ಕಾರು ಮೌಲ್ಯಮಾಪನ ಕಾರ್ಯಕ್ರಮ (Bharat NCAP)

### ಇದೀಗ ಸುದ್ದಿಯಲ್ಲಿದೆ:

- **ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು** (MoRTH), 'ಭಾರತ ನೂತನ ಕಾರು ಮೌಲ್ಯಮಾಪನ ಕಾರ್ಯಕ್ರಮ ' 2.0 ನ (Bharat NCAP 2.0) ಪರಿಷ್ಕೃತ ಕರಡನ್ನು ಪ್ರಕಟಿಸಿದೆ.

### ಭಾರತ ನೂತನ (ಹೊಸ) ಕಾರು ಮೌಲ್ಯಮಾಪನ ಕಾರ್ಯಕ್ರಮದ ಬಗ್ಗೆ:

- ಈ ಯೋಜನೆಯನ್ನು **2023ರ ಅಕ್ಟೋಬರ್‌ನಲ್ಲಿ** ಜಾರಿಗೆ ತರಲಾಯಿತು.
- **ಉದ್ದೇಶ:** ವಾಹನಗಳ ಅಪಘಾತ ತಡೆ ಪರೀಕ್ಷೆ ('ಕ್ರ್ಯಾಶ್ ಟೆಸ್ಟಿಂಗ್') ಮತ್ತು ಮೌಲ್ಯಮಾಪನ ಮಾನದಂಡಗಳನ್ನು ಆಧರಿಸಿ, **ವಾಹನಗಳಿಗೆ ಸುರಕ್ಷತಾ ಮೌಲ್ಯಾಂಕಗಳನ್ನು** ನೀಡುವುದು ಇದರ ಪ್ರಮುಖ ಉದ್ದೇಶವಾಗಿದೆ.
- ಪ್ರಕ್ರಿಯೆ: ವಾಹನ ತಯಾರಕರು ಅಥವಾ ಆಮದುದಾರರು ತಮ್ಮ ವಾಹನಗಳನ್ನು **ವಾಹನ ಉದ್ಯಮದ ಮಾನದಂಡಗಳ ಅನ್ವಯ ಪರೀಕ್ಷೆಗೆ ಒಳಪಡಿಸಲು ಅಗತ್ಯವಿರುವ ವಿವರವಾದ ಕಾರ್ಯವಿಧಾನವನ್ನು ಇದು ರೂಪಿಸಿದೆ.**
- ನಿಯೋಜಿತ ಸಂಸ್ಥೆ: ಭಾರತ್ NCAP ರೇಟಿಂಗ್‌ಗಳನ್ನು ನೀಡಲು **ಪುಣೆಯಲ್ಲಿರುವ 'ಕೇಂದ್ರ ರಸ್ತೆ ಸಾರಿಗೆ ಸಂಸ್ಥೆ'ಯನ್ನು (CIRT)** ಅಧಿಕೃತ ಸಂಸ್ಥೆಯನ್ನಾಗಿ ನಿಯೋಜಿಸಲಾಗಿದೆ.

## 18. ಆಫ್ರಿಕಾದ ಬೂದು ಗಿಳಿ




### ಇದೀಗ ಸುದ್ದಿಯಲ್ಲಿದೆ:

- ದೇಶದ ಮಾರುಕಟ್ಟೆಗಳಲ್ಲಿ ಆಫ್ರಿಕಾದ ಬೂದು ಗಿಳಿಗಳು ವ್ಯಾಪಕವಾಗಿ ಲಭ್ಯವಿದ್ದರೂ ಕೂಡ, ಇವುಗಳಿಗೆ ಸಂಬಂಧಿಸಿದಂತೆ ಅಧಿಕೃತವಾಗಿ ನೋಂದಾಯಿತ ತಳಿಗಾರರು ಅಥವಾ ಅಧಿಕೃತ ಸಾಕುಪ್ರಾಣಿ ಮಾರಾಟ ಮಳಿಗೆಗಳು ಭಾರತದಲ್ಲಿ ಅಸ್ತಿತ್ವದಲ್ಲಿಲ್ಲ ಎಂದು ರಾಜ್ಯ ಅರಣ್ಯ ಇಲಾಖೆಗಳು ಸ್ಪಷ್ಟಪಡಿಸಿವೆ.

### 'ಆಫ್ರಿಕಾದ ಬೂದು ಗಿಳಿ' ಯ ಬಗ್ಗೆ:

- ವೈಜ್ಞಾನಿಕ ಹೆಸರು:- **ಸಿಟ್ಟಾಕಸ್ ಎರಿಥಾಕಸ್** (Psittacus erithacus). ಇದು **ಮಧ್ಯಮ ಗಾತ್ರದ** ಹಾಗೂ **ಅತ್ಯಂತ ಬುದ್ಧಿವಂತ** ಗಿಳಿ ಪ್ರಭೇದವಾಗಿದೆ.
- ಇದನ್ನು ಸಾಮಾನ್ಯವಾಗಿ **"ಪಕ್ಷಿ ಸಂಕುಲದ ಐನ್‌ಸ್ಟೀನ್‌ಗಳು"** ಎಂದು ಪರಿಗಣಿಸಲಾಗುತ್ತದೆ.
- ಮೂಲ ಆವಾಸಸ್ಥಾನ:- ಇದು **ಪಶ್ಚಿಮ ಮತ್ತು ಮಧ್ಯ ಆಫ್ರಿಕಾಕ್ಕೆ** ಸ್ಥಳೀಯವಾಗಿದ್ದು, ಪ್ರಮುಖವಾಗಿ **ಸವನ್ನಾ** (ಹುಲ್ಲುಗಾವಲು) ಪ್ರದೇಶಗಳು ಮತ್ತು ಕರಾವಳಿ **ಮ್ಯಾಂಗ್ರೋವ್‌ಗಳಲ್ಲಿ** ಕಂಡುಬರುತ್ತದೆ.
- ಇದರಲ್ಲಿ **ಎರಡು ಪ್ರಮುಖ ಉಪ-ಪ್ರಭೇದಗಳಿವೆ:-**
    1. **ಕಾಂಗೋ ಆಫ್ರಿಕಾದ ಬೂದು (CAG) ಗಿಳಿ:** ಇದು ತನ್ನ ಪ್ರಕಾಶಮಾನವಾದ **ಕೆಂಪು ಬಾಲಕ್ಕೆ** ಹೆಸರುವಾಸಿಯಾಗಿದೆ.
    2. **ಟಿಮ್ನೆ ಆಫ್ರಿಕಾದ ಬೂದು (CAG) ಗಿಳಿ:** ಇದು ಗಾಢವಾದ **ಕಡುಗೆಂಪು ಮಿಶ್ರಣ** ಬಣ್ಣದ ಬಾಲವನ್ನು ಹೊಂದಿರುತ್ತದೆ.
- **ವಿಶಿಷ್ಟತೆ -** ಆಫ್ರಿಕಾದ ಬೂದು ಗಿಳಿಗಳು ತಮ್ಮ ಅಸಾಧಾರಣ ಮಾತುಗಾರಿಕೆ ಮತ್ತು ಗ್ರಹಿಕೆ ಸಾಮರ್ಥ್ಯಗಳಿಗೆ ಪ್ರಖ್ಯಾತವಾಗಿವೆ. ಇವು ದೊಡ್ಡ ಶಬ್ದಕೋಶವನ್ನು ನೆನಪಿನಲ್ಲಿಟ್ಟುಕೊಳ್ಳುವ ಮತ್ತು ಸಂದರ್ಭಕ್ಕೆ ತಕ್ಕಂತೆ ಮಾತನಾಡುವ ಸಾಮರ್ಥ್ಯವನ್ನು ಹೊಂದಿವೆ.
- IUCN ಕೆಂಪುಪಟ್ಟಿಯಲ್ಲಿಸ್ಥಾನ:-ಇದನ್ನು **"ಅಳಿವಿನಂಚಿನಲ್ಲಿರುವ (EN)"** ಪ್ರಭೇದ ಎಂದು ವರ್ಗೀಕರಿಸಲಾಗಿದೆ.

## 19.ಸೆಮೆರು ಪರ್ವತ (Mount Semeru)




### ಇದೀಗ ಸುದ್ದಿಯಲ್ಲಿದೆ:

- **ಇಂಡೋನೇಷ್ಯಾದ ಪೂರ್ವ ಜಾವಾದಲ್ಲಿ** ನೆಲೆಗೊಂಡಿರುವ ಸೆಮೆರು ಪರ್ವತದ ಜ್ವಾಲಾಮುಖಿಯು ಇತ್ತೀಚೆಗೆ ಸ್ಫೋಟಗೊಂಡಿದೆ.

### ಇಂಡೋನೇಷ್ಯಾ ಜ್ವಾಲಾಮುಖಿ ಸ್ಫೋಟಗಳಿಗೆ ಹೆಚ್ಚು ತುತ್ತಾಗಲು ಕಾರಣಗಳು:

- **ಇಂಡೋ-ಆಸ್ಟ್ರೇಲಿಯನ್ ಭೂಫಲಕವು ಯುರೇಷಿಯನ್ ಭೂಫಲಕದ ಅಡಿಯಲ್ಲಿ ಕುಸಿಯುವ 'ಒಮ್ಮುಖ ಭೂಫಲಕ ಗಡಿ'ಯ** ಮೇಲೆ ಇಂಡೋನೇಷ್ಯಾ ನೆಲೆಗೊಂಡಿದೆ.
- ಈ ಪ್ರಕ್ರಿಯೆಯು ಜಾವಾ, ಸುಮಾತ್ರಾ ಮತ್ತು ಸುಂಡಾ ದ್ವೀಪದುದ್ದಕ್ಕೂ **ಸ್ತರ ಜ್ವಾಲಾಮುಖಿಗಳ ಸರಪಳಿಯನ್ನು** ಸೃಷ್ಟಿಸುತ್ತದೆ.
- ಇದು **ಪೆಸಿಫಿಕ್ ನ 'ಅಗ್ನಿ ವರ್ತುಲ'ದ (Ring of Fire)** ಹೃದಯಭಾಗದಲ್ಲಿದೆ. ವಿಶ್ವದ **ಶೇಕಡಾ 75 ರಷ್ಟು ಜ್ವಾಲಾಮುಖಿಗಳು ಮತ್ತು ಶೇಕಡಾ 90 ರಷ್ಟು ಭೂಕಂಪಗಳು** ಈ ವಲಯದಲ್ಲೇ ಸಂಭವಿಸುತ್ತವೆ.

## 20. ಭಾರತೀಯ ಭೂವೈಜ್ಞಾನಿಕ ಸಮೀಕ್ಷಾ ಸಂಸ್ಥೆ (GSI)

### ಇದೀಗ ಸುದ್ದಿಯಲ್ಲಿದೆ:

- ಭಾರತೀಯ ಭೂವೈಜ್ಞಾನಿಕ ಸಮೀಕ್ಷಾ ಸಂಸ್ಥೆಯ (GSI) **175ನೇ ಸ್ಥಾಪನಾ ವರ್ಷದ** ಆಚರಣೆಯ ಭಾಗವಾಗಿ, ಕೇಂದ್ರ ಕಲ್ಲಿದ್ದಲು ಮತ್ತು ಗಣಿ ಸಚಿವರು **"ಭೂತಕಾಲದ ಶೋಧನೆ, ಭವಿಷ್ಯದ ರೂಪಿಸುವಿಕೆ: GSI ನ 175 ವರ್ಷಗಳು"** ಎಂಬ ಶೀರ್ಷಿಕೆಯ ಅಂತರರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿದರು.

### ಭಾರತೀಯ ಭೂವೈಜ್ಞಾನಿಕ ಸಮೀಕ್ಷಾ ಸಂಸ್ಥೆ (GSI) ಯ ಬಗ್ಗೆ:

- ಈ ಸಂಸ್ಥೆಯು ಭಾರತದ ಅಗ್ರಗಣ್ಯ **ರಾಷ್ಟ್ರೀಯ ಭೂವೈಜ್ಞಾನಿಕ ಸಂಸ್ಥೆಯಾಗಿದೆ.**
- ಕಾರ್ಯನಿರ್ವಹಣೆ:- ಇದು **ಕೇಂದ್ರ ಗಣಿ ಸಚಿವಾಲಯದ** ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ.
- ಸ್ಥಾಪನೆ:- ಈ ಸಂಸ್ಥೆಯನ್ನು **1851 ರಲ್ಲಿ ಸರ್ ಥಾಮಸ್**

**ಓಲ್ಡ್‌ಹ್ಯಾಮ್** ಅವರು ಸ್ಥಾಪಿಸಿದರು.

- **ಜಾನ್ ಮೆಕ್ಲೆಲ್ಲ್ಯಾಂಡ್** ಅವರ ನೇತೃತ್ವದಲ್ಲಿ ನಡೆದ ಕಲ್ಲಿದ್ದಲು ಅನ್ವೇಷಣೆಯ ಸಂದರ್ಭದಲ್ಲಿ, **1848 ರಲ್ಲಿ** ಮೊದಲ ಬಾರಿಗೆ **"ಜಿಯೋಲಾಜಿಕಲ್ ಸರ್ವೆ ಆಫ್ ಇಂಡಿಯಾ"** ಎಂಬ ಪದವನ್ನು ಬಳಸಲಾಯಿತು.

### ಪ್ರಮುಖ ಕಾರ್ಯಗಳು:

- **ಭೂವೈಜ್ಞಾನಿಕ ನಕ್ಷೆ ಮತ್ತು ಸಮೀಕ್ಷೆಗಳು:-** ಭೂ, ವಾಯುಗಾಮಿ ಮತ್ತು ಸಾಗರ ಸಮೀಕ್ಷೆಗಳನ್ನು ಒಳಗೊಂಡಂತೆ, ಮೇಲ್ಮೈ ಹಾಗೂ ಉಪ-ಮೇಲ್ಮೈ ಭೂವಿಜ್ಞಾನದ ಸಮಗ್ರ ನಕ್ಷೆಗಳನ್ನು ತಯಾರಿಸುವುದು ಮತ್ತು ನಿರ್ವಹಿಸುವುದು.
- **ಖನಿಜ ಅನ್ವೇಷಣೆ :** ಖನಿಜ, ಇಂಧನ (ಕಲ್ಲಿದ್ದಲು, ತೈಲ ಸೇರಿದಂತೆ) ಮತ್ತು ಜಲ ಸಂಪನ್ಮೂಲಗಳ ವೈಜ್ಞಾನಿಕ ಅನ್ವೇಷಣೆ ಹಾಗೂ ಮೌಲ್ಯಮಾಪನ ಮಾಡುವುದು.
- **ಭೂವೈಪರೀತ್ಯ ಅಧ್ಯಯನಗಳು:-** ಭೂಕಂಪನ-ಭೂರಚನಾ ಸಂಶೋಧನೆ, ಹಿಮನದಿ ಶಾಸ್ತ್ರ, ಹವಾಮಾನ ಸಂಬಂಧಿತ ಭೂ-ಅಧ್ಯಯನಗಳು ಮತ್ತು ವಿಪತ್ತು ಅಪಾಯದ ವಿಶ್ಲೇಷಣೆಯನ್ನು ನಡೆಸುವುದು.
- **ಭೂತಾಂತ್ರಿಕ ಮತ್ತು ಭೂಪರಿಸರೀಯ ಅಧ್ಯಯನಗಳು :** ಮೂಲಸೌಕರ್ಯ ಯೋಜನೆ, ಅಂತರ್ಜಲ ಅಧ್ಯಯನಗಳು, ಭೂಸ್ಥಿರತೆ ವಿಶ್ಲೇಷಣೆ ಮತ್ತು ಪರಿಸರ ಮೌಲ್ಯಮಾಪನಗಳಿಗೆ ಉತ್ತೇಜನ ನೀಡುವುದು.

## 21. ಸಾಲುಮರದ ತಿಮ್ಮಕ್ಕ



### ಇದೀಗ ಸುದ್ದಿಯಲ್ಲಿ:

- ನಾಡಿನ ಹಿರಿಯ ಚೇತನ, **'ಪದ್ಮಶ್ರೀ' ಪುರಸ್ಕೃತೆ** ಸಾಲುಮರದ ತಿಮ್ಮಕ್ಕ ಅವರ ಅಗಲುವಿಕೆಗೆ ಇಡೀ ಭಾರತವೇ ಕಂಬನಿ ಮಿಡಿದಿದೆ.
- ಇವರು ಕೇವಲ ಒಬ್ಬ ಪರಿಸರವಾದಿ ಮಾತ್ರವಲ್ಲ, ಬದಲಾಗಿ ಜಾಗತಿಕ ಮಟ್ಟದಲ್ಲಿ ತಳಮಟ್ಟದ ಅರಣ್ಯೀಕರಣದ ಅಪ್ರತಿಮ ಸಂಕೇತವಾಗಿದ್ದರು.

### ಸಾಲುಮರದ ತಿಮ್ಮಕ್ಕ ಅವರ ಕುರಿತು:

- ಹಿನ್ನೆಲೆ: **ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನಲ್ಲಿ** ಜನಿಸಿದ ತಿಮ್ಮಕ್ಕ ಅವರು, ವಿವಾಹದ ನಂತರ ಹುಲಿಕಲ್ ಗ್ರಾಮದಲ್ಲಿ ನೆಲೆಸಿದರು.
- **ಕಾಯಕದ ಆರಂಭ:** 1950 ರ ದಶಕದ ಆರಂಭದಲ್ಲಿ, ತಿಮ್ಮಕ್ಕ ಮತ್ತು ಅವರ ಪತಿ **ಬಿಕ್ಕಲ ಚಿಕ್ಕಯ್ಯ** ಅವರು ನಿಸ್ವಾರ್ಥ ಪರಿಸರ ಸೇವೆಯನ್ನು ಆರಂಭಿಸಿದರು.
- ದಂಪತಿಗಳು ಪ್ರತಿದಿನ ಮೈಲುಗಟ್ಟಲೆ ದೂರದಿಂದ ನೀರನ್ನು ಹೊತ್ತು ತಂದು ಸಸಿಗಳಿಗೆ ಎರೆಯುತ್ತಿದ್ದರು. ಮೇಯುವ ಜಾನುವಾರುಗಳಿಂದ ಎಳೆಯ ಸಸಿಗಳನ್ನು ರಕ್ಷಿಸಲು ಮುಳ್ಳಿನ ಕೊಂಬೆಗಳನ್ನು ಬಳಸಿ ಬೇಲಿ ಹಾಕುತ್ತಿದ್ದರು.
- **ವೈಜ್ಞಾನಿಕ ಅರಿವು:** ಮರಗಳು ಬದುಕಿ ಉಳಿಯುವ ಸಾಧ್ಯತೆಯನ್ನು ಹೆಚ್ಚಿಸಲು, ಅವರು ಪ್ರಮುಖವಾಗಿ **'ಮುಂಗಾರು'** ಋತುಗಳಲ್ಲಿ ಸಸಿಗಳನ್ನು ನೆಡುವ ಪದ್ಧತಿಯನ್ನು ರೂಢಿಸಿಕೊಂಡಿದ್ದರು.
- **ಸ್ಫೂರ್ತಿಯ ಸೆಲೆ:** ಅವರ ಪರಿಸರ ಕಾಳಜಿಯ ಪರಂಪರೆಯು **ಕರ್ನಾಟಕದ ಅರಣ್ಯೀಕರಣ ನೀತಿಗಳ** ಮೇಲೆ ಪ್ರಭಾವ ಬೀರಿದೆ. ಅಷ್ಟೇ ಅಲ್ಲದೆ, ಭಾರತದಾದ್ಯಂತ ಹಲವಾರು ಗಿಡ ನೆಡುವ ಚಳವಳಿಗಳಿಗೆ ಅವರು ಪ್ರೇರಣೆಯಾಗಿದ್ದಾರೆ.
- **2019 ರ ಐತಿಹಾಸಿಕ ರಕ್ಷಣೆ:** ಅಭಿವೃದ್ಧಿಯ ಹೆಸರಿನಲ್ಲಿ ಮರಗಳ ನಾಶವನ್ನು ಅವರು ಬಲವಾಗಿ ವಿರೋಧಿಸಿದ್ದರು. 2019 ರಲ್ಲಿ ರಸ್ತೆ ಅಗಲೀಕರಣ ಯೋಜನೆಯ ಸಂದರ್ಭದಲ್ಲಿ, ತಾವು ಮಕ್ಕಳಂತೆ ಸಲುಹಿದ್ದ **385 ಮರಗಳು** ಕಡಿಯಲ್ಪಡುವ ಭೀತಿ ಎದುರಾಯಿತು. ಆಗ ಅವರು ನೇರವಾಗಿ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಿ, ಆ ಮರಗಳನ್ನು ಉಳಿಸುವಲ್ಲಿ ಯಶಸ್ವಿಯಾದರು.

### ಪರಿಸರಕ್ಕಾದ ಲಾಭ ಮತ್ತು ಪರಿಣಾಮ:

ಅವರ ದಶಕಗಳ ದಣಿವರಿಯದ ಪ್ರಯತ್ನಗಳು ಇಂದು ಬೃಹತ್ ಹೆಮ್ಮರಗಳಾಗಿ ಬೆಳೆದು ನಿಂತಿವೆ.

1. **ಹಸಿರು ಪಥ :** ಅವರ ಶ್ರಮವು ಒಂದು ವಿಶಾಲವಾದ ಹಸಿರು ಪಥದ ನಿರ್ಮಾಣಕ್ಕೆ ಕಾರಣವಾಗಿದೆ.
2. **ಜೀವವೈವಿಧ್ಯದ ರಕ್ಷಣೆ:** ಈ ಮರಗಳು ಪ್ರಯಾಣಿಕರಿಗೆ ತಂಪಾದ ನೆರಳು ನೀಡುತ್ತಿವೆ ಮತ್ತು ಅಸಂಖ್ಯಾತ ಪಕ್ಷಿಸಂಕುಲಕ್ಕೆ ಆಶ್ರಯ ತಾಣವಾಗಿವೆ.
3. **ವಾಯುಗುಣ ನಿಯಂತ್ರಣ:** ಈ ಮರಗಳು ಆ ಪ್ರದೇಶದ **'ಸೂಕ್ಷ್ಮ ವಾಯುಗುಣವನ್ನು'** ನಿಯಂತ್ರಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ.
4. **ಮಾದರಿ ಕಾರ್ಯ:** ಇದು ಸಮುದಾಯ ನೇತೃತ್ವದ ಅರಣ್ಯೀಕರಣಕ್ಕೆ ಒಂದು ಅತ್ಯುತ್ತಮ ಉದಾಹರಣೆಯಾಗಿದೆ.

## 22. ಸರ್ವೋಚ್ಚ ನ್ಯಾಯಾಲಯವು ಹುಲಿಯ ಮೂಲ ವಾಸಸ್ಥಳಗಳಲ್ಲಿ ಹುಲಿ ಸಫಾರಿ ನಡೆಸುವುದನ್ನು ನಿಷೇಧಿಸಿದೆ

### ಇದೀಗ ಸುದ್ಧಿಯಲ್ಲಿದೆ.

- ಸರ್ವೋಚ್ಚ ನ್ಯಾಯಾಲಯವು ಮೂಲ ಅಥವಾ ನಿರ್ಣಾಯಕ ಹುಲಿ ಆವಾಸಸ್ಥಾನಗಳಲ್ಲಿ ಹುಲಿ ಸಫಾರಿ ನಡೆಸುವುದನ್ನು ನಿಷೇಧಿಸಲು ನಿರ್ದೇಶನಗಳನ್ನು ನೀಡಿದೆ.

### ಪರಿಸರ ಸೂಕ್ಷ್ಮ ವಲಯಗಳ ಬಗ್ಗೆ:

- **ಅಧಿಸೂಚನೆ:** ಪರಿಸರ ಸೂಕ್ಷ್ಮ ವಲಯಗಳನ್ನು **ಪರಿಸರ (ಸಂರಕ್ಷಣಾ) ಕಾಯ್ದೆ, 1986** ರ ಅಡಿಯಲ್ಲಿ **ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು** ಅಧಿಸೂಚನೆ ಹೊರಡಿಸುತ್ತದೆ.
- ವ್ಯಾಖ್ಯಾನ: **ರಾಷ್ಟ್ರೀಯ ಉದ್ಯಾನವನ ಮತ್ತು ವನ್ಯಜೀವಿ ಅಭಯಾರಣ್ಯಗಳ ಗಡಿಯಿಂದ 10 ಕಿ.ಮೀ ವ್ಯಾಪ್ತಿಯಲ್ಲಿರುವ ಭೂಮಿಯನ್ನು** ಪರಿಸರ ದುರ್ಬಲ ವಲಯಗಳು ಅಥವಾ ಪರಿಸರ ಸೂಕ್ಷ್ಮ ವಲಯಗಳು ಎಂದು ಅಧಿಸೂಚನೆ ಹೊರಡಿಸಲಾಗುತ್ತದೆ.

### ಪರಿಸರ ಸೂಕ್ಷ್ಮ ವಲಯಗಳಲ್ಲಿನ (ESZs) ಚಟುವಟಿಕೆಗಳು:

- ನಿಷೇಧಿತ ಚಟುವಟಿಕೆಗಳು: **ವಾಣಿಜ್ಯ ಗಣಿಗಾರಿಕೆ, ಗರಗಸದ ಕಾರ್ಖಾನೆಗಳು, ಮಾಲಿನ್ಯವನ್ನು (ವಾಯು, ಜಲ, ಮಣ್ಣು, ಶಬ್ದ ಇತ್ಯಾದಿ) ಉಂಟುಮಾಡುವ ಕೈಗಾರಿಕೆಗಳು, ಪ್ರಮುಖ ಜಲವಿದ್ಯುತ್ ಯೋಜನೆಗಳ ಸ್ಥಾಪನೆ, ಮರದ ವಾಣಿಜ್ಯ ಬಳಕೆ** ಇತ್ಯಾದಿ.
- **ನಿಯಂತ್ರಿತ ಚಟುವಟಿಕೆಗಳು :** ಮರಗಳನ್ನು ಕಡಿಯುವುದು, ಹೋಟೆಲ್‌ಗಳು ಮತ್ತು ರೆಸಾರ್ಟ್‌ಗಳ ಸ್ಥಾಪನೆ, ನೈಸರ್ಗಿಕ ನೀರಿನ ವಾಣಿಜ್ಯ ಬಳಕೆ, ವಿದ್ಯುತ್ ಕೇಬಲ್‌ಗಳನ್ನು ಅಳವಡಿಸುವುದು, ಕೃಷಿ ಪದ್ಧತಿಯಲ್ಲಿನ ತೀವ್ರ ಬದಲಾವಣೆ ಇತ್ಯಾದಿ.
- **ಅನುಮತಿ ನೀಡಿದ ಚಟುವಟಿಕೆಗಳು :** ಪ್ರಸ್ತುತ ನಡೆಯುತ್ತಿರುವ **ಕೃಷಿ ಅಥವಾ ತೋಟಗಾರಿಕೆ ಪದ್ಧತಿಗಳು, ಮಳೆನೀರು ಕೊಯ್ಲು, ಸಾವಯವ ಕೃಷಿ** ಇತ್ಯಾದಿ.

## 23. ರೀಸೆಸ್ ಮಂಗಗಳು (ರೀಸೆಸ್ ಮಕಾಕ್)



### ಇದೀಗ ಸುದ್ದಿಯಲ್ಲಿದೆ:

- **ರಾಷ್ಟ್ರೀಯ ವನ್ಯಜೀವಿ ಮಂಡಳಿಯು, ವನ್ಯಜೀವಿ (ಸಂರಕ್ಷಣಾ) ಕಾಯಿದೆ, 1972** ರ ಅನುಸೂಚಿ II ರ ಅಡಿಯಲ್ಲಿ ರೀಸೆಸ್ ಮಂಗಗಳನ್ನು ಮರುಸೇರ್ಪಡೆಗೊಳಿಸಲು ಶಿಫಾರಸು ಮಾಡಿದೆ.

### ರೀಸೆಸ್ ಮಕಾಕ್ (ಮಕಾಕಾ ಮುಲಟ್ಟಾ) ಗಳ ಬಗ್ಗೆ:

- ಆವಾಸಸ್ಥಾನ: ಇದು **ಹಗಲು ಹೊತ್ತಿನಲ್ಲಿ ಸಕ್ರಿಯವಾಗಿರುವ ಸರ್ವಭಕ್ಷಕ** ಪ್ರಭೇದವಾಗಿದ್ದು, **ಮರಗಳು ಮತ್ತು ನೆಲದ ಮೇಲೆ** ಎರಡೂ ಕಡೆ ವಾಸಿಸುತ್ತದೆ. ಇದು **ಶಂಕುವೃಕ್ಷದ ಕಾಡುಗಳು (ಕೊನಿಫೆರಸ್), ಎಲೆ ಉದುರುವ ಕಾಡುಗಳು, ಬಿದಿರು ಮತ್ತು ಮಿಶ್ರ ಕಾಡುಗಳಿಂದ ಹಿಡಿದು ಮ್ಯಾಂಗ್ರೋವ್‌ಗಳು (ಜೌಗು ಕಾಡುಗಳು), ಕುರುಚಲು ಕಾಡುಗಳು , ಮಳೆಕಾಡುಗಳು ಮತ್ತು ಮಾನವ ವಸತಿ ಪ್ರದೇಶಗಳ** ಸಮೀಪವಿರುವ ಪ್ರದೇಶಗಳವರೆಗೆ ವಿಶಾಲವಾದ ಆವಾಸಸ್ಥಾನಗಳಲ್ಲಿ ಜೀವಿಸುತ್ತದೆ.
- **ಹಂಚಿಕೆ :** ಇದು **ದಕ್ಷಿಣ ಏಷ್ಯಾದ ಬಹುತೇಕ ಭಾಗಗಳಲ್ಲಿ,** ಪೂರ್ವ ಅಫ್ಘಾನಿಸ್ತಾನ, ಬಾಂಗ್ಲಾದೇಶ, ಭೂತಾನ್, ಚೀನಾ ಮತ್ತು ಭಾರತದಲ್ಲಿ ಕಂಡುಬರುತ್ತದೆ.
- **ಪರಿಸರ ಪಾತ್ರಗಳು:** ಇವು ಪ್ರಮುಖ **ಬೀಜ ಪ್ರಸಾರಕಗಳಾಗಿವೆ. ಅರಣ್ಯ ಪುನರುತ್ಪಾದನೆ ಮತ್ತು ಜೀವವೈವಿಧ್ಯಕ್ಕೆ ಸಹಾಯ** ಮಾಡುತ್ತವೆ. ಆದುದರಿಂದ ಜೀವಿ ಪರಿಸರದ ಸಮತೋಲನ ಮತ್ತು ಸುಸ್ಥಿರ ಸಹಬಾಳ್ವೆಗೆ ಇವುಗಳ ರಕ್ಷಣೆ ಅತ್ಯಗತ್ಯವಾಗಿದೆ.
- **ಬೆದರಿಕೆಗಳು:** ಇವುಗಳಿಗೆ ಸಾಮಾನ್ಯವಾಗಿ ಯಾವುದೇ ಬೆದರಿಕೆಯಿಲ್ಲದಿದ್ದರೂ, ಅಭಿವೃದ್ಧಿಯ ಕಾರಣದಿಂದಾಗಿ ಇವುಗಳ ಮೂಲ ಆವಾಸಸ್ಥಾನವು ಹೆಚ್ಚು ನಶಿಸುತ್ತಿದೆ.
- **ಸಂರಕ್ಷಣಾ ಸ್ಥಾನಮಾನ:**
  - ಐಯುಸಿಎನ್ ನ ಕೆಂಪು ಪಟ್ಟಿಯಲ್ಲಿ **'ಕನಿಷ್ಠ ಕಾಳಜಿ'** ಎಂದು ಪಟ್ಟಿ ಮಾಡಲಾಗಿದೆ.
  - ಇದನ್ನು **CITES** ನ **'ಅನುಬಂಧ II'** ರಲ್ಲಿ ಪಟ್ಟಿ ಮಾಡಲಾಗಿದೆ.

# ವಿಜ್ಞಾನ ಮತ್ತು ತಂತ್ರಜ್ಞಾನ

## 1. ರೂಮೇಟಾಯ್ಡ್ ಸಂಧಿವಾತ



### ಸಂದರ್ಭ:

- ಸಂಶೋಧಕರು ರೂಮೇಟಾಯ್ಡ್ ಸಂಧಿವಾತದ ಗುಪ್ತ ಪೂರ್ವ ವೈದ್ಯಕೀಯ ವಿಕಾಸವನ್ನು ನಕ್ಷೆ ಮಾಡಿದ ಹೊಸ ಅಧ್ಯಯನ.

### ರೂಮೇಟಾಯ್ಡ್ ಸಂಧಿವಾತ (RA) ದ ಬಗ್ಗೆ:

- ಇದು **ದೀರ್ಘಕಾಲದ ಸ್ವಯಂ ನಿರೋಧಕ** ರೋಗವಾಗಿದ್ದು, ಇದರಲ್ಲಿ **ಪ್ರತಿರಕ್ಷಣಾ ವ್ಯವಸ್ಥೆಯು ಕೀಲುಗಳ ಮೇಲೆ** ತಪ್ಪಾಗಿ ದಾಳಿ ಮಾಡುತ್ತದೆ.
- **ವಯಸ್ಸು ಮತ್ತು ಲಿಂಗ ಮಾದರಿ:-** ಇದು ಸಾಮಾನ್ಯವಾಗಿ **30–60 ವರ್ಷ** ವಯಸ್ಸಿನ ವ್ಯಕ್ತಿಗಳ ಮೇಲೆ ಪರಿಣಾಮ ಬೀರುತ್ತದೆ. ಪುರುಷರಿಗಿಂತ **ಮಹಿಳೆಯರು ಈ ರೋಗಕ್ಕೆ ತುತ್ತಾಗುವ ಸಾಧ್ಯತೆ ಮೂರು ಪಟ್ಟು ಹೆಚ್ಚು.**
- **ಕಾರಣಗಳು ಮತ್ತು ಅಪಾಯಕಾರಿ ಅಂಶಗಳು:-** ನಿಖರವಾದ ಕಾರಣವಿರುವುದಿಲ್ಲ. ಸಂಭಾವ್ಯ ಕಾರಣಗಳಲ್ಲಿ **ಅನುವಂಶಿಕ ಅಂಶಗಳು, ಹಾರ್ಮೋನುಗಳು ಮತ್ತು ಧೂಮಪಾನ ಅಥವಾ ಕೆಲವು ಸೋಂಕುಗಳಂತಹ** ಪರಿಸರ ಪ್ರಚೋದಕಗಳು ಕಾರಣವಾಗುತ್ತವೆ.
- ವ್ಯವಸ್ಥಿತ ಸ್ವಭಾವ:- ಇದು **ವ್ಯವಸ್ಥಿತ ಕಾಯಿಲೆಯಾಗಿದ್ದು, ಕೀಲುಗಳು** ಮಾತ್ರವಲ್ಲದೆ **ಶ್ವಾಸಕೋಶಗಳು, ಹೃದಯ, ಕಣ್ಣುಗಳು, ಚರ್ಮ, ನರಗಳು ಮತ್ತು ರಕ್ತನಾಳಗಳ** ಮೇಲೂ ಪರಿಣಾಮ ಬೀರುತ್ತದೆ.
- ನಿರಂತರ ಉರಿಯೂತವು **ಹೃದ್ರೋಗದ ಅಪಾಯವನ್ನು ಹೆಚ್ಚಿಸುತ್ತದೆ ಮತ್ತು ಆಯಾಸ, ಜ್ವರ ಮತ್ತು ಖಿನ್ನತೆಗೆ** ಕಾರಣವಾಗುತ್ತದೆ.
- **ಚಿಕಿತ್ಸೆ ಮತ್ತು ನಿರ್ವಹಣೆ** : ಇದನ್ನು **ಗುಣಪಡಿಸಲು ಸಾಧ್ಯವಿಲ್ಲ**, ಆದರೆ **ಆರಂಭಿಕ ರೋಗನಿರ್ಣಯ ಮತ್ತು ಸಮಯೋಚಿತ ನಿರ್ವಹಣೆಯು,** ರೋಗಲಕ್ಷಣಗಳನ್ನು ಕಡಿಮೆ ಮಾಡಬಹುದು, ರೋಗದ ಪ್ರಗತಿಯನ್ನು ಕಡಿಮೆ ಮಾಡಬಹುದು ಮತ್ತು ದೀರ್ಘಕಾಲೀನ ಅಂಗವೈಕಲ್ಯವನ್ನು ತಡೆಯಬಹುದು.

## 2. ರೈಸಿನ್



### ಇದೀಗ ಸುದ್ದಿಯಲ್ಲಿದೆ:

- ಗುಜರಾತಿನ ಭಯೋತ್ಪಾದನಾ ನಿಗ್ರಹ ದಳ (ATS) ಭಯೋತ್ಪಾದಕ ಸಂಚನ್ನು ವಿಫಲಗೊಳಿಸಿದೆ ಮತ್ತು ಭಯೋತ್ಪಾದನೆಯೊಂದಿಗೆ ಸಂಪರ್ಕ ಹೊಂದಿರುವ ಶಂಕಿತ ವ್ಯಕ್ತಿಗಳನ್ನು ಬಂಧಿಸಿದೆ, ಅವರು ರಿಸಿನ್ ರಾಸಾಯನಿಕವನ್ನು ಉತ್ಪಾದಿಸಲು ಪ್ರಯತ್ನಿಸುತ್ತಿದ್ದರು ಎಂದು ವರದಿಯಾಗಿದೆ.

### ರಿಸಿನ್ ಬಗ್ಗೆ:

- ರಿಸಿನ್ ಎಂಬುದು **ಏರಂಡೆ ಬೀಜದ ಗಿಡ** (Ricinus communis) ದಿಂದ ಪಡೆಯುವ ಅತ್ಯಂತ **ವಿಷಕಾರಿ ಸಸಾರಜನಕ ಪದಾರ್ಥ (ಪ್ರೋಟೀನ್)** ವಾಗಿದೆ.
- ಇದು **ಜೀವಕೋಶಗಳಲ್ಲಿ ಸಸಾರಜನಕ ಪದಾರ್ಥಗಳ ಸಂಶ್ಲೇಷಣೆಯನ್ನು ನಿರ್ಬಂಧಿಸುತ್ತದೆ,** ಇದು **ಬಹು ಅಂಗಾಂಗ ವೈಫಲ್ಯ** ಮತ್ತು ಒಡ್ಡಿಕೊಂಡ ಕೆಲವೇ ಗಂಟೆಗಳಲ್ಲಿ **ಸಾವಿಗೆ ಕಾರಣವಾಗುತ್ತದೆ.**
- ಇದನ್ನು **ರಾಸಾಯನಿಕ ಶಸ್ತ್ರಾಸ್ತ್ರಗಳ ಸಮಾವೇಶದ (CWC) ಅನುಸೂಚಿ-1 ರ** ಅಡಿಯಲ್ಲಿ ಪಟ್ಟಿ ಮಾಡಲಾಗಿದೆ.
- **ರಿಸಿನ್ ವಿಷಕ್ಕೆ ಯಾವುದೇ ರಾಮಬಾಣವಿರುವುದಿಲ್ಲ.**

### ರಾಸಾಯನಿಕ ಶಸ್ತ್ರಾಸ್ತ್ರಗಳ ಸಮಾವೇಶದ ಬಗ್ಗೆ:

- ಕಾರ್ಯಾದೇಶ:- ಇದು **ರಾಸಾಯನಿಕ ಶಸ್ತ್ರಾಸ್ತ್ರಗಳು ಮತ್ತು ಅವುಗಳ ಮೂಲ ಪದಾರ್ಥಗಳನ್ನು ತಯಾರಿಸುವುದು, ದಾಸ್ತಾನು ಮತ್ತು ಬಳಕೆಯನ್ನು ನಿರ್ಮೂಲನೆ** ಮಾಡುವ ಗುರಿಯನ್ನು ಹೊಂದಿರುವ ಅಂತರರಾಷ್ಟ್ರೀಯ ಒಪ್ಪಂದವಾಗಿದೆ.
- ಅಂಗೀಕಾರ ಮತ್ತು ಜಾರಿ:- ಈ ಒಪ್ಪಂದವನ್ನು **ಸೆಪ್ಟೆಂಬರ್ 3, 1992** ರಂದು ಅಂಗೀಕರಿಸಲಾಯಿತು ಮತ್ತು **ಏಪ್ರಿಲ್ 29, 1997** ರಂದು ಜಾರಿಗೆ ಬಂದಿತು.
- ಸದಸ್ಯ ರಾಷ್ಟ್ರಗಳು:- ಪ್ರಸ್ತುತ 193 ಸದಸ್ಯ ರಾಷ್ಟ್ರಗಳನ್ನು ಹೊಂದಿದೆ.
- ಕಾನೂನಾತ್ಮಕವಾಗಿ ಬದ್ಧತೆ:- **ಹಳೆಯ ಮತ್ತು ತ್ಯಜಿಸಿದ ರಾಸಾಯನಿಕ ಶಸ್ತ್ರಾಸ್ತ್ರಗಳನ್ನು ನಾಶಗೊಳಿಸುವುದು ಕಡ್ಡಾಯವಾಗುತ್ತದೆ.**
- **ಭಾರತದ ಅನುಮೋದನೆ:-** ಭಾರತವು ಜನವರಿ 1993 ರಲ್ಲಿ ಒಪ್ಪಂದಕ್ಕೆ ಸಹಿ ಹಾಕಿತು.

### ಭಾರತದ ಪ್ರಯತ್ನಗಳು:

- **ರಾಷ್ಟ್ರೀಯ ರಾಸಾಯನಿಕ ಶಸ್ತ್ರಾಸ್ತ್ರಗಳ ಸಮಾವೇಶ ಪ್ರಾಧಿಕಾರ** (NACWC) ಭಾರತದಲ್ಲಿ ಸಮಾವೇಶವನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಹೊಂದಿರುವ ರಾಷ್ಟ್ರೀಯ ಪ್ರಾಧಿಕಾರವಾಗಿದೆ.

## 3. ಆದಿತ್ಯ–ಎಲ್ 1 ಮಿಷನ್

### ಇದೀಗ ಸುದ್ದಿಯಲ್ಲಿದೆ:

- ಭಾರತೀಯ ಖಗೋಳಭೌತಶಾಸ್ತ್ರ ಸಂಸ್ಥೆ ಮತ್ತು ನಾಸಾದ ವಿಜ್ಞಾನಿಗಳು, ಆದಿತ್ಯ–L1 ಉಪಗ್ರಹದಲ್ಲಿರುವ VELC ಪೇಲೋಡ್ ಅನ್ನು ಬಳಸಿ, ಸೂರ್ಯನ ಮೇಲ್ಮೈಗೆ ಹತ್ತಿರವಿರುವ, ಗೋಚರ ತರಂಗಾಂತರ ವ್ಯಾಪ್ತಿಯಲ್ಲಿ ಕೊರೋನಲ್ ಮಾಸ್

ಎಜೆಕ್ಷನ್ (CME) ಅನ್ನು ಮೊದಲ ಬಾರಿಗೆ **ಸ್ಪೆಕ್ಟ್ರೋಸ್ಕೋಪಿಕ್** ವೀಕ್ಷಣೆ ಮಾಡಿದ್ದಾರೆ.

### ಆದಿತ್ಯ-L1 ಮಿಷನ್ ನ ಬಗ್ಗೆ:

- ವಿಶಿಷ್ಟತೆ:- ಆದಿತ್ಯ-L1 **ಸೂರ್ಯನನ್ನು ಅಧ್ಯಯನ ಮಾಡುವ ಮೊದಲ ಭಾರತೀಯ ಬಾಹ್ಯಾಕಾಶ ವೀಕ್ಷಣಾಲಯವಾಗಿದೆ.** ಇದನ್ನು **PSLV-C57** ಉಡಾವಣೆ ಮಾಡುತ್ತದೆ.
- ಗಮನಿಸಿ:- ಈ ಸೌರ ಮಿಷನ್‌ನಲ್ಲಿ ಉಪಗ್ರಹವು ಸೂರ್ಯನತ್ತ ನೇರವಾಗಿ ಹೋಗುವುದಿಲ್ಲ; ಬದಲಿಗೆ **ಸೂರ್ಯಗ್ರಹಣ ಸಮಯದಲ್ಲೂ ಸೂರ್ಯವನ್ನು ವೀಕ್ಷಿಸಲು ಅನುಕೂಲವಾಗುವ ಬಿಂದುವಿನಲ್ಲಿ ಬಾಹ್ಯಾಕಾಶ ವೀಕ್ಷಣಾಲಯವನ್ನು ನಿರ್ಮಿಸುವುದು** ಇದರ ಉದ್ದೇಶ.
- ಈ ಬಾಹ್ಯಾಕಾಶ ನೌಕೆಯನ್ನು ಸೂರ್ಯ–ಭೂಮಿ ವ್ಯವಸ್ಥೆಯ **ಭೂಮಿಯಿಂದ ಸುಮಾರು 15 ಲಕ್ಷ ಕಿಲೋಮೀಟರ್ ದೂರದಲ್ಲಿರುವ ಲಾಗ್ರಾಂಜ್ ಪಾಯಿಂಟ್ 1 (L1) ಸುತ್ತಲಿನ ಹ್ಯಾಲೋ ಕಕ್ಷೆಯಲ್ಲಿ** ಸ್ಥಾಪಿಸಲು ಯೋಜಿಸಲಾಗಿದೆ.

### ಮಿಷನ್‌ನ ಪ್ರಮುಖ ಉದ್ದೇಶಗಳು:

- **ಸೂರ್ಯನ ಮೇಲಿನ ವಾತಾವರಣ (ಕ್ರೋಮೋಸ್ಫಿಯರ್ ಮತ್ತು ಕೊರೋನಾ) ದಲ್ಲಿ ನಡೆಯುವ ಚಲನ- ವಲನಗಳನ್ನು** ಅಧ್ಯಯನ ಮಾಡುವುದು.
- ಇದು ಸೌರ ಮಾರುತದ ಮೂಲ, ಸಂಯೋಜನೆ ಮತ್ತು ಚಲನಶೀಲತೆಯ ಜೊತೆಗೆ ಬಾಹ್ಯಾಕಾಶ ಹವಾಮಾನವನ್ನು ಯಾವುದು ಪ್ರೇರೇಪಿಸುತ್ತದೆ ಎಂಬುದನ್ನು ಸಹ ಗುರುತಿಸುತ್ತದೆ.

### ಸೂರ್ಯನನ್ನು ಅಧ್ಯಯನ ಮಾಡುವ ಇತರೆ ಮಿಷನ್‌ಗಳು:

- **ನಾಸಾದ ಪಾರ್ಕರ್ ಸೋಲಾರ್ ಪ್ರೋಬ್:-** 2018 ರಲ್ಲಿ ಉಡಾವಣೆ ಮಾಡಲಾಯಿತು. ಈಗಾಗಲೇ ತುಂಬಾ ಹತ್ತಿರಕ್ಕೆ ಹೋಗಿದೆ, ಆದರೆ ಅದು ಸೂರ್ಯನಿಂದ ದೂರದಲ್ಲಿರುವಂತೆ ಕಾಣುತ್ತದೆ.
- **ಹೆಲಿಯೊಸ್ 2 ಸೌರ ಪ್ರೋಬ್:-** 1976 ರಲ್ಲಿ ಸೂರ್ಯನ ಮೇಲ್ಮೈಯ ಸೌರ ಪ್ರಕ್ರಿಯೆಗಳನ್ನು ತನಿಖೆ ಮಾಡಲು **ನಾಸಾ ಮತ್ತು ಹಿಂದಿನ ಪಶ್ಚಿಮ ಜರ್ಮನಿಯ** ಬಾಹ್ಯಾಕಾಶ ಸಂಸ್ಥೆಯು ಜಂಟಿಯಾಗಿ ಪ್ರಾರಂಭಿಸಲಾಯಿತು.

## 4. ಗಗನಯಾನ ಮಿಷನ್



Vyommitra: India's First Spacefaring Robot


### ಇದೀಗ ಸುದ್ದಿಯಲ್ಲಿದೆ:

- **ಇಸ್ರೋ** ತನ್ನ ಮುಂಬರುವ **ಮಾನವ ಬಾಹ್ಯಾಕಾಶ ಹಾರಾಟ** ಮಿಷನ್ ಗಗನಯಾನಕ್ಕಾಗಿ ನಿರ್ಣಾಯಕ ಪ್ಯಾರಾಚೂಟ್ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿತು.
- ಇಸ್ರೋ ಮುಂದಿನ **ಮಾನವರಹಿತ** ಮೂರು ಉಡ್ಡಯನಗಳನ್ನು ಅರೆ -ಮಾನವರೂಪದ ರೋಬೋಟ್ **ವ್ಯೋಮಿತ್ರದೊಂದಿಗೆ** ನಡೆಸಲಿದ್ದು, **2027ರ ಆರಂಭದಲ್ಲಿ ಮಾನವ ಸಹಿತ** ಮಿಷನ್‌ನ್ನು ಗುರಿಯಾಗಿಸಿಕೊಂಡಿದೆ.

### ಗಗನಯಾನ ಮಿಷನ್ ನ ಬಗ್ಗೆ:

- ಡಿಸೆಂಬರ್ 2018 ರಲ್ಲಿ ಅನುಮೋದಿಸಲಾಗಿದೆ.
- ಹಣಕಾಸು ವೆಚ್ಚ - ₹20,193 ಕೋಟಿ.
- ವಿಶಿಷ್ಟತೆ - ಇದು **ಭಾರತದ ಮೊದಲ ಸ್ಥಳೀಯ ನಿರ್ಮಿತ ಮಾನವ ಬಾಹ್ಯಾಕಾಶ ಹಾರಾಟ** ಉಪಕ್ರಮವಾಗಿದೆ.
- ಉದ್ದೇಶ:- ಭಾರತದ **ಮಾನವ ಬಾಹ್ಯಾಕಾಶ ಪ್ರಯಾಣದ ಸಾಮರ್ಥ್ಯವನ್ನು** ಪ್ರದರ್ಶಿಸುವುದನ್ನು ಗುರಿಯಾಗಿಸಿದ್ದು, **ಸಿಬ್ಬಂದಿಯನ್ನು 400 ಕಿ.ಮೀ ಎತ್ತರದ ಭೂನಿಮ್ನ ಕಕ್ಷೆಗೆ ಮೂರು ದಿನಗಳ ಕಾಲ** ಕಳುಹಿಸಿ, ನಂತರ ಸುರಕ್ಷಿತವಾಗಿ ಹಿಂದಿರುಗಿಸಿ ಭಾರತದ ಜಲಸೀಮೆಯಲ್ಲಿ ಸಮುದ್ರದ ಮೇಲೆ ಇಳಿಸುವುದಾಗಿದೆ.
- ಉಡಾವಣಾ ವಾಹನ - **LVM3 ರಾಕೆಟ್**

## 5. ಸಂಶೋಧನೆ, ಅಭಿವೃದ್ಧಿ ಮತ್ತು ನಾವೀನ್ಯತೆ (RDI) ಯೋಜನಾ ನಿಧಿ




### ಇದೀಗ ಸುದ್ದಿಯಲ್ಲಿದೆ:

- ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ₹1 ಲಕ್ಷ ಕೋಟಿ ಮೊತ್ತದ 'ಸಂಶೋಧನೆ, ಅಭಿವೃದ್ಧಿ ಮತ್ತು ನಾವೀನ್ಯತೆ (RDI) ಯೋಜನಾ ನಿಧಿ'ಗೆ ಚಾಲನೆ ನೀಡಿದರು.

### ಸಂಶೋಧನೆ, ಅಭಿವೃದ್ಧಿ ಮತ್ತು ನಾವೀನ್ಯತೆ (RDI) ಯೋಜನಾ ನಿಧಿಯ ಬಗ್ಗೆ:

- ಹಣಕಾಸಿನ ಕಾಲಮಿತಿ: **6 ವರ್ಷಗಳು.**
- ಕಾರ್ಯ ನಿರ್ವಾಹಕ ಸಂಸ್ಥೆ: **ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ (DST).**
- ಉದ್ದೇಶ: **ಉದಯೋನ್ಮುಖ ಕ್ಷೇತ್ರಗಳಲ್ಲಿ ಸಂಶೋಧನೆ,**

**ಅಭಿವೃದ್ಧಿ ಮತ್ತು ನಾವೀನ್ಯತೆಯನ್ನು (RDI) ಹೆಚ್ಚಿಸಲು ಖಾಸಗಿ ವಲಯವನ್ನು ಪ್ರೋತ್ಸಾಹಿಸುವುದು** ಇದರ ಗುರಿಯಾಗಿದೆ.


### ಭಾರತದ ಸಂಶೋಧನೆ ಮತ್ತು ಅಭಿವೃದ್ಧಿ (R&D) ಯ ಒಂದು ಚಿತ್ರಣ:

- ಕಳೆದ ದಶಕದಲ್ಲಿ ಭಾರತದ ಸಂಶೋಧನೆ ಮತ್ತು ಅಭಿವೃದ್ಧಿ (R&D) **ವೆಚ್ಚವು ದ್ವಿಗುಣಗೊಂಡಿದೆ.** ಆದಾಗ್ಯೂ, ಇದು ಒಟ್ಟು ಆಂತರಿಕ ಉತ್ಪನ್ನದ (GDP) **ಶೇ. 0.7 ರಷ್ಟೇ ಉಳಿದಿದೆ. ಅಮೆರಿಕ (ಶೇ. 2.8) ಮತ್ತು ಚೀನಾ (ಶೇ. 2.4)** ದಂತಹ ಜಾಗತಿಕ ಪ್ರಮುಖ ರಾಷ್ಟ್ರಗಳಿಗೆ ಹೋಲಿಸಿದರೆ ಇದು ತೀರಾ ಕಡಿಮೆಯಾಗಿದೆ.

### ಸಂಶೋಧನೆ ಮತ್ತು ಅಭಿವೃದ್ಧಿಗೆ (R&D) ಉತ್ತೇಜನ ನೀಡಲು ಸರ್ಕಾರದ ಉಪಕ್ರಮಗಳು:

- **ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನ (NRF):** ಶೈಕ್ಷಣಿಕ ಕ್ಷೇತ್ರ ಮತ್ತು ಉದ್ಯಮದ ನಡುವೆ **ಸಂಶೋಧನಾ ಅನುದಾನ ಮತ್ತು ಸಹಯೋಗವನ್ನು** ಹೆಚ್ಚಿಸುವ ಗುರಿಯನ್ನು ಇದು ಹೊಂದಿದೆ.
- **ಅಟಲ್ ನಾವೀನ್ಯತೆ ಗುರಿ (AIM):** ಇದು ವಿದ್ಯಾರ್ಥಿಗಳು ಮತ್ತು ವೃತ್ತಿಪರರಲ್ಲಿ **ನವೋದ್ಯಮಗಳು, ಉದ್ಯಮಶೀಲತೆ ಮತ್ತು ನಾವೀನ್ಯತೆಯನ್ನು ಪ್ರೋತ್ಸಾಹಿಸುತ್ತದೆ.**
- **ಉತ್ಪಾದನೆ-ಸಂಯೋಜಿತ ಪ್ರೋತ್ಸಾಹಕ (PLI) ಯೋಜನೆ:** ಸಂಶೋಧನೆ ಮತ್ತು ಅಭಿವೃದ್ಧಿ ಚಾಲಿತ ಕೈಗಾರಿಕೆಗಳಿಗೆ ಪ್ರೋತ್ಸಾಹಕಗಳನ್ನು ನೀಡುವ ಮೂಲಕ **ಅತ್ಯಾಧುನಿಕ ತಂತ್ರಜ್ಞಾನಪೂರಿತ ಉತ್ಪಾದನೆಯನ್ನು** ಇದು ಬೆಂಬಲಿಸುತ್ತದೆ.

## 6. ಇಸ್ರೋದ ಎಲ್ ವಿಎಂ 3 ರಾಕೆಟ್ ಮೂಲಕ 'ಜಿ ಸ್ಯಾಟ್ -7 R' ಉಪಗ್ರಹ ಉಡಾವಣೆ




### ಇದೀಗ ಸುದ್ದಿಯಲ್ಲಿದೆ:

- ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು **ಶ್ರೀಹರಿಕೋಟಾದ ಸತೀಶ್ ಧವನ್** ಬಾಹ್ಯಾಕಾಶ ಕೇಂದ್ರದಿಂದ, **ಭಾರತೀಯ ನೌಕಾಪಡೆಯ ಸುಧಾರಿತ ಸಂವಹನ ಉಪಗ್ರಹವಾದ** ಜಿ ಸ್ಯಾಟ್ -7 R (CMS-03) ಅನ್ನು ಯಶಸ್ವಿಯಾಗಿ ಉಡಾವಣೆ ಮಾಡಿತು.

### ಜಿ ಸ್ಯಾಟ್ -7 R ಉಪಗ್ರಹದ ಬಗ್ಗೆ:

- ಇದು **ದೇಶೀಯವಾಗಿ ಅಭಿವೃದ್ಧಿಪಡಿಸಲಾದ** ಉಪಗ್ರಹವಾಗಿದ್ದು, ಅಂದಾಜು **4,400 ಕೆ.ಜಿ** ತೂಕವನ್ನು ಹೊಂದಿದೆ. ಇದು ಇಲ್ಲಿಯವರೆಗೆ ಭಾರತದಲ್ಲಿ ಉಡಾವಣೆಯಾದ **ದೇಶದ ಅತ್ಯಂತ ಭಾರವಾದ ಸಂವಹನ ಉಪಗ್ರಹವಾಗಿದೆ.**
- ಇದು 2013 ರಲ್ಲಿ ಉಡಾವಣೆಗೊಂಡಿದ್ದ ಮತ್ತು ಪ್ರಮುಖವಾಗಿ **ಭಾರತೀಯ ನೌಕಾಪಡೆಗೆ ಮೀಸಲಾಗಿದ್ದ ಜಿ ಸ್ಯಾಟ್ -7 (ರುಕ್ಮಿಣಿ)** ಉಪಗ್ರಹವನ್ನು ಬದಲಾಯಿಸಲು ಇದನ್ನು ವಿನ್ಯಾಸಗೊಳಿಸಲಾಗಿದೆ.
- ಉಡಾವಣಾ ವಾಹನ: **LVM3** (ತನ್ನ M5 ಕಾರ್ಯಾಚರಣೆಯಲ್ಲಿ).
- ಈ ಉಪಗ್ರಹವನ್ನು ಯಶಸ್ವಿಯಾಗಿ **"ಭೂ ಹೊಂದಾಣಿಕೆ ವರ್ಗಾವಣೆ ಕಕ್ಷೆಗೆ"** (GTO) ಸೇರಿಸಲಾಗಿದೆ.

## 7. ಎಲ್ಲರಿಗಾಗಿ ಯುವ ಎ ಐ (AI)




### ಸಂದರ್ಭ:

- **ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು (MeitY), 'ಇಂಡಿಯಾ ಎಐ ಮಿಷನ್'** ಅಡಿಯಲ್ಲಿ "ಎಲ್ಲರಿಗಾಗಿ ಯುವ ಎ ಐ" **(YUVA AI for ALL)** ಎಂಬ ಉಪಕ್ರಮವನ್ನು ಪ್ರಾರಂಭಿಸಿದೆ. ಇದು ಎಲ್ಲಾ ಭಾರತೀಯರಿಗೆ ಕೃತಕ ಬುದ್ಧಿಮತ್ತೆಯ (AI) ಪ್ರಪಂಚವನ್ನು ಪರಿಚಯಿಸುವ, ತನ್ನದೇ ಆದ ರೀತಿಯ ಮೊದಲ ಉಚಿತ ತರಗತಿ ನೀಡುವುದಾಗಿದೆ.

### ಎಲ್ಲರಿಗಾಗಿ ಯುವ ಎ ಐ (YUVA AI for ALL) ನ ಬಗ್ಗೆ:

- ಇದು **4.5 ಗಂಟೆಗಳ ಅಲ್ಪಾವಧಿಯ, ಸ್ವಯಂ-ವೇಗದ ತರಗತಿ ಆಗಿದೆ. ವಿದ್ಯಾರ್ಥಿಗಳು, ವೃತ್ತಿಪರರು ಮತ್ತು ಕಲಿಯಲು ಆಸಕ್ತಿಯಿರುವ ಇತರರಿಗೆ ಎಐ (AI) ನ ಮೂಲಭೂತ ವಿಷಯಗಳನ್ನು ಸುಲಭವಾಗಿಸಲು** ಮತ್ತು ಅದು ಪ್ರಪಂಚವನ್ನು ಹೇಗೆ ಬದಲಾಯಿಸುತ್ತಿದೆ ಎಂಬುದನ್ನು ತೋರಿಸಲು ಇದನ್ನು ವಿನ್ಯಾಸಗೊಳಿಸಲಾಗಿದೆ.
- ಗುರಿ: **1 ಕೋಟಿ ನಾಗರಿಕರಿಗೆ ಮೂಲಭೂತ ಎಐ ಕೌಶಲ್ಯಗಳನ್ನು ನೀಡಿ ಸಬಲೀಕರಣಗೊಳಿಸುವುದು.** ಇದು ಡಿಜಿಟಲ್ ಅಂತರವನ್ನು ಕಡಿಮೆ ಮಾಡಲು, ನೈತಿಕ ಎಐ ಬಳಕೆಯನ್ನು ಉತ್ತೇಜಿಸಲು ಮತ್ತು ಭವಿಷ್ಯಕ್ಕಾಗಿ ಭಾರತದ ಉದ್ಯೋಗಿಗಳನ್ನು ಸಿದ್ಧಪಡಿಸಲು ಸಹಾಯ ಮಾಡುತ್ತದೆ.

### ಇಂಡಿಯಾ ಎಐ (AI) ಮಿಷನ್ ಬಗ್ಗೆ:

- **ಪ್ರಾರಂಭ:** ಮಾರ್ಚ್ 2024.
- **ಉದ್ದೇಶ :** ಇದು ಭಾರತದಲ್ಲಿ ಎಐ ಸಂಶೋಧನೆ, ಅಭಿವೃದ್ಧಿ

ಮತ್ತು ನಾವಿನ್ಯತೆಯನ್ನು ಉತ್ತೇಜಿಸುವ **ಅನುಷ್ಠಾನ ಸಂಸ್ಥೆ: ಡಿಜಿಟಲ್ ಇಂಡಿಯಾ ಕಾರ್ಪೊರೇಶನ್** ಅಡಿಯಲ್ಲಿರುವ 'ಇಂಡಿಯಾ ಎಐ' ಸ್ವತಂತ್ರ ವಹಿವಾಟು ವಿಭಾಗ.

## 8. ಹನೋಯಿ ಸಮಾವೇಶ




### ಸಂದರ್ಭ:

- ಸೈಬರ್ ಅಪರಾಧಗಳನ್ನು ಎದುರಿಸುವ ಗುರಿಯೊಂದಿಗೆ ವಿಯೆಟ್ನಾಂ ದೇಶದ ರಾಜಧಾನಿ ಹನೋಯಿ ನಗರದಲ್ಲಿ ನಡೆದ ಐತಿಹಾಸಿಕ ವಿಶ್ವಸಂಸ್ಥೆಯ 'ಸೈಬರ್ ಅಪರಾಧಗಳ ವಿರುದ್ಧದ ಸಮಾವೇಶ'ದ ಒಪ್ಪಂದಕ್ಕೆ 72 ರಾಷ್ಟ್ರಗಳು ಸಹಿ ಹಾಕಿವೆ.

### ಹನೋಯಿ ಸಮಾವೇಶದ ಕುರಿತು:

- ಉದ್ದೇಶ: **ಕಾನೂನು ಜಾರಿ ಸಂಸ್ಥೆಗಳ ನಡುವೆ ಅಂತರರಾಷ್ಟ್ರೀಯ ಸಹಕಾರವನ್ನು** ಹೆಚ್ಚಿಸಲು ಇದು ಶಾಸಕಾಂಗ ಚೌಕಟ್ಟನ್ನು ಪ್ರಸ್ತಾಪಿಸುತ್ತದೆ. ಅಷ್ಟೇ ಅಲ್ಲದೆ, **ಸೈಬರ್ ಅಪರಾಧಗಳನ್ನು ಎದುರಿಸಲು ಸಾಕಷ್ಟು ಮೂಲಸೌಕರ್ಯಗಳಿಲ್ಲದ ದೇಶಗಳಿಗೆ ತಾಂತ್ರಿಕ ನೆರವನ್ನು** ಒದಗಿಸುತ್ತದೆ.
- **ಮೊದಲ ಸಾರ್ವತ್ರಿಕ ಸಮಾವೇಶ: ಸೈಬರ್ ಅಪರಾಧಗಳಿಗೆ** ಸಂಬಂಧಿಸಿದ ಅಪರಾಧಗಳನ್ನು ತನಿಖೆ ಮಾಡಲು ಮತ್ತು ವಿಚಾರಣೆ ನಡೆಸಲು ಈ ಸಮಾವೇಶವು ಮೊದಲ ಸಾರ್ವತ್ರಿಕ ಚೌಕಟ್ಟನ್ನು ಸ್ಥಾಪಿಸುತ್ತದೆ.
- **ಕಾನೂನು ಬದ್ಧ:** ವಿಶ್ವಸಂಸ್ಥೆಯ ಸೈಬರ್ ಅಪರಾಧ ಸಮಾವೇಶವು ಪ್ರಬಲವಾದ, ಕಾನೂನು ಬದ್ಧವಾಗಿರುವ ಸಾಧನವಾಗಿದೆ.
- ಅಳವಡಿಕೆ: ಐದು ವರ್ಷಗಳ ಮಾತುಕತೆಯ ನಂತರ **2024 ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು** ಇದನ್ನು ಅಳವಡಿಸಿಕೊಂಡಿತು.
- ಇದಕ್ಕೆ ಸಹಿ ಹಾಕುವ ಪ್ರಕ್ರಿಯೆಯು ಮುಂದಿನ ವರ್ಷದವರೆಗೂ ತೆರೆದಿರುತ್ತದೆ ಎಂದು ನಿರೀಕ್ಷಿಸಲಾಗಿದೆ.

### ಪ್ರಮುಖ ನಿಬಂಧನೆಗಳು: ಇದು ಈ ಕೆಳಗಿನ ರೀತಿಯ ಅಪರಾಧವನ್ನು ಅಪರಾಧಗಳನ್ನಾಗಿ ಮಾಡುತ್ತದೆ:

- **ಸೈಬರ್-ಅವಲಂಬಿತ ಅಪರಾಧಗಳು :** ಅನಧಿಕೃತ ಪ್ರವೇಶ (ಹ್ಯಾಕಿಂಗ್), ದತ್ತಾಂಶ (ಡೇಟಾ) ಹಸ್ತಕ್ಷೇಪ.
- **ಸೈಬರ್-ಶಕ್ತಗೊಂಡ ಅಪರಾಧಗಳು:** ಆನ್‌ಲೈನ್ ವಂಚನೆ, ಅನ್ಯೋನ್ಯ ಚಿತ್ರಗಳ ಒಪ್ಪಿಗೆಯಿಲ್ಲದ ಹಂಚಿಕೆ.
- **ಮಕ್ಕಳ ಶೋಷಣೆ:** ಆನ್‌ಲೈನ್ ಲೈಂಗಿಕ ದೌರ್ಜನ್ಯ, ನಿಂದನಾತ್ಮಕ ವಿಷಯಗಳ ವಿತರಣೆ, ಅಮಿಷವೊಡ್ಡುವುದು.
- ಇದು ಗಡಿಗಳನ್ನು ಮೀರಿ **ಎಲೆಕ್ಟ್ರಾನಿಕ್ ಸಾಕ್ಷ್ಯಗಳನ್ನು ಹಂಚಿಕೊಳ್ಳಲು** ಅನುಕೂಲ ಮಾಡಿಕೊಡುತ್ತದೆ ಮತ್ತು ಸದಸ್ಯ ರಾಷ್ಟ್ರಗಳ ನಡುವೆ 24/7 ಸಹಕಾರ ಜಾಲವನ್ನು ಸ್ಥಾಪಿಸುತ್ತದೆ.
- ಐತಿಹಾಸಿಕ ಕ್ರಮ: **ಅನ್ಯೋನ್ಯ ಚಿತ್ರಗಳ ಒಪ್ಪಿಗೆಯಿಲ್ಲದ ಹಂಚಿಕೆಯನ್ನು ಅಪರಾಧವೆಂದು ಗುರುತಿಸಿದ ಮೊದಲ ಅಂತರರಾಷ್ಟ್ರೀಯ ಒಪ್ಪಂದ** ಎಂಬ ಹೆಗ್ಗಳಿಕೆಗೂ ಇದು ಪಾತ್ರವಾಗಿದೆ. ಇದು ಆನ್‌ಲೈನ್ ದೌರ್ಜನ್ಯಕ್ಕೆ ಒಳಗಾದ ಸಂತ್ರಸ್ತರಿಗೆ ಸಿಕ್ಕ ಮಹತ್ವದ ಗೆಲುವಾಗಿದೆ.
- ಜಾರಿ: **40 ನೇ ರಾಷ್ಟ್ರವು ತನ್ನ ಅನುಮೋದನೆಯನ್ನು ಸಲ್ಲಿಸಿದ 90 ದಿನಗಳ ನಂತರ ಇದು ಜಾರಿಗೆ ಬರುತ್ತದೆ.**
- **ಸದಸ್ಯ ರಾಷ್ಟ್ರಗಳ ಸಮ್ಮೇಳನ:** ಜಾರಿಗೆ ಬಂದ ನಂತರ, ಸದಸ್ಯ ರಾಷ್ಟ್ರಗಳ ನಡುವಿನ ಸಾಮರ್ಥ್ಯ ಮತ್ತು ಸಹಕಾರವನ್ನು ಸುಧಾರಿಸಲು 'ಸದಸ್ಯ ರಾಷ್ಟ್ರಗಳ ಸಮ್ಮೇಳನ'ವು ನಿಯತಕಾಲಿಕವಾಗಿ ನಡೆಯಲಿದೆ.
- ಸಚಿವಾಲಯ: **ವಿಶ್ವಸಂಸ್ಥೆಯ ಮಾದಕ ದ್ರವ್ಯ ಮತ್ತು ಅಪರಾಧ ಕಚೇರಿಯು** (UNODC) ಇದರ ಸಚಿವಾಲಯವಾಗಿ ಕಾರ್ಯನಿರ್ವಹಿಸುತ್ತದೆ.

### ಸೈಬರ್ ದಾಳಿಗಳ ವಿಧಗಳು:

- **ಮಾಲ್ವೇರ್ (Malware):** ಇದು **'ದುರುದ್ದೇಶಪೂರಿತ ತಂತ್ರಾಂಶ'ದ ಸಂಕ್ಷಿಪ್ತ ರೂಪವಾಗಿದೆ.** ಕಂಪ್ಯೂಟರ್, ಸರ್ವರ್ ಅಥವಾ ಕಂಪ್ಯೂಟರ್ ನೆಟ್‌ವರ್ಕ್‌ಗೆ ಹಾನಿ ಮಾಡಲು ವಿನ್ಯಾಸಗೊಳಿಸಲಾದ ಯಾವುದೇ ರೀತಿಯ ತಂತ್ರಾಂಶವನ್ನು ಇದು ಸೂಚಿಸುತ್ತದೆ.
  - **ಉದಾಹರಣೆ:** ರಾನ್ಸಮ್‌ವೇರ್, ಸ್ಪೈವೇರ್, ವರ್ಮ್‌ಗಳು, ವೈರಸ್‌ಗಳು ಮತ್ತು ಟ್ರೋಜನ್‌ಗಳು ಇವೆಲ್ಲವೂ ಮಾಲ್ವೇರ್‌ನ ವಿಧಗಳಾಗಿವೆ.
- **ಫಿಶಿಂಗ್ (Phishing):** ಮೋಸದ ಇಮೇಲ್‌ಗಳು ಮತ್ತು ವೆಬ್‌ಸೈಟ್‌ಗಳನ್ನು ಬಳಸಿಕೊಂಡು **ವೈಯಕ್ತಿಕ ಮಾಹಿತಿಯನ್ನು ಕದಿಯಲು ಪ್ರಯತ್ನಿಸುವ ವಿಧಾನ** ಇದಾಗಿದೆ.

### ಮಾಲ್ವೇರ್ (Malware) ನ ವಿಧಗಳು:

- **ಸ್ಪೈವೇರ್ (Spyware):** ಇದು **ನಿಮ್ಮ ಮೇಲೆ ಕಣ್ಣಿಡುವ** ತಂತ್ರಾಂಶವಾಗಿದೆ. ಜಾಹೀರಾತುಗಳನ್ನು ನಿಮ್ಮ ಯಂತ್ರಕ್ಕೆ ಕಳುಹಿಸಲು ಇದು ನಿಮ್ಮ **ಇಂಟರ್ನೆಟ್ ಚಟುವಟಿಕೆಗಳನ್ನು ಹುಡುಕಾಟ** ಮಾಡುತ್ತಾ ಗಮನಿಸುತ್ತದೆ.
- **ವೈರಸ್ (Virus):** ಇದೊಂದು **ಸಾಂಕ್ರಾಮಿಕ ಕಾರ್ಯಕ್ರಮ ಅಥವಾ ಕೋಡ್ ಆಗಿದ್ದು**, ಮತ್ತೊಂದು ತಂತ್ರಾಂಶಕ್ಕೆ ಅಂಟಿಕೊಳ್ಳುತ್ತದೆ ಮತ್ತು **ಆ ತಂತ್ರಾಂಶ ಚಾಲನೆಯಾದಾಗ ತನ್ನನ್ನು ತಾನೇ ಪುನರುತ್ಪಾದಿಸಿಕೊಳ್ಳುತ್ತದೆ.**
  - ಸಾಮಾನ್ಯವಾಗಿ **ಕಂಪ್ಯೂಟರ್‌ಗಳ ನಡುವೆ ಸಾಫ್ಟ್‌ವೇರ್ ಅಥವಾ ಫೈಲ್‌ಗಳನ್ನು ಹಂಚಿಕೊಳ್ಳುವ** ಮೂಲಕ ಇದು ಹರಡುತ್ತದೆ.
- **ವರ್ಮ್ (Worm):** ಇದು **ತನ್ನನ್ನು ತಾನೇ ನಕಲು ಮಾಡಿಕೊಳ್ಳುವ ಮತ್ತು ಕಂಪ್ಯೂಟರ್‌ನಲ್ಲಿನ ದತ್ತಾಂಶ ಮತ್ತು ಫೈಲ್‌ಗಳನ್ನು ನಾಶಪಡಿಸುವ ಕಾರ್ಯಕ್ರಮವಾಗಿದೆ.**
  - ಡ್ರೈವ್ ಖಾಲಿಯಾಗುವವರೆಗೂ ವ್ಯವಸ್ಥೆಯನ್ನು ಕಾರ್ಯಗೊಳಿಸುವ ಕಡತಗಳು ಮತ್ತು ದತ್ತಾಂಶದ

ಕಡತಗಳನ್ನು "ತಿನ್ನುವ" ಕೆಲಸವನ್ನು ವರ್ಮ್‌ಗಳು ಮಾಡುತ್ತವೆ.

### ಸೈಬರ್ ಸುರಕ್ಷತೆಗೆ ಸಂಬಂಧಿಸಿದಂತೆ ಭಾರತದಲ್ಲಿ ಇತ್ತೀಚೆಗೆ ತೆಗೆದುಕೊಂಡ ಕ್ರಮಗಳು:

- **ಸೈಬರ್ ಸುರಕ್ಷಿತ್ ಭಾರತ ಉಪಕ್ರಮ:** ಸೈಬರ್ ಅಪರಾಧಗಳ ಬಗ್ಗೆ ಜಾಗೃತಿ ಮೂಡಿಸುವ ಮತ್ತು ಎಲ್ಲಾ ಸರ್ಕಾರಿ ಇಲಾಖೆಗಳಲ್ಲಿ ಐಟಿ ಸಿಬ್ಬಂದಿಗೆ ಸುರಕ್ಷತಾ ಕ್ರಮಗಳ ಸಾಮರ್ಥ್ಯವನ್ನು ಹೆಚ್ಚಿಸುವ ಗುರಿಯೊಂದಿಗೆ 2018 ರಲ್ಲಿ ಇದನ್ನು ಪ್ರಾರಂಭಿಸಲಾಯಿತು.
- **ರಾಷ್ಟ್ರೀಯ ಸೈಬರ್ ಭದ್ರತಾ ಸಮನ್ವಯ ಕೇಂದ್ರ (NCCC):** ನೈಜ ಸಮಯದ ಸೈಬರ್ ಬೆದರಿಕೆಗಳನ್ನು ಪತ್ತೆಹಚ್ಚಲು, ದೇಶಕ್ಕೆ ಬರುವ ಇಂಟರ್ನೆಟ್ ಟ್ರಾಫಿಕ್ ಮತ್ತು ಸಂವಹನ ಮೆಟಾಡೇಟಾವನ್ನು ಸ್ಕ್ಯಾನ್ ಮಾಡಲು 2017 ರಲ್ಲಿ NCCC ಅನ್ನು ಅಭಿವೃದ್ಧಿಪಡಿಸಲಾಯಿತು.
- **ಸೈಬರ್ ಸ್ವಚ್ಛತಾ ಕೇಂದ್ರ:** ವೈರಸ್‌ಗಳು ಮತ್ತು ಮಾಲ್ವೇರ್‌ಗಳನ್ನು ಅಳಿಸಿಹಾಕುವ ಮೂಲಕ ಇಂಟರ್ನೆಟ್ ಬಳಕೆದಾರರು ತಮ್ಮ ಕಂಪ್ಯೂಟರ್ ಮತ್ತು ಸಾಧನಗಳನ್ನು ಸ್ವಚ್ಛಗೊಳಿಸಲು 2017 ರಲ್ಲಿ ಈ ವೇದಿಕೆಯನ್ನು ಪರಿಚಯಿಸಲಾಯಿತು.
- **ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ಸ್ ಟೀಮ್ - ಇಂಡಿಯಾ (CERT-IN):** ಹ್ಯಾಕಿಂಗ್ ಮತ್ತು ಫಿಶಿಂಗ್‌ನಂತಹ ಸೈಬರ್ ಭದ್ರತಾ ಬೆದರಿಕೆಗಳನ್ನು ನಿರ್ವಹಿಸುವ ನೋಡಲ್ ಏಜೆನ್ಸಿ ಇದಾಗಿದೆ.

### ಸಂಬಂಧಿತ ಕಾನೂನುಗಳು:

- ಮಾಹಿತಿ ತಂತ್ರಜ್ಞಾನ ಕಾಯಿದೆ, 2000.
- ವೈಯಕ್ತಿಕ ದತ್ತಾಂಶ ಸಂರಕ್ಷಣಾ ಮಸೂದೆ, 2019 (2022ರಲ್ಲಿ ಹಿಂಪಡೆಯಲಾಗಿದೆ).
- ಡಿಜಿಟಲ್ ವೈಯಕ್ತಿಕ ದತ್ತಾಂಶ ಸಂರಕ್ಷಣಾ ಕಾಯಿದೆ, 2023 (DPDP ಕಾಯಿದೆ).
- ಡಿಜಿಟಲ್ ವೈಯಕ್ತಿಕ ದತ್ತಾಂಶ ಸಂರಕ್ಷಣಾ ನಿಯಮಗಳು, 2025.

### ಅಂತರರಾಷ್ಟ್ರೀಯ ಕಾರ್ಯವಿಧಾನಗಳು:

- **ಅಂತರರಾಷ್ಟ್ರೀಯ ದೂರಸಂಪರ್ಕ ಒಕ್ಕೂಟ (ITU):** ಇದು **ವಿಶ್ವಸಂಸ್ಥೆಯ ವಿಶೇಷ ಸಂಸ್ಥೆಯಾಗಿದ್ದು,** ದೂರಸಂಪರ್ಕ ಮತ್ತು ಸೈಬರ್ ಸುರಕ್ಷತೆಯ ವಿಷಯಗಳ ಪ್ರಮಾಣೀಕರಣ ಮತ್ತು ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

### ಸೈಬರ್ ಅಪರಾಧಗಳಿಗಾಗಿ ಬುಡಾಪೆಸ್ಟ್ ಸಮಾವೇಶ:

- ರಾಷ್ಟ್ರೀಯ ಕಾನೂನುಗಳನ್ನು ಸಮನ್ವಯಗೊಳಿಸುವುದು, ತನಿಖಾ ತಂತ್ರಗಳನ್ನು ಸುಧಾರಿಸುವುದು ಮತ್ತು ರಾಷ್ಟ್ರಗಳ ನಡುವಿನ ಸಹಕಾರವನ್ನು ಹೆಚ್ಚಿಸುವ ಮೂಲಕ ಇಂಟರ್ನೆಟ್ ಮತ್ತು ಕಂಪ್ಯೂಟರ್ ಅಪರಾಧಗಳನ್ನು (ಸೈಬರ್ ಅಪರಾಧ) ಎದುರಿಸಲು ಪ್ರಯತ್ನಿಸುವ ಅಂತರರಾಷ್ಟ್ರೀಯ ಒಪ್ಪಂದ ಇದಾಗಿದೆ.
- ಇದು 1 ಜುಲೈ 2004 ರಂದು ಜಾರಿಗೆ ಬಂದಿತು.
- ಭಾರತವು ಈ ಸಮಾವೇಶಕ್ಕೆ ಸಹಿಯನ್ನು ಹಾಕಿಲ್ಲ.

## 9. ಕಾಂಡ ಕೋಶ ಚಿಕಿತ್ಸೆ (ಸ್ಟೇಮ್ ಸೆಲ್ ಥೆರೇಪಿ)

### ಇದೀಗ ಸುದ್ದಿಯಲ್ಲಿದೆ:

- ಒಸಾಕಾ ಮೆಟ್ರೋಪಾಲಿಟನ್ ವಿಶ್ವವಿದ್ಯಾನಿಲಯದ ಸಂಶೋಧಕರು **ಅಡಿಪೋಸ್ (ಕೊಬ್ಬು) ಮೂಲದ ಕಾಂಡ ಕೋಶಗಳನ್ನು** (ADSCs) ಬಳಸಿಕೊಂಡು ಬೆನ್ನುಮೂಳೆಯ ಮುರಿತಗಳನ್ನು ಗುಣಪಡಿಸಲು ಹೊಸ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದ್ದಾರೆ.

### ಕಾಂಡ ಕೋಶ (ಸ್ಟೇಮ್ ಸೆಲ್ ) ಗಳ ಬಗ್ಗೆ:

- ವ್ಯಾಖ್ಯಾನ:- ಕಾಂಡ ಕೋಶವು **ದೇಹದಲ್ಲಿ ಕಂಡುಬರುವ ಅನೇಕ ವಿಭಿನ್ನ ಜೀವಕೋಶ ವಿಧಗಳನ್ನು ರೂಪಿಸುವ** ಸಾಮರ್ಥ್ಯವನ್ನು ಹೊಂದಿರುವ ಕೋಶವಾಗಿದೆ.
- ಕಾಂಡ ಕೋಶಗಳು ವಿಭಜನೆಗೊಂಡಾಗ, ಅವು ಹೆಚ್ಚಿನ ಕಾಂಡ ಕೋಶಗಳನ್ನು ಅಥವಾ ವಿಶೇಷ ಕಾರ್ಯಗಳನ್ನು ನಿರ್ವಹಿಸುವ ಇತರ ಜೀವಕೋಶಗಳನ್ನು ರೂಪಿಸುತ್ತವೆ.
- **ವಯಸ್ಕ/ದೈಹಿಕ ಕಾಂಡ ಕೋಶಗಳು:** ಇವು **ಅಸ್ಥಿಮಜ್ಜೆಯಲ್ಲಿ** ಕಂಡುಬರುವ ವಯಸ್ಕ ದೈಹಿಕ ಕೋಶಗಳಾಗಿವೆ (ASCs).
- **ಭ್ರೂಣದ ಕಾಂಡ ಕೋಶಗಳು:** ಇವುಗಳನ್ನು ಸುಮಾರು **6 ರಿಂದ 8 ದಿನಗಳ ಭ್ರೂಣಗಳಿಂದ** ಪಡೆಯಲಾಗುತ್ತದೆ. ಇವು ವಯಸ್ಕ ಕೋಶಗಳಿಗಿಂತ **ಹೆಚ್ಚಿನ ಸಾಮರ್ಥ್ಯವನ್ನು** ಹೊಂದಿರುತ್ತವೆ. ಏಕೆಂದರೆ ಸರಿಯಾದ ರೀತಿಯಲ್ಲಿ ಪಡೆದ ಭ್ರೂಣದ ಕಾಂಡ ಕೋಶವು ನರ ಕೋಶಗಳು, ಸ್ನಾಯು ಕೋಶಗಳು ಮತ್ತು ಯಕೃತ್ ಕೋಶಗಳನ್ನು ಉತ್ಪತ್ತಿ ಮಾಡಬಲ್ಲದು.

### ಕಾಂಡ ಕೋಶ ಚಿಕಿತ್ಸೆಯ ಬಗ್ಗೆ:

- ಕಾಂಡ ಕೋಶ ಚಿಕಿತ್ಸೆಯು ಮಾನವ ದೇಹದಲ್ಲಿ **ಹಾನಿಗೊಳಗಾದ ಜೀವಕೋಶಗಳು ಮತ್ತು ಅಂಗಾಂಶಗಳನ್ನು ಪುನರುತ್ಪಾದಿಸಲು** ಕಾಂಡ ಕೋಶಗಳ ವಿಶಿಷ್ಟ ಗುಣಲಕ್ಷಣಗಳನ್ನು ಬಳಸಿಕೊಳ್ಳುತ್ತದೆ.
- ಕಾಂಡ ಕೋಶಗಳು ಈ ಹಾನಿಗೊಳಗಾದ ಕೋಶಗಳನ್ನು **ಹೊಸ, ಆರೋಗ್ಯಕರ ಮತ್ತು ಸಂಪೂರ್ಣವಾಗಿ ಕಾರ್ಯನಿರ್ವಹಿಸುವ** ಕೋಶಗಳೊಂದಿಗೆ ಬದಲಾಯಿಸುತ್ತವೆ.
- ಇದನ್ನು **"ಪುನರುತ್ಪಾದಕ ಔಷಧ"** ಎಂದೂ ಕರೆಯಲಾಗುತ್ತದೆ.
- ಇದು **ಅಂಗಾಂಗ ಕಸಿ ಪ್ರಕ್ರಿಯೆಯಲ್ಲಿ** ಮುಂದಿನ ಹಂತವಾಗಿದೆ ಮತ್ತು ಪೂರೈಕೆ ಸೀಮಿತವಾಗಿರುವ ದಾನಿ ಅಂಗಗಳ ಬದಲಿಗೆ **ಜೀವಕೋಶಗಳನ್ನು** ಬಳಸುತ್ತದೆ.
- ಕಾಂಡ ಕೋಶಗಳನ್ನು **ಪ್ರಯೋಗಾಲಯಗಳಲ್ಲಿ** ಬೆಳೆಸಲಾಗುತ್ತದೆ. ಈ ಕಾಂಡ ಕೋಶಗಳನ್ನು **ಹೃದಯದ ಸ್ನಾಯು ಕೋಶಗಳು, ರಕ್ತ ಕಣಗಳು ಅಥವಾ ನರ ಕೋಶಗಳಂತಹ** ನಿರ್ದಿಷ್ಟ ರೀತಿಯ ಜೀವಕೋಶಗಳಾಗಿ ಪರಿಣತಿ ಹೊಂದಲು ಮಾರ್ಪಡಿಸಲಾಗುತ್ತದೆ.
- ನಂತರ ಈ ವಿಶೇಷ ಜೀವಕೋಶಗಳನ್ನು **ವ್ಯಕ್ತಿಯ ದೇಹದಲ್ಲಿ** ಅಳವಡಿಸಬಹುದಾಗಿದೆ.
- ಕಳೆದ 90 ವರ್ಷಗಳಿಂದ, **ಲ್ಯುಕೇಮಿಯಾ ಮತ್ತು ಲಿಂಫೋಮಾದಂತಹ** ಕಾಯಿಲೆಗಳಿರುವ ಜನರಿಗೆ ಚಿಕಿತ್ಸೆ ನೀಡಲು **ಹೆಮಾಟೊಪಯಟಿಕ್ ಕಾಂಡ ಕೋಶ ಕಸಿಯನ್ನು** ಬಳಸಲಾಗುತ್ತಿದೆ.

## 10.ಕ್ರಿಸ್ಪರ್-ಕ್ಯಾಸ್ ವ್ಯವಸ್ಥೆಗಳು (CRISPR-Cas systems)

### ಸಂದರ್ಭ:

- ಅಂತರರಾಷ್ಟ್ರೀಯ ಮಟ್ಟದಲ್ಲಿ ಪೇಟೆಂಟ್ ಹೊಂದಿರುವ 'ಕ್ರಿಸ್ಪರ್-ಕ್ಯಾಸ್' (CRISPR-Cas) ವ್ಯವಸ್ಥೆಗಳಿಗೆ ಪರ್ಯಾಯವಾಗಿ, ಐಸಿಎಆರ್ (ICAR) ನ **ಭಾರತೀಯ ಭತ್ತ ಸಂಶೋಧನಾ ಸಂಸ್ಥೆ** (IIRR) ಯ ವಿಜ್ಞಾನಿಗಳು **'ಟಿಎನ್‌ಪಿಬಿ ಪ್ರೋಟೀನ್‌ಗಳನ್ನು' (TnpB proteins)** ಬಳಸಿಕೊಂಡು, ಸಂಪೂರ್ಣ ಸ್ವದೇಶಿ ನಿರ್ಮಿತ ವಂಶವಾಹಿ ತಿದ್ದುವಿಕೆ (**ಜಿನೋಮ್-ಎಡಿಟಿಂಗ್ -GE**) ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದ್ದಾರೆ.

### ನಿಮಗಿದು ತಿಳಿದಿದೆಯೇ?

- ಮೇ 2025 ರಲ್ಲಿ, **ಭಾರತೀಯ ಭತ್ತ ಸಂಶೋಧನಾ ಸಂಸ್ಥೆ** (IIRR) ಮತ್ತು **ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ** (IARI) ಅಭಿವೃದ್ಧಿಪಡಿಸಿದ ವಂಶವಾಹಿ ತಿದ್ದುಪಡಿ ಮಾಡಿದ ಎರಡು ಭತ್ತದ ಪ್ರಭೇದಗಳನ್ನು ICAR ಬಿಡುಗಡೆ ಮಾಡಿತು.
- IIRR ಸಂಸ್ಥೆಯು CRISPR-Cas12a ತಂತ್ರಜ್ಞಾನ ಬಳಸಿ, 'ಸೈಟೊಕಿನಿನ್ ಆಕ್ಸಿಡೇಸ್ 2' ವಂಶವಾಹಿಯನ್ನು ಮಾರ್ಪಾಡು ಮಾಡುವ ಮೂಲಕ **ಸಾಂಬಾ ಮಸೂರಿ ಭತ್ತದ** ಇಳುವರಿಯನ್ನು ಹೆಚ್ಚಿಸಿದೆ. ಹಾಗೆಯೇ, IARI ಸಂಸ್ಥೆಯು CRISPR-Cas9 ಬಳಸಿ, 'DST' ಜೀನ್ ಅನ್ನು ತಿದ್ದುಪಡಿ ಮಾಡುವ ಮೂಲಕ **ಎಂಟಿಯು-1010 (ಕಾಟನ್‌ದೊರ ಸನ್ನಲು)** ತಳಿಯಲ್ಲಿ ಬರಗಾಲ ಮತ್ತು ಉಪ್ಪಿನಂಶವನ್ನು ತಡೆದುಕೊಳ್ಳುವ ಶಕ್ತಿಯನ್ನು ಹೆಚ್ಚಿಸಿದೆ.

### ಟಿಎನ್‌ಪಿಬಿ (TnpB) ಅಥವಾ ಟ್ರಾನ್ಸ್‌ಪೋಸನ್-ಸಂಬಂಧಿತ ಪ್ರೋಟೀನ್‌ಗಳು (Transposon-associated proteins):

- ಇದು ಒಂದು ರೀತಿಯ **"ಆಣ್ವಿಕ ಕತ್ತರಿ" (molecular scissors)** ಯಂತೆ ಕೆಲಸ ಮಾಡುತ್ತದೆ. ಇದು ಸಸ್ಯದ ಡಿಎನ್‌ಎ ಅನ್ನು ಅತ್ಯಂತ ನಿಖರವಾಗಿ ಕತ್ತರಿಸಿ, ಮಾರ್ಪಡಿಸುತ್ತದೆ. ವಿಶೇಷವೆಂದರೆ, ಇದು ಯಾವುದೇ ಹೊರಗಿನ ಜೀನ್‌ಗಳನ್ನು ಸೇರಿಸದೆಯೇ, ನಮಗೆ ಬೇಕಾದ ಗುಣಲಕ್ಷಣಗಳನ್ನು ಸಸ್ಯದಲ್ಲಿ ತರುತ್ತದೆ.
- ಗಾತ್ರದಲ್ಲಿದೊಡ್ಡದಾದ Cas9 ಮತ್ತು Cas12a ಪ್ರೋಟೀನ್‌ಗಳಿಗೆ ಹೋಲಿಸಿದರೆ, **TnpB ತುಂಬಾ ಚಿಕ್ಕದಾಗಿದೆ** (ಕೇವಲ 408 ಅಮೈನೋ ಆಮ್ಲಗಳು). ಆದ್ದರಿಂದ, ಇದನ್ನು ವೈರಲ್ ವಾಹಕಗಳ ಮೂಲಕ ಸಸ್ಯದ ಜೀವಕೋಶದೊಳಗೆ ಕಳುಹಿಸುವುದು ಸುಲಭ. ಇದರಿಂದ ಪ್ರಯೋಗಾಲಯದ ಸಂಕೀರ್ಣ **ಅಂಗಾಂಶ ಕೃಷಿ** ವಿಧಾನಗಳನ್ನು ಅವಲಂಬಿಸುವುದು ತಪ್ಪುತ್ತದೆ.

### ವಂಶವಾಹಿ ತಿದ್ದುವಿಕೆ ತಂತ್ರಜ್ಞಾನ (Gene Editing Technology) ದ ಬಗ್ಗೆ:

- ಇದು ಒಂದು ಜೀವಿಯ **ಡಿಎನ್‌ಎ ನಲ್ಲಿ ಬದಲಾವಣೆ ಮಾಡಲು ಬಳಸುವ ತಂತ್ರಜ್ಞಾನವಾಗಿದೆ.** ಇದರ ಮೂಲಕ ವಂಶವಾಹಿಯ (ಜೀನೋಮ್) ನಿರ್ದಿಷ್ಟ ಭಾಗಗಳಲ್ಲಿ ಆನುವಂಶಿಕ ಅಂಶಗಳನ್ನು **ಸೇರಿಸಬಹುದು, ತೆಗೆದುಹಾಕಬಹುದು ಅಥವಾ ಮಾರ್ಪಡಿಸಬಹುದಾಗಿದೆ.**

### ಕ್ರಿಸ್ಪರ್-ಕ್ಯಾಸ್ 9 ತಂತ್ರಜ್ಞಾನ (CRISPR Cas9 Technology) ದ ಬಗ್ಗೆ:

- **ಸಂಕ್ಷಿಪ್ತ ರೂಪ:** ಕ್ಲಸ್ಟರ್ಡ್ ರೆಗ್ಯುಲರ್ಲಿ ಇಂಟರ್‌ಸ್ಪೇಸ್ಡ್ ಶಾರ್ಟ್ ಪ್ಯಾಲಿಂಡ್ರೊಮಿಕ್ ರಿಪೀಟ್ಸ್ (Clustered Regularly Interspaced Short Palindromic Repeats).
- **ಮಹತ್ವ:** ಈ ಜೀನ್ ಎಡಿಟಿಂಗ್ ತಂತ್ರಜ್ಞಾನವನ್ನು ಬಳಸಿ, ವಿಜ್ಞಾನಿಗಳು **ಜೀವಿಗಳ ಡಿಎನ್‌ಎಯಲ್ಲಿ ಬೇಕಾದ ಬದಲಾವಣೆಗಳನ್ನು ಮಾಡಬಹುದು.**
- ಇದರಲ್ಲಿರುವ **'ಕ್ಯಾಸ್ 9 (Cas9)'** ಎಂಬ ಕಿಣ್ವವು ಒಂದು **ಅಣು ಕತ್ತರಿಯಂತೆ** ಕೆಲಸ ಮಾಡುತ್ತದೆ. ಎಲ್ಲಿ ಕತ್ತರಿಸಬೇಕು ಎಂಬುದನ್ನು, ನಿರ್ದಿಷ್ಟ ಡಿಎನ್‌ಎ ವಿನ್ಯಾಸಕ್ಕೆ ಹೊಂದಿಕೆಯಾಗುವಂತೆ ಸಿದ್ಧಪಡಿಸಿದ **ಆರ್‌ಎನ್‌ಎ (RNA)** ಅಣುಗಳು ತೋರಿಸಿಕೊಡುತ್ತವೆ.
- **ವಂಶವಾಹಿ ತಿದ್ದುವಿಕೆ (ಜಿನೋಮ್ ಎಡಿಟಿಂಗ್):** ಇದು ಜೀವಿಯೊಂದರ ಜೀನೋಮ್‌ನಲ್ಲಿರುವ ಜೀನ್ (ವಂಶವಾಹಿ) ಗಳನ್ನೇ ತಿದ್ದುಪಡಿ ಮಾಡುವುದಾಗಿದೆ. ಇದರಲ್ಲಿ ಹೊರಗಿನ **ಯಾವುದೇ ವಿದೇಶಿ** ವಂಶವಾಹಿಗಳನ್ನು ಸೇರಿಸುವುದಿಲ್ಲ; ಬದಲಿಗೆ ನಮಗೆ ಬೇಕಾದ ಬದಲಾವಣೆಗಳನ್ನು ಅಸ್ತಿತ್ವದಲ್ಲಿರುವ ವಂಶವಾಹಿಗಳಲ್ಲೇ ಮಾಡಲಾಗುತ್ತದೆ.
- **ಕುಲಾಂತರಿ (ಜನಟಿಕಲಿ ಮೋಡಿಫೈಡ್):** ಇದರಲ್ಲಿ ಒಂದು ಜೀವಿಗೆ ಹೊಸ ಗುಣವನ್ನು ನೀಡಲು, ಅದಕ್ಕೆ ಸಂಬಂಧವಿಲ್ಲದ ಬೇರೊಂದು ಜೀವಿಯ **ವಿದೇಶಿ ಜೀನ್‌ಗಳನ್ನು** ತಂದು ಸೇರಿಸಲಾಗುತ್ತದೆ.

### ನಿಯಂತ್ರಕ ಸಂಸ್ಥೆಗಳು:

- **ಜನಟಿಕ್ ಇಂಜಿನಿಯರಿಂಗ್ ಅಪ್ರೈಸಲ್ ಸಮಿತಿ (GEAC):** ಇದು **ಕೇಂದ್ರ ಪರಿಸರ ಸಚಿವಾಲಯದ** (MoEFCC) ಅಡಿಯಲ್ಲಿ ಕಾರ್ಯನಿರ್ವಹಿಸುವ ಪ್ರಮುಖ ನಿಯಂತ್ರಕ ಸಂಸ್ಥೆಯಾಗಿದೆ. **ಕುಲಾಂತರಿ ಜೀವಿಗಳನ್ನು (GMOs)** ಪರಿಶೀಲಿಸುವುದು ಮತ್ತು ಅವುಗಳಿಗೆ ಅನುಮತಿ ನೀಡುವುದು ಇದರ ಕಾರ್ಯವಾಗಿದೆ.
- **ಜೈವಿಕ ಸುರಕ್ಷತೆಗಾಗಿ ಕಾರ್ಟಜಿನಾ ಶಿಷ್ಟಾಚಾರ (Cartagena Protocol on Biosafety):** ಇದು ಜೀವವೈವಿಧ್ಯತೆಯ ಸಂರಕ್ಷಣೆಗಿರುವ ಒಂದು ಅಂತರರಾಷ್ಟ್ರೀಯ ಒಪ್ಪಂದವಾಗಿದೆ. **ಕುಲಾಂತರಿ ಜೀವಿಗಳಿಂದ (GMOs) ಪರಿಸರಕ್ಕೆ ಹಾನಿಯಾಗದಂತೆ** ಅವುಗಳನ್ನು ಸುರಕ್ಷಿತವಾಗಿ ನಿರ್ವಹಿಸುವುದನ್ನು ಇದು ಖಚಿತಪಡಿಸುತ್ತದೆ.
- **ನಗೋಯಾ-ಕೌಲಾಲಂಪುರ (Nagoya-Kuala Lumpur):** ಇದು ಕಾರ್ಟಜಿನಾ ಶಿಷ್ಟಾಚಾರಕ್ಕೆ ಸೇರಿಸಲಾದ ಒಂದು ಹೆಚ್ಚುವರಿ ಒಪ್ಪಂದವಾಗಿದೆ. ಒಂದು ವೇಳೆ ಕುಲಾಂತರಿ ಜೀವಿಗಳಿಂದ ಹಾನಿ ಸಂಭವಿಸಿದರೆ, ಅದಕ್ಕೆ ಯಾರು **ಹೊಣೆ** ಮತ್ತು ಅದಕ್ಕೆ ಏನು **ಪರಿಹಾರ** ಎಂಬುದನ್ನು ಇದು ನಿರ್ಧರಿಸುತ್ತದೆ.

## 11.ಸೆಂಟಿನೆಲ್ -6B

### ಇತ್ತೀಚಿನ ಸುದ್ದಿಯಲ್ಲಿದೆ:

- **ಅಮೇರಿಕಾದ ಕ್ಯಾಲಿಫೋರ್ನಿಯಾದಲ್ಲಿರುವ ವಾಂಡೆನ್‌ಬರ್ಗ್ ಬಾಹ್ಯಾಕಾಶ ಪಡೆಯ ನೆಲೆಯಿಂದ** "ಸೆಂಟಿನೆಲ್ -6B" ಯನ್ನು ಯಶಸ್ವಿಯಾಗಿ ಉಡಾವಣೆ ಮಾಡಲಾಗಿದೆ.

### ಸೆಂಟಿನೆಲ್ -6B ಯ ಬಗ್ಗೆ:

- ಇದು **ಸಾಗರ ವೀಕ್ಷಣಾ ಉಪಗ್ರಹವಾಗಿದ್ದು**, ಏರುತ್ತಿರುವ ಸಮುದ್ರ ಮಟ್ಟ ಮತ್ತು ಭೂಮಿಯ ಮೇಲೆ ಅವುಗಳ ಪರಿಣಾಮಗಳನ್ನು ಅಳೆಯುವ ಆರು ವೈಜ್ಞಾನಿಕ ಉಪಕರಣಗಳನ್ನು ಒಳಗೊಂಡಿದೆ.
- ಇದು ಭೂಮಿಯನ್ನು **ಪ್ರತಿ ಸೆಕೆಂಡಿಗೆ 7.2 ಕಿ.ಮೀ** ವೇಗದಲ್ಲಿ ಸುತ್ತುತ್ತದೆ ಮತ್ತು **ಪ್ರತಿ 112 ನಿಮಿಷಗಳಿಗೊಮ್ಮೆ ಒಂದು ಪ್ರದಕ್ಷಿಣೆಯನ್ನು** ಪೂರ್ಣಗೊಳಿಸುತ್ತದೆ.
- ಈ ಯೋಜನೆಯು **ನಾಸಾ, ಎನ್‌ಒಎಎ, ಮತ್ತು ಯುರೋಪಿಯನ್ ಸ್ಪೇಸ್ ಏಜೆನ್ಸಿಗಳ** ಜಂಟಿ ಸಹಯೋಗವಾಗಿದೆ.

# ಭದ್ರತೆ

## 1. ಸಿಲಿಗುರಿ ಕಾರಿಡಾರ್




### ಇದೀಗ ಸುದ್ದಿಯಲ್ಲಿ

- ಭಾರತೀಯ ಸೇನೆಯು ಕಾರ್ಯತಂತ್ರದ ಮಹತ್ವವುಳ್ಳ 'ಸಿಲಿಗುರಿ ಕಾರಿಡಾರ್' ಬಳಿ ಮೂರು ಹೊಸ ಸೇನಾ ನೆಲೆಗಳನ್ನು ಸ್ಥಾಪಿಸಿದೆ.

### ಸಿಲಿಗುರಿ ಕಾರಿಡಾರ್ ನ ಬಗ್ಗೆ:

- ಸಿಲಿಗುರಿ ಕಾರಿಡಾರ್ ಅನ್ನು **'ಚಿಕನ್ಸ್ ನೆಕ್'** (ಕೋಳಿಯ ಕುತ್ತಿಗೆ) ಎಂದೂ ಕೂಡ ಕರೆಯಲಾಗುತ್ತದೆ.
- ಇದು **ಪಶ್ಚಿಮ ಬಂಗಾಳದಲ್ಲಿರುವ ಒಂದು ಕಿರಿದಾದ ಭೂಭಾಗವಾಗಿದ್ದು, ಈಶಾನ್ಯ ಭಾರತದ ರಾಜ್ಯಗಳನ್ನು ದೇಶದ ಇತರ ಭಾಗಗಳೊಂದಿಗೆ** ಸಂಪರ್ಕಿಸುತ್ತದೆ.
- ಇದು **ಮಹಾನಂದಾ ಮತ್ತು ತೀಸ್ತಾ ನದಿಗಳ** ನಡುವೆ ನೆಲೆಗೊಂಡಿರುವ ಪೂರ್ವ ಭಾರತದ ಅತ್ಯಂತ ಪ್ರಮುಖ ಕಾರ್ಯತಂತ್ರದ ಪ್ರದೇಶವಾಗಿದೆ.

### ಸಿಲಿಗುರಿ ಕಾರಿಡಾರ್‌ನ ಮಹತ್ವ:

- **ಕಾರ್ಯತಂತ್ರದ ಸ್ಥಳ :** ಒಂದು ವೇಳೆ ಈ ಕಾರಿಡಾರ್‌ನ ಸಂಪರ್ಕ ಕಡಿತಗೊಂಡರೆ, ಅದು **ಈಶಾನ್ಯ ರಾಜ್ಯಗಳನ್ನು** ಪ್ರತ್ಯೇಕಿಸುತ್ತದೆ. ಇದರಿಂದಾಗಿ ಸರ್ಕಾರಕ್ಕೆ ಅಗತ್ಯ ಸರಕುಗಳು, ಸೇವೆಗಳು ಮತ್ತು ಸೇನಾ ಬೆಂಬಲವನ್ನು ಪೂರೈಸುವುದು ಕಷ್ಟಕರವಾಗುತ್ತದೆ.
- **ಸೇನಾ ಮತ್ತು ರಕ್ಷಣಾ ಪರಿಗಣನೆಗಳು :** ಇದು ಸೂಕ್ಷ್ಮವಾದ ಅಂತರರಾಷ್ಟ್ರೀಯ ಗಡಿಗಳಿಗೆ, ನಿರ್ದಿಷ್ಟವಾಗಿ **ಚೀನಾ, ನೇಪಾಳ ಮತ್ತು ಬಾಂಗ್ಲಾದೇಶದ** ಗಡಿಗಳಿಗೆ ಹತ್ತಿರದಲ್ಲಿದೆ.

## 2. ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ (CISF)

### ಇದೀಗ ಸುದ್ದಿಯಲ್ಲಿದೆ:

- **'ಅಂತರರಾಷ್ಟ್ರೀಯ ಹಡಗು ಮತ್ತು ಬಂದರು ಸೌಲಭ್ಯ ಭದ್ರತಾ ಸಂಹಿತೆ'**ಯ (ISPS Code) ಅಡಿಯಲ್ಲಿ, ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯನ್ನು **'ಮಾನ್ಯತೆ ಪಡೆದ ಭದ್ರತಾ ಸಂಸ್ಥೆ' ಯನ್ನಾಗಿ** ಅಧಿಕೃತವಾಗಿ ನಾಮನಿರ್ದೇಶನ ಮಾಡಲಾಗಿದೆ.
- ಭಾರತದಲ್ಲಿ ಸುಮಾರು 250 ಬಂದರುಗಳಿದ್ದು, ಅವುಗಳಲ್ಲಿ 65–68 ಬಂದರುಗಳು ಸರಕು ಸಾಗಣೆ ಕಾರ್ಯಾಚರಣೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿವೆ.

### ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ (CISF) ಯ ಬಗ್ಗೆ:

- ಸ್ಥಾಪನೆ ಮತ್ತು ಸ್ಥಾನಮಾನ: ಇದು 1968 ರ **'ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ ಕಾಯಿದೆ'** ಯ ಅನ್ವಯ 1969 ರಲ್ಲಿ ಅಸ್ತಿತ್ವಕ್ಕೆ ಬಂದ ಒಂದು **ಅರೆಸೇನಾ ಪಡೆಯಾಗಿದೆ.**
- ದಿನಾಚರಣೆ: ಪ್ರತಿ ವರ್ಷ **ಮಾರ್ಚ್ 10 ರಂದು** 'CISF ಸ್ಥಾಪನಾ ದಿನ'ವನ್ನು ಆಚರಿಸಲಾಗುತ್ತದೆ.
- ಆಡಳಿತಾತ್ಮಕ ನಿಯಂತ್ರಣ: ಈ ಪಡೆಯು ಭಾರತ ಸರ್ಕಾರದ **ಕೇಂದ್ರ ಗೃಹ ಸಚಿವಾಲಯದ** ನೇರ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತದೆ.
- **ಪ್ರಮುಖ ಕಾರ್ಯಗಳು:** ದೇಶದ **ತಂತ್ರಾತ್ಮಕ ಸಂಸ್ಥೆಗಳಿಗೆ ಭದ್ರತೆಯನ್ನು** ಒದಗಿಸುವುದು ಇದರ ಪ್ರಮುಖ ಕರ್ತವ್ಯವಾಗಿದೆ. ಪ್ರಮುಖವಾಗಿ ಈ ಕೆಳಗಿನ ಸಂಸ್ಥೆಗಳಿಗೆ ಈ ಪಡೆಯು ರಕ್ಷಣೆ ನೀಡುತ್ತದೆ:
  - ಬಾಹ್ಯಾಕಾಶ ಇಲಾಖೆ
  - ಪರಮಾಣು ಶಕ್ತಿ ಇಲಾಖೆ
  - ವಿಮಾನ ನಿಲ್ದಾಣಗಳು, ದೆಹಲಿ ಮೆಟ್ರೋ ಮತ್ತು ಬಂದರುಗಳು
  - ಐತಿಹಾಸಿಕ ಸ್ಮಾರಕಗಳು
  - ಭಾರತೀಯ ಆರ್ಥಿಕತೆಯ ಮೂಲಭೂತ ಕ್ಷೇತ್ರಗಳಾದ **ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ವಿದ್ಯುಚ್ಛಕ್ತಿ, ಕಲ್ಲಿದ್ದಲು, ಉಕ್ಕು ಮತ್ತು ಗಣಿಗಾರಿಕೆ ಸ್ಥಾವರಗಳಿಗೆ** ಇದು ಭದ್ರತೆಯನ್ನು ಒದಗಿಸುತ್ತದೆ.

## 3. ಮುಧ್-ನ್ಯೋಮಾ ವಾಯುನೆಲೆ



### ಇದೀಗ ಸುದ್ದಿಯಲ್ಲಿದೆ:

- ವಾಯುಪಡೆಯ ಮುಖ್ಯಸ್ಥರು **ಲಡಾಖ್‌ನಲ್ಲಿ** ಮುಧ್-ನ್ಯೋಮಾ ವಾಯುನೆಲೆಯನ್ನು ಉದ್ಘಾಟಿಸಿದರು.

### ಮುಧ್-ನ್ಯೋಮಾ ವಾಯುನೆಲೆಯ ಬಗ್ಗೆ:

- ಈ ವಾಯುನೆಲೆಯು **ಲಡಾಖ್‌ನ ಲೇಹ್ ಜಿಲ್ಲೆಯ ನ್ಯೋಮಾದಲ್ಲಿ** 13,700 ಅಡಿ (4,200 ಮೀ) ಎತ್ತರದಲ್ಲಿದೆ, ಇದು ವಿಶ್ವದ ಅತಿ ಎತ್ತರದ ಯುದ್ಧವಿಮಾನ-ಸಮರ್ಥ ವಾಯುನೆಲೆಗಳಲ್ಲಿ ಒಂದಾಗಿದೆ.
- ನಿರ್ಮಾಣ ಕಾರ್ಯವನ್ನು **ಗಡಿ ರಸ್ತೇ ನಿರ್ಮಾಣ ಸಂಸ್ಥೆ (BRO)** ವಹಿಸಿಕೊಂಡಿತ್ತು.
- ಈ ವಾಯುನೆಲೆಯು **ವಾಸ್ತವಿಕ ಗಡೀ ನಿಯಂತ್ರಣ ರೇಖೆ (LAC)** ಗೆ ಸಮೀಪ ಇರುವುದರಿಂದ ಭಾರತಕ್ಕೆ ಮಹತ್ವದ ಯುದ್ಧತಂತ್ರದ ಮತ್ತು ಲಾಜಿಸ್ಟಿಕ್ ಪ್ರಯೋಜನಗಳನ್ನು ನೀಡುತ್ತದೆ. ಇದರಿಂದ **ತ್ವರಿತವಾಗಿ ಪ್ರತಿಕ್ರಿಯಿಸುವುದು, ಪಡೆಗಳನ್ನು ನಿಯೋಜಿಸುವುದು** ಮತ್ತು **ಡೆಪ್ಸಾಂಗ್ ಸಮತಟ್ಟುಗಳು, ಪ್ಯಾಂಗಾಂಗ್ ತ್ಸೋ ಹಾಗೂ ಚುಷುಲ್ ಕಣಿವೆಯಂತಹ** ಸಂವೇದನಾಶೀಲ ಪ್ರದೇಶಗಳಲ್ಲಿ **ಕಣ್ಗಾವಲನ್ನು** ಬಲಪಡಿಸುವುದು ಸಾಧ್ಯವಾಗುತ್ತದೆ.

## 4. ರಷ್ಯಾದ 'ಡೂಮ್ಸ್‌ಡೇ ಕ್ಷಿಪಣಿ'




### ಇದೀಗ ಸುದ್ದಿಯಲ್ಲಿದೆ:

- ರಷ್ಯಾ ತನ್ನ ಅತ್ಯಾಧುನಿಕ **ಪರಮಾಣು ಶಕ್ತಿ ಚಾಲಿತ ಜಲಾಂತರ್ಗಾಮಿ ನೌಕೆ "ಖಬರೋವ್ಸ್ಕ"** ಗೆ ಚಾಲನೆ ನೀಡಿದೆ. ಇದು ನೀರಿನೊಳಗೆ ಸಂಚರಿಸುವ **ಪರಮಾಣು ಶಕ್ತಿ** ಡ್ರೋನ್ 'ಡೂಮ್ಸ್‌ಡೇ ಕ್ಷಿಪಣಿ'ಯನ್ನು ಹೊತ್ತೊಯ್ಯಲು ವಿನ್ಯಾಸಗೊಳಿಸಲಾಗಿದೆ.

### 'ಡೂಮ್ಸ್‌ಡೇ ಕ್ಷಿಪಣಿ' ಯ ಬಗ್ಗೆ:

- ಇದನ್ನು **"ಪೊಸಿಡಾನ್"** ಎಂದೂ ಕರೆಯಲಾಗುತ್ತದೆ.
- ಇದು ಪ್ರಸ್ತುತ ಬಳಕೆಯಲ್ಲಿರುವ ಜಲಾಂತರ್ಗಾಮಿ ನೌಕೆ ಮತ್ತು 'ಟಾರ್ಪಿಡೊ'ಗಳಿಗಿಂತ **ಹೆಚ್ಚಿನ ವೇಗದಲ್ಲಿ** ಚಲಿಸುವ ಸಾಮರ್ಥ್ಯವನ್ನು ಹೊಂದಿದೆ.
- ಇದು **ಸಮುದ್ರದ ಅತ್ಯಂತ ಆಳದಲ್ಲಿ ಮತ್ತು ಖಂಡಾಂತರದ ದೂರದವರೆಗೆ** ಕಾರ್ಯಾಚರಿಸಬಲ್ಲ ಸಾಮರ್ಥ್ಯವನ್ನು ಹೊಂದಿದೆ. ಆದ್ದರಿಂದ ಇದನ್ನು ಪತ್ತೆಹಚ್ಚಿ ತಡೆಹಿಡಿಯುವುದು ಕಷ್ಟಸಾಧ್ಯವಾಗಿದೆ.
- ಇದು **ಖಂಡಾಂತರ ಪ್ರಯಾಣದ ಸಾಮರ್ಥ್ಯ ಮತ್ತು ಅಪಾರ ವಿನಾಶವನ್ನು** ಉಂಟುಮಾಡುವ ಶಕ್ತಿಯನ್ನು ಹೊಂದಿದೆ.
- ಪರಮಾಣು ಶಕ್ತಿಯ ಮೂಲವನ್ನು ಹೊಂದಿರುವುದರಿಂದ, ಇದು **ದೀರ್ಘ ದೂರದವರೆಗೆ ನೀರಿನ ಆಳದಲ್ಲಿ ಚಲಿಸಬಲ್ಲದು.**
- ಇದು ಕರಾವಳಿಯ ಗುರಿಗಳನ್ನು ತಲುಪಬಲ್ಲದು ಮತ್ತು ಕಾರ್ಯತಂತ್ರದ ಪ್ರತಿರೋಧಕವಾಗಿ ಸೇವೆ ಸಲ್ಲಿಸುವ ಸಾಮರ್ಥ್ಯವನ್ನು ಹೊಂದಿದೆ.

## 5. ಅಜೇಯ ವಾರಿಯರ್-25

### ಇದೀಗ ಸುದ್ದಿಯಲ್ಲಿದೆ:

- **ಭಾರತ ಮತ್ತು ಯುನೈಟೆಡ್ ಕಿಂಗ್‌ಡಮ್** ನಡುವಿನ ಜಂಟಿ ಸೇನಾ ಸಮರಾಭ್ಯಾಸವಾದ "ಅಜೇಯ ವಾರಿಯರ್-25" ರ **8ನೇ ಆವೃತ್ತಿಯು** ಇತ್ತೀಚೆಗೆ **ರಾಜಸ್ಥಾನದಲ್ಲಿ** ಪ್ರಾರಂಭವಾಯಿತು.

### ಅಜೇಯ ವಾರಿಯರ್-25 ರ ಬಗ್ಗೆ:

- **ಉದ್ದೇಶ** - ಈ ಸಮರಾಭ್ಯಾಸವು **ಅರೆ-ನಗರ** ಪರಿಸರಗಳಲ್ಲಿ **ಭಯೋತ್ಪಾದನಾ ನಿಗ್ರಹ** ಕಾರ್ಯಾಚರಣೆಗಳ ಮೇಲೆ ಗಮನಹರಿಸುತ್ತದೆ.

### ಭಾರತ-ಯುನೈಟೆಡ್ ಕಿಂಗ್‌ಡಮ್ ನಡುವೆ ನಡೆಯುವ ಇತರ ಸಮರಾಭ್ಯಾಸಗಳು:

- **"ಕೊಂಕಣ್"** ಎಂಬುದು ಭಾರತೀಯ ನೌಕಾಪಡೆ ಮತ್ತು ಯುನೈಟೆಡ್ ಕಿಂಗ್‌ಡಮ್ ನ ರಾಯಲ್ ನೇವಿ' ಯ ನಡುವೆ ನಡೆಯುವ ದ್ವಿಪಕ್ಷೀಯ ನೌಕಾ ಸಮರಾಭ್ಯಾಸವಾಗಿದೆ.
- **"ಇಂದ್ರಧನುಷ್"** ಎಂಬುದು ಭಾರತೀಯ ವಾಯುಪಡೆ (IAF) ಮತ್ತು ಯುಕೆ ರಾಯಲ್ ಏರ್ ಫೋರ್ಸ್ ನಡುವೆ ನಡೆಯುವ ದ್ವಿಪಕ್ಷೀಯ ವಾಯು ಸಮರಾಭ್ಯಾಸವಾಗಿದೆ.

## 6. ಇಂಡೋ-ಟಿಬೆಟಿಯನ್ ಬಾರ್ಡರ್ ಪೊಲೀಸ್ (ITBP)

### ಇದೀಗ ಸುದ್ದಿಯಲ್ಲಿದೆ:

- ಇಂಡೋ-ಟಿಬೆಟಿಯನ್ ಬಾರ್ಡರ್ ಪೊಲೀಸ್ (ITBP) ಪಡೆಯು, **ವಾಸ್ತವ ನಿಯಂತ್ರಣ ರೇಖೆಯ (LAC)** ಉದ್ದಕ್ಕೂ

ಸಂಪೂರ್ಣವಾಗಿ **ಮಹಿಳಾ ಸಿಬ್ಬಂದಿಗಳೇ ಕಾರ್ಯನಿರ್ವಹಿಸುವ 10 ಗಡಿ ಹೊರಠಾಣೆಗಳನ್ನು** ಸ್ಥಾಪಿಸುತ್ತಿದೆ. ಗಡಿ ಭದ್ರತಾ ವ್ಯವಸ್ಥೆಯಲ್ಲಿ ಲಿಂಗ ಸಮನ್ವಯತೆ ಮತ್ತು ಒಳಗೊಳ್ಳುವಿಕೆಯನ್ನು ಸಾಧಿಸುವ ನಿಟ್ಟಿನಲ್ಲಿ ಇದೊಂದು ಮಹತ್ವದ ಹೆಜ್ಜೆಯಾಗಿದೆ.

### ಇಂಡೋ-ಟಿಬೆಟಿಯನ್ ಬಾರ್ಡರ್ ಪೊಲೀಸ್ (ITBP) ನ ಬಗ್ಗೆ:

- ಸ್ಥಾಪನೆ: **ಭಾರತ ಮತ್ತು ಚೀನಾ** ಯುದ್ಧದ ನಂತರದ ಬೆಳವಣಿಗೆಗಳ ಹಿನ್ನೆಲೆಯಲ್ಲಿ, **1962 ರ ಅಕ್ಟೋಬರ್ 24** ರಂದು ಈ ಪಡೆಯನ್ನು ಅಸ್ತಿತ್ವಕ್ಕೆ ತರಲಾಯಿತು.
- ಸ್ಥಾನಮಾನ: ಇದು **ಕೇಂದ್ರ ಗೃಹ ಸಚಿವಾಲಯದ** ಆಡಳಿತಾತ್ಮಕ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುವ ಪ್ರಮುಖ **'ಕೇಂದ್ರ ಸಶಸ್ತ್ರ ಪೊಲೀಸ್ ಪಡೆ'**ಗಳಲ್ಲಿ (CAPF) ಒಂದಾಗಿದೆ.
- ಧ್ಯೇಯವಾಕ್ಯ: **"ಶೌರ್ಯ-ದೃಢತೆ-ಕರ್ಮ ನಿಷ್ಠೆ".**
- ಕಾರ್ಯನಿರ್ವಹಣಾ ಪಾತ್ರ: **ಲಡಾಖ್‌ನ ಕಾರಾಕೋರಂ ಕಣಿವೆಮಾರ್ಗದಿಂದ ಅರುಣಾಚಲ ಪ್ರದೇಶದ ಜಾಚೆಪ್ ಲಾ** ವರೆಗೆ ಹಬ್ಬಿರುವ, ಸುಮಾರು 3,488 ಕಿ.ಮೀ. ಉದ್ದವಾದ **ಭಾರತ-ಚೀನಾ ಗಡಿಯ** ಕಾವಲು ಕಾಯುವುದು ಮತ್ತು ರಕ್ಷಣೆ ಒದಗಿಸುವುದು ಇದರ ಪ್ರಮುಖ ಜವಾಬ್ದಾರಿಯಾಗಿದೆ.
- ಕಾನೂನಾತ್ಮಕ ಚೌಕಟ್ಟು: ಈ ಪಡೆಯ ಕಾರ್ಯನಿರ್ವಹಣೆಗೆ ಕಾನೂನು ಬಲ ನೀಡಲು, **1992 ರಲ್ಲಿ 'ಐಟಿಬಿಪಿಎಫ್ ಕಾಯಿದೆ'** ಯನ್ನು ಜಾರಿಗೆ ತರಲಾಯಿತು. ನಂತರ , 2004 ರಲ್ಲಿ ಭಾರತ-ಚೀನಾ ಗಡಿಯ ಸಮಗ್ರ ಕಾವಲು ಜವಾಬ್ದಾರಿಯನ್ನು ಈ ಪಡೆಗೆ ನಿಯೋಜಿಸಲಾಯಿತು.

# ಅಂತರರಾಷ್ಟ್ರೀಯ ಸಂಬಂಧಗಳು

## 1. ಭಾರತ ಮತ್ತು ಬಹ್ರೇನ್ ದ್ವಿಪಕ್ಷೀಯ ಸಂಬಂಧಗಳು




### ಸಂದರ್ಭ:

- ವಿದೇಶಾಂಗ ವ್ಯವಹಾರಗಳ ಸಚಿವ ಎಸ್ ಜೈಶಂಕರ್ ಅವರು ಬಹ್ರೇನ್ ವಿದೇಶಾಂಗ ಸಚಿವರನ್ನು ಭೇಟಿಯಾಗಿ ರಕ್ಷಣೆ ಮತ್ತು ಭದ್ರತೆಯಲ್ಲಿನ ಸಹಕಾರದ ಕುರಿತು ಚರ್ಚಿಸಿದರು.

### ಭಾರತ ಮತ್ತು ಬಹ್ರೇನ್ ದ್ವಿಪಕ್ಷೀಯ ಸಂಬಂಧಗಳ ಬಗ್ಗೆ:


- ದ್ವಿಪಕ್ಷೀಯ ವ್ಯಾಪಾರ: USD 1.64 ಶತಕೋಟಿ (FY 2024–25); **ಬಹ್ರೇನ್ ರಾಷ್ಟ್ರದ ಅಗ್ರ ಐದು ವ್ಯಾಪಾರ ಪಾಲುದಾರರಲ್ಲಿ ಭಾರತವೂ ಕೂಡ ಒಂದು.**
- **ಕೊಲ್ಲಿ ರಾಷ್ಟ್ರಗಳಿಗೆ ಮಹಾದ್ವಾರ**: ಪರ್ಷಿಯನ್ ಕೊಲ್ಲಿಯ ಪಶ್ಚಿಮ ತೀರದಲ್ಲಿರುವ ರಾಷ್ಟ್ರ ಬಹ್ರೇನ್, ಭಾರತಕ್ಕೆ **ಗಲ್ಫ್ ಸಹಕಾರ ಮಂಡಳಿ (GCC) ಯ** ಪ್ರದೇಶಗಳಿಗೆ ಒಂದು ಕಾರ್ಯತಂತ್ರದ ಪ್ರವೇಶ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತದೆ.
- **ಇಂಧನ ಭದ್ರತೆ:** ಇತರ GCC ರಾಷ್ಟ್ರಗಳಿಗೆ ಹೋಲಿಸಿದರೆ ಬಹ್ರೇನ್ ಸಣ್ಣ ತೈಲ ಉತ್ಪಾದಕ ರಾಷ್ಟ್ರವಾಗಿದ್ದರೂ, ಭಾರತದ ಇಂಧನ ವೈವಿಧ್ಯೀಕರಣ ತಂತ್ರ ಮತ್ತು ಸಂಸ್ಕರಿಸಿದ ಪೆಟ್ರೋಲಿಯಂ ವ್ಯಾಪಾರದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

### ಬಹ್ರೇನ್ ರಾಷ್ಟ್ರದ ಬಗ್ಗೆ:

### ರಾಜಕೀಯ ವೈಶಿಷ್ಟ್ಯಗಳು:

- ರಾಜಧಾನಿ: **ಮನಾಮ**
- ಬಹ್ರೇನ್ **ಏಷ್ಯಾದ ಮೂರನೇ ಅತ್ಯಂತ ಚಿಕ್ಕ ರಾಷ್ಟ್ರ.**
- ಸ್ಥಳ: **ಪರ್ಷಿಯನ್ ಕೊಲ್ಲಿಯಲ್ಲಿರುವ,** ಪಶ್ಚಿಮ ಏಷ್ಯಾದ ರಾಷ್ಟ್ರ.
- ಗಡಿ: ಇದು **ದ್ವೀಪ ಸಮೂಹಗಳ ರಾಷ್ಟ್ರವಾಗಿದ್ದು,** ಇತರ ದೇಶಗಳೊಂದಿಗೆ ಯಾವುದೇ ಭೂ ಗಡಿಗಳನ್ನು ಹೊಂದಿಲ್ಲ.
- ನೆರೆಯ ಜಲಮೂಲಗಳು: **ಪರ್ಷಿಯನ್ ಕೊಲ್ಲಿ.**

### ಗಲ್ಫ್ ಸಹಕಾರ ಮಂಡಳಿ (GCC) ಯ ಬಗ್ಗೆ:




- ಇದು 6 **ಅರೇಬಿಯಾ ಪರ್ಯಾಯ ದ್ವೀಪ ರಾಷ್ಟ್ರಗಳ ರಾಜಕೀಯ ಮತ್ತು ಆರ್ಥಿಕ ಒಕ್ಕೂಟವಾಗಿದೆ.**
- ಸದಸ್ಯರು: **ಬಹ್ರೇನ್, ಕುವೈತ್, ಓಮನ್, ಕತಾರ್, ಸೌದಿ ಅರೇಬಿಯಾ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್.**
- ಸ್ಥಾಪನೆ: ಮೇ 25, 1981 ರಂದು ಸೌದಿ ಅರೇಬಿಯಾದ **ರಿಯಾದ್‌ನಲ್ಲಿ** ಸಹಿ ಹಾಕಿದ ಒಪ್ಪಂದದ ಮೂಲಕ ಸ್ಥಾಪಿಸಲಾಯಿತು.
- **ಉದ್ದೇಶಗಳು:** ಆರ್ಥಿಕತೆ, ಭದ್ರತೆ, ಸಾಂಸ್ಕೃತಿಕ ಮತ್ತು ಸಾಮಾಜಿಕ ಸಹಕಾರ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಸದಸ್ಯ ರಾಷ್ಟ್ರಗಳ ನಡುವೆ ಏಕತೆ ಮತ್ತು ಸಮನ್ವಯವನ್ನು ಸಾಧಿಸುವುದು.
- ಪ್ರಧಾನ ಕಚೇರಿ: **ರಿಯಾದ್, ಸೌದಿ ಅರೇಬಿಯಾ.**

## 2. ತೋರ್ಖಾಮ್ ಗಡಿ




### ಸಂದರ್ಭ:

- **ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನಗಳ** ನಡುವಿನ ತೋರ್ಖಾಮ್ ಗಡಿ ದಾಟುವ ಸ್ಥಳದಲ್ಲಿ ನಡೆದ ಮಾರಕ ಗಡಿ ಘರ್ಷಣೆಗಳ ನಂತರ ವಾರಗಳ ಕಾಲ ಮುಚ್ಚಲ್ಪಟ್ಟಿದ್ದ ಗಡಿಯು ಇದೀಗ ಪುನಃ ತೆರೆಯಲಾಗಿದೆ.

### ತೋರ್ಖಾಮ್ ಗಡಿಯ ಬಗ್ಗೆ:

- ಸ್ಥಳ:- ತೋರ್ಖಾಮ್ ಗಡಿಯು **ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನದ** ನಡುವಿನ ಪ್ರಮುಖ ಗಡಿ ದಾಟುವ ಸ್ಥಳವಾಗಿದ್ದು, ಅಂತರರಾಷ್ಟ್ರೀಯ ಗಡಿಯಲ್ಲಿ **ಗ್ರ್ಯಾಂಡ್ ಟ್ರಂಕ್ ರಸ್ತೆಯುದ್ದಕ್ಕೂ** ಇದೆ.
- ಸಂಪರ್ಕ - ಇದು ಅಫ್ಘಾನಿಸ್ತಾನದ **ನಂಗರ್‌ಹಾರ್** ಪ್ರಾಂತ್ಯವನ್ನು ಪಾಕಿಸ್ತಾನದ **ಖೈಬರ್ ಪಖ್ತುಂಖ್ವಾ** ಪ್ರಾಂತ್ಯದೊಂದಿಗೆ ಸಂಪರ್ಕಿಸುತ್ತದೆ.
- ಇದು ಎರಡೂ ರಾಷ್ಟ್ರಗಳ ನಡುವಿನ **ಅತ್ಯಂತ ಜನನಿಬಿಡ ಗಡಿ ದಾಟುವ ಸ್ಥಳವಾಗಿದ್ದು**, ಸಾರಿಗೆ, ವ್ಯಾಪಾರ ಮತ್ತು ಲಾಜಿಸ್ಟಿಕ್ಸ್‌ಗೆ ಪ್ರಮುಖ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದೆ.

## 3. ಭಾರತ-ನೇಪಾಳ ವ್ಯಾಪಾರ ಸಂಬಂಧಗಳ ಬಲವರ್ಧನೆಗೆ ಒಪ್ಪಂದ







BBC

### ಸಂದರ್ಭ:

- **ಭಾರತದ ಜೋಗ್ಬಾನಿ ಮತ್ತು ನೇಪಾಳದ ಬಿರಾಟ್‌ನಗರಗಳ** ನಡುವೆ **ರೈಲು ಆಧಾರಿತ ಸರಕು ಸಾಗಣೆಗೆ** ಅನುಕೂಲವಾಗುವಂತೆ ಭಾರತ ಮತ್ತು ನೇಪಾಳ **ಸಾರಿಗೆ ಒಪ್ಪಂದವನ್ನು** ತಿದ್ದುಪಡಿ ಮಾಡಿವೆ.

### ಭಾರತ - ನೇಪಾಳ ಸಂಬಂಧಗಳು:

- ಗಡಿ ಹಂಚಿಕೆ:- ನೇಪಾಳ ದೇಶವು, ಭಾರತದ ಐದು ರಾಜ್ಯಗಳಾದ **ಸಿಕ್ಕಿಂ, ಪಶ್ಚಿಮ ಬಂಗಾಳ, ಬಿಹಾರ, ಉತ್ತರ ಪ್ರದೇಶ ಮತ್ತು ಉತ್ತರಾಖಂಡ** ಜೊತೆ ಗಡಿಯನ್ನು ಹಂಚಿಕೊಂಡಿದೆ.
- **ಭಾರತ-ನೇಪಾಳ ಶಾಂತಿ ಮತ್ತು ಸ್ನೇಹ ಒಪ್ಪಂದ**:- 1950 ರಲ್ಲಿ ಸಹಿ ಹಾಕಲಾಯಿತು, ಇದು ಭಾರತ ಮತ್ತು ನೇಪಾಳ ನಡುವೆ ಇರುವ ವಿಶೇಷ ಸಂಬಂಧಗಳನ್ನು ರೂಪಿಸುತ್ತದೆ.
- ರಕ್ಷಣಾ ಸಹಕಾರ:- ಎರಡೂ ದೇಶಗಳು ಭಾರತ ಮತ್ತು ನೇಪಾಳದಲ್ಲಿ ಪರ್ಯಾಯವಾಗಿ **ಸೂರ್ಯ ಕಿರಣ್** ಎಂಬ ಜಂಟಿ ಸೇನಾ ಸಮಾರಾಭ್ಯಾಸವನ್ನು ನಡೆಸುತ್ತವೆ.
- ಭಾರತೀಯ ಸೇನೆಯ **ಗೋರ್ಖಾ ಪಡೆಯನ್ನು** ಭಾಗಶಃ ನೇಪಾಳದ ಗುಡ್ಡ ಪ್ರದೇಶಗಳ ಜಿಲ್ಲೆಗಳ ಜನರನ್ನು ನೇಮಕಾತಿ ಮಾಡುವ ಮೂಲಕ ರಚಿಸಲಾಗುತ್ತದೆ.
- ವ್ಯಾಪಾರ ಮತ್ತು ಆರ್ಥಿಕತೆ:- **ಭಾರತವು ನೇಪಾಳದ ಅತಿದೊಡ್ಡ ವ್ಯಾಪಾರ ಪಾಲುದಾರ ಮತ್ತು ಹೂಡಿಕೆಯ ದೇಶವಾಗಿದೆ**, ಅಲ್ಲಿ ಭಾರತೀಯ ಸಂಸ್ಥೆಗಳು ನೇಪಾಳದ ಒಟ್ಟು ವಿದೇಶಿ ನೇರ ಬಂಡವಾಳ ಹೂಡಿಕೆಯಲ್ಲಿ **33.5% ರಷ್ಟು ಪಾಲನ್ನು ಹೊಂದಿವೆ.**
- **ಆಪರೇಷನ್ ಮೈತ್ರಿ** ಮತ್ತು ಭೂಕಂಪದ ನಂತರದ ಪುನರ್ನಿರ್ಮಾಣ ನೆರವು:- **2015 ರಲ್ಲಿ ನೇಪಾಳದಲ್ಲಿ ಸಂಭವಿಸಿದ ಭೂಕಂಪದ ನಂತರ**, ಭಾರತ ಸರ್ಕಾರವು ಮೊದಲು ಸ್ಪಂದಿಸಿತು ಮತ್ತು ವಿದೇಶದಲ್ಲಿ ತನ್ನ ಅತಿದೊಡ್ಡ ವಿಪತ್ತು ಪರಿಹಾರ ಕಾರ್ಯಾಚರಣೆಯನ್ನು ನಡೆಸಿತು.
- ಸಾಂಸ್ಕೃತಿಕ ಸಂಬಂಧಗಳು:- ಎರಡು ದೇಶಗಳ ನಾಯಕರು ಸಹಜವಾಗಿಯೇ ಪುರಾತನ **'ರೊಟಿ–ಬೇಟಿ' ಸಂಬಂಧವನ್ನು** ಉಲ್ಲೇಖಿಸುತ್ತಾರೆ, ಇದು ಎರಡು ದೇಶಗಳ ಜನರ ನಡುವೆ ನಡೆಯುವ **ಗಡಿಯಾಚೆಗಿನ ವಿವಾಹಗಳನ್ನು** ಸೂಚಿಸುತ್ತದೆ.

### ಭಾರತ ಮತ್ತು ನೇಪಾಳ ನಡುವಿನ ವಿವಾದಿತ ಪ್ರದೇಶಗಳ ಬಗ್ಗೆ:

- **ಕಾಲಾಪಾನಿ ವಿವಾದ:-** ಈ ಪ್ರದೇಶವು **ಭಾರತದ ನಿಯಂತ್ರಣದಲ್ಲಿದೆ ಆದರೆ ಐತಿಹಾಸಿಕ ಕಾರಣಗಳಿಂದಾಗಿ ನೇಪಾಳವು ಈ ಪ್ರದೇಶವನ್ನು ತನ್ನದೆಂದು ಹೇಳಿಕೊಳ್ಳುತ್ತದೆ.** ಈ ಪ್ರದೇಶವು ನೇಪಾಳ ಮತ್ತು ಭಾರತದ ನಡುವಿನ ಅತಿದೊಡ್ಡ ಪ್ರಾದೇಶಿಕ ವಿವಾದವಾಗಿದೆ.

## 4. ಭೂತಾನಿಗೆ ಭೇಟಿ ನೀಡಿದ ಪ್ರಧಾನಿ




### ಸಂದರ್ಭ:

- ಪ್ರಧಾನಿ ನರೇಂದ್ರ ಮೋದಿಯವರ ಇತ್ತೀಚಿನ ಭೂತಾನ ಭೇಟಿಯು ಎರಡೂ ದೇಶಗಳ ನಡುವಿನ ಸ್ನೇಹ ಮತ್ತು ಸಹಕಾರದ ವಿಶೇಷ ಸಂಬಂಧಗಳನ್ನು ಬಲಪಡಿಸಿತು.

### ಪ್ರಮುಖ ಫಲಿತಾಂಶಗಳು:

- ಎರಡೂ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಒಪ್ಪಂದದ ಅಡಿಯಲ್ಲಿ ನಿರ್ಮಿಸಲಾದ 1020 ಮೆಗಾವ್ಯಾಟ್ **ಪುನತ್ಸಂಗ್ಚು-II ಜಲವಿದ್ಯುತ್ ಯೋಜನೆಯ** ಉದ್ಘಾಟನೆ.

### ಭಾರತ-ಭೂತಾನ ಸಂಬಂಧಗಳು:

- ಭೌಗೋಳಿಕ ಸಂಪರ್ಕ:- ಭೂತಾನ ತನ್ನ ಗಡಿಯನ್ನು ನಾಲ್ಕು ಭಾರತದ ರಾಜ್ಯಗಳಾದ **ಅಸ್ಸಾಂ, ಅರುಣಾಚಲ ಪ್ರದೇಶ, ಪಶ್ಚಿಮ ಬಂಗಾಳ ಮತ್ತು ಸಿಕ್ಕಿಂ** ಜೊತೆ 699 ಕಿ.ಮೀ ಉದ್ದದ ಗಡಿಯನ್ನು ಹಂಚಿಕೊಂಡಿದೆ ಮತ್ತು **ಭಾರತ ಮತ್ತು ಚೀನಾ ನಡುವೆ ಗಡಿ ತಡೆ ವಲಯವಾಗಿ** (ಬಫರ್ ಜೋನ್) ಕಾರ್ಯನಿರ್ವಹಿಸುತ್ತದೆ.
- ರಾಜತಾಂತ್ರಿಕ ಸಂಬಂಧಗಳು - 1968 ರಲ್ಲಿ ಸ್ಥಾಪಿಸಲಾಯಿತು.
- ಸ್ನೇಹ ಒಪ್ಪಂದ - ಭಾರತ ಭೂತಾನ್ ಸಂಬಂಧಗಳ ಮೂಲ ಚೌಕಟ್ಟು **1949 ರಲ್ಲಿ ಸಹಿ ಹಾಕಲಾದ ಸ್ನೇಹ ಮತ್ತು ಸಹಕಾರ ಒಪ್ಪಂದವಾಗಿದ್ದು**, ಫೆಬ್ರವರಿ 2007 ರಲ್ಲಿ ನವೀಕರಿಸಲಾಯಿತು.
- ಭಾರತದಿಂದ ಭೂತಾನ್‌ನಲ್ಲಿ ನಾಲ್ಕು ಪ್ರಮುಖ ದ್ವಿಪಕ್ಷೀಯ ಯೋಜನೆಗಳನ್ನು ಪ್ರಾರಂಭಿಸಲಾಗಿದೆ, ಅವುಗಳೆಂದರೆ:

1. ಜಲವಿದ್ಯುತ್ ಯೋಜನೆಗಳು - **ಪುನತ್ಸಂಗ್ಚು ಮತ್ತು ಮಂಗ್ದೆಚ್ಚು** ಯೋಜನೆಗಳು.
2. **ಇಸ್ರೋದ ಭೂ ಕೇಂದ್ರ.**
3. **ರುಪೇ ಕಾರ್ಡ್**
4. **ಭಾರತದ ರಾಷ್ಟ್ರೀಯ ಜ್ಞಾನ ಜಾಲ**

- ಆರ್ಥಿಕತೆ - ಭಾರತವು ಆಮದು ಮೂಲ ಮತ್ತು ರಫ್ತು ತಾಣವಾಗಿ **ಭೂತಾನ್‌ನ ಅಗ್ರ ವ್ಯಾಪಾರ ಪಾಲುದಾರ** ದೇಶವಾಗಿದೆ.
- ಭೂತಾನ, **BHIM ಆ್ಯಪ್ ಅನ್ನು ಪ್ರಾರಂಭಿಸಿದ ಎರಡನೇ ದೇಶವಾಗಿದೆ.**
- ಸಾಂಸ್ಕೃತಿಕ ಮತ್ತು ಬೌದ್ಧ ಸಂಪರ್ಕಗಳು: ಹಲವಾರು ಭೂತಾನ್ ಯಾತ್ರಿಕರು **ಬೋಧಗಯಾ, ರಾಜಗೀರ್, ನಳಂದಾ, ಸಿಕ್ಕಿಂ, ಉದಯಗಿರಿ** ಮತ್ತು ಭಾರತದ ಇತರ ಬೌದ್ಧ ಸ್ಥಳಗಳಿಗೆ ಪ್ರಯಾಣಿಸುತ್ತಾರೆ.

## 5. ಏಷ್ಯಾ-ಪೆಸಿಫಿಕ್ ಆರ್ಥಿಕ ಸಹಕಾರ (APEC) ಶೃಂಗಸಭೆ, 2025




### ಇದೀಗ ಸುದ್ದಿಯಲ್ಲಿದೆ:

- ಇತ್ತೀಚೆಗೆ, ದಕ್ಷಿಣ ಕೊರಿಯಾದ ಗ್ಯುಂಗ್‌ಜುನಲ್ಲಿ ನಡೆದ 'ಏಷ್ಯಾ–ಪೆಸಿಫಿಕ್ ಆರ್ಥಿಕ ಸಹಕಾರ ಶೃಂಗಸಭೆ'ಯು (2025), 'ಎಪೆಕ್ ನಾಯಕರ ಗ್ಯುಂಗ್‌ಜು ಘೋಷಣೆ'ಯನ್ನು ಅಂಗೀಕರಿಸುವುದರೊಂದಿಗೆ ಮುಕ್ತಾಯಗೊಂಡಿತು.

### ಎಪೆಕ್ ಶೃಂಗಸಭೆ, 2025 ರ ಬಗ್ಗೆ:

- **ನಾಯಕರ ಘೋಷಣೆಯ ಅಂಗೀಕಾರ (ಗ್ಯುಂಗ್‌ಜು ಘೋಷಣೆ):** ಎಪೆಕ್ ನಾಯಕರು ಈ ಕೆಳಗಿನ ವಿಷಯಗಳಿಗೆ ತಮ್ಮ ಬದ್ಧತೆಯನ್ನು ಪುನರುಚ್ಚರಿಸುವ ಜಂಟಿ ಘೋಷಣೆಯನ್ನು ಅನುಮೋದಿಸಿದರು:
  - ಏಷ್ಯಾ-ಪೆಸಿಫಿಕ್ ಪ್ರದೇಶದಾದ್ಯಂತ ಮುಕ್ತ ಮತ್ತು ತೆರೆದ ವ್ಯಾಪಾರ;
  - ಪೂರೈಕೆ ಸರಪಳಿಯ ಸ್ಥಿತಿಸ್ಥಾಪಕತ್ವವನ್ನು ಬಲಪಡಿಸುವುದು;
  - ಅಂತರ್ಗತ ಮತ್ತು **ಸುಸ್ಥಿರ ಆರ್ಥಿಕ ಬೆಳವಣಿಗೆಯನ್ನು** ಉತ್ತೇಜಿಸುವುದು;
  - ಡಿಜಿಟಲ್ ಪರಿವರ್ತನೆ ಮತ್ತು **ಹವಾಮಾನ** ಕ್ರಿಯೆಯನ್ನು ಮುನ್ನಡೆಸುವುದು.

### ಏಷ್ಯಾ-ಪೆಸಿಫಿಕ್ ಆರ್ಥಿಕ ಸಹಕಾರ (APEC) ವೇದಿಕೆಯ ಬಗ್ಗೆ:

- ಇದು 1989 ರಲ್ಲಿ ಸ್ಥಾಪನೆಯಾದ ಪ್ರಾದೇಶಿಕ ಆರ್ಥಿಕ ವೇದಿಕೆಯಾಗಿದೆ.
- **ಉದ್ದೇಶ** - ಏಷ್ಯಾ-ಪೆಸಿಫಿಕ್ ಪ್ರದೇಶದಾದ್ಯಂತದ ಆರ್ಥಿಕತೆಗಳ ಪರಸ್ಪರ ಅವಲಂಬನೆಯನ್ನು ಬಲಪಡಿಸುವುದು.
- **ಸದಸ್ಯ ಆರ್ಥಿಕತೆ ರಾಷ್ಟ್ರಗಳು (21 ಸದಸ್ಯರು):** ಆಸ್ಟ್ರೇಲಿಯಾ; ಬ್ರೂನಿ ದಾರುಸ್ಸಲಾಮ್; ಕೆನಡಾ; ಚಿಲಿ; ಪೀಪಲ್ಸ್ ರಿಪಬ್ಲಿಕ್ ಆಫ್ ಚೀನಾ; ಹಾಂಗ್ ಕಾಂಗ್, ಚೀನಾ; ಇಂಡೋನೇಷ್ಯಾ; ಜಪಾನ್; ರಿಪಬ್ಲಿಕ್ ಆಫ್ ಕೊರಿಯಾ; ಮಲೇಷ್ಯಾ; ಮೆಕ್ಸಿಕೊ; ನ್ಯೂಜಿಲೆಂಡ್; ಪಪುವಾ ನ್ಯೂ ಗಿನಿಯಾ; ಪೆರು; ಫಿಲಿಪೈನ್ಸ್; ರಷ್ಯನ್ ಫೆಡರೇಶನ್; ಸಿಂಗಾಪುರ (ಎಪೆಕ್ ಸಚಿವಾಲಯ ಮತ್ತು ಪ್ರಧಾನ ಕಚೇರಿ); ಚೈನೀಸ್ ತೈಪೆ; ಥೈಲ್ಯಾಂಡ್; ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ; ಮತ್ತು ವಿಯೆಟ್ನಾಂ.

## 6. ಭಾರತ - ಅಮೇರಿಕಾ ನಡುವೆ ರಕ್ಷಣಾ ಒಪ್ಪಂದ



### ಸಂದರ್ಭ:

- ಅಮೇರಿಕಾದ ರಾಜ್ಯ ಇಲಾಖೆಯು ಭಾರತಕ್ಕೆ 93 ದಶಲಕ್ಷ ಡಾಲರ್ ಮೌಲ್ಯದ **ಎಫ್‌ಜಿಎಂ-148 ಜಾವೆಲಿನ್ ಟ್ಯಾಂಕ್ ವಿರೋಧಿ ಕ್ಷಿಪಣಿ ವ್ಯವಸ್ಥೆಯ** ಮಾರಾಟಕ್ಕೆ ಅಧಿಕೃತವಾಗಿ ಅನುಮೋದನೆ ನೀಡಿದೆ.

### ಎಫ್‌ಜಿಎಂ-148 ಜಾವೆಲಿನ್ ಟ್ಯಾಂಕ್ ವಿರೋಧಿ ಕ್ಷಿಪಣಿ ವ್ಯವಸ್ಥೆಯ ಬಗ್ಗೆ:

- ಇದು ಅತ್ಯಾಧುನಿಕ **ಟ್ಯಾಂಕ್ ವಿರೋಧಿ ಮಾರ್ಗದರ್ಶಿ ಕ್ಷಿಪಣಿ ವ್ಯವಸ್ಥೆಯಾಗಿದೆ** (ATGM).
- ಇದು **ಒಬ್ಬನೇ ಸೈನಿಕನಿಂದ ಹೊತ್ತೊಯ್ಯಬಲ್ಲ ಮಧ್ಯಮ ಶ್ರೇಣಿಯ, "ಪ್ರಯೋಗಿಸಿ ಮತ್ತು ಮರೆತುಬಿಡಿ"** ತತ್ವದ ಮೇಲೆ ಕಾರ್ಯನಿರ್ವಹಿಸುವ (ಅಂದರೆ, ಒಮ್ಮೆ ಗುರಿ ಇಟ್ಟು ಉಡಾಯಿಸಿದ ನಂತರ, ಅದು ತನ್ನಷ್ಟಕ್ಕೇ ಗುರಿಯನ್ನು ತಲುಪುತ್ತದೆ) ಅಸ್ತ್ರವಾಗಿದೆ. ಪ್ರಸ್ತುತ ಬಳಕೆಯಲ್ಲಿರುವ **ಎಲ್ಲಾ ಬಗೆಯ ರಕ್ಷಾ ಕವಚಗಳನ್ನು ಭೇದಿಸಲು** ಇದನ್ನು ವಿನ್ಯಾಸಗೊಳಿಸಲಾಗಿದೆ.

### ಭಾರತ ಮತ್ತು ಅಮೇರಿಕ ನಡುವಿನ ಜಂಟಿ ಸೇನಾ ಸಮರಾಭ್ಯಾಸಗಳ ಬಗ್ಗೆ:

- **ಯುದ್ಧ ಅಭ್ಯಾಸ:** ಭೂಸೇನೆಗಳ ನಡುವಿನ ಸಮರಾಭ್ಯಾಸ.
- **ಮಲಬಾರ್:** ಅಮೇರಿಕ, ಭಾರತ, ಜಪಾನ್ ಮತ್ತು ಆಸ್ಟ್ರೇಲಿಯಾಗಳನ್ನೊಳಗೊಂಡ ನೌಕಾಪಡೆಯ ಕ್ವಾಡ್ ಒಕ್ಕೂಟದ ಸಮರಾಭ್ಯಾಸ.
- **ಕೋಪ್ ಇಂಡಿಯಾ:** ವಾಯುಪಡೆಯ ಸಮರಾಭ್ಯಾಸ.
- **ಟೈಗರ್ ಟ್ರಯಂಫ್:** ಮೂರು ಸೇನೆ (ಭೂ, ಜಲ, ವಾಯು) ಗಳ ಮಾನವೀಯ ನೆರವು ಮತ್ತು ವಿಪತ್ತು ಪರಿಹಾರ (HADR) ಸಮರಾಭ್ಯಾಸ.
- **ವಜ್ರ ಪ್ರಹಾರ:** ವಿಶೇಷ ಪಡೆಗಳ ಸಮರಾಭ್ಯಾಸ.

## 7. ಭಾರತ-ಬ್ರೆಜಿಲ್-ದಕ್ಷಿಣ ಆಫ್ರಿಕಾ (IBSA) ನಾಯಕರ ಶೃಂಗಸಭೆ

### ಇದೀಗ ಸುದ್ದಿಯಲ್ಲಿದೆ:

- ಭಾರತ-ಬ್ರೆಜಿಲ್-ದಕ್ಷಿಣ ಆಫ್ರಿಕಾ (IBSA) ನಾಯಕರ ಶೃಂಗಸಭೆಯಲ್ಲಿ ಮಾತನಾಡಿದ ಭಾರತದ ಪ್ರಧಾನ ಮಂತ್ರಿಯವರು, **ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ** ಸುಧಾರಣೆಗಳು ಇನ್ನುಮುಂದೆ ಕೇವಲ ಒಂದು ಆಯ್ಕೆಯಾಗಿರದೆ, ಅದೊಂದು ಜಾಗತಿಕ ಅನಿವಾರ್ಯತೆಯಾಗಿದೆ ಎಂದು ಒತ್ತು ನೀಡಿದರು.

### ಭಾರತ-ಬ್ರೆಜಿಲ್-ದಕ್ಷಿಣ ಆಫ್ರಿಕಾ (IBSA) ನಾಯಕರ ಶೃಂಗಸಭೆ, 2025 ರ ಬಗ್ಗೆ:

- **ಗಮನಿಸಿ:** ಆಫ್ರಿಕಾದ **ಜೋಹಾನ್ಸ್‌ಬರ್ಗ್‌ನಲ್ಲಿ** ನಡೆದ ಮೊದಲ ಜಿ-20 ಶೃಂಗಸಭೆಯೊಂದಿಗೆ ಇದು ಏಕಕಾಲದಲ್ಲಿ ಜರುಗಿತು.

### ಐಬಿಎಸ್‌ಎ (IBSA) ಸಂವಾದ ವೇದಿಕೆಯ ಬಗ್ಗೆ:

- ಸ್ಥಾಪನೆ:- **'ಗ್ಲೋಬಲ್ ಸೌತ್'ನ** (ದಕ್ಷಿಣ ಗೋಳಾರ್ಧದ ರಾಷ್ಟ್ರಗಳ) ಸಾಮೂಹಿಕ ದನಿಯಾಗಿ, 2003 ರ **'ಬ್ರೆಸಿಲಿಯಾ ಘೋಷಣೆ'ಯ** ಮೂಲಕ ಇದನ್ನು ಸ್ಥಾಪಿಸಲಾಯಿತು.
- **ಸದಸ್ಯತ್ವ:** ಇದು **ಭಾರತ, ಬ್ರೆಜಿಲ್ ಮತ್ತು ದಕ್ಷಿಣ ಆಫ್ರಿಕಾವನ್ನು (ಐಬಿಎಸ್‌ಎ ಟ್ರೋಯಿಕಾ )** ಒಳಗೊಂಡಿದೆ. ಈ ರಾಷ್ಟ್ರಗಳು **ಬಹುಪಕ್ಷೀಯತೆ, ಪ್ರಜಾಸತ್ತಾತ್ಮಕ ಮೌಲ್ಯಗಳು ಮತ್ತು ಅಂತರ್ಗತ ಅಭಿವೃದ್ಧಿಗೆ** ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದವು.
- **ಮಹತ್ವ:** ಇದು **ಏಷ್ಯಾ, ಆಫ್ರಿಕಾ ಮತ್ತು ದಕ್ಷಿಣ ಅಮೇರಿಕ** ಖಂಡಗಳ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತದೆ.
- **ಪ್ರಮುಖ ಉಪಕ್ರಮಗಳು:** ದಕ್ಷಿಣ-ದಕ್ಷಿಣ ಸಹಕಾರವನ್ನು ವರ್ಧಿಸಲು ಸ್ಥಾಪಿತವಾದ **"IBSA ಟ್ರಸ್ಟ್ ನಿಧಿ"** (2006 ರಲ್ಲಿ ಕಾರ್ಯಾರಂಭ) ಮತ್ತು **"ಇಬ್ಸಾಮಾರ್" (IBSAMAR)** ಬಹುರಾಷ್ಟ್ರೀಯ ಕಡಲ ಸಮರಾಭ್ಯಾಸಗಳು ಇದರಲ್ಲಿ ಸೇರಿವೆ.

### ವಿಶ್ವಸಂಸ್ಥೆಯ ಭದ್ರತಾ ಮಂಡಳಿ (UNSC) ಯ ಬಗ್ಗೆ:

- ಇದು **ವಿಶ್ವಸಂಸ್ಥೆಯ (UN)** ಪ್ರಮುಖ ಅಂಗ ಸಂಸ್ಥೆಗಳಲ್ಲಿ ಒಂದಾಗಿದ್ದು, **ಅಂತರರಾಷ್ಟ್ರೀಯ ಶಾಂತಿ** ಮತ್ತು **ಭದ್ರತೆಯನ್ನು** ಕಾಪಾಡುವ ಜವಾಬ್ದಾರಿಯನ್ನು ಹೊಂದಿದೆ.
- **ವಿಶ್ವಸಂಸ್ಥೆಯ ಸನ್ನದಿನ ಅಡಿಯಲ್ಲಿ ಇದನ್ನು 1945 ರಲ್ಲಿ** ಸ್ಥಾಪಿಸಲಾಯಿತು.
- ರಚನೆ: ಇದು **15 ಸದಸ್ಯ ರಾಷ್ಟ್ರಗಳನ್ನು** ಒಳಗೊಂಡಿದೆ. ಇದರಲ್ಲಿ **ವೀಟೋ ಅಧಿಕಾರ ಹೊಂದಿರುವ ಐದು ಕಾಯಂ ಸದಸ್ಯರು (P5)** ಮತ್ತು ಸಾಮಾನ್ಯಸಭೆಯಿಂದ **ಎರಡು ವರ್ಷಗಳ ಅವಧಿಗೆ**

ಆಯ್ಕೆಯಾದ **ಹತ್ತು ಕಾಯಂ ಅಲ್ಲದ ಸದಸ್ಯರು** ಇರುತ್ತಾರೆ.

- ಕೇಂದ್ರ ಕಚೇರಿ: ಅಮೆರಿಕದ **ನ್ಯೂಯಾರ್ಕ್ ನಗರದಲ್ಲಿದೆ.**

## 8. ದಕ್ಷಿಣ ಆಫ್ರಿಕಾ ಜಿ-20 ಶೃಂಗಸಭೆ

### ಇದೀಗ ಸುದ್ದಿಯಲ್ಲಿದೆ:

- ದಕ್ಷಿಣ ಆಫ್ರಿಕಾದ **ಜೋಹಾನ್ಸ್‌ಬರ್ಗ್‌ನಲ್ಲಿ** 2025 ರ ಜಿ-20 ಶೃಂಗಸಭೆ ಜರುಗಿತು. **ಆಫ್ರಿಕಾ ಖಂಡದ ನೆಲದಲ್ಲಿ ನಡೆದ ಚೊಚ್ಚಲ ಜಿ-20 ಶೃಂಗಸಭೆ** ಇದಾಗಿದೆ. **"ಒಗ್ಗಟ್ಟು, ಸಮಾನತೆ, ಸುಸ್ಥಿರತೆ"** ಎಂಬುದು ಈ ಶೃಂಗಸಭೆಯ ಧ್ಯೇಯವಾಕ್ಯವಾಗಿತ್ತು.

### ಶೃಂಗಸಭೆಯ ಮುಖ್ಯಾಂಶಗಳು:

- **ಜಿ-20 ನಾಯಕರ ಘೋಷಣೆಯ ಅಂಗೀಕಾರ:** ಹವಾಮಾನ ಬದಲಾವಣೆ ತಡೆಗಟ್ಟುವ ಕ್ರಮಗಳಿಗೆ (ಹೊಂದಾಣಿಕೆಗಾಗಿ ಹಣಕಾಸು ಮತ್ತು **ನವೀಕರಿಸಬಹುದಾದ ಇಂಧನದ** ಮೇಲೆ ಕೇಂದ್ರೀಕರಿಸುವುದು) ಬದ್ಧತೆಯನ್ನು ಇದು ಪುನರುಚ್ಚರಿಸುತ್ತದೆ.
- **ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ** ಸುಧಾರಣೆ ಸೇರಿದಂತೆ ಜಾಗತಿಕ ಸಾಂಸ್ಥಿಕ ಸುಧಾರಣೆಗಳಿಗೆ ಒತ್ತು ನೀಡಲಾಯಿತು.
- **ಮಹಿಳೆಯರು** ಮತ್ತು ಬಾಲಕಿಯರ ಸಬಲೀಕರಣಕ್ಕೆ ವಿಶೇಷ ಪ್ರಾಧಾನ್ಯತೆ ಹಾಗೂ **ಭಯೋತ್ಪಾದನೆಯ** ತೀವ್ರ ಖಂಡನೆ ಮಾಡಲಾಯಿತು.
- ಜಿ- 20 ಒಕ್ಕೂಟದಲ್ಲಿ **'ಆಫ್ರಿಕಾದ ಒಕ್ಕೂಟ'ಕ್ಕೆ ಖಾಯಂ ಸದಸ್ಯತ್ವ** ನೀಡಲಾಯಿತು.

### ಭಾರತದ ನಿಲುವು/ಉಪಕ್ರಮಗಳು

- ಸಾಮೂಹಿಕ ಮಾನವ ಜ್ಞಾನವನ್ನು ಸದ್ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ **'ಜಾಗತಿಕ ಸಾಂಪ್ರದಾಯಿಕ ಜ್ಞಾನ ಭಂಡಾರ'ವನ್ನು** ಸ್ಥಾಪಿಸಲು ಪ್ರಸ್ತಾಪಿಸಿತು.
- ಆಫ್ರಿಕಾದ ಯುವಜನತೆಗೆ ಕೌಶಲ ತರಬೇತಿ ನೀಡಲು, ಒಂದು ಮಿಲಿಯನ್ ಪ್ರಮಾಣೀಕೃತ ತರಬೇತುದಾರರನ್ನು ರೂಪಿಸುವ **'ಜಿ-20-ಆಫ್ರಿಕಾ ಸ್ಕಿಲ್ಸ್ ಮಲ್ಟಿಪ್ಲೈಯರ್'** ಉಪಕ್ರಮಕ್ಕೆ ಚಾಲನೆ ನೀಡಲಾಯಿತು.
- ಆರೋಗ್ಯ ಬಿಕ್ಕಟ್ಟುಗಳಿಗೆ ತ್ವರಿತವಾಗಿ ಸ್ಪಂದಿಸಲು **'ಜಾಗತಿಕ ಆರೋಗ್ಯ ಪ್ರತಿಕ್ರಿಯೆ ತಂಡ'**ವನ್ನು ರಚಿಸಲು ಪ್ರತಿಪಾದಿಸಿತು.
- ಕೃಷಿ, ಮೀನುಗಾರಿಕೆ ಮತ್ತು ವಿಪತ್ತು ನಿರ್ವಹಣೆಗೆ ಸಂಬಂಧಿಸಿದ ದತ್ತಾಂಶ ಹಂಚಿಕೆಗಾಗಿ **'ಮುಕ್ತ ಉಪಗ್ರಹ ದತ್ತಾಂಶ ಪಾಲುದಾರಿಕೆ'**ಯನ್ನು ಆರಂಭಿಸಿತು.
- ಮರುಬಳಕೆ ಮತ್ತು ಸುಸ್ಥಿರ ಪೂರೈಕೆ ಸರಪಳಿಗಳನ್ನು ಉತ್ತೇಜಿಸುವ **'ನಿರ್ಣಾಯಕ ಖನಿಜಗಳ ಆವರ್ತಕತೆ ಉಪಕ್ರಮ'**ವನ್ನು ಮಂಡಿಸಿತು.
- ನಿರ್ಣಾಯಕ ತಂತ್ರಜ್ಞಾನಗಳು, ಕೃತಕ ಬುದ್ಧಿಮತ್ತೆ (AI), ಪೂರೈಕೆ ಸರಪಳಿಗಳು ಮತ್ತು ಶುದ್ಧ ಇಂಧನ ವಲಯದಲ್ಲಿನ ಸಹಕಾರಕ್ಕಾಗಿ **ಆಸ್ಟ್ರೇಲಿಯಾ ಮತ್ತು ಕೆನಡಾದೊಂದಿಗೆ 'ಎಸಿಐಟಿಐ ತ್ರಿಪಕ್ಷೀಯ ಚೌಕಟ್ಟಿಗೆ'** ಚಾಲನೆ ನೀಡಲಾಯಿತು.

## 9. ಆಪರೇಷನ್ ಸದರ್ನ್ ಸ್ಪಿಯರ್

### ಇದೀಗ ಸುದ್ದಿಯಲ್ಲಿದೆ:

- **ಅಮೇರಿಕ ಸಂಯುಕ್ತ ಸಂಸ್ಥಾನವು ಲ್ಯಾಟಿನ್ ಅಮೇರಿಕದಲ್ಲಿ** 'ಆಪರೇಷನ್ ಸದರ್ನ್ ಸ್ಪಿಯರ್' ಎಂಬ ಮಹತ್ವದ ಕಾರ್ಯಾಚರಣೆಯನ್ನು ಪ್ರಾರಂಭಿಸಿದೆ. **"ನಾರ್ಕೋ-ಭಯೋತ್ಪಾದಕರನ್ನು"** (ಮಾದಕವಸ್ತು ಕಳ್ಳಸಾಗಣೆದಾರರು ಮತ್ತು ಭಯೋತ್ಪಾದಕರ ಜಾಲ) ಸಂಪೂರ್ಣವಾಗಿ ನಿರ್ಮೂಲನೆ ಮಾಡುವುದು ಈ ಕಾರ್ಯಾಚರಣೆಯ ಮೂಲ ಉದ್ದೇಶವಾಗಿದೆ.

### ಆಪರೇಷನ್ ಸದರ್ನ್ ಸ್ಪಿಯರ್ ಕಾರ್ಯಾಚರಣೆಯ ಪ್ರಮುಖಾಂಶಗಳು:

- **ಸ್ವರೂಪ:** ಇದೊಂದು ಪ್ರಮುಖ **ಸೇನಾ ಮತ್ತು ಕಣ್ಗಾವಲು** ಕಾರ್ಯಾಚರಣೆಯಾಗಿದ್ದು ನಾರ್ಕೋ-ಭಯೋತ್ಪಾದಕ ಜಾಲಗಳನ್ನು ಗುರಿಯಾಗಿಸಿಕೊಂಡಿದೆ.
- **ನಿರ್ವಹಣೆ:** ಈ ಕಾರ್ಯಾಚರಣೆಯನ್ನು **ಅಮೇರಿಕದ 'ಸೌತ್ ಕಾಮ್' (SOUTHCOM)** ಮುನ್ನಡೆಸುತ್ತಿದೆ.

### 'ಸೌತ್ ಕಾಮ್' ನ ಬಗ್ಗೆ:

- ಪೂರ್ಣ ರೂಪ: **'ಯು.ಎಸ್. ಸದರ್ನ್ ಕಮಾಂಡ್'**
- ಕಾರ್ಯವ್ಯಾಪ್ತಿ: ಇದರ ಕಾರ್ಯವ್ಯಾಪ್ತಿಯು **ದಕ್ಷಿಣ ಅಮೇರಿಕ, ಮಧ್ಯ ಅಮೇರಿಕ ಮತ್ತು ಕೆರಿಬಿಯನ್** ಪ್ರದೇಶದಾದ್ಯಂತ ಇರುವ **31 ದೇಶಗಳನ್ನು** ಒಳಗೊಂಡಿದೆ.

### ಕಾರ್ಯಾಚರಣೆಯ ಉದ್ದೇಶಗಳು:

ಅಮೇರಿಕ ಸರ್ಕಾರದ ಪ್ರಕಾರ, ಈ ಕಾರ್ಯಾಚರಣೆಯು ಮೂರು ಪ್ರಮುಖ ಗುರಿಗಳನ್ನು ಹೊಂದಿದೆ:

1. **ತಾಯ್ನಾಡಿನ ರಕ್ಷಣೆ:** ಅಮೇರಿಕದ ತಾಯ್ನಾಡನ್ನು ಬಾಹ್ಯ ಬೆದರಿಕೆಗಳಿಂದ ರಕ್ಷಿಸುವುದು.
2. **ಭಯೋತ್ಪಾದನೆ ನಿಗ್ರಹ:** ಪಶ್ಚಿಮ ಗೋಳಾರ್ಧದಿಂದ ನಾರ್ಕೋ-ಭಯೋತ್ಪಾದಕ ಬೆದರಿಕೆಗಳನ್ನು ಸಂಪೂರ್ಣವಾಗಿ ತೊಡೆದು ಹಾಕುವುದು.
3. **ಮಾದಕ ದ್ರವ್ಯ ತಡೆಗಟ್ಟುವಿಕೆ:** ಅಮೇರಿಕದ ಜನಸಂಖ್ಯೆಗೆ ಗಂಭೀರ ಹಾನಿಯನ್ನುಂಟು ಮಾಡುತ್ತಿರುವ ಅಕ್ರಮ ಮಾದಕ ದ್ರವ್ಯಗಳ ಹರಿವನ್ನು ತಡೆಗಟ್ಟುವುದು.

## 10. ಕೊಲಂಬೊ ಭದ್ರತಾ ಸಮಾವೇಶ (CSC)

### ಇದೀಗ ಸುದ್ದಿಯಲ್ಲಿದೆ:

- ಕೊಲಂಬೊ ಭದ್ರತಾ ಸಮಾವೇಶವು ಅಧಿಕೃತವಾಗಿ **ಬಾಂಗ್ಲಾದೇಶವನ್ನು ತನ್ನ ಐದನೇ ಸದಸ್ಯ ರಾಷ್ಟ್ರವನ್ನಾಗಿ** ಸೇರ್ಪಡೆಗೊಳಿಸಿಕೊಂಡಿದೆ.

### ಕೊಲಂಬೊ ಭದ್ರತಾ ಸಮಾವೇಶದ ಬಗ್ಗೆ:

- **ಸ್ಥಾಪನೆ** - 2020.
- ಉದ್ದೇಶ: **ಹಿಂದೂ ಮಹಾಸಾಗರ ಪ್ರದೇಶದಲ್ಲಿ ಕಡಲ**

ಸಹಕಾರವನ್ನು ವಿಸ್ತರಿಸುವುದು ಮತ್ತು ಪ್ರಾದೇಶಿಕ ಭದ್ರತೆಯನ್ನು ಬಲಪಡಿಸುವುದು.

- ಸದಸ್ಯರಾಷ್ಟ್ರಗಳು: **ಭಾರತ, ಶ್ರೀಲಂಕಾ, ಮಾಲ್ಡೀವ್ಸ್, ಮಾರಿಷಸ್ ಮತ್ತು ಬಾಂಗ್ಲಾದೇಶ.**
- **ಸೀಶೆಲ್ಸ್** ಒಂದು ವೀಕ್ಷಕ ರಾಷ್ಟ್ರವಾಗಿದೆ.
- **ಸಹಕಾರದ ಆಧಾರಸ್ತಂಭಗಳು:** ಕಡಲ ಭದ್ರತೆ, ಭಯೋತ್ಪಾದನಾ ನಿಗ್ರಹ, ಗಡಿಯಾಚೆಗಿನ ಸಂಘಟಿತ ಅಪರಾಧಗಳ ತಡೆಗಟ್ಟುವಿಕೆ, ಸೈಬರ್ ಭದ್ರತೆ ಹಾಗೂ ಮಾನವೀಯ ನೆರವು ಮತ್ತು ವಿಪತ್ತು ಪರಿಹಾರ.

## 11.ಏಷ್ಯಾ-ಪೆಸಿಫಿಕ್ ಆರ್ಥಿಕ ಸಹಕಾರ (APEC) ಶೃಂಗಸಭೆ, 2025




### ಇದೀಗ ಸುದ್ದಿಯಲ್ಲಿದೆ:

- ಇತ್ತೀಚೆಗೆ, **ದಕ್ಷಿಣ ಕೊರಿಯಾದ ಗ್ಯುಂಗ್‌ಜುನಲ್ಲಿ** ನಡೆದ 'ಏಷ್ಯಾ-ಪೆಸಿಫಿಕ್ ಆರ್ಥಿಕ ಸಹಕಾರ (APEC) ಶೃಂಗಸಭೆ'ಯು (2025), **APEC ನಾಯಕರ ಗ್ಯುಂಗ್‌ಜು ಘೋಷಣೆ'**ಯನ್ನು ಅಂಗೀಕರಿಸುವುದರೊಂದಿಗೆ ಮುಕ್ತಾಯಗೊಂಡಿತು.

### ಏಷ್ಯಾ-ಪೆಸಿಫಿಕ್ ಆರ್ಥಿಕ ಸಹಕಾರ (APEC) ಶೃಂಗಸಭೆ, 2025 ಯ ಬಗ್ಗೆ:

- **ನಾಯಕರ ಘೋಷಣೆಯ (ಗ್ಯುಂಗ್‌ಜು ಘೋಷಣೆ) ಅಂಗೀಕಾರ:** APEC ನಾಯಕರು ಈ ಕೆಳಗಿನ ವಿಷಯಗಳಿಗೆ ತಮ್ಮ ಬದ್ಧತೆಯನ್ನು ಪುನರುಚ್ಚರಿಸುವ ಜಂಟಿ ಘೋಷಣೆಯನ್ನು ಅನುಮೋದಿಸಿದರು:
  - **ಏಷ್ಯಾ-ಪೆಸಿಫಿಕ್ ಪ್ರದೇಶದಾದ್ಯಂತ ಮುಕ್ತ ಮತ್ತು ತೆರೆದ ವ್ಯಾಪಾರ;**
  - ಪೂರೈಕೆ ಸರಪಳಿಯ ಸ್ಥಿತಿಸ್ಥಾಪಕತ್ವವನ್ನು ಬಲಪಡಿಸುವುದು;
  - ಅಂತರ್ಗತ ಮತ್ತು **ಸುಸ್ಥಿರ ಆರ್ಥಿಕ ಬೆಳವಣಿಗೆಯನ್ನು** ಉತ್ತೇಜಿಸುವುದು;
  - ಡಿಜಿಟಲ್ ಪರಿವರ್ತನೆ ಮತ್ತು **ಹವಾಮಾನ** ಕ್ರಿಯೆಯನ್ನು ಮುನ್ನಡೆಸುವುದು.

### ಏಷ್ಯಾ-ಪೆಸಿಫಿಕ್ ಆರ್ಥಿಕ ಸಹಕಾರ (APEC) ದ ಬಗ್ಗೆ

- ಇದು 1989 ರಲ್ಲಿ ಸ್ಥಾಪನೆಯಾದ **ಪ್ರಾದೇಶಿಕ ಆರ್ಥಿಕ ವೇದಿಕೆಯಾಗಿದೆ.**
- **ಉದ್ದೇಶ -** ಏಷ್ಯಾ-ಪೆಸಿಫಿಕ್ ಪ್ರದೇಶದಾದ್ಯಂತದ **ಆರ್ಥಿಕತೆಗಳ ಪರಸ್ಪರ ಅವಲಂಬನೆಯನ್ನು ಬಲಪಡಿಸುವುದು.**
- **ಸದಸ್ಯ ಆರ್ಥಿಕತೆ ರಾಷ್ಟ್ರಗಳು (21 ಸದಸ್ಯರು):** ಆಸ್ಟ್ರೇಲಿಯಾ; ಬ್ರೂನಿ ದಾರುಸ್ಸಲಾಮ್; ಕೆನಡಾ; ಚಿಲಿ; ಚೀನಾ; ಹಾಂಗ್ ಕಾಂಗ್, ಚೀನಾ; ಇಂಡೋನೇಷ್ಯಾ; ಜಪಾನ್; ರಿಪಬ್ಲಿಕ್ ಆಫ್ ಕೊರಿಯಾ; ಮಲೇಷ್ಯಾ; ಮೆಕ್ಸಿಕೊ; ನ್ಯೂಜಿಲೆಂಡ್; ಪಪುವಾ ನ್ಯೂ ಗಿನಿಯಾ; ಪೆರು; ಫಿಲಿಪೈನ್ಸ್; ರಷ್ಯನ್ ಫೆಡರೇಶನ್; **ಸಿಂಗಾಪುರ್ (APEC ಸಚಿವಾಲಯ ಮತ್ತು ಕೇಂದ್ರ ಕಛೇರಿ);** ಚೈನೀಸ್ ತೈಪೆ; ಥೈಲ್ಯಾಂಡ್; ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ; ಮತ್ತು ವಿಯೆಟ್ನಾಂ.

# ಇತರೆ

## ಪ್ರಶಸ್ತಿಗಳು

## 1. ಬೂಕರ್ ಪ್ರಶಸ್ತಿ, 2025




### ಸಂದರ್ಭ:

- **ಡೇವಿಡ್ ಸ್ಜಲೇ ಅವರ 'ಫ್ಲೆಶ್'** ಕಾದಂಬರಿಗಾಗಿ ಈ ವರ್ಷದ ಬೂಕರ್ ಪ್ರಶಸ್ತಿ ಲಭಿಸಿದೆ. ಈ ಪ್ರಶಸ್ತಿಯನ್ನು ಗೆದ್ದ **ಮೊದಲ ಹಂಗೇರಿಯನ್-ಬ್ರಿಟಿಷ್ ಲೇಖಕರು** ಇವರಾಗಿದ್ದಾರೆ.

### ಬೂಕರ್ ಪ್ರಶಸ್ತಿಯ ಬಗ್ಗೆ:

- ಇದು **ಪ್ರತಿವರ್ಷ** ನೀಡಲಾಗುವ ಪ್ರತಿಷ್ಠಿತ ಸಾಹಿತ್ಯ ಪ್ರಶಸ್ತಿಯಾಗಿದೆ. ಇಂಗ್ಲಿಷ್ ಭಾಷೆಯಲ್ಲಿ ಬರೆಯಲ್ಪಟ್ಟು, ಯುನೈಟೆಡ್ ಕಿಂಗ್‌ಡಮ್ ಮತ್ತು/ಅಥವಾ ಐರ್ಲೆಂಡ್‌ನಲ್ಲಿ ಪ್ರಕಟವಾಗಿರುವ ಅತ್ಯುತ್ತಮ ಕಾದಂಬರಿಗೆ ಪ್ರದಾನವಾಗುವ ಪ್ರಶಸ್ತಿಯಾಗಿದೆ.
- **ಉದ್ಘಾಟನೆ :** ಓದು ಮತ್ತು ಸಾಹಿತ್ಯವನ್ನು ಉತ್ತೇಜಿಸಲು ಇದನ್ನು **ಮೊದಲು 1969 ರಲ್ಲಿ ನೀಡಲಾಯಿತು.**

### ಭಾರತೀಯ ವಿಜೇತರು:-

1. 1971 ರಲ್ಲಿ **"ಇನ್ ಎ ಫ್ರೀ ಸ್ಟೇಟ್" ಗಾಗಿ ವಿ.ಎಸ್. ನೈಪಾಲ್."**

2. 1981 ರಲ್ಲಿ **"ಮಿಡ್‌ನೈಟ್ಸ್ ಚಿಲ್ಡ್ರನ್ ಗಾಗಿ ಸಲ್ಮಾನ್ ರಶ್ದಿ."**
3. 1997 ರಲ್ಲಿ **"ದಿ ಗಾಡ್ ಆಫ್ ಸ್ಮಾಲ್ ಥಿಂಗ್ಸ್‌ಗಾಗಿ ಅರುಂಧತಿ ರಾಯ್".**
4. 2006 ರಲ್ಲಿ **"ದಿ ಇನ್ಹೆರಿಟೆನ್ಸ್ ಆಫ್ ಲಾಸ್ ಗಾಗಿ ಕಿರಣ್ ದೇಸಾಯಿ."**
5. 2008 ರಲ್ಲಿ **"ದಿ ವೈಟ್ ಟೈಗರ್ ಗಾಗಿ ಅರವಿಂದ್ ಅಡಿಗ."**
6. 2022 ರಲ್ಲಿ ಹಿಂದಿ ಕಾದಂಬರಿ **"ಟೂಂಬ್ ಆಫ್ ಸ್ಯಾಂಡ್ ಗಾಗಿ ಗೀತಾಂಜಲಿ ಶ್ರೀ."**

**ಗಮನಿಸಿ:-** 2025 ರಲ್ಲಿ, **ಬಾನು ಮುಷ್ತಾಕ್ ಮತ್ತು ದೀಪಾ ಭಸ್ತಿ** ಅವರು ಮುಷ್ತಾಕ್ ಅವರ ಸಣ್ಣ ಕಥೆಗಳ ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದಿಸಲಾದ **"ಹಾರ್ಟ್ ಲ್ಯಾಂಪ್"** ಸಂಕಲನಕ್ಕಾಗಿ ಪ್ರಶಸ್ತಿಯನ್ನು ಪಡೆದರು.

## 2. ರಾಷ್ಟ್ರೀಯ ಜಲ ಪ್ರಶಸ್ತಿಗಳು, 2024

### ಸಂದರ್ಭ:

- 2024 ರ 6 ನೇ ರಾಷ್ಟ್ರೀಯ ಜಲ ಪ್ರಶಸ್ತಿಗಳ ಅತ್ಯುತ್ತಮ ರಾಜ್ಯ ವಿಭಾಗದಲ್ಲಿ **ಮಹಾರಾಷ್ಟ್ರ** ಪ್ರಥಮ ಸ್ಥಾನವನ್ನು ಪಡೆದುಕೊಂಡಿದೆ.
- **ಗುಜರಾತ ಮತ್ತು ಹರಿಯಾಣ** ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನದಲ್ಲಿವೆ.

### ರಾಷ್ಟ್ರೀಯ ಜಲ ಪ್ರಶಸ್ತಿಗಳ ಬಗ್ಗೆ:

- ರಾಷ್ಟ್ರೀಯ ಜಲ ಪ್ರಶಸ್ತಿಗಳನ್ನು ಮೊದಲು **2018 ರಲ್ಲಿ** ಪ್ರಾರಂಭಿಸಲಾಯಿತು.
- ಉದ್ದೇಶ:- **ಜಲ ನಿರ್ವಹಣೆ ಮತ್ತು ಸಂರಕ್ಷಣೆಯಲ್ಲಿನ ಪ್ರಯತ್ನಗಳನ್ನು ಗುರುತಿಸುವುದು** ಈ ಪ್ರಶಸ್ತಿಯ ಗುರಿಯಾಗಿದೆ.
- ಮಹತ್ವ:- ಈ ಉಪಕ್ರಮವು ಭಾರತ ಸರ್ಕಾರದ **"ಜಲ ಸಮೃದ್ಧ ಭಾರತ" (ವಾಟರ್ ಪ್ರೊಸ್ಪೆರಸ್ ಇಂಡಿಯಾ)** ದೃಷ್ಟಿಕೋನವನ್ನು ಬೆಂಬಲಿಸುತ್ತದೆ.

## 3. ಕೇಂದ್ರೀಯ ಗೃಹಮಂತ್ರಿ ದಕ್ಷತಾ ಪದಕ

### ಇದೀಗ ಸುದ್ದಿಯಲ್ಲಿದೆ:

- 2025ನೇ ಸಾಲಿನ 'ಕೇಂದ್ರೀಯ ಗೃಹಮಂತ್ರಿ ದಕ್ಷತಾ ಪದಕ'ವನ್ನು 1,466 ಸಿಬ್ಬಂದಿಗೆ ಪ್ರದಾನ ಮಾಡಲಾಗಿದೆ.

### ಕೇಂದ್ರೀಯ ಗೃಹಮಂತ್ರಿ ದಕ್ಷತಾ ಪದಕದ ಬಗ್ಗೆ:

- ಸ್ಥಾಪನೆ: **ಕೇಂದ್ರ ಗೃಹ ಸಚಿವಾಲಯ** (MHA).
- ಗುರುತಿಸುವ ಪ್ರಮುಖ ಕ್ಷೇತ್ರಗಳು: ಇದು **ವಿಶೇಷ ಕಾರ್ಯಾಚರಣೆಗಳು, ತನಿಖೆ, ಗುಪ್ತಚರ** ಮತ್ತು **ವಿಧಿ ವಿಜ್ಞಾನ** ಕ್ಷೇತ್ರಗಳಲ್ಲಿನ ಅತ್ಯುನ್ನತ ಸೇವೆಯನ್ನು ಗುರುತಿಸುತ್ತದೆ.
- **ಸರ್ದಾರ್ ವಲ್ಲಭಭಾಯಿ ಪಟೇಲ್** ಅವರ ಜನ್ಮದಿನದ ಸ್ಮರಣಾರ್ಥ, **ಪ್ರತಿ ವರ್ಷ ಅಕ್ಟೋಬರ್ 31** ರಂದು ಈ ಪದಕವನ್ನು ಪ್ರದಾನ ಮಾಡಲಾಗುತ್ತದೆ.
- ಕೇಂದ್ರ, ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಹಂತದ **ಪೊಲೀಸ್ ಪಡೆಗಳು, ಭದ್ರತಾ ಸಂಸ್ಥೆಗಳು, ಗುಪ್ತಚರ ವಿಭಾಗಗಳು, ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಗಳು (CAPFs), ಕೇಂದ್ರೀಯ ಪೊಲೀಸ್ ಸಂಸ್ಥೆಗಳು (CPOs) ಮತ್ತು ವಿಧಿ ವಿಜ್ಞಾನ ಘಟಕಗಳ** ಸದಸ್ಯರಿಗೆ ಈ ಪದಕವನ್ನು ಪ್ರದಾನ ಮಾಡಲಾಗುತ್ತದೆ.

## 4. ಇಂದಿರಾ ಗಾಂಧಿ ಶಾಂತಿ ಪ್ರಶಸ್ತಿ



### ಸಂದರ್ಭ:

- ಚಿಲಿ ದೇಶದ ಮಾಜಿ ರಾಷ್ಟ್ರಪತಿಯಾದ **ಮಿಚೆಲ್ ಬ್ಯಾಚೆಲೆಟ್** ಅವರು 2024ನೇ ಸಾಲಿನ ಇಂದಿರಾ ಗಾಂಧಿ ಶಾಂತಿ ಪ್ರಶಸ್ತಿಗೆ ಭಾಜನರಾಗಿದ್ದಾರೆ.

### ಇಂದಿರಾ ಗಾಂಧಿ ಶಾಂತಿ ಪ್ರಶಸ್ತಿಯ ಬಗ್ಗೆ:

- ಇದು ಭಾರತದಲ್ಲಿನ **ಇಂದಿರಾ ಗಾಂಧಿ ಸ್ಮಾರಕ ಟ್ರಸ್ಟ್** ಸ್ಥಾಪಿಸಿದ **ವಾರ್ಷಿಕವಾಗಿ** ನೀಡುವ ಪ್ರಶಸ್ತಿಯಾಗಿದೆ.
- ಮಾಜಿ ಪ್ರಧಾನಿ ದಿವಂಗತ ಇಂದಿರಾ ಗಾಂಧಿಯವರ ಗೌರವಾರ್ಥ ಪ್ರಶಸ್ತಿಗೆ ಈ ಹೆಸರನ್ನು ಇಡಲಾಗಿದೆ.
- ಇದನ್ನು **1986ರಲ್ಲಿ** ಸ್ಥಾಪಿಸಲಾಯಿತು.
- ಪ್ರಶಸ್ತಿ ಮೊತ್ತ: ಇತ್ತೀಚೆಗೆ ಈ ಪ್ರಶಸ್ತಿಯ ನಗದು ಮೊತ್ತವನ್ನು **₹25 ಲಕ್ಷದಿಂದ ₹1 ಕೋಟಿಗೆ ಹೆಚ್ಚಿಸಲಾಗಿದೆ.**
- ಉದ್ದೇಶ: ಅಂತರರಾಷ್ಟ್ರೀಯ **ಶಾಂತಿ, ನಿಶ್ಶಸ್ತ್ರೀಕರಣ, ಅಭಿವೃದ್ಧಿ, ನೂತನ ಅಂತರರಾಷ್ಟ್ರೀಯ ಆರ್ಥಿಕ ಕ್ರಮ** ಮತ್ತು **ಪ್ರಜಾಪ್ರಭುತ್ವವನ್ನು ಬಲಪಡಿಸಲು** ಗಮನಾರ್ಹ ಕೊಡುಗೆ ನೀಡಿದ **ವ್ಯಕ್ತಿಗಳಿಗೆ ಮತ್ತು ಸಂಸ್ಥೆಗಳಿಗೆ** ಈ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತದೆ.
- ಸಾಮಾನ್ಯವಾಗಿ, **ಇಂದಿರಾ ಗಾಂಧಿಯವರ ಜನ್ಮದಿನವಾದ ನವೆಂಬರ್ 19** ರಂದು ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

### ಈ ಪ್ರಶಸ್ತಿಯನ್ನು ಮೂರು ಕ್ಷೇತ್ರಗಳಲ್ಲಿ ನೀಡಲಾಗುತ್ತದೆ:

1. **ಶಾಂತಿ:** ಅಂತರರಾಷ್ಟ್ರೀಯ ಮಟ್ಟದಲ್ಲಿ ಶಾಂತಿ ಮತ್ತು ಭದ್ರತೆಯನ್ನು ಉತ್ತೇಜಿಸುವ ಹಾಗೂ ಅದನ್ನು ಕಾಪಾಡುವ ನಿಟ್ಟಿನಲ್ಲಿ ನಡೆಸಲಾದ ಮಹತ್ವದ ಪ್ರಯತ್ನಗಳನ್ನು ಇದು ಗುರುತಿಸುತ್ತದೆ.
2. **ನಿಶ್ಯಸ್ತ್ರೀಕರಣ:** ಪರಮಾಣು ಅಸ್ತ್ರಗಳು ಸೇರಿದಂತೆ ಸಾಮೂಹಿಕ ವಿನಾಶದ ಶಸ್ತ್ರಾಸ್ತ್ರಗಳ ಕಡಿತ ಮತ್ತು ಅವುಗಳ ಸಂಪೂರ್ಣ ನಿರ್ಮೂಲನೆಗೆ ನೀಡಿದ ಕೊಡುಗೆಗಳನ್ನು ಈ ವಿಭಾಗದಲ್ಲಿ ಪರಿಗಣಿಸಲಾಗುತ್ತದೆ.

**ಅಭಿವೃದ್ಧಿ:** ಜಾಗತಿಕವಾಗಿ **ಆರ್ಥಿಕ ಮತ್ತು ಸಾಮಾಜಿಕ** ಅಭಿವೃದ್ಧಿಯನ್ನು ಉತ್ತೇಜಿಸುವ ಮತ್ತು **ಬಡತನ ನಿರ್ಮೂಲನೆಗೆ**ಸಹಕರಿಸುವ ಕಾರ್ಯಗಳನ್ನು ಇದು ಗೌರವಿಸುತ್ತದೆ

## 5. ರಾಷ್ಟ್ರೀಯ ಗೋಪಾಲ ರತ್ನ ಪ್ರಶಸ್ತಿಗಳು (NGRA), 2025

### ಇದೀಗ ಸುದ್ದಿಯಲ್ಲಿದೆ:

- **ಪಶುಸಂಗೋಪನೆ ಮತ್ತು ಹೈನುಗಾರಿಕೆ ಇಲಾಖೆಯು** 2025 ನೇ ಸಾಲಿನ ರಾಷ್ಟ್ರೀಯ ಗೋಪಾಲ ರತ್ನ ಪ್ರಶಸ್ತಿಗಳ (NGRA) ವಿಜೇತರನ್ನು ಘೋಷಿಸಿದೆ.


### ರಾಷ್ಟ್ರೀಯ ಗೋಪಾಲ ರತ್ನ ಪ್ರಶಸ್ತಿಗಳ ಬಗ್ಗೆ:

- ಈ ಪ್ರಶಸ್ತಿಗಳು **ಜಾನುವಾರು ಮತ್ತು ಹೈನುಗಾರಿಕೆ ವಲಯದಲ್ಲಿ ನೀಡಲಾಗುವ ಅತ್ಯುನ್ನತ ರಾಷ್ಟ್ರೀಯ ಗೌರವಗಳಲ್ಲಿ ಒಂದಾಗಿವೆ.**
- **ರಾಷ್ಟ್ರೀಯ ಕ್ಷೀರ ದಿನಾಚರಣೆಯ** ಅಂಗವಾಗಿ ಪ್ರತೀ ವರ್ಷ **ನವೆಂಬರ್ 26** ರಂದು ಈ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು.
- **ರಾಷ್ಟ್ರೀಯ ಗೋಕುಲ್ ಮಿಷನ್**ನ ಭಾಗವಾಗಿ 2014 ರಲ್ಲಿ ಈ ಪ್ರಶಸ್ತಿಯನ್ನು ಸ್ಥಾಪಿಸಲಾಯಿತು.
- **ದೇಶೀಯ ಜಾನುವಾರು ತಳಿಗಳ ವೈಜ್ಞಾನಿಕ ಸಂರಕ್ಷಣೆ ಮತ್ತು ಅಭಿವೃದ್ಧಿಯ** ಮೇಲೆ ಇದು ಕೇಂದ್ರೀಕರಿಸುತ್ತದೆ.
- **ಹಾಲು ಉತ್ಪಾದಿಸುವ ರೈತರು, ಹೈನುಗಾರಿಕೆ ಸಹಕಾರ ಸಂಘಗಳು/ ಕಂಪನಿಗಳು/ರೈತ ಉತ್ಪಾದಕರ ಸಂಘಗಳು ಮತ್ತು ಕೃತಕ ಗರ್ಭಧಾರಣೆ ತಂತ್ರಜ್ಞರನ್ನು ಪ್ರೋತ್ಸಾಹಿಸಲು** ಈ ಪ್ರಶಸ್ತಿಗಳನ್ನು ವಾರ್ಷಿಕವಾಗಿ ನೀಡಲಾಗುತ್ತದೆ.
- ಪ್ರಶಸ್ತಿ ಪುರಸ್ಕೃತರಿಗೆ ಅರ್ಹತಾ **ಪ್ರಮಾಣಪತ್ರ** ಮತ್ತು **ಸ್ಮರಣಿಕೆಯನ್ನು** ನೀಡಲಾಗುವುದು. ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳಿಗೆ ಅನುಕ್ರಮವಾಗಿ **₹5,00,000, ₹3,00,000 ಮತ್ತು ₹2,00,000 ನಗದು** ಬಹುಮಾನವನ್ನು ನೀಡಲಾಗುತ್ತದೆ.

# ಸುದ್ದಿಯಲ್ಲಿರುವ ಸ್ಥಳಗಳು

## 1. ಸೆಂಕಾಕು ದ್ವೀಪಗಳು

**(ಸಾಮಾನ್ಯ ಅಧ್ಯಯನ - 1/ ಸುದ್ದಿಯಲ್ಲಿರುವ ಸ್ಥಳಗಳು)**




### ಇದೀಗ ಸುದ್ದಿಯಲ್ಲಿದೆ:

- **ಚೀನಾ** ಕರಾವಳಿ ರಕ್ಷಕ ಪಡೆಯ ಹಡಗುಗಳ ತುಕಡಿಯು ಸೆಂಕಾಕು/ಡಿಯಾಯು ದ್ವೀಪಗಳ ಬಳಿ **"ಹಕ್ಕುಗಳ ಜಾರಿ ಗಸ್ತು"** ನಡೆಸಿದ್ದು, ಇದು **ಜಪಾನ್‌ನೊಂದಿಗಿನ** ಉದ್ವಿಗ್ನತೆಯನ್ನು ಹೆಚ್ಚಿಸಿದೆ.

### ಸೆಂಕಾಕು/ಡಿಯಾಯು ದ್ವೀಪಗಳ ಬಗ್ಗೆ:

- 'ಸೆಂಕಾಕು ದ್ವೀಪಗಳು' ಎಂಬುದು **ಉಟ್ಸುರಿ, ಕಿತಾಕೋಜಿಮಾ, ಮಿನಾಮಿಕ್ಕೋಜಿಮಾ, ಕುಬಾ, ತೈಶೋ, ಒಕಿನೋಕಿತೈವಾ, ಒಕಿನೋಮಿನಾಮಿವಾ ಮತ್ತು ಟೋಬಿಸ್ ದ್ವೀಪಗಳನ್ನು** ಒಳಗೊಂಡಿರುವ ದ್ವೀಪಗಳ ಸಮೂಹವನ್ನು ಸೂಚಿಸುವ ಒಂದು ಸಾಮೂಹಿಕ ಹೆಸರಾಗಿದೆ.
- **ವಿವಾದ :** ಸೆಂಕಾಕು ದ್ವೀಪಗಳು **ಜಪಾನ್ ಮತ್ತು ಚೀನಾ** ದೇಶಗಳ ನಡುವೆ ದೀರ್ಘಕಾಲದಿಂದ ಒಂದು ವಿವಾದಾತ್ಮಕ ವಿಷಯವಾಗಿದೆ.
- ಪ್ರಸ್ತುತ ಈ ದ್ವೀಪಗಳು **ಜಪಾನ್ ದೇಶದ ನಿಯಂತ್ರಣದಲ್ಲಿವೆ.**

## 2. ಅಂಗೋಲಾ




### ಇದೀಗ ಸುದ್ದಿಯಲ್ಲಿದೆ:

- ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಂಗೋಲಾ ದೇಶಕ್ಕೆ ಅಧಿಕೃತವಾಗಿ ಭೇಟಿ ನೀಡಿದರು, ಇದು ಭಾರತೀಯ ರಾಷ್ಟ್ರಪತಿಯೊಬ್ಬರು ದಕ್ಷಿಣದ ಆಫ್ರಿಕಾ ದೇಶಕ್ಕೆ ನೀಡಿದ ಮೊದಲ ಭೇಟಿಯಾಗಿದೆ.

### ಅಂಗೋಲಾ ದೇಶದ ಬಗ್ಗೆ:

- **ರಾಜಧಾನಿ:** ಲುವಾಂಡಾ
- **ಭೌಗೋಳಿಕ ಸ್ಥಾನ:** ಅಂಗೋಲಾವು **ದಕ್ಷಿಣದ ಆಫ್ರಿಕಾದ ಪಶ್ಚಿಮ ಕರಾವಳಿಯಲ್ಲಿದೆ.** ಇದು ದಕ್ಷಿಣದಲ್ಲಿ **ನಮೀಬಿಯಾ,** ಪೂರ್ವದಲ್ಲಿ **ಜಾಂಬಿಯಾ,** ಉತ್ತರದಲ್ಲಿ **ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೋ** ಮತ್ತು ಪಶ್ಚಿಮದಲ್ಲಿ **ಅಟ್ಲಾಂಟಿಕ್ ಮಹಾಸಾಗರದಿಂದ** ಸುತ್ತುವರಿದಿದೆ.
- **ರಾಜಕೀಯ ಅವಲೋಕನ:** ಅಂಗೋಲಾ 1975 ರಲ್ಲಿ **ಪೋರ್ಚುಗಲ್‌ನಿಂದ** ಸ್ವಾತಂತ್ರ್ಯವನ್ನು ಪಡೆಯಿತು.
- ಆರ್ಥಿಕ ಚಿತ್ರಣ: ನೈಜೀರಿಯಾದ ಬಳಿಕ ಅಂಗೋಲಾ, **ಆಫ್ರಿಕಾದ ಎರಡನೇ ಅತಿದೊಡ್ಡ ತೈಲ ಉತ್ಪಾದಕ** ರಾಷ್ಟ್ರವಾಗಿದೆ. **ವಜ್ರಗಳು** ಇಲ್ಲಿನ ಮತ್ತೊಂದು ಪ್ರಮುಖ ರಫ್ತು ವಲಯವಾಗಿವೆ.
- **ಭೂಗೋಳ:** ಹುವಾಂಬೊ ಬಳಿಯಿರುವ **'ಮೌಂಟ್ ಮೊಕೊ'** ಇಲ್ಲಿನ ಅತ್ಯಂತ ಎತ್ತರದ ಪ್ರದೇಶವಾಗಿದೆ. **'ಕ್ವಾಂಜಾ', 'ಕುನೆನೆ' ಮತ್ತು ಕ್ವಾಂಗೋ** ಇಲ್ಲಿನ ಪ್ರಮುಖ ನದಿಗಳಾಗಿವೆ.
- **ಭಾರತ-ಅಂಗೋಲಾ ಸಂಬಂಧಗಳು:** 1985 ರಲ್ಲಿ ಉಭಯ ದೇಶಗಳ ನಡುವೆ ರಾಜತಾಂತ್ರಿಕ ಸಂಬಂಧಗಳು ಸ್ಥಾಪನೆಯಾದವು.

# ಇತಿಹಾಸ ಮತ್ತು ಸಂಸ್ಕೃತಿ

## 1. ಜಾಗತಿಕ ಶಾಂತಿ ಪ್ರಾರ್ಥನಾ ಉತ್ಸವ

### ಇದೀಗ ಸುದ್ದಿಯಲ್ಲಿದೆ:

- **ಭೂತಾನ್‌ನ ರಾಯಲ್ ಸರ್ಕಾರವು 'ಥಿಂಪು' ನಗರದಲ್ಲಿ** 'ಜಾಗತಿಕ ಶಾಂತಿ ಪ್ರಾರ್ಥನಾ ಉತ್ಸವ' (GPPF) ವನ್ನು ಉದ್ಘಾಟಿಸಿತು.

### ಜಾಗತಿಕ ಶಾಂತಿ ಪ್ರಾರ್ಥನಾ ಉತ್ಸವದ ಬಗ್ಗೆ

- ಪ್ರಸ್ತುತ ಜಗತ್ತಿನಲ್ಲಿ ನಡೆಯುತ್ತಿರುವ ಸಂಘರ್ಷಗಳ ಹಿನ್ನೆಲೆಯಲ್ಲಿ, **ವಿಶ್ವ ಶಾಂತಿ ಮತ್ತು ಮಾನವಕುಲದ ಒಳಿತಿಗಾಗಿ ಪ್ರಾರ್ಥಿಸಲು** ಮೀಸಲಾಗಿರುವ 16 ದಿನಗಳ ಈ ಉತ್ಸವವು ಒಂದು ಜಾಗತಿಕ ಉಪಕ್ರಮವಾಗಿದೆ.
- ಬೌದ್ಧ ಧರ್ಮದ ಮೂರು ಪ್ರಮುಖ ಶಾಖೆಗಳಾದ **ಮಹಾಯಾನ, ಥೇರಾವಾದ ಮತ್ತು ವಜ್ರಯಾನ** ಪಂಥಗಳ ಧಾರ್ಮಿಕ ಮುಖಂಡರು ಹಾಗೂ ವಿದ್ವಾಂಸರು ಪಾಲ್ಗೊಂಡಿದ್ದ **ವಿಶ್ವದ ಮೊಟ್ಟಮೊದಲ ಜಾಗತಿಕ ಶಾಂತಿ ಪ್ರಾರ್ಥನಾ ಉತ್ಸವ** (GPPF) ಇದಾಗಿದೆ.

## 2. ಆರ್ಯ ಸಮಾಜ ಸ್ಥಾಪನೆಯಾಗಿ 150 ವರ್ಷಗಳು

### ಇದೀಗ ಸುದ್ದಿಯಲ್ಲಿದೆ:

- **ನವದೆಹಲಿಯಲ್ಲಿ** ನಡೆದ ಅಂತರರಾಷ್ಟ್ರೀಯ ಆರ್ಯ ಮಹಾಸಮ್ಮೇಳನ 2025 ಅನ್ನು ಉದ್ದೇಶಿಸಿ ಪ್ರಧಾನ ಮಂತ್ರಿಗಳು ಮಾತನಾಡಿ ಸಮಾಜ ಸುಧಾರಣೆ, ಶಿಕ್ಷಣ ಮತ್ತು ವೈದಿಕ ಚಿಂತನೆಗಳಲ್ಲಿ ಆರ್ಯ ಸಮಾಜದ 150 ವರ್ಷಗಳ ಪರಂಪರೆಯನ್ನು ಅವರು ಶ್ಲಾಘಿಸಿದರು.
- **"ಜ್ಞಾನ ಭಾರತಂ ಮಿಷನ್"** ಗೆ ಬೆಂಬಲ ನೀಡುವಂತೆ ಪ್ರಧಾನಿ ಮೋದಿ ಆರ್ಯ ಸಮಾಜವನ್ನು ಕೋರಿದರು. **ಪ್ರಾಚೀನ ಹಸ್ತಪ್ರತಿಗಳ ಡಿಜಿಟಲೀಕರಣ ಮತ್ತು ಭಾರತದ ಜ್ಞಾನ ಪರಂಪರೆಯ ಸಂರಕ್ಷಣೆಯಲ್ಲಿ ಯುವಜನರು** ಸಕ್ರಿಯರಾಗುವಂತೆ ಅವರು ಒತ್ತಾಯಿಸಿದರು.

### ಆರ್ಯ ಸಮಾಜದ ಬಗ್ಗೆ

- ಸ್ಥಾಪಕರು:- **ಸ್ವಾಮಿ ದಯಾನಂದ ಸರಸ್ವತಿ.**
- ಸ್ಥಾಪನೆ:- ಇದನ್ನು **1875 ರಲ್ಲಿ ಬಾಂಬೆಯಲ್ಲಿ** ಸ್ಥಾಪಿಸಿ, 1877 ರಲ್ಲಿ ಲಾಹೋರ್‌ನಲ್ಲಿ ಸ್ಥಾಪನೆಗೆ ಅಂತಿಮ ಸ್ವರೂಪ ನೀಡಲಾಯಿತು.

### ಪ್ರಮುಖ ಸುಧಾರಣೆಗಳು

- ಧಾರ್ಮಿಕ ನಂಬಿಕೆ:- **ಮೂರ್ತಿ ಪೂಜೆ, ಆಚರಣೆಗಳು ಮತ್ತು ಪುರೋಹಿತಶಾಹಿ ಪ್ರಾಬಲ್ಯವನ್ನು ತಿರಸ್ಕರಿಸಿತು.**
- ಸಾಮಾಜಿಕ ಸೇವೆ:- **ಜನ್ಮ ಆಧಾರಿತ ಜಾತಿ ಪದ್ಧತಿ, ಅಸ್ಪೃಶ್ಯತೆ, ಬಾಲ್ಯ ವಿವಾಹ ಮತ್ತು ಬಲವಂತದ ವಿಧವೆಯತ್ವವನ್ನು ವಿರೋಧಿಸಿತು. ಅಂತರ್ಜಾತಿ ವಿವಾಹ, ವಿಧವಾ ಮರುವಿವಾಹ, ಮಹಿಳಾ ಶಿಕ್ಷಣ ಮತ್ತು ಸಮಾಜ ಸೇವೆಯನ್ನು** ಪ್ರತಿಪಾದಿಸಿತು.
- **ಶೈಕ್ಷಣಿಕ ಉತ್ತೇಜನ:-** ವೈದಿಕ ಜ್ಞಾನವನ್ನು ಆಧುನಿಕ ವಿಜ್ಞಾನದೊಂದಿಗೆ ಸಂಯೋಜಿಸಲು, ಸಾಮಾಜಿಕ ಚಲನಶೀಲತೆ

ಮತ್ತು ರಾಷ್ಟ್ರೀಯತೆಯನ್ನು ಬೆಳೆಸಲು **ಡಿ.ಎ.ವಿ ಶಾಲೆಗಳು ಮತ್ತು ಗುರುಕುಲ ಕಾಂಗ್ರಿಯನ್ನು** ಸ್ಥಾಪಿಸಿತು.

### ಭಾರತದ ರಾಷ್ಟ್ರೀಯತೆ ಮತ್ತು ಸಾಮಾಜಿಕ ಬದಲಾವಣೆಯಲ್ಲಿನ ಇದರ ಪಾತ್ರ:

- **ಲಾಲಾ ಲಜಪತ್ ರಾಯ್, ಭಗತ್ ಸಿಂಗ್** ಮತ್ತು ಇತರರು ಸೇರಿದಂತೆ ಆರ್ಯ ಸಮಾಜದ ಸದಸ್ಯರು ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಗಮನಾರ್ಹ ಕೊಡುಗೆ ನೀಡಿದ್ದಾರೆ. ಇವರು **ಸ್ವದೇಶಿ ಮತ್ತು ಸಾಮಾಜಿಕ ಜಾಗೃತಿಯನ್ನು** ಉತ್ತೇಜಿಸಿದರು.

### ಸಮಕಾಲೀನ ಭಾರತದಲ್ಲಿ ಆರ್ಯ ಸಮಾಜದ ಪ್ರಸ್ತುತತೆ:

- **ಮಹಿಳಾ ನೇತೃತ್ವದ ಪ್ರಗತಿ:** ಮಹಿಳಾ ಸಬಲೀಕರಣಕ್ಕಾಗಿ ಆರ್ಯ ಸಮಾಜದ ಆರಂಭಿಕ ಪ್ರತಿಪಾದನೆಯು ರಾಷ್ಟ್ರೀಯ ಉಪಕ್ರಮಗಳಾದ **"ಬೇಟಿ ಬಚಾವೋ ಬೇಟಿ ಪಢಾವೋ", "ನಾರಿ ಶಕ್ತಿ ವಂದನ್ ಅಧಿನಿಯಮ್"** ಮತ್ತು **"ಡ್ರೋನ್ ದೀದಿ"** ಗಳೊಂದಿಗೆ ಹೊಂದಾಣಿಕೆಯಾಗುತ್ತದೆ.
- **ಗುರುಕುಲ ಸಂಪ್ರದಾಯ ಮತ್ತು ಶೈಕ್ಷಣಿಕ ಸುಧಾರಣೆಯ ಸಂರಕ್ಷಣೆ:** ಆರ್ಯ ಸಮಾಜವು ಭಾರತದ ಗುರುಕುಲ ಪದ್ಧತಿಯನ್ನು ಪುನರುಜ್ಜೀವನಗೊಳಿಸಿತು, ವೈದಿಕ ಕಲಿಕೆಯನ್ನು ಆಧುನಿಕ ಶಿಕ್ಷಣದೊಂದಿಗೆ ಸಂಯೋಜಿಸಿತು.
- **ವೈದಿಕ ಆದರ್ಶಗಳು ಮತ್ತು ಜಾಗತಿಕ ಪ್ರಸ್ತುತತೆ: "ಕೃಣ್ವಂತೋ ವಿಶ್ವಂ ಆರ್ಯಂ"** ಎಂಬ ಧ್ಯೇಯವಾಕ್ಯವು ಜಾಗತಿಕ ಕಲ್ಯಾಣಕ್ಕಾಗಿ ರಾಷ್ಟ್ರೀಯ ಪ್ರಗತಿ ಎಂಬ ಭಾರತದ ಅಭಿವೃದ್ಧಿ ತತ್ವವನ್ನು ಪ್ರತಿಬಿಂಬಿಸುತ್ತದೆ. ಸುಸ್ಥಿರ ಮತ್ತು ಆಧ್ಯಾತ್ಮಿಕ ಜೀವನವನ್ನು ಪ್ರಪಂಚದಾದ್ಯಂತ ಹರಡುವ **'ಮಿಷನ್ ಲೈಫ್', 'ಒಂದು ಸೂರ್ಯ, ಒಂದು ಪ್ರಪಂಚ, ಒಂದು ಗ್ರಿಡ್'** ಮತ್ತು **ಅಂತರರಾಷ್ಟ್ರೀಯ ಯೋಗ** ದಿನದಂತಹ ಉಪಕ್ರಮಗಳಲ್ಲಿ ಇದರ ಆದರ್ಶಗಳು ಪ್ರತಿಧ್ವನಿಸುತ್ತವೆ.

## 3. ಬಿರ್ಸಾ ಮುಂಡಾ ಅವರ 150ನೇ ಜನ್ಮ ವಾರ್ಷಿಕೋತ್ಸವ

### ಇದೀಗ ಸುದ್ದಿಯಲ್ಲಿದೆ:

- ಭಗವಾನ್ ಬಿರ್ಸಾ ಮುಂಡಾ ಅವರ ಜನ್ಮ ವಾರ್ಷಿಕೋತ್ಸವದ ಸ್ಮರಣಾರ್ಥ **ನವೆಂಬರ್ 15 ರಂದು "ಜನಜಾತೀಯ ಗೌರವ ದಿವಸ'ವನ್ನಾಗಿ** ಆಚರಿಸಲಾಗುತ್ತದೆ.
- ಸರ್ಕಾರವು **2021 ರಲ್ಲಿ** ಈ ದಿನವನ್ನು 'ಜನಜಾತೀಯ ಗೌರವ ದಿವಸ' ಎಂದು ಘೋಷಿಸಿತು.

### ಬಿರ್ಸಾ ಮುಂಡಾ ಅವರ ಬಗ್ಗೆ:

- ಬಿರ್ಸಾ ಮುಂಡಾ ಅವರು **ಜಾರ್ಖಂಡ್‌ನ ಉಲಿಹಾಟು ಎಂಬ ಗ್ರಾಮದಲ್ಲಿ 1874 ರಲ್ಲಿ ಜನಿಸಿದರು** ಮತ್ತು ಅವರು ಒಬ್ಬ ಆಧ್ಯಾತ್ಮಿಕ ಸುಧಾರಕ ಹಾಗೂ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು.
- ಅವರನ್ನು **"ಧರ್ತಿ ಆಬಾ" (ಭೂಮಿಯ ತಂದೆ)** ಎಂದು ಪ್ರಸಿದ್ಧರಾಗಿದ್ದಾರೆ.
- ಬುಡಕಟ್ಟು ಸ್ವ-ಆಡಳಿತ ಮತ್ತು ಖುಂಟ್ಕಟ್ಟಿ (ಸಮುದಾಯ ಭೂ ಹಕ್ಕುಗಳು) ವ್ಯವಸ್ಥೆಯ ಪುನಃಸ್ಥಾಪನೆಗಾಗಿ ನಡೆದ ಉಗ್ರ ಹೋರಾಟವಾದ **"ಉಲ್ಗುಲನ್ ಅಥವಾ ಮಹಾ ಕ್ರಾಂತಿ/ ಗ್ರೇಟ್ ತುಮುಲ್ಟ್" (1899–1900)** ನ ನೇತೃತ್ವವನ್ನು ಅವರು ವಹಿಸಿದ್ದರು. ಇದನ್ನು **ಮುಂಡಾ ದಂಗೆ** ಎಂದೂ ಕೂಡ ಕರೆಯುತ್ತಾರೆ.
- **ಬ್ರಿಟಿಷರ ಭೂ ಕಾನೂನುಗಳು ಮತ್ತು ಊಳಿಗಮಾನ್ಯ ಪದ್ಧತಿಯ ಶೋಷಣೆಯ ವಿರುದ್ಧ** ಅವರು ಮುಂಡಾ ಬುಡಕಟ್ಟು ಸಮುದಾಯವನ್ನು ಒಗ್ಗೂಡಿಸಿದರು.
- **ವಸಾಹತುಶಾಹಿ ಪ್ರಭಾವದಿಂದ ಮುಕ್ತವಾದ ನೈತಿಕ, ಸ್ವ-ಆಡಳಿತ ಸಮಾಜವನ್ನು** ಅವರು ಕಲ್ಪಿಸಿಕೊಂಡಿದ್ದರು.
- ಅಂತಿಮವಾಗಿ ಅವರನ್ನು ಸೆರೆಹಿಡಿಯಲಾಯಿತು ಮತ್ತು ತಮ್ಮ **25 ನೇ ವಯಸ್ಸಿನಲ್ಲಿ ರಾಂಚಿ ಜೈಲಿನಲ್ಲಿ** ಹುತಾತ್ಮರಾದರು.

### ಜನಜಾತೀಯ ಗೌರವ ದಿವಸದ ಬಗ್ಗೆ:

- ದೇಶಕ್ಕಾಗಿ **ಬುಡಕಟ್ಟು ಸಮುದಾಯದ ಸ್ವಾತಂತ್ರ್ಯ ಹೋರಾಟಗಾರರು ನೀಡಿದ ಕೊಡುಗೆಗಳನ್ನು ಸ್ಮರಿಸಲು** ಜನಜಾತೀಯ ಗೌರವ ದಿವಸವನ್ನು ಮೀಸಲಿಡಲಾಗಿದೆ.
- ಈ ದಿನಾಚರಣೆಯನ್ನು **ಪ್ರತಿ ವರ್ಷ** ಆಚರಿಸಲಾಗುತ್ತದೆ.
- ಇದು **ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆಗಾಗಿ ಬುಡಕಟ್ಟು ಜನಾಂಗದವರು ನಡೆಸಿದ ಪ್ರಯತ್ನಗಳನ್ನು** ಗುರುತಿಸುತ್ತದೆ ಮತ್ತು ದೇಶಕ್ಕಾಗಿ ಬುಡಕಟ್ಟು ಜನಾಂಗದವರು ಮಾಡಿದ ತ್ಯಾಗಗಳ ಬಗ್ಗೆ ಮುಂದಿನ ಪೀಳಿಗೆಗೆ ತಿಳಿಸಲು ಸಹಾಯ ಮಾಡುತ್ತದೆ.
- ಸಮಸ್ತ ಬುಡಕಟ್ಟು ಸಮುದಾಯಗಳಿಂದ "ಭಗವಾನ್" ಎಂದು ಪೂಜಿಸಲ್ಪಡುವ **"ಶ್ರೀ ಬಿರ್ಸಾ ಮುಂಡಾ" ಅವರ ಜನ್ಮದಿನವಾದ ನವೆಂಬರ್ 15 ಅನ್ನು**, 'ಜನಜಾತೀಯ ಗೌರವ ದಿವಸ'ವನ್ನಾಗಿ ಆಚರಿಸಲು ನಿರ್ಧರಿಸಲಾಗಿದೆ.

### ಪ್ರಧಾನ ಮಂತ್ರಿ ಜನಜಾತಿ ಆದಿವಾಸಿ ನ್ಯಾಯ ಮಹಾ ಅಭಿಯಾನ (PM-JANMAN) ದ ಬಗ್ಗೆ:

- ಉದ್ದೇಶ:- ದೇಶದ **ನಿರ್ದಿಷ್ಟವಾಗಿ ದುರ್ಬಲ ಬುಡಕಟ್ಟು ಗುಂಪುಗಳಿಗೆ (PVTGs)** ಕಲ್ಯಾಣ ಯೋಜನೆಗಳ ಫಲವನ್ನು ಕೊನೆಯ ಹಂತದ ಫಲಾನುಭವಿಗಳವರೆಗೂ ತಲುಪಿಸುವ ಮತ್ತು ಅವರಿಗೆ ಸೂಕ್ತ ರಕ್ಷಣೆಯನ್ನು ಖಚಿತಪಡಿಸುವ ಮಹತ್ವದ ಉದ್ದೇಶವನ್ನು ಈ ಅಭಿಯಾನವು ಹೊಂದಿದೆ.
- **ವಿಕಸಿತ ಭಾರತ ಸಂಕಲ್ಪ ಯಾತ್ರೆ** - ಇದು ರಾಷ್ಟ್ರದಾದ್ಯಂತ ವ್ಯಾಪಿಸಿರುವ ಒಂದು ಮಹತ್ವಾಕಾಂಕ್ಷೆಯ ಕಾರ್ಯಕ್ರಮವಾಗಿದೆ. ಇದರ ಮೂಲಕ ದೇಶದ **ಪ್ರತಿಯೊಂದು ಗ್ರಾಮವನ್ನು ತಲುಪಿ,** ಅಲ್ಲಿನ ವಿವಿಧ ಕೇಂದ್ರ ಯೋಜನೆಗಳಿಗೆ ಅರ್ಹರಾದ ನಾಗರಿಕರನ್ನು ಗುರುತಿಸಿ, ಅವರನ್ನು ಯೋಜನೆಯ ವ್ಯಾಪ್ತಿಗೆ ಸೇರ್ಪಡಿಸುವುದೇ ಇದರ ಪ್ರಮುಖ ಗುರಿಯಾಗಿದೆ.

## 4. ಲಕ್ನೋವನ್ನು ಯುನೆಸ್ಕೋದ ಪಾಕಶಾಸ್ತ್ರ (ಅನುಗುಣವಾದ ಆಹಾರ ಸಂಸ್ಕೃತಿ) ವಿಭಾಗದ ಸೃಜನಾತ್ಮಕ ನಗರವಾಗಿ ಘೋಷಿಸಲಾಗಿದೆ.

**(ಇತರೆ)**

### ಇದೀಗ ಸುದ್ದಿಯಲ್ಲಿದೆ:

- ಲಕ್ನೋದ ಶ್ರೀಮಂತ ಮತ್ತು ವೈವಿಧ್ಯಮಯ ಅಡುಗೆ ಪರಂಪರೆಯನ್ನು, ವಿಶೇಷವಾಗಿ ಅದರ ಪ್ರಖ್ಯಾತ **'ಅವಧಿ' ಖಾದ್ಯಗಳನ್ನು** ಗುರುತಿಸಿ, ಯುನೆಸ್ಕೋ ಲಕ್ನೋವನ್ನು 'ಪಾಕಶಾಸ್ತ್ರದ ಸೃಜನಾತ್ಮಕ ನಗರ' ಎಂದು ಘೋಷಿಸಿದೆ.
- **ಹೈದರಾಬಾದ್ (2019)** ನ ನಂತರ, ಯುನೆಸ್ಕೋ ಸೃಜನಾತ್ಮಕ ನಗರಗಳ ಜಾಲದ (UCCN) ಪಾಕಶಾಸ್ತ್ರ ವಿಭಾಗದಲ್ಲಿ ಈ

ಗೌರವಕ್ಕೆ ಪಾತ್ರವಾದ ಭಾರತದ **ಎರಡನೇ ನಗರ ಲಕ್ನೋ** ಆಗಿದೆ.

### ಯುನೆಸ್ಕೋ ಪಾಕಶಾಸ್ತ್ರದ ಸೃಜನಾತ್ಮಕ ನಗರ:

- **ಶ್ರೀಮಂತ ಅಡುಗೆ ಸಂಪ್ರದಾಯಗಳು ಮತ್ತು ನವೀನ ಆಹಾರ ಸಂಸ್ಕೃತಿಗಳನ್ನು** ಹೊಂದಿರುವ ನಗರಗಳನ್ನು 'ಯುನೆಸ್ಕೋ ಪಾಕಶಾಸ್ತ್ರದ ಸೃಜನಾತ್ಮಕ ನಗರ' ಎಂಬ ಹೆಸರಿನಡಿ ಗೌರವಿಸಲಾಗುತ್ತದೆ.
- ಈ ಮನ್ನಣೆಯು **'ಯುನೆಸ್ಕೋ ಸೃಜನಾತ್ಮಕ ನಗರಗಳ ಜಾಲ'**ದ ಭಾಗವಾಗಿದೆ.

### ಯುನೆಸ್ಕೋ ಸೃಜನಾತ್ಮಕ ನಗರಗಳ ಜಾಲದ (UCCN) ಬಗ್ಗೆ:

- **ಪ್ರಾರಂಭ:** 2004 ರಲ್ಲಿ.
- **ಉದ್ದೇಶ: ಸುಸ್ಥಿರ ನಗರ ಅಭಿವೃದ್ಧಿ**, ಸಾಮಾಜಿಕ ಒಳಗೊಳ್ಳುವಿಕೆ ಮತ್ತು ಸಾಂಸ್ಕೃತಿಕ ಚೈತನ್ಯಕ್ಕಾಗಿ ಸೃಜನಶೀಲತೆಯಲ್ಲಿ ಹೂಡಿಕೆಯನ್ನು ಉತ್ತೇಜಿಸುವುದು ಇದರ ಗುರಿಯಾಗಿದೆ.
- ಪ್ರಸ್ತುತ, ಈ ಜಾಲವು **8 ಸೃಜನಾತ್ಮಕ ಕ್ಷೇತ್ರಗಳನ್ನು** ಒಳಗೊಂಡಿದೆ - ಕರಕುಶಲ ಮತ್ತು ಜಾನಪದ ಕಲೆಗಳು, ಮಾಧ್ಯಮ ಕಲೆಗಳು, ಚಲನಚಿತ್ರ, ವಿನ್ಯಾಸ , ಪಾಕಶಾಸ್ತ್ರ ಸಾಹಿತ್ಯ ಮತ್ತು ಸಂಗೀತ.
  - ಇವುಗಳ ಜೊತೆಗೆ 2025ರಲ್ಲಿ UCCN ಗೆ **'ವಾಸ್ತುಶಿಲ್ಪ'** ವನ್ನು ಎಂಟನೇ ಸೃಜನಾತ್ಮಕ ಕ್ಷೇತ್ರವಾಗಿ ಸೇರಿಸಲಾಯಿತು.
- ಈ ಮೂಲಕ ಲಕ್ನೋ 100 ಕ್ಕೂಅಧಿಕ ದೇಶಗಳಾದ್ಯಂತ ಇರುವ 408 ನಗರಗಳ ಜಾಗತಿಕ ಜಾಲವನ್ನು ಸೇರಿಕೊಂಡಿದೆ.

## 5. ಚಿತ್ತರಂಜನ್ ದಾಸ್

### ಇದೀಗ ಸುದ್ದಿಯಲ್ಲಿ:

- ಸ್ವಾತಂತ್ರ್ಯ ಹೋರಾಟಗಾರ **ದೇಶಬಂಧು ಚಿತ್ತರಂಜನ್ ದಾಸ್** ಅವರ ಜನ್ಮ ದಿನಾಚರಣೆಯ ಅಂಗವಾಗಿ, ಲೋಕಸಭೆಯಲ್ಲಿ ಅವರಿಗೆ ಪುಷ್ಪನಮನ ಸಲ್ಲಿಸಲಾಯಿತು.

### ಚಿತ್ತರಂಜನ್ ದಾಸ್ (1870 – 1925) ಅವರ ಬಗ್ಗೆ:

- ಇವರು **"ದೇಶಬಂಧು" (ರಾಷ್ಟ್ರದ ಸ್ನೇಹಿತ)** ಎಂದೇ ಜನಪ್ರಿಯರಾಗಿದ್ದರು.
- ಇವರು ಭಾರತದ ಸ್ವಾತಂತ್ರ್ಯ ಚಳವಳಿಯ ಪ್ರಮುಖ ರಾಷ್ಟ್ರೀಯ ನಾಯಕ, ವಕೀಲ, ಸ್ವಾತಂತ್ರ್ಯ ಹೋರಾಟಗಾರ ಮತ್ತು ಸಮಾಜ ಸುಧಾರಕರಾಗಿದ್ದರು.
- **ಅಲಿಪುರ ಬಾಂಬ್ ಪ್ರಕರಣದಲ್ಲಿ (1908) ಅರವಿಂದೋ ಘೋಷ್** ಅವರ ಪರವಾಗಿ ವಾದ ಮಂಡಿಸಿದ ಇವರು, ತದನಂತರ ಪೂರ್ಣಾವಧಿಗೆ ಸ್ವಾತಂತ್ರ್ಯ ಚಳವಳಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು.

### ಪ್ರಮುಖ ಕೊಡುಗೆಗಳು:

- ಮಹಾತ್ಮ ಗಾಂಧೀಜಿಯವರ ನೇತೃತ್ವದಲ್ಲಿ ನಡೆದ **ಅಸಹಕಾರ ಚಳವಳಿಯಲ್ಲಿ** (1919–22) ಇವರು ಸಕ್ರಿಯವಾಗಿ ಪಾಲ್ಗೊಂಡಿದ್ದರು.
- ಆಡಳಿತ ವ್ಯವಸ್ಥೆಯ ಶಾಸಕಾಂಗ ಸಭೆಯನ್ನು ಪ್ರವೇಶಿಸಿ, ಒಳಗಿನಿಂದಲೇ ವಸಾಹತುಶಾಹಿ ಆಳ್ವಿಕೆಯನ್ನು ವಿರೋಧಿಸುವ ಉದ್ದೇಶದಿಂದ, **1923 ರಲ್ಲಿ ಮೋತಿಲಾಲ್ ನೆಹರು ಅವರೊಂದಿಗೆ ಸೇರಿ 'ಸ್ವರಾಜ್ ಪಕ್ಷ'**ವನ್ನು ಸ್ಥಾಪಿಸಿದರು.
- **ಕಲ್ಕತ್ತಾ ಮಹಾನಗರ ಪಾಲಿಕೆಯ ಮೊದಲ ಸಭಾಪತಿ** (ಮೇಯರ್) ಆಗಿ ಆಯ್ಕೆಯಾದ (1924) ಚಿತ್ತರಂಜನ್ ದಾಸ್ ಅವರು, ನಗರ ಸುಧಾರಣೆಗಳಿಗಾಗಿ ಮತ್ತು ಪೌರಾಡಳಿತದಲ್ಲಿ ಭಾರತೀಯರ ಸಬಲೀಕರಣಕ್ಕಾಗಿ ಶ್ರಮಿಸಿದರು.
- ಸಾಹಿತ್ಯ ಕ್ಷೇತ್ರದಲ್ಲೂ ಸೇವೆ ಸಲ್ಲಿಸಿದ ಇವರು ಕವನಗಳು, ಪ್ರಬಂಧಗಳು ಹಾಗೂ ಪುಸ್ತಕಗಳನ್ನು ರಚಿಸಿದ್ದಾರೆ. ಇವುಗಳಲ್ಲಿ **'ಇಂಡಿಯಾ ಫಾರ್ ಇಂಡಿಯನ್ಸ್' ಮತ್ತು 'ಫ್ರೀಡಂ ಥ್ರೂ ಡಿಸ್ಒಬಿಡಿಯನ್ಸ್'** ಕೃತಿಗಳು ಸೇರಿವೆ.

# ಕರ್ನಾಟಕ ದರ್ಶನ

## 1. ರಾಜ್ಯೋತ್ಸವ ಪ್ರಶಸ್ತಿ




### ಇದೀಗ ಸುದ್ದಿಯಲ್ಲಿದೆ:

- **ನವೆಂಬರ್ 1 ರಂದು ನಡೆದ ಕನ್ನಡ ರಾಜ್ಯೋತ್ಸವ** ಆಚರಣೆಯ ಸಂದರ್ಭದಲ್ಲಿ, ವಿವಿಧ ಕ್ಷೇತ್ರಗಳಲ್ಲಿ ಗಣನೀಯವಾಗಿ ಸೇವೆ ಸಲ್ಲಿಸಿದ 70 ಮಹನೀಯರಿಗೆ **ರಾಜ್ಯ ಸರ್ಕಾರವು ತನ್ನ ವಾರ್ಷಿಕ ರಾಜ್ಯೋತ್ಸವ ಪ್ರಶಸ್ತಿಗಳನ್ನು** ಇತ್ತೀಚೆಗೆ ಘೋಷಿಸಿದೆ.

### ಕನ್ನಡ ರಾಜ್ಯೋತ್ಸವ ಪ್ರಶಸ್ತಿಯ ಬಗ್ಗೆ:

- ಈ ಪ್ರಶಸ್ತಿಯನ್ನು ಸಾಮಾನ್ಯವಾಗಿ **'ರಾಜ್ಯೋತ್ಸವ ಪ್ರಶಸ್ತಿ'** ಎಂತಲೂ ಕರೆಯಲಾಗುತ್ತದೆ.
- ಇದು ಕರ್ನಾಟಕ ಸರ್ಕಾರ ನೀಡುವ **ಎರಡನೇ ಅತ್ಯುನ್ನತ ನಾಗರಿಕ ಗೌರವವಾಗಿದೆ.**
- ಐತಿಹಾಸಿಕ ಮಹತ್ವ: **1956 ರಲ್ಲಿ ಕನ್ನಡ ಮಾತನಾಡುವ ಪ್ರದೇಶಗಳನ್ನು ಏಕೀಕರಣಗೊಳಿಸುವ ಮೂಲಕ ಕರ್ನಾಟಕ ರಾಜ್ಯ ರಚನೆಯಾದ ಸ್ಮರಣಾರ್ಥವಾಗಿ,** ಪ್ರತಿ ವರ್ಷ ನವೆಂಬರ್ 1 ರಂದು ಅಂದರೆ 'ಕನ್ನಡ ರಾಜ್ಯೋತ್ಸವ'ದಂದು ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುತ್ತದೆ.
- ಈ ಪ್ರಶಸ್ತಿಯು **₹5 ಲಕ್ಷ ನಗದು ಬಹುಮಾನ, 25 ಗ್ರಾಂ ಚಿನ್ನದ ಪದಕ** ಮತ್ತು ಪ್ರಶಂಸಾ ಪತ್ರವನ್ನು ಒಳಗೊಂಡಿರುತ್ತದೆ.

## 2025 ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು:

| ಕ್ರ.ಸಂ | ಪ್ರಶಸ್ತಿ ಪುರಸ್ಕೃತರು | ಕ್ಷೇತ್ರ |
|---|---|---|
| 1 | ಶ್ರೀ ಹೆಚ್. ಸಿದ್ದಯ್ಯ ಭಾ.ಆ.ಸೇ(ನಿ) | ಆಡಳಿತ |
| 2 | ಡಾ.ಎಸ್.ವಿ.ಹಿತ್ತಲಮನಿ | ಕೃಷಿ |
| 3 | ಶ್ರೀ ಎಂ ಸಿ ರಂಗಸ್ವಾಮಿ | ಕೃಷಿ |
| 4 | ಶ್ರೀ ಪ್ರಕಾಶ್ ರಾಜ್ | ಚಲನಚಿತ್ರ/ಕಿರುತೆರೆ |
| 5 | ಶ್ರೀಮತಿ ವಿಜಯಲಕ್ಷ್ಮೀ ಸಿಂಗ್ | ಚಲನಚಿತ್ರ/ಕಿರುತೆರೆ |
| 6 | ಶ್ರೀ ಬಸಪ್ಪ ಭರಮಪ್ಪ ಚೌಡ್ಕಿ | ಜಾನಪದ |
| 7 | ಶ್ರೀ ಬಿ. ಟಾಕಪ್ಪ ಕಣ್ಣೂರು | ಜಾನಪದ |
| 8 | ಶ್ರೀ ಸಣ್ ನಿಂಗಪ್ಪ ಸತ್ತೆಪ್ಪ ಮುಶೆಣ್ಣಗೋಳ | ಜಾನಪದ |
| 9 | ಶ್ರೀ ಹನುಮಂತಪ್ಪ, ಮಾರಪ್ಪ, ಚೀಳಂಗಿ | ಜಾನಪದ |
| 10 | ಶ್ರೀ ಎಂ. ಟೋಪಣ್ಣ | ಜಾನಪದ |
| 11 | ಶ್ರೀ ಸೋಮಣ್ಣ ದುಂಡಪ್ಪ ಧನಗೊಂಡ | ಜಾನಪದ |
| 12 | ಶ್ರೀಮತಿ ಸಿಂಧು ಗುಜರನ್ | ಜಾನಪದ |
| 13 | ಶ್ರೀ ಎಲ್. ಮಹದೇವಪ್ಪ ಉಡಿಕಲ್ | ಜಾನಪದ |
| 14 | ಪ್ರೊ. ಕೆ. ರಾಮಮೂರ್ತಿ ರಾವ್ | ನೃತ್ಯ |
| 15 | ಶ್ರೀ ರಾಮೇಗೌಡ | ಪರಿಸರ |
| 16 | ಶ್ರೀ ಮಲ್ಲಿಕಾರ್ಜುನ ನಿಂಗಪ್ಪ | ಪರಿಸರ |
| 17 | ಶ್ರೀ ಗುಂಡೂರಾಜ್ | ಬಯಲಾಟ |
| 18 | ಶ್ರೀ ಕೆ.ಸುಬ್ರಮಣ್ಯ | ಮಾಧ್ಯಮ |
| 19 | ಶ್ರೀ ಅಂಶಿ ಪ್ರಸನ್ನಕುಮಾರ್ | ಮಾಧ್ಯಮ |
| 20 | ಶ್ರೀ ಬಿ.ಎಂ ಹನೀಫ್ | ಮಾಧ್ಯಮ |
| 21 | ಶ್ರೀ ಎಂ ಸಿದ್ಧರಾಜು | ಮಾಧ್ಯಮ |
| 22 | ಶ್ರೀ ಕೋಟ ಸುರೇಶ ಬಂಗೇರ | ಯಕ್ಷಗಾನ |
| 23 | ಶ್ರೀ ಐರಬೈಲ್ ಆನಂದ ಶೆಟ್ಟಿ | ಯಕ್ಷಗಾನ |
| 24 | ಶ್ರೀ ಕೃಷ್ಣ ಪರಮೇಶ್ವರ ಹೆಗಡೆ (ಕೆ.ಪಿ ಹೆಗಡೆ) | ಯಕ್ಷಗಾನ |
| 25 | ಶ್ರೀ ರಾಮಯ್ಯ | ವಿಜ್ಞಾನ-ತಂತ್ರಜ್ಞಾನ |
| 26 | ಶ್ರೀ ಏರ್ ಮಾರ್ಷಲ್ ಫೀಲೀಫ್ ರಾಜಕುಮಾರ್ | ವಿಜ್ಞಾನ-ತಂತ್ರಜ್ಞಾನ |
| 27 | ಡಾ. ಆರ್. ವಿ ನಾಡಗೌಡ | ವಿಜ್ಞಾನ-ತಂತ್ರಜ್ಞಾನ |
| 28 | ಡಾ. ಆಲಮ್ಮ ಮಾರಣ್ಣ | ವೈದ್ಯಕೀಯ |
| 29 | ಡಾ. ಜಯರಂಗನಾಥ್ | ವೈದ್ಯಕೀಯ |
| 30 | ಶ್ರೀ ಉಮೇಶ ಪಂಬದ | ಶಿಲ್ಪಕಲೆ / ಇತರೆ ಕಲೆ |
| 31 | ಡಾ. ರವೀಂದ್ರ ಕೋರಿಶೆಟ್ಟಿರ್ | ಶಿಲ್ಪಕಲೆ / ಇತರೆ ಕಲೆ |
| 32 | ಶ್ರೀ ಕೆ.ದಿನೇಶ್ | ಶಿಲ್ಪಕಲೆ / ಇತರೆ ಕಲೆ |
| 33 | ಶ್ರೀ ಶಾಂತರಾಜು | ಶಿಲ್ಪಕಲೆ / ಇತರೆ ಕಲೆ |
| 34 | ಶ್ರೀ ಜಾಫರ್ ಮೊಹಿಯುದ್ದೀನ್ | ಶಿಲ್ಪಕಲೆ / ಇತರೆ ಕಲೆ |

| | | |
|---|---|---|
| 35 | ಶ್ರೀ ಪೆನ್ನ ಓಬಳಯ್ಯ | ಶಿಲ್ಪಕಲೆ / ಇತರೆ ಕಲೆ |
| 36 | ಶ್ರೀ ಶಾಂತಿ ಬಾಯಿ | ಶಿಲ್ಪಕಲೆ / ಇತರೆ ಕಲೆ |
| 37 | ಶ್ರೀ ಪುಂಡಲೀಕ ಶಾಸ್ತ್ರೀ(ಬುಡಬುಡಕೆ) | ಇತರೆ ಕಲೆ |
| 38 | ಶ್ರೀ ದೇವೇಂದ್ರಕುಮಾರ ಪತ್ತಾರ್ | ಸಂಗೀತ |
| 39 | ಶ್ರೀ ಮಡಿವಾಳಯ್ಯ ಸಾಲಿ | ಸಂಗೀತ |
| 40 | ಶ್ರೀಮತಿ ಸೂಲಗಿತ್ತಿ ಈರಮ್ಮ | ಸಮಾಜ ಸೇವೆ |
| 41 | ಶ್ರೀಮತಿ ಫಕ್ಕೀರಿ | ಸಮಾಜ ಸೇವೆ |
| 42 | ಶ್ರೀಮತಿ ಕೋರಿನ್ ಆಂಟೋನಿಯಟ್ ರಸ್ಕೀನಾ | ಸಮಾಜ ಸೇವೆ |
| 43 | ಡಾ. ಎನ್. ಸೀತಾರಾಮ ಶೆಟ್ಟಿ | ಸಮಾಜ ಸೇವೆ |
| 44 | ಶ್ರೀ ಕೋಣಂದೂರು ಲಿಂಗಪ್ಪ | ಸಮಾಜ ಸೇವೆ |
| 45 | ಶ್ರೀ ಶೇಖರಗೌಡ ವಿ ಮಾಲಿಪಾಟೀಲ್ | ಸಹಕಾರ |
| 46 | ಪ್ರೊ. ರಾಜೇಂದ್ರ ಚೆನ್ನಿ | ಸಾಹಿತ್ಯ |
| 47 | ಶ್ರೀ ತುಂಬಾಡಿ ರಾಮಯ್ಯ | ಸಾಹಿತ್ಯ |
| 48 | ಪ್ರೊ ಆರ್ ಸುನಂದಮ್ಮ | ಸಾಹಿತ್ಯ |
| 49 | ಡಾ.ಎಚ್.ಎಲ್ ಪುಷ್ಪ | ಸಾಹಿತ್ಯ |
| 50 | ಶ್ರೀ ರಹಮತ್ ತರೀಕೆರೆ | ಸಾಹಿತ್ಯ |
| 51 | ಶ್ರೀ ಹ.ಮ. ಪೂಜಾರ | ಸಾಹಿತ್ಯ |
| 52 | ಶ್ರೀ ಜಕರಿಯ ಬಜಪೆ (ಸೌದಿ ಅರೇಬಿಯಾ) | ಹೊರನಾಡು ಕನ್ನಡಿಗ |
| 53 | ಶ್ರೀ ಪಿ ವಿ ಶೆಟ್ಟಿ (ಮುಂಬೈ) | ಹೊರನಾಡು ಕನ್ನಡಿಗ |
| 54 | ಶ್ರೀ ಹೆಚ್.ಎಂ. ಪರಮಶಿವಯ್ಯ | ರಂಗಭೂಮಿ |
| 55 | ಶ್ರೀ ಎಲ್.ಬಿ.ಶೇಖ್ (ಮಾಸ್ತರ್) | ರಂಗಭೂಮಿ |
| 56 | ಶ್ರೀ ಬಂಗಾರಪ್ಪ ಖುದಾನಪುರ | ರಂಗಭೂಮಿ |
| 57 | ಶ್ರೀ ಮೈಮ್ ರಮೇಶ್ | ರಂಗಭೂಮಿ |
| 58 | ಶ್ರೀಮತಿ ಡಿ.ರತ್ನಮ್ಮ ದೇಸಾಯಿ | ರಂಗಭೂಮಿ |
| 59 | ಡಾ. ಎಂ.ಆರ್. ಜಯರಾಮ್ | ಶಿಕ್ಷಣ |
| 60 | ಡಾ. ಎನ್ ಎಸ್ ರಾಮೇಗೌಡ | ಶಿಕ್ಷಣ |
| 61 | ಶ್ರೀ. ಎಸ್. ಬಿ. ಹೊಸಮನಿ | ಶಿಕ್ಷಣ |
| 62 | ಶ್ರೀಮತಿ ರಾಜಶ್ರೀ ನಾಗರಾಜು | ಶಿಕ್ಷಣ |
| 63 | ಶ್ರೀ ಆಶೀಶ್ ಕುಮಾರ್ ಬಲ್ಲಾಳ | ಕ್ರೀಡೆ |
| 64 | ಶ್ರೀ ಎಂ ಯೋಗೇಂದ್ರ | ಕ್ರೀಡೆ |
| 65 | ಡಾ. ಬಬಿನಾ ಎನ್.ಎಂ (ಯೋಗ) | ಕ್ರೀಡೆ |
| 66 | ನ್ಯಾ. ಶ್ರೀ ಪವನ್ ಕುಮಾರ್ ಭಜಂತ್ರಿ | ನ್ಯಾಯಾಂಗ |
| 67 | ಶ್ರೀ ಬಸಣ್ಣ ಮೋನಪ್ಪ ಬಡಿಗೇರ | ಶಿಲ್ಪಕಲೆ |
| 68 | ಶ್ರೀ ನಾಗಲಿಂಗಪ್ಪ ಜಿ ಗಂಗೂರ | ಶಿಲ್ಪಕಲೆ |
| 69 | ಶ್ರೀ ಬಿ. ಮಾರುತಿ | ಚಿತ್ರಕಲೆ |
| 70 | ಶ್ರೀಮತಿ ಎಲ್. ಹೇಮಾಶೇಖರ್ | ಕರಕುಶಲ |

## 2. ರಾಜ್ಯ ಚಲನಚಿತ್ರ ಜೀವಮಾನ ಸಾಧನೆ ಪ್ರಶಸ್ತಿಗಳು ಮತ್ತು ಸಾಹಿತ್ಯ ಪ್ರಶಸ್ತಿಗಳು, 2019

### ಇದೀಗ ಸುದ್ದಿಯಲ್ಲಿದೆ:

- **ಕನ್ನಡ ಚಲನಚಿತ್ರರಂಗಕ್ಕೆ ಸಲ್ಲಿಸಿದ ಜೀವಮಾನ ಸಾಧನೆಯನ್ನು ಪರಿಗಣಿಸಿ ವ್ಯಕ್ತಿಗಳ ಅತ್ಯುನ್ನತ ಕೊಡುಗೆಗಳನ್ನು ಗೌರವಿಸಲು ಕರ್ನಾಟಕ ಸರ್ಕಾರವು** 2019ನೇ ಸಾಲಿನ ಪ್ರತಿಷ್ಠಿತ ರಾಜ್ಯ ಚಲನಚಿತ್ರ ಜೀವಮಾನ ಸಾಧನೆ ಪ್ರಶಸ್ತಿಗಳನ್ನು ಪ್ರಕಟಿಸಿದೆ. ಈ ಪ್ರಶಸ್ತಿಗಳನ್ನು **ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು** ನೀಡುತ್ತದೆ.

### ಪ್ರಶಸ್ತಿ ಪುರಸ್ಕೃತರ ವಿವರ

- ಡಾ. ರಾಜ್‌ಕುಮಾರ್ ಪ್ರಶಸ್ತಿ
  - ಪುರಸ್ಕೃತರು: **ಉಮಾಶ್ರೀ**
  - ವಿಭಾಗ: **ಚಲನಚಿತ್ರ ರಂಗದ ಜೀವಮಾನ ಸಾಧನೆ.**

### ಪುಟ್ಟಣ್ಣ ಕಣಗಾಲ್ ಪ್ರಶಸ್ತಿ

- ಪುರಸ್ಕೃತರು: **ಎನ್. ಆರ್. ನಂಜುಂಡೇಗೌಡ**
- ವಿಭಾಗ: ಚಲನಚಿತ್ರ **ನಿರ್ದೇಶನದಲ್ಲಿ** ಜೀವಮಾನ ಸಾಧನೆ.

### ಡಾ. ವಿಷ್ಣುವರ್ಧನ್ ಪ್ರಶಸ್ತಿ

- ಪುರಸ್ಕೃತರು: **ರಿಚರ್ಡ್ ಕ್ಯಾಸ್ಟಲಿನೊ**
- ವಿಭಾಗ: ಚಲನಚಿತ್ರ **ನಿರ್ಮಾಣ ಮತ್ತು ನಿರ್ದೇಶನದಲ್ಲಿ** ಜೀವಮಾನ ಸಾಧನೆ.

### ರಾಜ್ಯ ಚಲನಚಿತ್ರ ಸಾಹಿತ್ಯ ಪ್ರಶಸ್ತಿ

- ಸಾಹಿತ್ಯ ವಿಭಾಗದಲ್ಲಿ, ಅಂಕಿತ ಪ್ರಕಾಶನ ಪ್ರಕಟಿಸಿದ **"ಬೆಳ್ಳಿ ತೊರೆ – ಸಿನಿಮಾ ಪ್ರಬಂಧಗಳು"** ಕೃತಿಗಾಗಿ ಹಿರಿಯ ಪತ್ರಕರ್ತ **ರಘುನಾಥ್ ಚ.ಹ.** ಅವರಿಗೆ 2019 ನೇ ಸಾಲಿನ ರಾಜ್ಯ ಚಲನಚಿತ್ರ ಸಾಹಿತ್ಯ ಪ್ರಶಸ್ತಿಯನ್ನು ಪ್ರದಾನ ಮಾಡಲಾಗಿದೆ.
- **ಲೇಖಕರು ಮತ್ತು ಪ್ರಕಾಶಕರಿಬ್ಬರಿಗೂ ತಲಾ ₹20,000 ನಗದು** ಬಹುಮಾನ ಹಾಗೂ **ಬೆಳ್ಳಿ ಪದಕವನ್ನು** ನೀಡಿ ಗೌರವಿಸಲಾಗುತ್ತದೆ.

## 3. ರಾಜ್ಯ ಜಲ ಆಯೋಗ

### ಇದೀಗ ಸುದ್ದಿಯಲ್ಲಿದೆ:

- **ರಾಜ್ಯದಲ್ಲಿ ಶಾಶ್ವತ ಜಲ ಆಯೋಗವೊಂದನ್ನು** ಸ್ಥಾಪಿಸಲು ರಾಜ್ಯ ಸರ್ಕಾರವು ಯೋಜಿಸುತ್ತಿದೆ.

### ರಾಜ್ಯ ಜಲ ಆಯೋಗದ ಬಗ್ಗೆ:

- **ಕೇಂದ್ರ ಜಲ ಆಯೋಗದ** ಮಾದರಿಯಲ್ಲಿಯೇ, ತಾಂತ್ರಿಕ ತಜ್ಞರನ್ನು ಒಳಗೊಂಡ **'ಶಾಶ್ವತ ಜಲ ಆಯೋಗ'ವನ್ನು** ರಚಿಸಲು ಕರ್ನಾಟಕ ಸರ್ಕಾರ ಮುಂದಾಗಿದೆ.
- ಉದ್ದೇಶಗಳು:-
- **ಶಿಫಾರಸು ಮಾಡುವುದು:** ಜಲ ಭದ್ರತೆ ಮತ್ತು ಜಲ ವಿವಾದಗಳ ವಿಷಯಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ಸೂಕ್ತ ಕ್ರಮಗಳನ್ನು ಶಿಫಾರಸು ಮಾಡುವುದು ಇದರ ಪ್ರಮುಖ ಉದ್ದೇಶವಾಗಿದೆ.
- **ಮೌಲ್ಯಮಾಪನ ಮತ್ತು ಹೊಣೆಗಾರಿಕೆ:** ಇದು ರಾಜ್ಯದಲ್ಲಿನ ನೀರಿನ ಬೇಡಿಕೆ ಮತ್ತು ಲಭ್ಯತೆಯನ್ನು ಮೌಲ್ಯಮಾಪನ ಮಾಡುತ್ತದೆ. ಅಲ್ಲದೆ, ನೀರಿನ ಬಳಕೆಗೆ ಸಂಬಂಧಿಸಿದಂತೆ ರೈತರ ಹೊಣೆಗಾರಿಕೆಯನ್ನು ನಿಗದಿಪಡಿಸುವ ಕಾರ್ಯವನ್ನೂ ಇದು ನಿರ್ವಹಿಸಲಿದೆ.

### ಸಂಯೋಜನೆ:

- ಆಯೋಗವು **10 ರಿಂದ 15 ಜನ ತಾಂತ್ರಿಕ ತಜ್ಞರನ್ನು** ಒಳಗೊಂಡಿರುತ್ತದೆ.
- ಇದರಲ್ಲಿ **ನೀರಾವರಿ ಮತ್ತು ಹಣಕಾಸು ಇಲಾಖೆಗಳ ಅಧಿಕಾರಿಗಳು, ಪರಿಸರ ವಿಜ್ಞಾನ ಮತ್ತು ಜಲ ಸಂಪನ್ಮೂಲ ಕ್ಷೇತ್ರದ ತಜ್ಞರು ಹಾಗೂ ಪ್ರಗತಿಪರ ರೈತರು** ಸದಸ್ಯರಾಗಿರುತ್ತಾರೆ.

## 4. ನಿರ್ಮಾಣ ಹಂತದಲ್ಲಿರುವ ಅತೀ ಹೆಚ್ಚು ಪವನ ವಿದ್ಯುತ್ ಸಾಮರ್ಥ್ಯಕ್ಕಾಗಿ ಕರ್ನಾಟಕಕ್ಕೆ ರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ

### ಇದೀಗ ಸುದ್ದಿಯಲ್ಲಿದೆ:

- 2024–25ನೇ ಸಾಲಿನಲ್ಲಿ ನಿರ್ಮಾಣ ಹಂತದಲ್ಲಿರುವ ಅತೀ ಹೆಚ್ಚು ಪವನ ವಿದ್ಯುತ್ ಸಾಮರ್ಥ್ಯವನ್ನು ಹೊಂದಿರುವುದಕ್ಕಾಗಿ ಕರ್ನಾಟಕ ರಾಜ್ಯವು ರಾಷ್ಟ್ರೀಯ ಪ್ರಶಸ್ತಿಗೆ ಭಾಜನವಾಗಿದೆ.
- **ಚೆನ್ನೈನಲ್ಲಿ** ನಡೆದ ದೇಶದ ಪ್ರಮುಖ ಪವನ ಶಕ್ತಿ ಕಾರ್ಯಕ್ರಮವಾದ **'ವಿಂಡರ್ಜಿ ಇಂಡಿಯಾ 2025'** ರ ಏಳನೇ ಆವೃತ್ತಿಯ ಸಮಾರಂಭದಲ್ಲಿ ರಾಜ್ಯಕ್ಕೆ ಈ ಮನ್ನಣೆಯನ್ನು ನೀಡಲಾಯಿತು.

### ಭಾರತದಲ್ಲಿ ಪವನ ಶಕ್ತಿ ವಲಯ: ಪ್ರಸ್ತುತ ಸ್ಥಿತಿಗತಿ:

- **ಜಾಗತಿಕ ಸ್ಥಾನ:** ಸ್ಥಾಪಿತ ಪವನ ವಿದ್ಯುತ್ ಸಾಮರ್ಥ್ಯದಲ್ಲಿ **ಭಾರತವು ವಿಶ್ವದಲ್ಲೇ 4ನೇ ಅತಿದೊಡ್ಡ ರಾಷ್ಟ್ರವಾಗಿದೆ.**
- **ಸ್ಥಾಪಿತ ಸಾಮರ್ಥ್ಯ :** 2025 ರ ಆಗಸ್ಟ್ 12 ರ ಮಾಹಿತಿಯಂತೆ, ದೇಶದ ಒಟ್ಟು ಸ್ಥಾಪಿತ ಪವನ ವಿದ್ಯುತ್ ಸಾಮರ್ಥ್ಯ **51.67 ಗಿಗಾ ವಾಟ್** ಆಗಿದೆ.
- ಪ್ರಮುಖ ರಾಜ್ಯಗಳು: ಪವನ ಶಕ್ತಿ ಉತ್ಪಾದನೆಯಲ್ಲಿ **ಗುಜರಾತ್ ಅಗ್ರಸ್ಥಾನದಲ್ಲಿದ್ದು,** ತದನಂತರದ ಸ್ಥಾನಗಳಲ್ಲಿ **ತಮಿಳುನಾಡು, ಕರ್ನಾಟಕ** ಮತ್ತು ರಾಜಸ್ಥಾನ ರಾಜ್ಯಗಳಿವೆ.

### ಪವನ ಶಕ್ತಿ ವಲಯಕ್ಕಾಗಿ ಸರ್ಕಾರದ ಪ್ರಮುಖ ಉಪಕ್ರಮಗಳ ಬಗ್ಗೆ:

1. **ರಾಷ್ಟ್ರೀಯ ಪವನ-ಸೌರ ಹೈಬ್ರಿಡ್ ನೀತಿ, 2018:** ನಿರಂತರ ವಿದ್ಯುತ್ ಪೂರೈಕೆ ಮತ್ತು ಭೂಮಿಯ ಸಮರ್ಥ ಬಳಕೆಯನ್ನು ಖಾತ್ರಿಪಡಿಸುವ ನಿಟ್ಟಿನಲ್ಲಿ, ಒಂದೇ ಯೋಜನೆಯಡಿ ಪವನ ಮತ್ತು ಸೌರಶಕ್ತಿಯನ್ನು ಸಂಯೋಜಿಸುವುದನ್ನು ಈ ನೀತಿಯು ಪ್ರೋತ್ಸಾಹಿಸುತ್ತದೆ.
2. **ಕಡಲಾಚೆಯ ಪವನ ಶಕ್ತಿ ನೀತಿ, 2015:** ಭಾರತೀಯ ಜಲಪ್ರದೇಶಗಳಲ್ಲಿ ಕಡಲಾಚೆಯ ಪವನ ವಿದ್ಯುತ್

ಸ್ಥಾವರಗಳನ್ನು ಅಭಿವೃದ್ಧಿಪಡಿಸಲು ಅಗತ್ಯವಾದ ಅನುಮತಿಗಳು ಮತ್ತು ಜಾಲದ ಯೋಜನೆ ಸೇರಿದಂತೆ ಸೂಕ್ತ ಚೌಕಟ್ಟನ್ನು ಈ ನೀತಿಯು ಒದಗಿಸುತ್ತದೆ.

## 5. 'ಮಟ್ಸ್ ಸಹಾಯಕ್' ಟಿಕೆಟ್ ವಿತರಣಾ ಯೋಜನೆ




### ಇದೀಗ ಸುದ್ದಿಯಲ್ಲಿದೆ:

- ಟಿಕೆಟ್ ವಿತರಣಾ ಪ್ರಕ್ರಿಯೆಯನ್ನು ಸರಳಗೊಳಿಸುವ ನಿಟ್ಟಿನಲ್ಲಿ, **ನೈಋತ್ಯ ರೈಲ್ವೆಯು (SWR) ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ (ಕೆಎಸ್ಆರ್) ಬೆಂಗಳೂರು ನಿಲ್ದಾಣದಲ್ಲಿ 'ಮೊಬೈಲ್ ಕಾಯ್ದಿರಿಸದ ಟಿಕೆಟ್ ವ್ಯವಸ್ಥೆ' (MUTS) ಸಹಾಯಕ್ ಯೋಜನೆ**'ಗೆ ಚಾಲನೆ ನೀಡಿದೆ.
- ಈ ಮೂಲಕ, ಇಂತಹ ಉಪಕ್ರಮವನ್ನು ಪರಿಚಯಿಸಿದ **ದೇಶದ ಮೊದಲ ರೈಲ್ವೆ ವಲಯ** ಎಂಬ ಹೆಗ್ಗಳಿಕೆಗೆ ನೈಋತ್ಯ ರೈಲ್ವೆ ಪಾತ್ರವಾಗಿದೆ.

### ಮೊಬೈಲ್ ಕಾಯ್ದಿರಿಸದ ಟಿಕೆಟ್ ವ್ಯವಸ್ಥೆ (MUTS) ಸಹಾಯಕ್ ಯೋಜನೆಯ ಬಗ್ಗೆ:

- ಈ ಯೋಜನೆಯಡಿಯಲ್ಲಿ, **ತರಬೇತಿ ಪಡೆದ MUTS ಸಹಾಯಕರರು MUTS ಕೈಯಲ್ಲಿ ಹಿಡಿಯುವ ಸಾಧನಗಳನ್ನು ಬಳಸಿ ಪ್ರಯಾಣಿಕರಿಗೆ ಕಾಯ್ದಿರಿಸದ ಟಿಕೆಟ್‌ಗಳನ್ನು ವಿತರಿಸುತ್ತಾರೆ.**
- ಟಿಕೆಟ್ ಕೌಂಟರ್‌ಗಳಲ್ಲಿನ **ದಟ್ಟಣೆಯನ್ನು ಕಡಿಮೆ** ಮಾಡುವುದು ಮತ್ತು **ಪ್ರಯಾಣಿಕರಿಗೆ ತ್ವರಿತವಾಗಿ ಹಾಗೂ ತೊಂದರೆರಹಿತವಾಗಿ ಟಿಕೆಟ್ ಖರೀದಿಸಲು ಅವಕಾಶ ಕಲ್ಪಿಸುವುದು** ಇದರ ಗುರಿಯಾಗಿದೆ.

## 6. ಹೊನ್ನಾವರ ಬಂದರು ಯೋಜನೆ

### ಇದೀಗ ಸುದ್ದಿಯಲ್ಲಿದೆ:

- ಹೊನ್ನಾವರ ಬಂದರು ಯೋಜನೆಗೆ ನೀಡಲಾದ ಪರಿಸರ ಅನುಮತಿಯನ್ನು ತಕ್ಷಣವೇ ಹಿಂಪಡೆಯುವಂತೆ **'ವಾಸ್ತವ ಪರಿಶೋಧನಾ ವರದಿ'**ಯೊಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

### ಹೊನ್ನಾವರ ಬಂದರು ಯೋಜನೆಯ ಬಗ್ಗೆ:

- **ಸ್ಥಳ:-** ಈ ಯೋಜನೆಯನ್ನು ಕರ್ನಾಟಕದ **ಉತ್ತರ ಕನ್ನಡ** ಜಿಲ್ಲೆಯ ಹೊನ್ನಾವರದಲ್ಲಿ, ನಿರ್ದಿಷ್ಟವಾಗಿ **ಶರಾವತಿ ನದಿಯ ಮುಖಜ ಭೂಮಿ** ಪ್ರದೇಶದಲ್ಲಿ ಗುರುತಿಸಲಾಗಿದೆ.
- ಯೋಜನೆಯ ಪ್ರಕಾರ:- ಇದೊಂದು ಸಾರ್ವಜನಿಕ-ಖಾಸಗಿ ಸಹಭಾಗಿತ್ವದ (PPP) ಅಡಿಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿರುವ ಪ್ರಮುಖ **ಆಳ ನೀರಿನ ಬಂದರು ಯೋಜನೆ**ಯಾಗಿದೆ. ಈ ಯೋಜನೆಯನ್ನು **ಕರ್ನಾಟಕ ಜಲಸಾರಿಗೆ ಮಂಡಳಿಯ** ಸಹಯೋಗದೊಂದಿಗೆ **"ಹೊನ್ನಾವರ ಬಂದರು ಖಾಸಗಿ ನಿಯಮಿತ" (HPPL)** ನಿರ್ವಹಿಸುತ್ತಿದೆ.
- **ಯೋಜನೆಯ ವೆಚ್ಚ:-** ಸರಿಸುಮಾರು ₹607 ಕೋಟಿ.
- **ಸರಕು ನಿರ್ವಹಣೆ:-** ಆರಂಭಿಕ ಸಾಮರ್ಥ್ಯ ವಾರ್ಷಿಕ 4.9 ಮಿಲಿಯನ್ ಟನ್ ಆಗಿದ್ದು, ಇದು ಪ್ರಾದೇಶಿಕ ಜಲಸಾರಿಗೆ ವ್ಯಾಪಾರ ಮತ್ತು ಆರ್ಥಿಕ ಬೆಳವಣಿಗೆಯನ್ನು ಹೆಚ್ಚಿಸುವ ನಿರೀಕ್ಷೆಯಿದೆ.
- **ವಿರೋಧ : ಶರಾವತಿ ಅಳಿವೆಯ ಜೀವಿ ಪರಿಸರ ಕಾಳಜಿಗಳು ಮತ್ತು ಜೀವನೋಪಾಯಕ್ಕೆ ಉಂಟಾಗುವ ಬೆದರಿಕೆಗಳಿಂದಾಗಿ** ಐದು ಹಳ್ಳಿಗಳ ಸ್ಥಳೀಯ ಮೀನುಗಾರ ಸಮುದಾಯಗಳಿಂದ ತೀವ್ರ ವಿರೋಧ ವ್ಯಕ್ತವಾಗಿದೆ.

## 7. "ಕೋಬ್ರಾ ಬೀಟ್"



### ಇದೀಗ ಸುದ್ದಿಯಲ್ಲಿ

- **ಸೂಕ್ಷ್ಮ-ಮಟ್ಟದ ಸಂಚಾರ ದಟ್ಟಣೆ ನಿರ್ವಹಣೆ** ಸಮಸ್ಯೆಗಳನ್ನು ನಿಭಾಯಿಸಲು, **ಬೆಂಗಳೂರು ಸಂಚಾರ ಪೊಲೀಸರು** (BTP) 'ಕೋಬ್ರಾ ಬೀಟ್' ವ್ಯವಸ್ಥೆಯನ್ನು ಪ್ರಾರಂಭಿಸಿದ್ದಾರೆ.

### ಕೋಬ್ರಾ ಬೀಟ್ ವ್ಯವಸ್ಥೆಯ ಬಗ್ಗೆ:

- ಇದು **ಬೆಂಗಳೂರು ಸಂಚಾರ ಪೊಲೀಸರು** ಆರಂಭಿಸಿದ ಒಂದು **ಸಂಚಾರ ನಿರ್ವಹಣಾ** ಉಪಕ್ರಮವಾಗಿದೆ.
- **ಸಂಚಾರ ದಟ್ಟಣೆ ಹೆಚ್ಚಿರುವ ಸಮಯದಲ್ಲಿ** 'ಕೋಬ್ರಾ' ಪಡೆಯು ನಿಗದಿತ ಮಾರ್ಗಗಳಲ್ಲಿ **ನಿಯೋಜಿತ ಅಧಿಕಾರಿಗಳಿಂದ ಗಸ್ತು ತಿರುಗಿ, ಕಾನೂನುಬಾಹಿರವಾಗಿ ನಿಲ್ಲಿಸುವ, ಸಂಚಾರ**

**ಅಡಚಣೆ ಮತ್ತು ತಪ್ಪು ದಿಕ್ಕಿನ ಚಾಲನೆಯಂತಹ** ಸಮಸ್ಯೆಗಳನ್ನು ತಕ್ಷಣವೇ ಬಗೆಹರಿಸಿ, ದಟ್ಟಣೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುತ್ತದೆ.

- ಈ ಅಧಿಕಾರಿಗಳು **ಪ್ರಥಮ ಸ್ಪಂದಕರಾಗಿ** ಕಾರ್ಯನಿರ್ವಹಿಸುತ್ತಾರೆ. ಪ್ರಮುಖ ಸಂಚಾರ ದಟ್ಟಣೆಗಳಿಗೆ ಕಾರಣವಾಗುವ **ಸಣ್ಣಪುಟ್ಟ ಸಂಚಾರ ಸಮಸ್ಯೆಗಳನ್ನು ಪೂರ್ವಭಾವಿಯಾಗಿ ಪರಿಹರಿಸಿ,** ನೈಜ-ಸಮಯದ ಸಂಚಾರ ಹರಿವನ್ನು ಸುಧಾರಿಸುತ್ತಾರೆ.

## 8. ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆ (CMKKY)




### ಇದೀಗ ಸುದ್ದಿಯಲ್ಲಿದೆ:

- ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆ (CMKKY) ಯು, ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ (SDEL) ಯು ನೇರವಾಗಿ ಅನುಷ್ಠಾನಗೊಳಿಸುವ ಯೋಜನೆಗಳ ಅಡಿಯಲ್ಲಿ ಅಭ್ಯರ್ಥಿಗಳಿಗೆ ತರಬೇತಿ ನೀಡಲು ಉದ್ದೇಶಿಸಲಾಗಿದೆ.
- ಅದೇ ರೀತಿ, ಇತರ ಸರ್ಕಾರಿ ಇಲಾಖೆಗಳು ಮತ್ತು ಸರ್ಕಾರಿ ಸಂಸ್ಥೆಗಳು ಅನುಷ್ಠಾನಗೊಳಿಸುವ ಯೋಜನೆಗಳ ಅಡಿಯಲ್ಲಿ **2.50 ಲಕ್ಷ ಯುವಜನರಿಗೆ ಕೌಶಲ್ಯ ತರಬೇತಿ** ನೀಡುವ ಗುರಿಯನ್ನು ಹೊಂದಲಾಗಿದೆ.

### ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆಯ ಬಗ್ಗೆ:

- **ಉದ್ದೇಶ** - ಇದು ಕರ್ನಾಟಕ ಸರ್ಕಾರದ ಪ್ರಮುಖ ಕೌಶಲ್ಯ ಅಭಿವೃದ್ಧಿ ಯೋಜನೆಯಾಗಿದೆ. ರಾಜ್ಯದ **ಯುವಜನರ ಉದ್ಯೋಗಾರ್ಹತೆಯನ್ನು ಹೆಚ್ಚಿಸಲು ಮತ್ತು ಉದ್ಯಮಶೀಲತೆಯನ್ನು ಉತ್ತೇಜಿಸಲು ಉಚಿತ, ಅಲ್ಪಾವಧಿಯ ವೃತ್ತಿಪರ ತರಬೇತಿಯನ್ನು** ಇದು ಒದಗಿಸುತ್ತದೆ.

### ಪ್ರಮುಖ ಲಕ್ಷಣಗಳು ಮತ್ತು ಉದ್ದೇಶಗಳು:

- ಗುರಿ: ಉದ್ಯಮದ ಬೇಡಿಕೆಗಳನ್ನು ಪೂರೈಸುವ ನಿಟ್ಟಿನಲ್ಲಿ, ವಿವಿಧ ಸರ್ಕಾರಿ ಇಲಾಖೆಗಳ ಅಡಿಯಲ್ಲಿ **ವಾರ್ಷಿಕವಾಗಿ 5 ಲಕ್ಷ ಯುವಜನರಿಗೆ ಕೌಶಲ್ಯ ತರಬೇತಿ** ನೀಡುವುದು ಈ ಯೋಜನೆಯ ಗುರಿಯಾಗಿದೆ.
- ಉದ್ದೇಶಿತ ವರ್ಗ: ಇದು **15 ರಿಂದ 35 ವರ್ಷ ವಯೋಮಾನದ ಯುವಜನರನ್ನು (ನಿರ್ದಿಷ್ಟ ವರ್ಗಗಳಿಗೆ ವಿನಾಯಿತಿ ಇದೆ)** ದೃಷ್ಟಿಯಲ್ಲಿಟ್ಟುಕೊಂಡು ರೂಪಿಸಲಾದ ಯೋಜನೆಯಾಗಿದೆ. ಮುಖ್ಯವಾಗಿ **ಶಾಲೆಯಿಂದ ಹೊರಗುಳಿದವರು ಮತ್ತು ಅನೌಪಚಾರಿಕ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ** ಕೌಶಲ್ಯ ತರಬೇತಿಯನ್ನು ಇದರ ಅಡಿಯಲ್ಲಿ ನೀಡಲಾಗುತ್ತದೆ.
- ತರಬೇತಿ ಕ್ಷೇತ್ರಗಳು: **ಮಾಹಿತಿ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಆಧಾರಿತ ಸೇವೆಗಳು (IT & ITeS), ಆರೋಗ್ಯ ಸೇವೆಗಳು, ವಾಹನ ಸಂಬಂಧಿತ, ವಿದ್ಯುನ್ಮಾನ ಸಂಬಂಧಿತ ಮತ್ತು ಕೃಷಿ ಸೇರಿದಂತೆ 35 ಕ್ಕೂ ಹೆಚ್ಚು ವಲಯಗಳಲ್ಲಿ, ಸುಮಾರು 3,000 ವಿವಿಧ ಉದ್ಯೋಗಕ್ಕೇ** ಸಂಬಂಧಿಸಿದ ತರಬೇತಿಯನ್ನು ನೀಡಲಾಗುತ್ತದೆ. 2025-26 ನೇ ಸಾಲಿನ ಮಾಹಿತಿಯಂತೆ, **ಕೃತಕ ಬುದ್ಧಿಮತ್ತೆ ಮತ್ತು ಬ್ಲಾಕ್‌ಚೈನ್‌ನಂತಹ** ಉದಯೋನ್ಮುಖ ಕ್ಷೇತ್ರಗಳಿಗೆ ವಿಶೇಷ ಆದ್ಯತೆಯನ್ನು ನೀಡಲಾಗುತ್ತಿದೆ.
- ಉದ್ಯೋಗ ನೆರವು: ಈ ಯೋಜನೆಯ ಉಸ್ತುವಾರಿ ವಹಿಸಿರುವ **'ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ'ವು** (KSDC), ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ **ಕನಿಷ್ಠ 70% ರಷ್ಟು ಅಭ್ಯರ್ಥಿಗಳಿಗೆ ಉದ್ಯೋಗಾವಕಾಶಗಳನ್ನು** ಒದಗಿಸಲು ನೆರವಾಗುತ್ತದೆ.
- **ಇತರ ಯೋಜನೆಗಳೊಂದಿಗೆ ಸಂಯೋಜನೆ :** CMKKY ಯೋಜನೆಯು ಕೇಂದ್ರ ಸರ್ಕಾರದ **'ಪ್ರಧಾನ ಮಂತ್ರಿ ಕೌಶಲ್ ವಿಕಾಸ್ ಯೋಜನೆ'** (PMKVY) ಮತ್ತು ನಿರುದ್ಯೋಗ ಭತ್ಯೆ ಪಡೆಯುವ ಫಲಾನುಭವಿಗಳಿಗಾಗಿ ರಾಜ್ಯ ಸರ್ಕಾರ ಜಾರಿಗೊಳಿಸಿರುವ **'ಯುವನಿಧಿ ಪ್ಲಸ್'** ಉಪಕ್ರಮದೊಂದಿಗೆ ಸಂಯೋಜನೆಗೊಂಡು ಕಾರ್ಯನಿರ್ವಹಿಸುತ್ತದೆ.

## 9. ಬೆಂಗಳೂರು ಕೌಶಲ್ಯ ಶೃಂಗಸಭೆ 2025




### ಇದೀಗ ಸುದ್ದಿಯಲ್ಲಿ

- 'ಬೆಂಗಳೂರು ಕೌಶಲ್ಯ ಶೃಂಗಸಭೆ 2025'ನ್ನು ನವೆಂಬರ್ 4 ರಿಂದ 6, 2025 ರವರೆಗೆ ಆಯೋಜಿಸಲಾಗಿತ್ತು.
- **ಧ್ಯೇಯವಾಕ್ಯ: "ಕಾರ್ಯಪಡೆ 2030: ವಿಸ್ತರಣೆ, ವ್ಯವಸ್ಥೆಗಳು, ಸಮನ್ವಯ"**

### ಆಯೋಜಕರು ಮತ್ತು ಪಾಲುದಾರರು:

- ಈ ಶೃಂಗಸಭೆಯನ್ನು ಕರ್ನಾಟಕ ಸರ್ಕಾರದ **'ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ'ಯು (SDEL), 'ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ' (KSDC), 'ಕರ್ನಾಟಕ ರಾಜ್ಯ ಕೃಷಿ ಇಲಾಖೆ' ಮತ್ತು 'ಕರ್ನಾಟಕ ಡಿಜಿಟಲ್ ಆರ್ಥಿಕತೆ ಮಿಷನ್'** ಸಹಯೋಗದೊಂದಿಗೆ ಆಯೋಜಿಸಿತ್ತು.

### ಉದ್ದೇಶಗಳು ಮತ್ತು ದೃಷ್ಟಿಕೋನ

- **ಸಾಂಸ್ಥಿಕ ಬಲವರ್ಧನೆ:** ಸಂಸ್ಥೆಗಳನ್ನು ಬಲಪಡಿಸುವುದು, ಸಾಂಪ್ರದಾಯಿಕ ಮತ್ತು ಉದಯೋನ್ಮುಖ ಕೌಶಲ್ಯಗಳಿಗಾಗಿ ದೃಢವಾದ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವುದು, ಕೌಶಲ್ಯ

ತರಬೇತಿಯ ಗುಣಮಟ್ಟ ಮತ್ತು ಒಳಗೊಳ್ಳುವಿಕೆಯನ್ನು ಹೆಚ್ಚಿಸುವುದು ಇದರ ಪ್ರಮುಖ ಉದ್ದೇಶವಾಗಿದೆ. ಜೊತೆಗೆ, ನಾವೀನ್ಯತೆ ಮತ್ತು ಜಾಗತಿಕ ಕಾರ್ಯಪಡೆ ಚಲನಶೀಲತೆಯನ್ನು ಉತ್ತೇಜಿಸುವುದನ್ನು ಇದು ಒಳಗೊಂಡಿದೆ.

- **ಜಾಗತಿಕ ಮನ್ನಣೆ:** ಅಂತರರಾಷ್ಟ್ರೀಯ ಪ್ರಮಾಣೀಕರಣ ಮಾನದಂಡಗಳು ಮತ್ತು ವೃತ್ತಿಪರ ಶಿಕ್ಷಣದ ಚೌಕಟ್ಟುಗಳೊಂದಿಗೆ ಹೊಂದಾಣಿಕೆ ಸಾಧಿಸುವ ಮೂಲಕ, ಕರ್ನಾಟಕವನ್ನು **"ವಿಶ್ವಕ್ಕೆ ಕೌಶಲ್ಯದ ಹೆಬ್ಬಾಗಿಲು"** ಆಗಿ ರೂಪಿಸುವ ಗುರಿಯನ್ನು ಹೊಂದಿದೆ.

## 10.ಕಬ್ಬಿನ ಬೆಳೆಗೆ - ನ್ಯಾಯಯುತ ಮತ್ತು ಲಾಭದಾಯಕ ಬೆಲೆ (FRP)

### ಇದೀಗ ಸುದ್ದಿಯಲ್ಲಿದೆ:

- ಕಬ್ಬಿನ ಬೆಳೆಗೆ ನ್ಯಾಯಯುತ ಮತ್ತು ಲಾಭದಾಯಕ ಬೆಲೆ (FRP) ಯ ಕಳವಳಗಳನ್ನು ಪರಿಹರಿಸಲು ಸಭೆಯನ್ನು ಸೇರುವಂತೆ ಕೋರಿ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ.

### ಭಾರತದಲ್ಲಿ ಸಕ್ಕರೆ ಉತ್ಪಾದನೆಯ ಬಗ್ಗೆ:

- 2021-2022 ರಲ್ಲಿ ಬ್ರೆಜಿಲ್ ಅನ್ನು ಹಿಂದಿಕ್ಕಿ **ಭಾರತ ವಿಶ್ವದಲ್ಲೇ ಅತೀ ಹೆಚ್ಚು ಸಕ್ಕರೆ ಉತ್ಪಾದಕ ರಾಷ್ಟ್ರವಾಯಿತು.**
- **ಭಾರತದಲ್ಲಿ ಸಕ್ಕರೆ ಉದ್ಯಮದ ಸ್ಥಳಗಳು:** ಸಕ್ಕರೆ ಉದ್ಯಮವು ಉತ್ಪಾದನೆಯ ಎರಡು ಪ್ರಮುಖ ಪ್ರದೇಶಗಳಲ್ಲಿ ಹಂಚಿಕೆಯಾಗಿದೆ:
  - ಉತ್ತರದಲ್ಲಿ - **ಉತ್ತರ ಪ್ರದೇಶ, ಬಿಹಾರ, ಹರಿಯಾಣ ಮತ್ತು ಪಂಜಾಬ್.**
  - ದಕ್ಷಿಣದಲ್ಲಿ - **ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು ಮತ್ತು ಆಂಧ್ರಪ್ರದೇಶ.**

### ಕಬ್ಬು ಬೆಳೆಯ ಉಪಯೋಗಗಳು:

- ಇದು **ಬಿದಿರು ಸಸ್ಯ ಕುಟುಂಬಕ್ಕೆ** ಸೇರಿದೆ ಮತ್ತು **ಭಾರತಕ್ಕೆ ಸ್ಥಳೀಯವಾಗಿದೆ.**
- ಭಾರತದಲ್ಲಿ ಉತ್ಪಾದನೆಯಾಗುವ ಒಟ್ಟು ಕಬ್ಬಿನ ಸುಮಾರು **ಮೂರನೇ ಎರಡರಷ್ಟು ಭಾಗ ಬೆಲ್ಲ ಮತ್ತು ಖಂಡಸಾರಿ** ತಯಾರಿಕೆಗೆ ಬಳಕೆಯಾದರೆ, ಕೇವಲ ಮೂರನೇ ಒಂದರಷ್ಟು ಭಾಗ ಮಾತ್ರ ಸಕ್ಕರೆ ಕಾರ್ಖಾನೆಗಳಿಗೆ ಸರಬರಾಜಾಗುತ್ತದೆ.
- ಇದು **ಮದ್ಯದ ತಯಾರಿಕೆಗೆ** ಅಗತ್ಯವಾದ ಕಚ್ಚಾ ವಸ್ತುವನ್ನಾಗಿ ಬಳಸಲಾಗುತ್ತದೆ.
- ಕಬ್ಬಿನ ರಸ ತೆಗೆದ ನಂತರ ಉಳಿಯುವ **ಸಿಪ್ಪೆ (ಬಗಾಸ್)** ಯನ್ನು **ಕಾಗದ ತಯಾರಿಕಾ** ಕೈಗಾರಿಕೆಯಲ್ಲಿ ಹೆಚ್ಚು ಲಾಭದಾಯಕವಾಗಿ ಬಳಸಬಹುದಾಗಿದೆ.
- **ಇಥೆನಾಲ್ ಉತ್ಪಾದನೆ:** ಇದು ಪೆಟ್ರೋಲಿಯಂ ಉತ್ಪನ್ನಗಳಿಗೆ ಮತ್ತು ಇತರ ಹಲವಾರು ರಾಸಾಯನಿಕ ಉತ್ಪನ್ನಗಳಿಗೆ ಒಂದು ಸಮರ್ಥ ಪರ್ಯಾಯವಾಗಿದೆ.
- ಇಥೆನಾಲ್ ಉತ್ಪಾದನೆಯಲ್ಲಿ ಅಮೆರಿಕ ಮತ್ತು ಬ್ರೆಜಿಲ್ ನಂತರ ಭಾರತವು **ವಿಶ್ವದ ಮೂರನೇ ಅತಿದೊಡ್ಡ ರಾಷ್ಟ್ರವಾಗಿ** ಹೊರಹೊಮ್ಮಿದೆ.

### ಕಬ್ಬು ಬೆಳೆಯಲು ಅಗತ್ಯವಾದ ಭೌಗೋಳಿಕ ಪರಿಸ್ಥಿತಿಗಳು:

- **ಬೆಳೆಯ ಅವಧಿ:** ಭೌಗೋಳಿಕ ಪರಿಸ್ಥಿತಿಗಳನ್ನು ಅವಲಂಬಿಸಿ ಪಕ್ವವಾಗಲು **10-15 ತಿಂಗಳುಗಳು, ಅಥವಾ 18 ತಿಂಗಳುಗಳೂ** ಬೇಕಾಗಬಹುದು.
- **ಮಣ್ಣು: ತೇವಾಂಶವನ್ನು ಉಳಿಸಿಕೊಳ್ಳಬಲ್ಲ** ಯಾವುದೇ ರೀತಿಯ ಮಣ್ಣಿನಲ್ಲಾದರೂ ಕಬ್ಬನ್ನು ಬೆಳೆಯಬಹುದು.
  - **ಉದಾಹರಣೆಗೆ - ಮೆಕ್ಕಲು ಮಣ್ಣು, ಜೇಡಿಮಣ್ಣು, ಕಪ್ಪು ಹತ್ತಿ ಮಣ್ಣು, ಕಂದು ಅಥವಾ ಕೆಂಪು ಮೆಕ್ಕಲು ಮಣ್ಣು ಮತ್ತು ಜಂಬಿಟ್ಟಿಗೆ ಮಣ್ಣು.**
  - ಈ ಮಣ್ಣು **ಸಾರಜನಕ, ಕ್ಯಾಲ್ಸಿಯಂ** ಮತ್ತು **ರಂಜಕದಂತಹ** ಪೋಷಕಾಂಶಗಳಿಂದ ಸಮೃದ್ಧವಾಗಿರಬೇಕು.
- ವಾಯುಗುಣ: ಈ ಬೆಳೆಗೆ **ಉಷ್ಣ ಮತ್ತು ತೇವಾಂಶಭರಿತ** ವಾಯುಗುಣದ ಅಗತ್ಯವಿದ್ದು, **21°C ನಿಂದ 27°C** ತಾಪಮಾನ ಹಾಗೂ **75 ರಿಂದ 150 ಸೆಂ.ಮೀ ಮಳೆಯ** ಅವಶ್ಯಕತೆ ಇರುತ್ತದೆ.


### ಸರ್ಕಾರದ ಕ್ರಮಗಳು:

### ಕಬ್ಬಿಗೆ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯ ಬಗ್ಗೆ:

- ಶಿಫಾರಸು ಮಾಡುವವರು:- ಈ ಬೆಲೆಯನ್ನು **'ಕೃಷಿ ವೆಚ್ಚ ಮತ್ತು ಬೆಲೆಗಳ ಆಯೋಗ'ದ** (CACP) ಶಿಫಾರಸಿನ ಮೇರೆಗೆ ನಿರ್ಧರಿಸಲಾಗುತ್ತದೆ.
- **ಉದ್ದೇಶ:** ಸಕ್ಕರೆ ಕಾರ್ಖಾನೆಗಳು ಲಾಭದಲ್ಲಿವೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಗಣಿಸದೆ, **ರೈತರಿಗೆ ಅವರ ಶ್ರಮಕ್ಕೆ ತಕ್ಕ ಲಾಭ ಹಾಗೂ ಕೃಷಿಯಲ್ಲಿನ ಅಪಾಯವನ್ನು ಸರಿದೂಗಿಸುವಂತಹ ನಿಶ್ಚಿತ ಲಾಭಾಂಶವನ್ನು ಖಾತ್ರಿಪಡಿಸುವುದು** ಇದರ ಉದ್ದೇಶವಾಗಿದೆ.

## 11.ಮೈಸೂರಿನ ಹೊರವಲಯದಲ್ಲಿ ಗಂಗರ ಕಾಲದ 10ನೇ ಶತಮಾನದ ಶಾಸನ ಪತ್ತೆಯಾಗಿದೆ

BEGUR STONE.



### ಇದೀಗ ಸುದ್ದಿಯಲ್ಲಿದೆ:

- ಮೈಸೂರಿನ ಹೊರವಲಯದಲ್ಲಿರುವ ನಾಡನಹಳ್ಳಿಯ ಮಹಾಲಿಂಗೇಶ್ವರ ದೇವಾಲಯದ ಒಳಗೆ ಗಂಗರ ಕಾಲದ 10ನೇ ಶತಮಾನದ ಶಾಸನವೊಂದು ಪತ್ತೆಯಾಗಿದೆ.

### ಈ ಶಾಸನದ ಬಗ್ಗೆ ಹೆಚ್ಚಿನ ಮಾಹಿತಿ:

- ಇದು ಕ್ರಿ.ಶ. 948 ರ **ಗಂಗರ ದೊರೆ ಇಮ್ಮಡಿ ಬೂತುಗನ ಕಾಲದ ಕನ್ನಡ ಶಾಸನವಾಗಿದೆ.**
- **ಇಮ್ಮಡಿ ಬೂತುಗನ ಆಳ್ವಿಕೆಯ ಸಮಯದಲ್ಲಿ,** ಅವನ ಅಂಗರಕ್ಷಕಿಯಾದ **ಮಾರೆಮ್ಮಳು** ತೋಟವನ್ನು ದೇವಾಲಯಕ್ಕೆ ತೆರಿಗೆ ರಹಿತವಾಗಿ ದಾನ ನೀಡಿರಬಹುದು ಮತ್ತು ಅದರ ನಿರ್ವಹಣೆಯನ್ನು ಗ್ರಾಮದ ಮುಖ್ಯಸ್ಥ **ವಿಜಕೇತ ಗಾವುಂಡ**ನಿಗೆ ಒಪ್ಪಿಸಿರಬಹುದು ಎಂದು ನಂಬಲಾಗಿದೆ.

## 12. ಕರ್ನಾಟಕ ನವೋದ್ಯಮ ನೀತಿ, 2025-30

### ಇದೀಗ ಸುದ್ದಿಯಲ್ಲಿದೆ:

- 'ಕರ್ನಾಟಕ ನವೋದ್ಯಮ ನೀತಿ, 2025-30' ಕ್ಕೆ ರಾಜ್ಯ ಸಚಿವ ಸಂಪುಟವು ಅನುಮೋದನೆ ನೀಡಿದ್ದು, **ಇದು ಮುಂದಿನ ಐದು ವರ್ಷಗಳಲ್ಲಿ ರಾಜ್ಯದಲ್ಲಿ 25,000 ಹೊಸ ನವೋದ್ಯಮಗಳನ್ನು** ಸ್ಥಾಪಿಸುವ ಮಹತ್ವಾಕಾಂಕ್ಷಿ ಗುರಿಯನ್ನು ಹೊಂದಿದೆ.

### ಕರ್ನಾಟಕ ನವೋದ್ಯಮ ನೀತಿ, 2025-30 ರ ಬಗ್ಗೆ:

- **ಗುರಿ:**- ಒಟ್ಟು ಉದ್ದೇಶಿತ 25,000 ನವೋದ್ಯಮಗಳ ಪೈಕಿ, **ಕನಿಷ್ಠ 10,000 ನವೋದ್ಯಮಗಳನ್ನು ಬೆಂಗಳೂರಿನ ಆಚೆಗೆ** ಸ್ಥಾಪನೆಯಾಗುವುದನ್ನು ಖಚಿತಪಡಿಸಿಕೊಳ್ಳುವುದು ಈ ನೀತಿಯ ಪ್ರಮುಖ ಗುರಿಯಾಗಿದೆ.

### ದೃಷ್ಟಿಕೋನ:

- **ಜಾಗತಿಕ ನಾವೀನ್ಯತಾ ಕೇಂದ್ರ:** ಕರ್ನಾಟಕವನ್ನು 'ಜಾಗತಿಕ ನಾವೀನ್ಯತಾ ಕೇಂದ್ರವನ್ನಾಗಿ' ರೂಪಿಸುವುದು ಮತ್ತು ನವೋದ್ಯಮಗಳ ಸಂಪೂರ್ಣ ಅವಧಿಯಲ್ಲಿ ಅವುಗಳನ್ನು ಪೋಷಿಸಲು ಪೂರಕವಾದ ಹಾಗೂ ಚೈತನ್ಯದಾಯಕ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವುದು.
- **ಮೂಲಸೌಕರ್ಯ, ಮಾರ್ಗದರ್ಶನ ಮತ್ತು ಸಂಪನ್ಮೂಲ:** ಸುಸ್ಥಿರ ಬೆಳವಣಿಗೆ ಮತ್ತು ತಾಂತ್ರಿಕ ಪ್ರಗತಿಯನ್ನು ಸಾಧಿಸಲು ಅತ್ಯಗತ್ಯವಾದ ಸಂಪನ್ಮೂಲಗಳು, ಮಾರ್ಗದರ್ಶನ ಮತ್ತು ಮೂಲಸೌಕರ್ಯಗಳನ್ನು ಒದಗಿಸುವುದು.

### ಧ್ಯೇಯ:

- **ಬೆಂಗಳೂರಿನ ಆಚೆಗಿನ ವಲಯಗಳು:** ಈ ನೀತಿಯ ಅಡಿಯಲ್ಲಿ **25,000** ಹೆಚ್ಚುವರಿ ಹೊಸ ನವೋದ್ಯಮಗಳನ್ನು ಸ್ಥಾಪಿಸಲು ರಾಜ್ಯವು ಬದ್ಧವಾಗಿದೆ. ಇದರಲ್ಲಿ **10,000** ನವೋದ್ಯಮಗಳು 'ಬೆಂಗಳೂರಿನ ಆಚೆಗಿನ' ವಲಯಗಳಲ್ಲಿ ಆರಂಭವಾಗಲಿವೆ.
- **ಉದ್ಯಮಶೀಲತೆಯ ವಿಸ್ತರಣೆ:** ಉದ್ಯಮಶೀಲತೆಯ ಹೆಜ್ಜೆಗುರುತುಗಳನ್ನು ರಾಜ್ಯದಾದ್ಯಂತ ವಿಸ್ತರಿಸುವ ಮೂಲಕ, ಪ್ರಮುಖ ನಾವೀನ್ಯತಾ ಕೇಂದ್ರವಾಗಿ ಕರ್ನಾಟಕದ ಸ್ಥಾನಮಾನವನ್ನು ಮತ್ತಷ್ಟು ಉನ್ನತೀಕರಿಸುವುದು.
- **ಬೆಂಬಲಿತ ವ್ಯವಸ್ಥೆ:** ವಿವಿಧ ಪ್ರದೇಶಗಳಲ್ಲಿ ಉದ್ಯಮಿಗಳಿಗೆ ಉತ್ತೇಜನ ನೀಡಲು ನಾವೀನ್ಯತಾ ಕೇಂದ್ರಗಳು, ಇನ್ಕ್ಯುಬೇಷನ್ ಕೇಂದ್ರಗಳು ಮತ್ತು ಸಹ-ಕೆಲಸದ ಸ್ಥಳಗಳನ್ನು ವಿಸ್ತರಿಸುವುದು.
- **ಜಾಗತಿಕ ಸಂಪರ್ಕ:** ನವೋದ್ಯಮಗಳು ತಮ್ಮ ವ್ಯಾಪ್ತಿಯನ್ನು ವಿಶ್ವಮಟ್ಟದಲ್ಲಿ ವಿಸ್ತರಿಸಿಕೊಳ್ಳಲು, ಅಂತರರಾಷ್ಟ್ರೀಯ ಸಹಯೋಗಗಳು, ವಾಣಿಜ್ಯ ಪಾಲುದಾರಿಕೆಗಳು ಮತ್ತು ಜಾಗತಿಕ ಸಂಪರ್ಕ ಜಾಲದ ಅವಕಾಶಗಳನ್ನು ಬಲಪಡಿಸುವುದು

## 13. ಸಂಪನ್ಮೂಲ ಕ್ರೋಢೀಕರಣ ಸಮಿತಿ (RMC) ಯ ವರದಿ




### ಇದೀಗ ಸುದ್ದಿಯಲ್ಲಿದೆ:

- ಕರ್ನಾಟಕದ ಸಂಪನ್ಮೂಲ ಕ್ರೋಢೀಕರಣ ಸಮಿತಿಯು (RMC) ರಾಜ್ಯದ **ರಾಜಸ್ವವನ್ನು (ಆದಾಯ) ಹೆಚ್ಚಿಸಲು** ಸಮಗ್ರ ಸುಧಾರಣೆಗಳನ್ನು ಶಿಫಾರಸು ಮಾಡಲು, ನವೆಂಬರ್ 2025 ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು.

### ಕರ್ನಾಟಕದ ಸಂಪನ್ಮೂಲ ಕ್ರೋಢೀಕರಣ ಸಮಿತಿ (RMC) ಯ ಬಗ್ಗೆ:

- **ರಚನೆ** - ಆಗಸ್ಟ್- 2024.
- **ನೇತೃತ್ವ** - ನಿವೃತ್ತ ಐಎಎಸ್ ಅಧಿಕಾರಿ **ಕೆ.ಪಿ. ಕೃಷ್ಣನ್** ಅವರ ನೇತೃತ್ವದ ಸಮಿತಿ.
- **ಕಾರ್ಯವ್ಯಾಪ್ತಿ** - ಇದು ರಾಜ್ಯದ **ರಾಜಸ್ವವನ್ನು ಹೆಚ್ಚಿಸಲು** ಸಮಗ್ರ ಸುಧಾರಣೆಗಳನ್ನು ಶಿಫಾರಸು ಮಾಡುವ ಸರ್ಕಾರ ನೇಮಿಸಿದ ಸಮಿತಿಯಾಗಿದೆ.

### ಪ್ರಮುಖ ಶಿಫಾರಸುಗಳು

- **ಬಳಕೆದಾರರ ಶುಲ್ಕಗಳ ಹೆಚ್ಚಳ ಮತ್ತು ತರ್ಕಬದ್ಧಗೊಳಿಸುವಿಕೆ:** ಸರ್ಕಾರಿ ಸೇವೆ ಮತ್ತು ಸೌಲಭ್ಯಗಳಿಗೆ ವಿಧಿಸುವ ಶುಲ್ಕಗಳನ್ನು ತರ್ಕಬದ್ಧಗೊಳಿಸುವುದು ಮತ್ತು ಹೆಚ್ಚಿಸುವುದು. ಸ್ವಯಂಚಾಲಿತ ಹಣದುಬ್ಬರ ಸೂಚ್ಯಂಕದೊಂದಿಗೆ ಕೂಡಿದ **ಗಾತ್ರಾಧಾರಿತ ಶುಲ್ಕ ಪದ್ಧತಿಗೆ** ಬದಲಾಗುವುದು.
- **ತೆರಿಗೆ ಸುಧಾರಣೆಗಳು: ತೆರಿಗೆ ವ್ಯಾಪ್ತಿಯನ್ನು ವಿಸ್ತರಿಸಲು** ಮತ್ತು ವಾಣಿಜ್ಯ ತೆರಿಗೆಗಳು ಹಾಗೂ ಅಬಕಾರಿ ಸುಂಕಗಳಂತಹ ಕೆಲವೇ ಮೂಲಗಳ ಮೇಲಿನ ರಾಜ್ಯದ ಅವಲಂಬನೆಯನ್ನು ಕಡಿಮೆ ಮಾಡಲು ತೆರಿಗೆ ಪದ್ಧತಿಯನ್ನು ಪುನಾರಚಿಸುವುದು.

- **ಅಬಕಾರಿ ವ್ಯವಸ್ಥೆಯ ಆಧುನೀಕರಣ:** ಅಬಕಾರಿ ವಲಯದಲ್ಲಿ ಪಾರದರ್ಶಕತೆ ಮತ್ತು ದಕ್ಷತೆಯನ್ನು ಹೆಚ್ಚಿಸಲು **ಹರಾಜು ಆಧಾರಿತ ಡಿಜಿಟಲ್ ಪರವಾನಗಿಯನ್ನು** ಪರಿಚಯಿಸುವುದು.
- **ಆಸ್ತಿ ನಗದೀಕರಣ:** ಸರ್ಕಾರಿ ಆಸ್ತಿಗಳ ವೈಜ್ಞಾನಿಕ ಮೌಲ್ಯಮಾಪನ ನಡೆಸಿ, **ಸಾರ್ವಜನಿಕ-ಖಾಸಗಿ ಸಹಭಾಗಿತ್ವದ (PPP)** ಅಡಿಯಲ್ಲಿ **ಗುತ್ತಿಗೆ** ನೀಡುವ ಮೂಲಕ ಆಸ್ತಿಗಳ ಮೌಲ್ಯವನ್ನು ವರ್ಧಿಸುವುದು.
- **ಆಸ್ತಿ ನಿರ್ವಹಣೆಯನ್ನು ಬಲಪಡಿಸುವುದು:** ಆಸ್ತಿ ದತ್ತಾಂಶ ನಿರ್ವಹಣೆಯನ್ನು ಸುಧಾರಿಸುವುದು ಮತ್ತು ಸರ್ಕಾರಿ ಆಸ್ತಿಗಳ ವ್ಯವಸ್ಥಿತ ಸಮೀಕ್ಷೆಗಳನ್ನು ನಡೆಸುವುದು.
- **ಆರ್ಥಿಕ ನೀತಿ ವಿಭಾಗದ ಸ್ಥಾಪನೆ:** ತೆರಿಗೆಯೇತರ ರಾಜಸ್ವವನ್ನು ಮೇಲ್ವಿಚಾರಣೆ ಮಾಡಲು ಮತ್ತು ಆಸ್ತಿ ನಗದೀಕರಣ ಉಪಕ್ರಮಗಳ ಉಸ್ತುವಾರಿ ನೋಡಿಕೊಳ್ಳಲು **ಹಣಕಾಸು ಇಲಾಖೆಯ** ಅಡಿಯಲ್ಲಿ ಪ್ರತ್ಯೇಕ 'ಆರ್ಥಿಕ ನೀತಿ ವಿಭಾಗ'ವನ್ನು ಸ್ಥಾಪಿಸುವುದು.
- **ನಗರ ಭೂಮಿ ನಗದೀಕರಣ:** ರಾಜಸ್ವ ಸಂಗ್ರಹಣೆಯನ್ನು ಹೆಚ್ಚಿಸುವ ಕ್ರಮಗಳ ಭಾಗವಾಗಿ 'ನಗರ ಭೂಮಿ ನಗದೀಕರಣ'ಕ್ಕೂ ಒತ್ತು ನೀಡಲಾಗಿದೆ.

## 14. ಕೃಷಿ ಮೇಳ, 2025




### ಇದೀಗ ಸುದ್ದಿಯಲ್ಲಿದೆ:

- **ಬೆಂಗಳೂರು ಕೃಷಿ ವಿಜ್ಞಾನ ವಿಶ್ವವಿದ್ಯಾಲಯವು**, ನವೆಂಬರ್ 13 ರಿಂದ 16 ರವರೆಗೆ ಬೆಂಗಳೂರಿನ ಜಿಕೆವಿಕೆ ಆವರಣದಲ್ಲಿ **'ಕೃಷಿ ಮೇಳ 2025'** ಅನ್ನು ಆಯೋಜಿಸಿತ್ತು.
- 2025 ರ ಧ್ಯೇಯವಾಕ್ಯ: **'ಸಮೃದ್ಧ ಕೃಷಿ – ವಿಕಸಿತ ಭಾರತ: ನೆಲ, ಜಲ, ಬೆಳೆ'.**

## 15. ಗೃಹ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ಮಸೂದೆ, 2025

### ಇದೀಗ ಸುದ್ದಿಯಲ್ಲಿದೆ:

- ರಾಜ್ಯ ಸರ್ಕಾರ ಪ್ರಸ್ತಾಪಿಸಿರುವ 'ಗೃಹ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ಮಸೂದೆ-2025' ಅನ್ನು ಮತ್ತಷ್ಟು ಬಲಪಡಿಸುವಂತೆ 'ಕರ್ನಾಟಕ ಗೃಹ ಕಾರ್ಮಿಕರ ಹಕ್ಕುಗಳ ಒಕ್ಕೂಟ'ವು ಸರ್ಕಾರವನ್ನು ಒತ್ತಾಯಿಸಿದೆ.

### ಗೃಹ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ಮಸೂದೆ, 2025 ರ ಬಗ್ಗೆ:

- ಪ್ರಸ್ತುತ ಅಸಂಘಟಿತ (ಅನೌಪಚಾರಿಕ) ವಾಗಿರುವ ಗೃಹ ಕೆಲಸದ ವಲಯವನ್ನು **ಸಂಘಟಿತ (ಔಪಚಾರಿಕ)** ಗೊಳಿಸುವುದು ಮತ್ತು ರಾಜ್ಯದ ಅಂದಾಜು **15 ಲಕ್ಷ ಗೃಹ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಹಾಗೂ ಕಲ್ಯಾಣ ಸವಲತ್ತುಗಳನ್ನು** ಒದಗಿಸುವುದು ಈ ಮಸೂದೆಯ ಪ್ರಮುಖ ಗುರಿಯಾಗಿದೆ.

### ಕರಡು ಮಸೂದೆಯ ಪ್ರಮುಖ ನಿಬಂಧನೆಗಳು

- **ಕಡ್ಡಾಯ ನೋಂದಣಿ:** ಗೃಹ ಕಾರ್ಮಿಕರು ಮತ್ತು ಅವರನ್ನು ನೇಮಿಸಿಕೊಳ್ಳುವ ಉದ್ಯೋಗದಾತರು (ಗೃಹ ಮಾಲೀಕರು, ಏಜೆನ್ಸಿಗಳು ಮತ್ತು ಡಿಜಿಟಲ್ ವೇದಿಕೆಗಳು ಸೇರಿದಂತೆ) ನಿಗದಿತ **ಸರ್ಕಾರಿ ಪೋರ್ಟಲ್‌ನಲ್ಲಿ** ನೋಂದಾಯಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಲಾಗಿದೆ.
- **ಕಡ್ಡಾಯ ಲಿಖಿತ ಉದ್ಯೋಗ ಒಪ್ಪಂದಗಳು:** ಉದ್ಯೋಗದಾತರು ಕಾರ್ಮಿಕರಿಗೆ ವೇತನ, ಕೆಲಸದ ಅವಧಿ, ಸೌಲಭ್ಯಗಳು ಮತ್ತು ಕೆಲಸದ ಷರತ್ತುಗಳನ್ನು ಸ್ಪಷ್ಟಪಡಿಸುವ ಲಿಖಿತ ಒಪ್ಪಂದವನ್ನು ಕಡ್ಡಾಯವಾಗಿ ನೀಡಬೇಕು. ನೋಂದಾಯಿಸದ ಉದ್ಯೋಗವನ್ನು ಕಾನೂನುಬಾಹಿರ ಎಂದು ಪರಿಗಣಿಸಲಾಗುತ್ತದೆ.
- **ಕಡ್ಡಾಯವಾಗಿ ಕನಿಷ್ಠ ವೇತನ ಮತ್ತು ಕೆಲಸದ ಅವಧಿ:** ಕಾರ್ಮಿಕರು ನಿಗದಿತ ಕನಿಷ್ಠ ವೇತನಕ್ಕೆ ಅರ್ಹರಾಗಿರುತ್ತಾರೆ. **ವಾರಕ್ಕೆ ಗರಿಷ್ಠ 48 ಗಂಟೆಗಳ** ಕೆಲಸದ ಅವಧಿ, ಅಧಿಕ ಅವಧಿಯ ಕೆಲಸಕ್ಕೆ ವೇತನ , ವಿಶ್ರಾಂತಿ ಅವಧಿಗಳು ಮತ್ತು ವಾರಕ್ಕೊಮ್ಮೆ ರಜೆ ನೀಡುವುದನ್ನು ಕಡ್ಡಾಯಗೊಳಿಸಲಾಗಿದೆ.
- **ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ ಮಂಡಳಿ:** ಕಲ್ಯಾಣ ನಿಧಿಯನ್ನು ನಿರ್ವಹಿಸಲು **'ಕರ್ನಾಟಕ ರಾಜ್ಯ ಗೃಹ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ ಮಂಡಳಿ'**ಯನ್ನು ಸ್ಥಾಪಿಸಲು ಈ ಮಸೂದೆ ಅವಕಾಶ ಕಲ್ಪಿಸುತ್ತದೆ. ಈ ನಿಧಿಯ ಮೂಲಕ ಆರೋಗ್ಯ ವಿಮೆ, ಹೆರಿಗೆ/ಪಿತೃತ್ವ ಸವಲತ್ತುಗಳು, ಪಿಂಚಣಿ, ಅಪಘಾತ ಪರಿಹಾರ ಮತ್ತು ಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಧನಸಹಾಯದಂತಹ ಪ್ರಯೋಜನಗಳನ್ನು ಒದಗಿಸಲಾಗುತ್ತದೆ.
- **ದಂಡನೆಗಳು :** ಮಸೂದೆಯ ನಿಯಮಗಳನ್ನು ಪಾಲಿಸದ ಉದ್ಯೋಗದಾತರು ಅಥವಾ ಏಜೆನ್ಸಿಗಳಿಗೆ **ದಂಡ ಮತ್ತು ಜೈಲು** ಶಿಕ್ಷೆಯನ್ನು ವಿಧಿಸಲು ಅವಕಾಶವಿದೆ. ಬಾಲ ಕಾರ್ಮಿಕ ಪದ್ಧತಿ ಅಥವಾ ಮಾನವ ಕಳ್ಳಸಾಗಣೆಯಂತಹ ಗಂಭೀರ ಅಪರಾಧಗಳಿಗೆ ಕಠಿಣ ಶಿಕ್ಷೆಯನ್ನು **(7 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು ₹50,000 ದಂಡ)** ಪ್ರಸ್ತಾಪಿಸಲಾಗಿದೆ.
- **ಕುಂದುಕೊರತೆ ನಿವಾರಣೆ :** ಕಾರ್ಮಿಕರು ಮತ್ತು ಉದ್ಯೋಗದಾತರ ನಡುವಿನ ವಿವಾದಗಳನ್ನು ಇತ್ಯರ್ಥಪಡಿಸಲು **ಜಿಲ್ಲಾ ಮಟ್ಟದ ಸಮಿತಿಗಳನ್ನು** ರಚಿಸಲು ಪ್ರಸ್ತಾಪಿಸಲಾಗಿದೆ.

## 16.ರಾಜ್ಯದ ಕಾರಾಗೃಹಗಳ ಕಾರ್ಯನಿರ್ವಹಣೆಯನ್ನು ಪರಿಶೀಲಿಸಲು ಉನ್ನತ ಮಟ್ಟದ ಸಮಿತಿ ರಚನೆ




### ಇದೀಗ ಸುದ್ದಿಯಲ್ಲಿದೆ:

- ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿನ ಅಕ್ರಮ ಚಟುವಟಿಕೆಗಳು ಮತ್ತು ವಿಶೇಷ ಆತಿಥ್ಯದ ವರದಿಗಳ ನಂತರ, ಕರ್ನಾಟಕದಾದ್ಯಂತ **ಕಾರಾಗೃಹಗಳ ಕಾರ್ಯನಿರ್ವಹಣೆ,** ಆಡಳಿತ ಮತ್ತು ಭದ್ರತೆಯನ್ನು ಪರಿಶೀಲಿಸಲು ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದೆ.

### ಉನ್ನತ ಮಟ್ಟದ ಸಮಿತಿಯ ಸದಸ್ಯರು:

- ಅಧ್ಯಕ್ಷತೆ:- **ಹಿತೇಂದ್ರ** (ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ (ಕಾನೂನು ಮತ್ತು ಸುವ್ಯವಸ್ಥೆ)).
- ಇತರೆ ಸದಸ್ಯರು:
  - **ಸಂದೀಪ್ ಪಾಟೀಲ್** (ಪೊಲೀಸ್ ಮಹಾನಿರೀಕ್ಷಕ).
  - **ಅಮರನಾಥ್ ರೆಡ್ಡಿ ಮತ್ತು ರಿಷ್ಯಂತ್** (ಪೊಲೀಸ್ ವರಿಷ್ಠಾಧಿಕಾರಿಗಳು)

## 17. ಕರ್ನಾಟಕದಲ್ಲಿ ತಾಯಿಯ ಮರಣ ದರದ ಪ್ರಮಾಣದಲ್ಲಿ ಶೇ. 24 ರಷ್ಟು ಇಳಿಕೆಯ ದಾಖಲು

### ಇದೀಗ ಸುದ್ದಿಯಲ್ಲಿದೆ:

- ಕರ್ನಾಟಕದಲ್ಲಿ ತಾಯಿಯ ಮರಣ ದರದ ಪ್ರಮಾಣದಲ್ಲಿ ಕಳೆದ ವರ್ಷದ (2024) ಇದೇ ಅವಧಿಗೆ ಹೋಲಿಸಿದರೆ, ಪ್ರಸಕ್ತ ವರ್ಷದ ಜನವರಿಯಿಂದ ಅಕ್ಟೋಬರ್‌ವರೆಗಿನ ಅವಧಿಯಲ್ಲಿ ಶೇ. 24 ರಷ್ಟು ಇಳಿಕೆಯ ದಾಖಲಾಗಿದೆ.
- ರಾಜ್ಯ **ಆರೋಗ್ಯ ಇಲಾಖೆಯು** ಜಾರಿಗೊಳಿಸಿದ **"ತಡೆಗಟ್ಟಬಹುದಾದ ತಾಯಿಯ ಮರಣವನ್ನು ಶೂನ್ಯಕ್ಕೆ ತರುವ ಗುರಿ"** ಎಂಬ ಮಹತ್ವಾಕಾಂಕ್ಷಿ ಉಪಕ್ರಮವು ಇದಕ್ಕೆ ಪ್ರಮುಖ ಕಾರಣವಾಗಿದೆ.

### "ತಡೆಗಟ್ಟಬಹುದಾದ ತಾಯಿಯ ಮರಣವನ್ನು ಶೂನ್ಯಕ್ಕೆ ತರುವ ಗುರಿ"ಯ ಬಗ್ಗೆ:

- ಇದು ಕರ್ನಾಟಕ ರಾಜ್ಯ **ಆರೋಗ್ಯ ಇಲಾಖೆಯು** ಪ್ರಾರಂಭಿಸಿದ ಒಂದು ಪ್ರಮುಖ ಆರೋಗ್ಯ ಉಪಕ್ರಮವಾಗಿದೆ.
- ಉದ್ದೇಶ: ರಾಜ್ಯದ **ತಾಯಿಯ ಮರಣ ದರದ ಪ್ರಮಾಣವನ್ನು (MMR) ತಗ್ಗಿಸುವುದು** ಇದರ ಮೂಲ ಉದ್ದೇಶವಾಗಿದೆ.
- **ಪ್ರಸ್ತುತ ಸ್ಥಿತಿ:** ಮಾದರಿ ನೋಂದಣಿ ವ್ಯವಸ್ಥೆಯ (SRS) 2021-2023 ರ ವಿಶೇಷ ವರದಿಯ ಪ್ರಕಾರ, ಕರ್ನಾಟಕದ ತಾಯಿಯ ಮರಣ ದರದ ಪ್ರಮಾಣವು (MMR) **ಪ್ರತಿ 100,000 ಜೀವಂತ ಜನನಗಳಿಗೆ 68 ರಷ್ಟಿದೆ.**
- **ಗುರಿ:** ಆರೋಗ್ಯ ಮೂಲಸೌಕರ್ಯ, ಸೇವೆಗಳು ಮತ್ತು ಮೇಲ್ವಿಚಾರಣಾ ವ್ಯವಸ್ಥೆಯನ್ನು ಬಲಪಡಿಸುವ ಮೂಲಕ, **ತಡೆಗಟ್ಟಬಹುದಾದ ಎಲ್ಲಾ ರೀತಿಯ ತಾಯಿಯ ಮರಣಗಳನ್ನು ಸಂಪೂರ್ಣವಾಗಿ ತಡೆಗಟ್ಟುವುದು** ಇದರ ಗುರಿಯಾಗಿದೆ.

### ಈ ಉಪಕ್ರಮದ ಪ್ರಮುಖ ಅಂಶಗಳು:

- ಕೇಂದ್ರ ಸರ್ಕಾರದ **ರಾಷ್ಟ್ರೀಯ 'ಸುರಕ್ಷಿತ ಮಾತೃತ್ವ ಆಶ್ವಾಸನ್' (SUMAN)** ಯೋಜನೆಯೊಂದಿಗೆ ಸಂಯೋಜನೆಗೊಂಡಿರುವ ಈ ಉಪಕ್ರಮವು, ಗುಣಮಟ್ಟದ ಮತ್ತು ಸುಲಭವಾಗಿ ಲಭ್ಯವಾಗುವ ಆರೋಗ್ಯ ಸೇವೆಯನ್ನು ಖಾತ್ರಿಪಡಿಸಲು ಬಹುಮುಖಿ ಕಾರ್ಯತಂತ್ರದ ಮೇಲೆ ಗಮನಹರಿಸುತ್ತದೆ.
- **ಮೂಲಸೌಕರ್ಯ ಮತ್ತು ಸಂಪನ್ಮೂಲಗಳ ತರ್ಕಬದ್ಧಗೊಳಿಸುವಿಕೆ:** ರಾಜ್ಯದ ಎಲ್ಲಾ 147 ತಾಲೂಕು ಆಸ್ಪತ್ರೆಗಳು ಮತ್ತು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ 42 ಸಮುದಾಯ ಆರೋಗ್ಯ ಕೇಂದ್ರಗಳನ್ನು (CHCs) ಬಲಪಡಿಸುವುದು ಇದರ ಭಾಗವಾಗಿದೆ. ಇಲ್ಲಿ ದಿನದ 24 ಗಂಟೆಯೂ ಲಭ್ಯವಿರುವ **'ಸಮಗ್ರ ತುರ್ತು ಪ್ರಸೂತಿ ಮತ್ತು ನವಜಾತ ಶಿಶು ಆರೈಕೆ'** (CEmONC) ಸೇವೆಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.
- **ಅಧಿಕ ಅಪಾಯದ ಗರ್ಭಧಾರಣೆಗಳ ನಿರ್ವಹಣೆ:** ಕರ್ನಾಟಕದಲ್ಲಿ ಸಂಭವಿಸುವ ತಾಯಿ ಮರಣಗಳಲ್ಲಿ ಬಹುಪಾಲು **(ಅಂದಾಜು 70%) ತಡೆಗಟ್ಟಬಹುದು.** ಹೀಗಾಗಿ, ಈ ಗುರಿಯು ಅಧಿಕ ಅಪಾಯದ ಗರ್ಭಧಾರಣೆಗಳನ್ನು ತ್ವರಿತವಾಗಿ ಗುರುತಿಸಲು ಮತ್ತು ಅವುಗಳ ಮೇಲೆ ಕಟ್ಟುನಿಟ್ಟಿನ ನಿಗಾ ಇರಿಸಲು ಒತ್ತು ನೀಡುತ್ತದೆ. ರಕ್ತಸ್ರಾವ, ಅಧಿಕ ರಕ್ತದೊತ್ತಡದ ಅಸ್ವಸ್ಥತೆಗಳು ಮತ್ತು ರಕ್ತಹೀನತೆಯಂತಹ ಗಂಭೀರ ತೊಡಕುಗಳಿಗೆ ಸಮಯೋಚಿತ ಚಿಕಿತ್ಸೆಯನ್ನು ಇದು ಖಚಿತಪಡಿಸುತ್ತದೆ.
- **ಆರ್ಥಿಕ ಮತ್ತು ಪೌಷ್ಟಿಕಾಂಶದ ಬೆಂಬಲ:** ಈ ಯೋಜನೆಯಡಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ **ಹಿಂದುಳಿದ ವರ್ಗಗಳ ಗರ್ಭಿಣಿ ಮತ್ತು ಬಾಣಂತಿಯರಿಗೆ ಅಗತ್ಯವಿರುವ ಪೌಷ್ಟಿಕಾಂಶದ ಪೊಟ್ಟಣ ಹಾಗೂ ನಗದು ಪ್ರೋತ್ಸಾಹಧನವನ್ನು** ಒದಗಿಸುವ ವ್ಯವಸ್ಥೆ ಮಾಡಲಾಗಿದೆ.

## 18. ಕೋಟಿ ವೃಕ್ಷ ಅಭಿಯಾನ

### ಇದೀಗ ಸುದ್ದಿಯಲ್ಲಿದೆ:

- "ಕೋಟಿ ವೃಕ್ಷ ಅಭಿಯಾನ"ದ ಪರಿಣಾಮವಾಗಿ ವಿಜಯಪುರ ಜಿಲ್ಲೆಯ ಅರಣ್ಯ ವ್ಯಾಪ್ತಿಯಲ್ಲಿ ಗಣನೀಯ ಪ್ರಮಾಣದ ಏರಿಕೆ ಕಂಡುಬಂದಿದೆ.

### ಕೋಟಿ ವೃಕ್ಷ ಅಭಿಯಾನದ ಬಗ್ಗೆ:

- **ಸ್ವರೂಪ:** "ಕೋಟಿ ವೃಕ್ಷ ಅಭಿಯಾನ" (ಒಂದು ಕೋಟಿ ಮರಗಳ ಅಭಿಯಾನ) ಎಂಬುದು **ವಿಜಯಪುರ ಜಿಲ್ಲೆಗೆ ಸಂಬಂಧಿಸಿದ ಬೃಹತ್ ಪ್ರಮಾಣದ ಮರ ನೆಡುವ ಉಪಕ್ರಮವಾಗಿದೆ.** ಜಿಲ್ಲೆಯ ಶುಷ್ಕ ಭೂಪ್ರದೇಶವನ್ನು ಹಸಿರುಮಯವಾಗಿ ಪರಿವರ್ತಿಸುವುದು

ಇದರ ಪ್ರಮುಖ ಉದ್ದೇಶವಾಗಿದೆ.

- ಆರಂಭ: ಈ ಅಭಿಯಾನಕ್ಕೆ **2015 ರಲ್ಲಿ ಸಚಿವರಾದ ಎಂ. ಬಿ. ಪಾಟೀಲ್** ಅವರು ಚಾಲನೆ ನೀಡಿದರು.
- ಸಾಧನೆ: ರಿಯಾಯಿತಿ ದರದಲ್ಲಿ ಸಸಿಗಳನ್ನು ವಿತರಿಸುವ ಮೂಲಕ ಸಮುದಾಯದ ಸಹಭಾಗಿತ್ವವನ್ನು ಉತ್ತೇಜಿಸಲಾಯಿತು. ಈ ಕಾರ್ಯಕ್ರಮದ ಅಡಿಯಲ್ಲಿ **1.5 ಕೋಟಿಗೂ ಹೆಚ್ಚು ಮರಗಳನ್ನು** ಯಶಸ್ವಿಯಾಗಿ ನೆಡಲಾಗಿದೆ.
- **ಪರಿಣಾಮ:** ಈ ಮಹತ್ವದ ಪ್ರಯತ್ನವು ಜಿಲ್ಲೆಯ ಅರಣ್ಯ ವ್ಯಾಪ್ತಿಯನ್ನು ವಿಸ್ತರಿಸಿದ್ದಲ್ಲದೆ, ಜೀವಿ ಪರಿಸರ ವ್ಯವಸ್ಥೆಗಳನ್ನು ಪುನರುಜ್ಜೀವನಗೊಳಿಸಿದೆ. ಅಷ್ಟೇ ಅಲ್ಲದೆ, ಇದು ವನ್ಯಜೀವಿಗಳ ಆವಾಸಸ್ಥಾನಗಳ ಮರುಸ್ಥಾಪನೆಗೆ ಕಾರಣವಾಗಿದೆ ಮತ್ತು ಇತರ ಪ್ರದೇಶಗಳಿಗೆ ಮಾದರಿಯಾಗಿ ಸ್ಫೂರ್ತಿ ನೀಡಿದೆ.

## 19.“ಕಲಾಲೋಕ” ಮಳಿಗೆ

### ಇದೀಗ ಸುದ್ದಿಯಲ್ಲಿದೆ:

- **ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ** (KIA) ದಲ್ಲಿ, ದೇಶೀಯ ಹಾಗೂ ವಿದೇಶಿ ಪ್ರಯಾಣಿಕರಿಗೆ ರಾಜ್ಯದ **ಸಾಂಪ್ರದಾಯಿಕ ಮತ್ತು ಭೌಗೋಳಿಕ ಸೂಚ್ಯಂಕ (GI) ಮಾನ್ಯತೆ ಪಡೆದ ಉತ್ಪನ್ನಗಳನ್ನು ಪರಿಚಯಿಸುವ ಹಾಗೂ ಮಾರಾಟ** ಮಾಡುವ ಉದ್ದೇಶದಿಂದ 'ಕಲಾಲೋಕ' ಮಳಿಗೆಯನ್ನು ಪ್ರಾರಂಭಿಸಲಾಗಿದೆ.

### ‘ಕಲಾಲೋಕ’ ಮಳಿಗೆಯ ವಿಶೇಷತೆಗಳು:

- ಸ್ಥಾಪನೆ: ರಾಜ್ಯದ ಶ್ರೀಮಂತ ಸಂಸ್ಕೃತಿ ಮತ್ತು ಪರಂಪರೆಯನ್ನು ಪ್ರತಿಬಿಂಬಿಸುವಂತೆ ಕಲಾತ್ಮಕವಾಗಿ ವಿನ್ಯಾಸಗೊಳಿಸಲಾದ ಈ ಮಳಿಗೆಯನ್ನು, ವಿಮಾನ ನಿಲ್ದಾಣದ **ಟರ್ಮಿನಲ್-2** ರಲ್ಲಿ ರಾಜ್ಯ **ಕೈಗಾರಿಕಾ ಇಲಾಖೆಯು** ಸ್ಥಾಪಿಸಿದೆ.
- **ಲಭ್ಯವಿರುವ ಉತ್ಪನ್ನಗಳು:** ಇಲ್ಲಿ ಕರ್ನಾಟಕದ ಹೆಮ್ಮೆಯ ಪ್ರತೀಕಗಳಾದ **ಮೈಸೂರು ಸ್ಯಾಂಡಲ್ ಸಾಬೂನು, ಶ್ರೀಗಂಧದ ಎಣ್ಣೆ, ಅಗರಬತ್ತಿಗಳು, ಮೈಸೂರು ರೇಷ್ಮೆ, ಚನ್ನಪಟ್ಟಣದ ಆಟಿಕೆಗಳು, ಲಿಡ್ಕರ್ ಚರ್ಮದ ವಸ್ತುಗಳು , ಸುಗಂಧಭರಿತ ಕಾಫಿ ಪುಡಿ ಮತ್ತು ಪಾನೀಯಗಳು, ಕೈಮಗ್ಗ ಉತ್ಪನ್ನಗಳು, ಇಳಕಲ್ ಸೀರೆಗಳು, ಲಂಬಾಣಿ ಕಸೂತಿ ವಸ್ತ್ರಗಳು, ಶ್ರೀಗಂಧದ ಕಲಾಕೃತಿಗಳು, ಬಿದರಿ ಕಲೆ ಮತ್ತು ಮೈಸೂರು ಶೈಲಿಯ ವರ್ಣಚಿತ್ರಗಳು** ಲಭ್ಯವಿವೆ.
- **ವ್ಯಾಪ್ತಿ:** ಒಟ್ಟಾರೆಯಾಗಿ, ಕರ್ನಾಟಕದ 45 **ಭೌಗೋಳಿಕ ಸೂಚ್ಯಂಕ** ಪ್ರಮಾಣೀಕೃತ ಉತ್ಪನ್ನಗಳನ್ನು ಒಂದೇ ಸೂರಿನಡಿ ಪ್ರದರ್ಶನ ಮತ್ತು ಮಾರಾಟಕ್ಕೆ ಇರಿಸಲಾಗಿದೆ.

## 20. ದತ್ತು ಮಕ್ಕಳ ಸಂಖ್ಯೆ: ದೇಶದಲ್ಲಿ ಕರ್ನಾಟಕಕ್ಕೆ 4ನೇ ಸ್ಥಾನ

### ಇದೀಗ ಸುದ್ದಿಯಲ್ಲಿದೆ:

- **ಮಕ್ಕಳ ಸಂರಕ್ಷಣೆ ನಿರ್ದೇಶನಾಲಯದ** ಅಧಿಕೃತ ದತ್ತಾಂಶಗಳ ಪ್ರಕಾರ, ದತ್ತು ಪ್ರಕ್ರಿಯೆಯ ಸಂಖ್ಯೆಯಲ್ಲಿ **ಮಹಾರಾಷ್ಟ್ರ**, ತಮಿಳುನಾಡು ಮತ್ತು ಪಶ್ಚಿಮ ಬಂಗಾಳದ ನಂತರ ಕರ್ನಾಟಕವು ದೇಶದಲ್ಲಿ **ನಾಲ್ಕನೇ ಸ್ಥಾನದಲ್ಲಿದೆ.**
- ರಾಜ್ಯದಲ್ಲಿ ಮಕ್ಕಳನ್ನು ದತ್ತು ಪಡೆಯಲು ಪೋಷಕರಿಂದ ಆಸಕ್ತಿ ಹೆಚ್ಚುತ್ತಿದ್ದರೂ, ದತ್ತು ನೀಡಲು ಲಭ್ಯವಿರುವ ಮಕ್ಕಳ ಕೊರತೆಯನ್ನು ಕರ್ನಾಟಕ ಎದುರಿಸುತ್ತಿದೆ.

### ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ (CARA) ದ ಬಗ್ಗೆ:

- ಕಾನೂನು ಸ್ಥಾನಮಾನ: ಇದನ್ನು **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ** ಅಡಿಯಲ್ಲಿ ಒಂದು ಶಾಸನಬದ್ಧ ಸಂಸ್ಥೆಯಾಗಿ ಸ್ಥಾಪಿಸಲಾಗಿದೆ.
- **ಕಾರ್ಯವ್ಯಾಪ್ತಿ:** ಇದು **ಭಾರತೀಯ ಮಕ್ಕಳ ದತ್ತು ಸ್ವೀಕಾರಕ್ಕೆ ನೋಡಲ್ ಸಂಸ್ಥೆಯಾಗಿ** ಕಾರ್ಯನಿರ್ವಹಿಸುತ್ತದೆ. **ದೇಶದೊಳಗಿನ ಮತ್ತು ಅಂತರ-ದೇಶೀಯ ದತ್ತು ಪ್ರಕ್ರಿಯೆಯನ್ನು ಮೇಲ್ವಿಚಾರಣೆ** ಮಾಡಲು ಮತ್ತು **ನಿಯಂತ್ರಿಸಲು** ಇದಕ್ಕೆ ಸಚಿವಾಲಯವು ಆದೇಶ ನೀಡಿದೆ.
- **ಅಂತರರಾಷ್ಟ್ರೀಯ ಮಾನ್ಯತೆ:** 2003 ರಲ್ಲಿ ಭಾರತ ಸರ್ಕಾರವು ಅನುಮೋದಿಸಿದ, ಅಂತರ-ದೇಶೀಯ ದತ್ತು ಸ್ವೀಕಾರದ ಮೇಲಿನ **1993 ರ ಹೇಗ್ ಸಮಾವೇಶ**ಗಳ ಅಡಿಯಲ್ಲಿ ವ್ಯವಹರಿಸಲು ಇದನ್ನು **‘ಕೇಂದ್ರ ಪ್ರಾಧಿಕಾರ’**ವನ್ನಾಗಿ ನೇಮಿಸಲಾಗಿದೆ.

### CARINGS ಪೋರ್ಟಲ್ (ಮಕ್ಕಳ ದತ್ತು ಸಂಪನ್ಮೂಲ ಮಾಹಿತಿ ಮತ್ತು ಮಾರ್ಗದರ್ಶನ ವ್ಯವಸ್ಥೆ)

- **ಆರಂಭ:** 2011.
- **ಮಹತ್ವ:** ಇದು **ಹೇಗ್ ಸಮಾವೇಶ,** ಅಂತರರಾಷ್ಟ್ರೀಯ ಶಿಷ್ಟಾಚಾರಗಳು ಮತ್ತು ರಾಷ್ಟ್ರೀಯ ಕಾನೂನುಗಳಿಗೆ ಅನುಗುಣವಾಗಿ, ಪಾರದರ್ಶಕ ದತ್ತು ಪ್ರಕ್ರಿಯೆಗೆ ಏಕೈಕ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ.

## 21. ಬೆಂಗಳೂರು ಸೇಫ್ ಸಿಟಿ (ಸುರಕ್ಷಿತ ನಗರ) ಯೋಜನೆ

### ಇದೀಗ ಸುದ್ದಿಯಲ್ಲಿದೆ:

- ಬೆಂಗಳೂರು ಸೇಫ್ ಸಿಟಿ ಯೋಜನೆಯು **ಅಂತರ-ರಾಜ್ಯ ಅಪರಾಧಗಳನ್ನು ಪತ್ತೆಹಚ್ಚುವಲ್ಲಿ** ಮಹತ್ವದ ಪಾತ್ರ ವಹಿಸುತ್ತಿದೆ.

### ಬೆಂಗಳೂರು ಸೇಫ್ ಸಿಟಿ (ಸುರಕ್ಷಿತ ನಗರ) ಯೋಜನೆಯ ಬಗ್ಗೆ:

- **ಉದ್ದೇಶ:** ಬೆಂಗಳೂರು ನಗರದಲ್ಲಿ **ಮಹಿಳೆಯರು ಮತ್ತು ದುರ್ಬಲ ವರ್ಗಗಳ ಸುರಕ್ಷತೆಗೆ ಆದ್ಯತೆ ನೀಡುವುದು** ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಇದು **ಸುಧಾರಿತ ಕಣ್ಗಾವಲು ಮತ್ತು ತುರ್ತು ಸ್ಪಂದನಾ** ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಲಾದ ತಂತ್ರಜ್ಞಾನ ಚಾಲಿತ ಉಪಕ್ರಮ.
- ಅನುಷ್ಠಾನ: **ಕೇಂದ್ರ ಗೃಹ ಸಚಿವಾಲಯದ** ಮಾರ್ಗದರ್ಶನದಲ್ಲಿ, **ಕೇಂದ್ರ ಮತ್ತು ರಾಜ್ಯ** ಸರ್ಕಾರಗಳ ಸಹಭಾಗಿತ್ವದ **'ನಿರ್ಭಯಾ ನಿಧಿ'** ಅನುದಾನದಡಿ ಈ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.
- **ವ್ಯಾಪ್ತಿ ಮತ್ತು ಸೌಲಭ್ಯಗಳು:** ಈ ಯೋಜನೆಯ ಅಡಿಯಲ್ಲಿ ಬೆಂಗಳೂರು ನಗರದಾದ್ಯಂತ **7,000 ಕ್ಕೂ ಹೆಚ್ಚು ಸಿಸಿಟಿವಿ ಕ್ಯಾಮೆರಾಗಳನ್ನು** ಅಳವಡಿಸಲಾಗಿದೆ. ಇವುಗಳಿಗೆ ಪೂರಕವಾಗಿ **ಡ್ರೋನ್ ಕ್ಯಾಮೆರಾಗಳು ಮತ್ತು ಕರ್ತವ್ಯನಿರತ ಪೊಲೀಸ್ ಸಿಬ್ಬಂದಿಗೆ ದೇಹದ ಮೇಲೆ ಧರಿಸುವ ಕ್ಯಾಮೆರಾಗಳನ್ನು** ಒದಗಿಸಲಾಗಿದೆ.

## 22. ರಾಷ್ಟ್ರೀಯ ಜಂಟಿ ಸುಧಾರಿತ ಪ್ರತಿರೋಧ ಸ್ಫೋಟಕ ಸಾಧನ (IED) ಸ್ಪರ್ಧೆ

### ಇದೀಗ ಸುದ್ದಿಯಲ್ಲಿದೆ:

- **ಕರ್ನಾಟಕ ರಾಜ್ಯ ಪೊಲೀಸ್‌ನ ಆಂತರಿಕ ಭದ್ರತಾ ವಿಭಾಗದ (ISD) ಸುಧಾರಿತ ಪ್ರತಿರೋಧ ಸ್ಫೋಟಕ ನಿಗ್ರಹ ತಂಡವು, ರಾಷ್ಟ್ರೀಯ ಭದ್ರತಾ ದಳ (NSG)** ನವ ದೆಹಲಿಯಲ್ಲಿ ಆಯೋಜಿಸಿದ್ದ 9ನೇ ರಾಷ್ಟ್ರೀಯ ಜಂಟಿ ಸುಧಾರಿತ ಪ್ರತಿರೋಧ ಸ್ಫೋಟಕ ಸಾಧನ (IED) ಸ್ಪರ್ಧೆ, **ವಿಸ್ಫೋಟ್ ಕವಚ್ IX**' ರಲ್ಲಿ ವಿಜಯಿಶಾಲಿಯಾಗಿದೆ.

### ರಾಷ್ಟ್ರೀಯ ಜಂಟಿ ಸುಧಾರಿತ ಪ್ರತಿರೋಧ ಸ್ಫೋಟಕ ಸಾಧನ (IED) ಸ್ಪರ್ಧೆಯ ಬಗ್ಗೆ:

- ಇತರೆ ಹೆಸರುಗಳು: ಈ ವಾರ್ಷಿಕ ಕಸರತ್ತನ್ನು 'ವಿಸ್ಫೋಟ್ ಕವಚ್' ಮತ್ತು 'ಅಗ್ನಿಶಮನ್' ಎಂಬ ಹೆಸರುಗಳಿಂದಲೂ ಗುರುತಿಸಲಾಗುತ್ತದೆ.
- ಸ್ವರೂಪ: ಇದು ಭಾರತದಲ್ಲಿ ಪ್ರತಿವರ್ಷ ನಡೆಯುವ ಪ್ರತಿಷ್ಠಿತ ರಾಷ್ಟ್ರೀಯ ಮಟ್ಟದ ಸಮರಾಭ್ಯಾಸವಾಗಿದೆ.
- ಉದ್ದೇಶ: ದೇಶದ ವಿವಿಧ ಭದ್ರತಾ ಪಡೆಗಳ ಬಳಿಯಿರುವ 'ಸುಧಾರಿತ ಪ್ರತಿರೋಧ ಸ್ಫೋಟಕ ಸಾಧನ' (IED) ಪತ್ತೆ ಮತ್ತು ನಿಗ್ರಹ ಸಾಮರ್ಥ್ಯಗಳನ್ನು ಮೌಲ್ಯಮಾಪನ ಮಾಡುವುದು ಹಾಗೂ ಅವುಗಳನ್ನು ಉನ್ನತೀಕರಿಸುವುದು ಇದರ ಪ್ರಮುಖ ಉದ್ದೇಶವಾಗಿದೆ.
- ಆಯೋಜಕರು: ಈ ಸ್ಪರ್ಧೆಯನ್ನು ರಾಷ್ಟ್ರೀಯ ಭದ್ರತಾ ಪಡೆಯು ಹರಿಯಾಣದ ಮಾನೇಸರ್‌ನಲ್ಲಿರುವ ತನ್ನ ತರಬೇತಿ ಕೇಂದ್ರದಲ್ಲಿ ಆಯೋಜಿಸುತ್ತದೆ.

## 23. KEO (ಜ್ಞಾನ ಚಾಲಿತ, ಆರ್ಥಿಕವಾಗಿ, ಮುಕ್ತ ಮೂಲ) ಗಣಕಯಂತ್ರ

### ಇದೀಗ ಸುದ್ದಿಯಲ್ಲಿದೆ:

- ಕರ್ನಾಟಕ ಸರ್ಕಾರದ **ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯು, ಕಿಯೋನಿಕ್ಸ್ (KEONICS) ಸಹಯೋಗದೊಂದಿಗೆ 'KEO' ಎಂಬ ನೂತನ ವೈಯಕ್ತಿಕ ಗಣಕಯಂತ್ರ**ವನ್ನು ಇತ್ತೀಚೆಗೆ ಬಿಡುಗಡೆ ಮಾಡಿದೆ. ಇದು ಗಾತ್ರದಲ್ಲಿ ಚಿಕ್ಕದಾಗಿದ್ದು, ಕೈಗೆಟುಕುವ ದರದಲ್ಲಿದೆ ಮತ್ತು ಕೃತಕ ಬುದ್ಧಿಮತ್ತೆ ತಂತ್ರಜ್ಞಾನಕ್ಕೆ ಪೂರಕವಾಗಿದೆ.

### KEO (ಜ್ಞಾನ ಚಾಲಿತ, ಆರ್ಥಿಕವಾಗಿ, ಮುಕ್ತ ಮೂಲ) ಗಣಕಯಂತ್ರದ ಬಗ್ಗೆ:

- ಇದೊಂದು **ಅತ್ಯಂತ ಕಡಿಮೆ ದರದ ಮತ್ತು ಸಾಂದ್ರ ವಿನ್ಯಾಸದ (ಚಿಕ್ಕ ಗಾತ್ರದ) ವೈಯಕ್ತಿಕ ಕಂಪ್ಯೂಟರ್** ಆಗಿದ್ದು, ಇದನ್ನು ರಾಜ್ಯದ **ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯು ಕಿಯೋನಿಕ್ಸ್ (KEONICS)** ಸಹಯೋಗದೊಂದಿಗೆ ಅಭಿವೃದ್ಧಿಪಡಿಸಿದೆ.
- ನವೆಂಬರ್ 2025 ರಲ್ಲಿ ನಡೆದ ಪ್ರತಿಷ್ಠಿತ **'ಬೆಂಗಳೂರು ತಂತ್ರಜ್ಞಾನ ಶೃಂಗಸಭೆ'ಯಲ್ಲಿ** ಇದಕ್ಕೆ ಅಧಿಕೃತವಾಗಿ ಚಾಲನೆ ನೀಡಲಾಯಿತು.
- **ಉದ್ದೇಶ: ಡಿಜಿಟಲ್ ಅಂತರವನ್ನು ಕಡಿಮೆ** ಮಾಡುವುದು ಇದರ ಪ್ರಾಥಮಿಕ ಗುರಿಯಾಗಿದೆ. ವಿದ್ಯಾರ್ಥಿಗಳು, ಗೃಹ ಬಳಕೆದಾರರು ಹಾಗೂ ಸಣ್ಣ ಉದ್ದಿಮೆಗಳಿಗೆ ಕೈಗೆಟುಕುವ ದರದಲ್ಲಿ, ಕೃತಕ ಬುದ್ಧಿಮತ್ತೆ - ಚಾಲಿತ ಗಣಕೀಕರಣ ಸೌಲಭ್ಯಗಳನ್ನು ಒದಗಿಸುವ ಉದ್ದೇಶವನ್ನು ಇದು ಹೊಂದಿದೆ.

## 24. ಡಿಜಿಟಲ್ ನಾಗರೀಕ್ ಕಾರ್ಯಕ್ರಮ

### ಇದೀಗ ಸುದ್ದಿಯಲ್ಲಿದೆ:

- ರಾಜ್ಯದ ಸರ್ಕಾರಿ ಶಾಲೆಗಳಲ್ಲಿ 'ಡಿಜಿಟಲ್ ನಾಗರೀಕ್ ಕಾರ್ಯಕ್ರಮ'ಕ್ಕೆ ಅಧಿಕೃತವಾಗಿ ಚಾಲನೆ ನೀಡಲಾಗಿದೆ.

### ಡಿಜಿಟಲ್ ನಾಗರೀಕ್ ಕಾರ್ಯಕ್ರಮದ ಬಗ್ಗೆ:

- ಉದ್ದೇಶ: ರಾಜ್ಯದ ಎಲ್ಲಾ **ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ವಿದ್ಯಾರ್ಥಿಗಳಲ್ಲಿ ಸೈಬರ್ ಭದ್ರತೆ ಹಾಗೂ ಡಿಜಿಟಲ್ ಸುರಕ್ಷತೆಯ ಬಗ್ಗೆ ಅರಿವು** ಮೂಡಿಸುವುದು.
- ವ್ಯಾಪ್ತಿ: **6 ನೇ ತರಗತಿಯಿಂದ 10 ನೇ ತರಗತಿ**ಯವರೆಗಿನ ಸುಮಾರು **10 ಲಕ್ಷ ವಿದ್ಯಾರ್ಥಿಗಳು ಮತ್ತು 1 ಲಕ್ಷ ಶಿಕ್ಷಕರು** ಈ ಯೋಜನೆಯ ಪ್ರಯೋಜನ ಪಡೆಯಲಿದ್ದಾರೆ.
- **ವಿಷಯವಸ್ತು:** ಸುರಕ್ಷಿತ ಇಂಟರ್ನೆಟ್ ಬಳಕೆ, ಸೈಬರ್ ಸುರಕ್ಷತಾ ನಿಯಮಗಳು, ಆನ್‌ಲೈನ್ ಶಿಷ್ಟಾಚಾರ, ಡಿಜಿಟಲ್ ಹಕ್ಕುಗಳು, ಜವಾಬ್ದಾರಿ ಮತ್ತು ದತ್ತಾಂಶ ಗೌಪ್ಯತೆಯ ಕುರಿತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಗುತ್ತದೆ.
- ಅನುಷ್ಠಾನ: ಈ ಕಾರ್ಯಕ್ರಮವನ್ನು **ಕೇಂದ್ರ ಶಿಕ್ಷಣ ಸಚಿವಾಲಯ** ಮತ್ತು ಸಾಮಾಜಿಕ ಜಾಲತಾಣ ಸಂಸ್ಥೆ '**ಮೆಟಾ**' ದ ಸಹಯೋಗದೊಂದಿಗೆ ಅನುಷ್ಠಾನ ಮಾಡಲಾಗುತ್ತದೆ.
- 2024-25 ನೇ ಸಾಲಿನಲ್ಲಿ **ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ದಕ್ಷಿಣ ಕನ್ನಡ** ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಪ್ರಾಯೋಗಿಕವಾಗಿ ಯಶಸ್ವಿಯಾಗಿ ಜಾರಿಗೊಳಿಸಲಾಗಿತ್ತು.
- ತರಬೇತಿ: ಈ ಉಪಕ್ರಮದ ಭಾಗವಾಗಿ, **ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯು (DSERT)** ಆರಂಭಿಕ ಹಂತದಲ್ಲಿ **'ದೀಕ್ಷಾ ಪೋರ್ಟಲ್'** ಮೂಲಕ **1,00,000 ಶಿಕ್ಷಕರಿಗೆ ತರಬೇತಿ** ನೀಡಲಿದೆ. ತರಬೇತಿ ಪಡೆದ ಶಿಕ್ಷಕರು ನಂತರ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುತ್ತಾರೆ.
- **ಡಿಜಿಟಲ್ ನಾಗರೀಕರ ಟೂಲ್‌ಕಿಟ್ (ಸಾಧನಗಳ ಸಂಕಲನ):** ಸುರಕ್ಷಿತ ಮತ್ತು ಜವಾಬ್ದಾರಿಯುತ ಆನ್‌ಲೈನ್ ನಡವಳಿಕೆಯನ್ನು ಉತ್ತೇಜಿಸುವ ಯೋಜನೆಗಳನ್ನು ರೂಪಿಸಲು ಶಾಲೆಗಳಿಗೆ ನೆರವಾಗುವ ನಿಟ್ಟಿನಲ್ಲಿ ಈ ಟೂಲ್‌ಕಿಟ್ ಅನ್ನು ಹಂಚಿಕೊಳ್ಳಲಾಗುವುದು.

## 25. ಮೆಂಟರಿಂಗ್ ಸಮ್ಮಿಟ್ ಇಂಡಿಯಾ (ಭಾರತ ಮಾರ್ಗದರ್ಶನ ಶೃಂಗಸಭೆ), 2025

### ಇದೀಗ ಸುದ್ದಿಯಲ್ಲಿದೆ:

- **'ಮೆಂಟರ್ ಟುಗೆದರ್'** ಸಂಸ್ಥೆಯ ವತಿಯಿಂದ, ಬೆಂಗಳೂರಿನಲ್ಲಿರುವ **'ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ'ದಲ್ಲಿ** 'ಮೆಂಟರಿಂಗ್ ಸಮ್ಮಿಟ್ ಇಂಡಿಯಾ 2025' ಆಯೋಜನೆಗೊಳ್ಳಲಿದೆ.

### ಮೆಂಟರಿಂಗ್ ಸಮ್ಮಿಟ್ ಇಂಡಿಯಾ, 2025 ರ ಬಗ್ಗೆ:

- **ದಿನಾಂಕ:-** ನವೆಂಬರ್ 19-20, 2025.
- ಸ್ಥಳ:- **ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ**, ಬೆಂಗಳೂರು.
- ಆಯೋಜಕರು:- **ಮೆಂಟರ್ ಟುಗೆದರ್ ಸಂಸ್ಥೆ.**
- **ಉದ್ದೇಶ:-** ಮಾರ್ಗದರ್ಶನ ಪ್ರಕ್ರಿಯೆಯನ್ನು ಒಂದು **"ಸಾರ್ವಜನಿಕ ಸರಕು"** ಎಂದು ಪರಿಗಣಿಸಿ, ಆ ದೃಷ್ಟಿಕೋನವನ್ನು ಮುನ್ನಡೆಸುವುದು ಈ ಶೃಂಗಸಭೆಯ ಪ್ರಮುಖ ಗುರಿಯಾಗಿದೆ. ಈ ನಿಟ್ಟಿನಲ್ಲಿ, **ಮಾರ್ಗದರ್ಶನ ನೀಡುವ ಪರಿಣಿತರು, ಸಂಶೋಧಕರು ಮತ್ತು ಬದಲಾವಣೆಯ ಹರಿಕಾರರನ್ನು** ಒಂದೇ ವೇದಿಕೆಯಡಿ ತರುವುದು ಹಾಗೂ ದೇಶಾದ್ಯಂತ ಯುವಜನರನ್ನು ಬೆಂಬಲಿಸಲು ಪರಸ್ಪರ ಸಹಯೋಗವನ್ನು ಬಲಪಡಿಸುವುದು ಇದರ ಉದ್ದೇಶವಾಗಿದೆ.

## 26. ಬೆಳಗಾವಿ ಮೃಗಾಲಯದಲ್ಲಿ 28 ಕೃಷ್ಣಮೃಗಗಳ ಸಾವು; ಸೋಂಕಿನ ಶಂಕೆ



### ಇದೀಗ ಸುದ್ದಿಯಲ್ಲಿದೆ:

- ಬೆಳಗಾವಿ ಜಿಲ್ಲೆಯ ಭೂತರಾಮನಹಟ್ಟಿಯಲ್ಲಿರುವ **ರಾಣಿ ಚೆನ್ನಮ್ಮ ಮೃಗಾಲಯದಲ್ಲಿ** 28 ಕೃಷ್ಣಮೃಗಗಳು ಮೃತಪಟ್ಟಿವೆ.
- ಪ್ರಾಥಮಿಕ ಮಾಹಿತಿಯ ಪ್ರಕಾರ, **ಬ್ಯಾಕ್ಟೀರಿಯಾ** ಸೋಂಕಿನಿಂದ ಈ ಪ್ರಾಣಿಗಳು ಸಾವನ್ನಪ್ಪಿರುವ ಶಂಕೆ ಇದ್ದು, ಹೆಚ್ಚಿನ ತಪಾಸಣೆಗಾಗಿ ಆಂತರಿಕ ಅಂಗಗಳ ಮಾದರಿಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ.

### ಕೃಷ್ಣಮೃಗ (ಆಂಟಿಲೋಪ್ ಸರ್ವಿಕಾಪ್ರಾ) ಗಳ ಬಗ್ಗೆ:

- ದೈಹಿಕ ಲಕ್ಷಣಗಳು:
  - ಗಂಡು ಕೃಷ್ಣಮೃಗಗಳು ಆಕರ್ಷಕವಾದ ಮತ್ತು **ಸುರುಳಿಯಾಕಾರದ ಕೊಂಬುಗಳನ್ನು** ಹೊಂದಿದ್ದು, ಇವು **75 ಸೆಂ.ಮೀ (30 ಇಂಚು)** ವರೆಗೆ ಬೆಳೆಯುತ್ತವೆ. ಗಂಡು ಕೃಷ್ಣಮೃಗಗಳ ಮೈಬಣ್ಣ **ಗಾಢ ಕಂದು ಬಣ್ಣದಿಂದ ಕಪ್ಪು** ಬಣ್ಣದಲ್ಲಿರುತ್ತದೆ.
  - ಹೆಣ್ಣು ಕೃಷ್ಣಮೃಗಗಳು ಗಾತ್ರದಲ್ಲಿ **ಚಿಕ್ಕದಾಗಿದ್ದು, ಕೋಡುಗಳಿರುವುದಿಲ್ಲ ಮತ್ತು ಕೆಂಪು-ಕಂದು** ಬಣ್ಣವನ್ನು ಹೊಂದಿರುತ್ತವೆ.
- ಆವಾಸಸ್ಥಾನ: ಇವು ಸಾಮಾನ್ಯವಾಗಿ **ಹುಲ್ಲುಗಾವಲುಗಳು, ಸವನ್ನಾಗಳು ಮತ್ತು ತೆರೆದ ಅರಣ್ಯಗಳಲ್ಲಿ** ಕಂಡುಬರುತ್ತವೆ. **ಮೇಯಲು ಕಡಿಮೆ ಎತ್ತರದ ಹುಲ್ಲು ಇರುವ ಪ್ರದೇಶಗಳನ್ನು** ಇವು ಹೆಚ್ಚು ಇಷ್ಟಪಡುತ್ತವೆ.
- **ಬೆದರಿಕೆಗಳು :** ಐತಿಹಾಸಿಕವಾಗಿ ಭಾರತದ ದೇಶೀಯ ಸಂಸ್ಥಾನಗಳಲ್ಲಿ ಇವುಗಳ **ಅತಿಯಾದ ಬೇಟೆ** ನಡೆಯುತ್ತಿತ್ತು. ಪ್ರಸ್ತುತ, **ಆವಾಸಸ್ಥಾನಗಳ ನಾಶ** ಮತ್ತು ವಾಣಿಜ್ಯ/ಆರ್ಥಿಕ ಬಳಕೆಗಾಗಿ ನಡೆಯುವ **ಅಕ್ರಮ ಬೇಟೆ** ಇವುಗಳ ಅಸ್ತಿತ್ವಕ್ಕೆ ಪ್ರಮುಖ ಬೆದರಿಕೆಗಳಾಗಿವೆ.
- **ಸಂರಕ್ಷಣಾ ಸ್ಥಾನಮಾನ:**
  - IUCN ಕೆಂಪು ಪಟ್ಟಿ: **ಕನಿಷ್ಠ ಕಾಳಜಿ (LC)**
  - CITES: **ಅನುಬಂಧ III**
  - ವನ್ಯಜೀವಿ (ಸಂರಕ್ಷಣಾ) ಕಾಯಿದೆ, 1972: **ಅನುಸೂಚಿ I**

### ಇತರೆ ಪ್ರಮುಖ ಅಂಶಗಳು

- **ರಾಜ್ಯ ಪ್ರಾಣಿ:** ಕೃಷ್ಣಮೃಗವನ್ನು **ಪಂಜಾಬ್, ಹರಿಯಾಣ ಮತ್ತು ಆಂಧ್ರಪ್ರದೇಶ** ರಾಜ್ಯಗಳ 'ರಾಜ್ಯ ಪ್ರಾಣಿ'ಯನ್ನಾಗಿ ಘೋಷಿಸಲಾಗಿದೆ.
- **ಸಾಂಸ್ಕೃತಿಕ ಮಹತ್ವ:** ಹಿಂದೂ ಧರ್ಮದಲ್ಲಿ, ಕೃಷ್ಣಮೃಗವನ್ನು **ಪಾವಿತ್ರ್ಯದ ಸಂಕೇತವೆಂದು** ಪರಿಗಣಿಸಲಾಗಿದೆ. ಇದರ ಚರ್ಮ ಮತ್ತು ಕೊಂಬುಗಳನ್ನು ಪವಿತ್ರ ವಸ್ತುಗಳಾಗಿ ಪೂಜಿಸಲಾಗುತ್ತದೆ. ಬೌದ್ಧ ಧರ್ಮದಲ್ಲಿ, ಇದನ್ನು **ಅದೃಷ್ಟದ ಸಂಕೇತವೆಂದು** ನಂಬಲಾಗಿದೆ.

## 27. ಏಕ್ಯಾ ವನ : ದೇಶದ ಮೊದಲ ನಿಸರ್ಗ-ಪ್ರೇರಿತ ಶಾಲೆ

### ಇದೀಗ ಸುದ್ದಿಯಲ್ಲಿದೆ:

- **ಬೆಂಗಳೂರು** ಮೂಲದ 'ಏಕ್ಯಾ ವನ' ಶಾಲೆಯು, **ಭಾರತದ ಮೊಟ್ಟಮೊದಲ ನಿಸರ್ಗ-ಪ್ರೇರಿತ ಕೆ-12 ಶಾಲೆಯಾಗಿ** ಹೊರಹೊಮ್ಮುವ ಮೂಲಕ ಸುದ್ದಿಯಲ್ಲಿದೆ.

### ಏಕ್ಯಾ ವನ ಶಾಲೆಯ ಬಗ್ಗೆ:

- ಸ್ಥಳ : ಬೆಂಗಳೂರಿನ **ಬನ್ನೇರುಘಟ್ಟ** ಪ್ರದೇಶ.
- ಸ್ವರೂಪ: ಇದು ಒಂದು ನೂತನ ಹಾಗೂ ನಿರ್ದಿಷ್ಟ **ಧ್ಯೇಯ-ಪ್ರೇರಿತ ಕೆ-12 ಮಾದರಿಯ** ಶಾಲೆಯಾಗಿದೆ.
- **ದೃಷ್ಟಿಕೋನ:** ಇದು ಮುಖ್ಯವಾಗಿ **ಸಂರಕ್ಷಣೆ, ಸುಸ್ಥಿರತೆ** ಮತ್ತು **ಪರಿಸರ ಸ್ನೇಹಿ ನಾವೀನ್ಯತೆಗೆ** ಒತ್ತು ನೀಡುತ್ತದೆ.
- ವಿನ್ಯಾಸ: ವಿದ್ಯಾರ್ಥಿಗಳು ನಿಸರ್ಗದ ಮಡಿಲಲ್ಲಿ ಮತ್ತು ನಿಸರ್ಗದೊಂದಿಗೆ ಬೆರೆಯುತ್ತಾ ಕಲಿಯುವಂತಾಗಲು, ಈ ಶಾಲೆಯನ್ನು ಒಂದು **"ಜೀವಂತ ಮತ್ತು ಕ್ರಿಯಾಶೀಲ ಜೀವಿ ಪರಿಸರ ವ್ಯವಸ್ಥೆ"**ಯನ್ನಾಗಿ ರೂಪಿಸಲಾಗಿದೆ.
- **ಧ್ಯೇಯ:** ಹವಾಮಾನ ಬದಲಾವಣೆ ಮತ್ತು ಜೀವ ವೈವಿಧ್ಯದ ನಾಶದಂತಹ ಸಮಕಾಲೀನ ಸವಾಲುಗಳನ್ನು ಎದುರಿಸಲು ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವುದು ಇದರ ಗುರಿಯಾಗಿದೆ. ಅವರನ್ನು ಸುಸ್ಥಿರತೆಯ ನಾವೀನ್ಯಕಾರರು, ಪ್ರತಿಪಾದಕರು ಮತ್ತು ನಾಯಕರನ್ನಾಗಿ ಸಬಲೀಕರಣಗೊಳಿಸುವುದು ಶಾಲೆಯ ಪ್ರಮುಖ ದೃಷ್ಟಿಕೋನವಾಗಿದೆ.
- **ಸಲಹಾ ಮಂಡಳಿ:** ಪ್ರಖ್ಯಾತ **ಪರಿಸರವಾದಿಗಳು ಮತ್ತು ಉದ್ಯಮ ರಂಗದ ನಾಯಕರನ್ನೊಳಗೊಂಡ** ವಿಶೇಷ ಸಲಹಾ ಮಂಡಳಿಯು ಈ ಉಪಕ್ರಮಕ್ಕೆ ಮಾರ್ಗದರ್ಶನ ನೀಡುತ್ತಿದೆ.

### ಏಕ್ಯಾವನ ಶಾಲೆಯ ಪ್ರಮುಖ ಲಕ್ಷಣಗಳು:

1. **ನಿಸರ್ಗ ಆಧಾರಿತ ಕಲಿಕೆ:** ಈ ಶಾಲೆಯ ಪಠ್ಯಕ್ರಮವು ಸಾಂಪ್ರದಾಯಿಕ ತರಗತಿ ಬೋಧನೆಯ ಸಹಿತ, **ಹೊರಾಂಗಣ ತರಗತಿಗಳು, ಚಿಟ್ಟೆ ಮತ್ತು ಗಿಡಮೂಲಿಕೆ ಉದ್ಯಾನಗಳು, ಮಿಶ್ರಗೊಬ್ಬರ ಘಟಕಗಳು ಮತ್ತು ಪರಿಸರ ಪ್ರಯೋಗಾಲಯಗಳನ್ನು** ಪ್ರಧಾನ ಕಲಿಕಾ ನೆಲೆಗಳಾಗಿ ಬಳಸಿಕೊಳ್ಳುತ್ತದೆ.
2. **ಪಠ್ಯಕ್ರಮದ ಮಾರ್ಗಗಳು:** ಜಾಗತಿಕ ಸುಸ್ಥಿರತೆಯ ವಿಷಯಗಳನ್ನು ನೈಜ ಪ್ರಪಂಚದ ಕಲಿಕೆಯೊಂದಿಗೆ ಜೋಡಿಸಲು **ನಾಲ್ಕು ಪ್ರಮುಖ ಶೈಕ್ಷಣಿಕ ಮಾರ್ಗಗಳನ್ನು** ರೂಪಿಸಲಾಗಿದೆ:

- ಜನರು ಮತ್ತು ಗ್ರಹ
- ಭೂಮಿಯ ಆರೈಕೆ
- ಜೀವ ವ್ಯವಸ್ಥೆಗಳು
- ಶಕ್ತಿ ಮತ್ತು ನಾವೀನ್ಯತೆ

## 28. ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (KPME) ಕಾಯಿದೆ, 2007

### ಇದೀಗ ಸುದ್ದಿಯಲ್ಲಿದೆ:

- ಕರ್ನಾಟಕ ಸರ್ಕಾರವು 'ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (KPME) ಕಾಯಿದೆ, 2007' ಕ್ಕೆ ಮಹತ್ವದ ತಿದ್ದುಪಡಿಗಳನ್ನು ಮಾಡಿದೆ.

### ತಿದ್ದುಪಡಿಗಳ ಮುಖ್ಯಾಂಶಗಳು:

- ಉದ್ದೇಶ: **ನಾಯಿ, ಇತರ ಪ್ರಾಣಿ ಮತ್ತು ಹಾವು ಕಡಿತಕ್ಕೆ ಒಳಗಾದ ಸಂತ್ರಸ್ತರಿಗೆ, ಸಮಯೋಚಿತ ಹಾಗೂ ಜೀವ ರಕ್ಷಕ ಚಿಕಿತ್ಸೆಯು** ಲಭ್ಯವಾಗುವುದನ್ನು ಖಚಿತಪಡಿಸಲು ಅಸ್ತಿತ್ವದಲ್ಲಿರುವ ಕಾನೂನು ಉಪಬಂಧಗಳನ್ನು ಬಲಪಡಿಸುವುದು ಇದರ ಪ್ರಮುಖ ಉದ್ದೇಶವಾಗಿದೆ.
- **ಹಿನ್ನೆಲೆ:** ರಾಜ್ಯದ ಎಲ್ಲಾ ಆಸ್ಪತ್ರೆಗಳಲ್ಲಿ **ರೇಬೀಸ್ ನಿರೋಧಕ ಲಸಿಕೆ (ARV), ಇಮ್ಯುನೊಗ್ಲಾಬ್ಯುಲಿನ್ ಮತ್ತು ತುರ್ತು ಚಿಕಿತ್ಸಾ ಸೌಲಭ್ಯಗಳು** ಏಕರೂಪವಾಗಿ ಲಭ್ಯವಿರಬೇಕೆಂದು ಕೋರಿ ದಾಖಲಾದ ಸ್ವಯಂಪ್ರೇರಿತ ರಿಟ್ ಅರ್ಜಿಯ ವಿಚಾರಣೆ ನಡೆಸಿದ **ಸರ್ವೋಚ್ಚ ನ್ಯಾಯಾಲಯವು**, ನವೆಂಬರ್ 7, 2025 ರಂದು ನೀಡಿದ ನಿರ್ದೇಶನಗಳನ್ನು ಪಾಲಿಸುವ ನಿಟ್ಟಿನಲ್ಲಿ ಈ ತಿದ್ದುಪಡಿಯನ್ನು ತರಲಾಗಿದೆ.
- **ಕಡ್ಡಾಯ ಚಿಕಿತ್ಸೆ:** ಕಾಯಿದೆಗೆ ಸೇರ್ಪಡೆಗೊಳಿಸಲಾದ ಹೊಸ ನಿಯಮದನ್ವಯ, ಹಾವು ಕಡಿತ ಅಥವಾ ನಾಯಿ/ಪ್ರಾಣಿ ಕಡಿತದ ಸಂತ್ರಸ್ತರಿಗೆ ಚಿಕಿತ್ಸೆ ನೀಡುವ ಮುನ್ನ **ಮುಂಗಡ ಹಣ ಪಾವತಿಗೆ ಒತ್ತಾಯಿಸಬಾರದು**. ಮತ್ತು ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು ಸಂತ್ರಸ್ತರಿಗೆ ಅಗತ್ಯವಿರುವ **ಪ್ರಥಮ ಚಿಕಿತ್ಸೆಯನ್ನು ನೀಡುವುದು ಕಡ್ಡಾಯವಾಗಿದೆ.**

## 29. ಆಗುಂಬೆಯಲ್ಲಿ ಹೆಲ್ತ್ (HEALTH) ಉಪಕ್ರಮದ ಉತ್ತೇಜನ

### ಇದೀಗ ಸುದ್ದಿಯಲ್ಲಿ

- **ಸುರತ್ಕಲ್‌ನ NITK** ತಂಡವು, **'ಆಗುಂಬೆಯಲ್ಲಿ ಹೆಲ್ತ್ (HEALTH) ಉತ್ತೇಜನ'** ಯೋಜನೆಯ ಅಡಿಯಲ್ಲಿ ನವೆಂಬರ್ 8 ರಂದು ಆಗುಂಬೆ ಭಾಗದಲ್ಲಿ 100 ಇಂಟರ್ನೆಟ್ ಸಂಪರ್ಕಗಳನ್ನು ಅಳವಡಿಸುವ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ.

### ಹೆಲ್ತ್ (HEALTH) ಉಪಕ್ರಮದ ಉತ್ತೇಜನ ಕುರಿತು:

- ಇದು ಎನ್‌ಐಟಿಕೆ ಸುರತ್ಕಲ್‌ನ **ಡಾ. ಮೋಹಿತ್ ಪಿ. ತಹಿಲಿಯಾನಿ** ಅವರ ನೇತೃತ್ವದಲ್ಲಿ ಕಾರ್ಯನಿರ್ವಹಿಸಲಿದೆ.
- **HEALTH** ಎಂದರೆ:- **ಆರೋಗ್ಯ ರಕ್ಷಣೆ (H), ಶಿಕ್ಷಣ (E), ಕೃಷಿ (A), ಜೀವನೋಪಾಯ (L), ತಂತ್ರಜ್ಞಾನ (T) ಮತ್ತು ಪರಂಪರೆ (H).**
- **ಉದ್ದೇಶ:-** ಪಶ್ಚಿಮ ಘಟ್ಟಗಳಂತಹ ದೂರದ ಮತ್ತು **ಪರಿಸರ ಸೂಕ್ಷ್ಮ ಪ್ರದೇಶದಲ್ಲಿರುವ** ಸ್ಥಳೀಯ ಸಂಸ್ಥೆಗಳು, ಉದ್ದಿಮೆಗಳು ಮತ್ತು ಮನೆಗಳಿಗೆ **ಡಿಜಿಟಲ್ ಪ್ರವೇಶವನ್ನು** ಕಲ್ಪಿಸುವುದು ಇದರ ಮೂಲ ಉದ್ದೇಶವಾಗಿದೆ. ಆಗುಂಬೆಯ 100 ತಾಣಗಳಿಗೆ ವಿಶ್ವಾಸಾರ್ಹ ಅಂತರ್ಜಾಲ ಸಂಪರ್ಕವನ್ನು ಒದಗಿಸಿರುವುದು ಯೋಜನೆಯ ಇತ್ತೀಚಿನ ಮೈಲಿಗಲ್ಲಾಗಿದೆ..

### HEALTH ಉಪಕ್ರಮದ ಆಧಾರಸ್ತಂಭಗಳು

1. **ಆರೋಗ್ಯ ರಕ್ಷಣೆ (H):** ಗ್ರಾಮೀಣ ಜನರಿಗೆ ಆನ್‌ಲೈನ್ ಮೂಲಕ ಆರೋಗ್ಯ ಮಾಹಿತಿ ಮತ್ತು ವೈದ್ಯಕೀಯ ಸೇವೆಗಳ ಲಭ್ಯತೆಯನ್ನು ಸುಗಮಗೊಳಿಸುವುದು.
2. **ಶಿಕ್ಷಣ (E):** ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಆನ್‌ಲೈನ್ ಸಂಪನ್ಮೂಲಗಳು ಹಾಗೂ ಡಿಜಿಟಲ್ ಕಲಿಕಾ ವೇದಿಕೆಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಅನುವು ಮಾಡಿಕೊಡುವುದು.
3. **ಕೃಷಿ (A):** ಕೃಷಿ ಸಮುದಾಯಕ್ಕೆ ಅಗತ್ಯ ಮಾಹಿತಿ ಮತ್ತು ಉತ್ತಮ ಸಂವಹನ ವ್ಯವಸ್ಥೆಯನ್ನು ಒದಗಿಸುವುದು.
4. **ಜೀವನೋಪಾಯ (L):** ಆನ್‌ಲೈನ್ ಪ್ರಚಾರ, ಕಾಯ್ದಿರಿಸುವಿಕೆ ವ್ಯವಸ್ಥೆಗಳು ಮತ್ತು ತಂಗುಮನೆ (ಹೋಮ್‌ಸ್ಟೇ) ಗಳಂತಹ ಸ್ಥಳೀಯ ಉದ್ಯಮಗಳಿಗೆ ತಾಂತ್ರಿಕ ಬೆಂಬಲ ನೀಡುವ ಮೂಲಕ ಸ್ಥಳೀಯ ವಾಣಿಜ್ಯ ವಹಿವಾಟನ್ನು ಸುಧಾರಿಸುವುದು.
5. **ತಂತ್ರಜ್ಞಾನ (T):** ವಿದ್ಯುತ್ ವ್ಯತ್ಯಯ ಮತ್ತು ಕಠಿಣ ಭೌಗೋಳಿಕ ಸವಾಲುಗಳಿರುವ ಪ್ರದೇಶಕ್ಕೂ ವಿಶ್ವಾಸಾರ್ಹ ಅಂತರ್ಜಾಲ ಸೇವೆಯನ್ನು ತಲುಪಿಸುವುದು.
6. **ಪರಂಪರೆ (H):** ಆಗುಂಬೆಯ ಪ್ರಮುಖ ಜೀವವೈವಿಧ್ಯ ಪ್ರಭೇದವಾದ ಕಾಳಿಂಗ ಸರ್ಪಗಳ ಸಂರಕ್ಷಣೆ ಮತ್ತು ಸಂಶೋಧನಾ ಪ್ರಯತ್ನಗಳಿಗೆ ಬೆಂಬಲ ನೀಡುವುದು.

## 30. "ಫ್ಲೈಬಸ್" ಸೇವೆ

### ಇದೀಗ ಸುದ್ದಿಯಲ್ಲಿದೆ:

- ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು (KSRTC), ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (KIA) ಮತ್ತು ದಾವಣಗೆರೆ ನಗರದ ನಡುವೆ ನೇರವಾದ ನೂತನ 'ಫ್ಲೈಬಸ್' (ವೋಲ್ವೋ ಮಲ್ಟಿ-ಆಕ್ಸಲ್) ಸೇವೆಯನ್ನು ಪ್ರಾರಂಭಿಸಿದೆ.

### ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಗ್ಗೆ:

- ಮಾಲೀಕತ್ವ:- ಈ ನಿಗಮವು ಸಂಪೂರ್ಣವಾಗಿ **ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ** ಒಳಪಟ್ಟಿದೆ.
- ಸಾರಿಗೆ ಸೇವೆಗಳು:- ಕೆಎಸ್‌ಆರ್‌ಟಿಸಿಯು ಸಾಮಾನ್ಯ ದರ್ಜೆಯ **"ಕರ್ನಾಟಕ ಸಾರಿಗೆ" ಮತ್ತು "ಗ್ರಾಮಾಂತರ ಸಾರಿಗೆ" (ಹವಾನಿಯಂತ್ರಣ ರಹಿತ) ಬಸ್‌ಗಳಿಂದ ಹಿಡಿದು, ಐಷಾರಾಮಿ ದರ್ಜೆಯ "ಐರಾವತ ಕ್ಲಬ್ ಕ್ಲಾಸ್," "ಅಂಬಾರಿ ಡ್ರೀಮ್ ಕ್ಲಾಸ್" ಮತ್ತು ಪರಿಸರ ಸ್ನೇಹಿ ವಿದ್ಯುತ್ ಚಾಲಿತ "ಇವಿ- ಪವರ್ ಪ್ಲಸ್+"** ಬಸ್‌ಗಳವರೆಗೆ ವೈವಿಧ್ಯಮಯ ಸಾರಿಗೆ ಸೇವೆಗಳನ್ನು ಒದಗಿಸುತ್ತಿದೆ.
- ಕಾರ್ಯವ್ಯಾಪ್ತಿ:- ಇದು **ದಕ್ಷಿಣ ಕರ್ನಾಟಕದ 17 ಜಿಲ್ಲೆಗಳಿಗೆ ಸಾರಿಗೆ ಸೇವೆ** ಒದಗಿಸುವುದಲ್ಲದೆ, **ನೆರೆಯ ರಾಜ್ಯಗಳಾದ ತಮಿಳುನಾಡು, ಕೇರಳ, ತೆಲಂಗಾಣ, ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಗೋವಾ** ರಾಜ್ಯಗಳಿಗೂ ಸಂಪರ್ಕ ಕಲ್ಪಿಸುತ್ತದೆ.
- **ಆಡಳಿತಾತ್ಮಕ ವಿಭಜನೆ :** ಆಡಳಿತಾತ್ಮಕ ದಕ್ಷತೆ ಮತ್ತು ರಾಜ್ಯದ ವಿವಿಧ ಭಾಗಗಳಲ್ಲಿ ಉತ್ತಮ ಸಾರಿಗೆ ಸೌಲಭ್ಯ ಕಲ್ಪಿಸುವ ದೃಷ್ಟಿಯಿಂದ, ಕೆಎಸ್‌ಆರ್‌ಟಿಸಿಯನ್ನು ಕಾಲಕ್ರಮೇಣ ವಿಭಜಿಸಿ ಸ್ವತಂತ್ರ ಪ್ರಾದೇಶಿಕ ಸಾರಿಗೆ ನಿಗಮಗಳನ್ನು ರಚಿಸಲಾಗಿದೆ. ಅವುಗಳೆಂದರೆ:
    1. **ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (BMTC):** ಬೆಂಗಳೂರು ಮಹಾನಗರ ಪ್ರದೇಶಕ್ಕಾಗಿ.
    2. **ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (NWKRTC):** ವಾಯುವ್ಯ ಕರ್ನಾಟಕದ ಜಿಲ್ಲೆಗಳಿಗಾಗಿ.
    3. **ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (KKRTC):** ಈಶಾನ್ಯ ಕರ್ನಾಟಕದ (ಕಲ್ಯಾಣ ಕರ್ನಾಟಕ) ಜಿಲ್ಲೆಗಳಿಗಾಗಿ.

## 31. ನಾಡೋಜ ಬರಗೂರು ಪ್ರಶಸ್ತಿ

### ಇದೀಗ ಸುದ್ದಿಯಲ್ಲಿ

- 2025 ನೇ ಸಾಲಿನ 'ನಾಡೋಜ ಬರಗೂರು ಪ್ರಶಸ್ತಿ'ಗೆ ಸಾಮಾಜಿಕ ಹೋರಾಟಗಾರ್ತಿ, ಲೇಖಕಿ ಹಾಗೂ ಮಾಜಿ ಸಚಿವೆ **ಬಿ.ಟಿ. ಲಲಿತಾ ನಾಯಕ್ (ಸಾಹಿತ್ಯ ಕ್ಷೇತ್ರ)** ಮತ್ತು **ಶಿವರುದ್ರಯ್ಯ (ಚಲನಚಿತ್ರ ಕ್ಷೇತ್ರ)** ಅವರನ್ನು ಆಯ್ಕೆ ಮಾಡಲಾಗಿದೆ.

### ಬರಗೂರು ಪ್ರಶಸ್ತಿಯ ಬಗ್ಗೆ:

- **ಪ್ರಶಸ್ತಿ ನೀಡುವ ಸಂಸ್ಥೆ:** ಈ ಪ್ರಶಸ್ತಿಯನ್ನು **'ನಾಡೋಜ ಡಾ. ಬರಗೂರು ಪ್ರತಿಷ್ಠಾನ'** ನೀಡುತ್ತದೆ.
- ಉದ್ದೇಶ:- **ವಿವಿಧ ಕ್ಷೇತ್ರಗಳಲ್ಲಿ** ಗಣನೀಯ ಸೇವೆ ಸಲ್ಲಿಸಿದ ಹಾಗೂ ಕೊಡುಗೆ ನೀಡಿದ **ಸಾಧಕರಿಗೆ ವಾರ್ಷಿಕವಾಗಿ** ಈ ಪ್ರಶಸ್ತಿಯನ್ನು ನೀಡಿ ಗೌರವಿಸುವುದು ಪ್ರತಿಷ್ಠಾನದ ಮೂಲ ಉದ್ದೇಶವಾಗಿದೆ.
- ಪ್ರಶಸ್ತಿಯ ಸ್ವರೂಪ:- ಈ ಪ್ರಶಸ್ತಿಯು ಒಂದು **ಫಲಕ ಮತ್ತು ₹25,000 ನಗದು** ಬಹುಮಾನವನ್ನು ಒಳಗೊಂಡಿರುತ್ತದೆ.

### 2025 ನೇ ಸಾಲಿನ ಪುರಸ್ಕೃತರು

1. **ಬಿ.ಟಿ. ಲಲಿತಾ ನಾಯಕ್:** ಸಾಹಿತ್ಯ ಕ್ಷೇತ್ರ.
2. **ಶಿವರುದ್ರಯ್ಯ:** ಚಲನಚಿತ್ರ ಕ್ಷೇತ್ರ.

## 32. ಕರ್ನಾಟಕ ಮಾಹಿತಿ ತಂತ್ರಜ್ಞಾನ ನೀತಿ, 2025-2030

### ಇದೀಗ ಸುದ್ದಿಯಲ್ಲಿದೆ:

- 'ಕರ್ನಾಟಕ ಮಾಹಿತಿ ತಂತ್ರಜ್ಞಾನ ನೀತಿ 2025-2030' ರ ಅಡಿಯಲ್ಲಿ ವಿವಿಧ ಪ್ರೋತ್ಸಾಹಕಗಳಿಗಾಗಿ ರಾಜ್ಯ ಸರ್ಕಾರವು **₹967 ಕೋಟಿ** ವೆಚ್ಚ ಮಾಡಲು ನಿರ್ಧರಿಸಿದೆ.

### ಕರ್ನಾಟಕ ಮಾಹಿತಿ ತಂತ್ರಜ್ಞಾನ ನೀತಿ, 2025-2030 ರ ಕುರಿತು:

- **ಕಾರ್ಯತಂತ್ರದ ಬದಲಾವಣೆ:** ರಾಜ್ಯದ ಗಮನವನ್ನು ಸಾಂಪ್ರದಾಯಿಕ ಮಾಹಿತಿ ತಂತ್ರಜ್ಞಾನ (IT) ಸೇವೆಗಳಿಂದ, **ಡೀಪ್ ಟೆಕ್ ನಾವೀನ್ಯತೆಗೆ** ಪರಿವರ್ತಿಸುವುದು ಈ ನೀತಿಯ ಪ್ರಮುಖ ಉದ್ದೇಶವಾಗಿದೆ. ಇದೊಂದು ಮಹತ್ವದ ಕಾರ್ಯತಂತ್ರದ ನೀಲನಕ್ಷೆಯಾಗಿದೆ.
- **ಜಾಗತಿಕ ನಾಯಕತ್ವ: ಕೃತಕ ಬುದ್ಧಿಮತ್ತೆ** (AI), ಕ್ವಾಂಟಮ್ ಕಂಪ್ಯೂಟಿಂಗ್ ಮತ್ತು **ಸೈಬರ್ ಭದ್ರತೆ** ಯಂತಹ ಆಧುನಿಕ ಕ್ಷೇತ್ರಗಳಲ್ಲಿ ಕರ್ನಾಟಕವನ್ನು ಜಾಗತಿಕ ನಾಯಕನನ್ನಾಗಿ ರೂಪಿಸುವುದು ಇದರ ಗುರಿಯಾಗಿದೆ.
- **ಸಮತೋಲಿತ ಬೆಳವಣಿಗೆ:** ನವೆಂಬರ್ 2025 ರಲ್ಲಿ ರಾಜ್ಯ ಸಚಿವ ಸಂಪುಟದಿಂದ ಅನುಮೋದನೆಗೊಂಡ ಈ ನೀತಿಯು, **'ಬೆಂಗಳೂರಿನ ಆಚೆಗೆ'** ಈ ಉಪಕ್ರಮದ ಮೂಲಕ ರಾಜ್ಯದಾದ್ಯಂತ ಸಮಾನ ಬೆಳವಣಿಗೆಗೆ ಒತ್ತು ನೀಡುತ್ತದೆ. **ಐದು ವರ್ಷಗಳ ಅವಧಿಗೆ ಒಟ್ಟು ₹967.12 ಕೋಟಿ** ವೆಚ್ಚವನ್ನು ಅಂದಾಜಿಸಲಾಗಿದೆ.

### ನೀತಿಯ ಪ್ರಮುಖ ದೃಷ್ಟಿಕೋನ ಮತ್ತು ಗುರಿಗಳು:

- ಈ ನೀತಿಯನ್ನು **"FRAME"** (ಮುಂಬರುವ ಮತ್ತು ಉದಯೋನ್ಮುಖ ತಂತ್ರಜ್ಞಾನಗಳು, ಪ್ರಾದೇಶಿಕ ಅಭಿವೃದ್ಧಿ, ಹೊಂದಾಣಿಕೆ, ಮಾರುಕಟ್ಟೆ ಸೃಷ್ಟಿ, ಉದ್ಯಮ ಸೌಲಭ್ಯ) ಚೌಕಟ್ಟಿನ ಆಧಾರದ ಮೇಲೆ ವಿನ್ಯಾಸಗೊಳಿಸಲಾಗಿದೆ.

| ಉದ್ದೇಶ | ಪ್ರಸ್ತುತ ಸ್ಥಿತಿ (ಅಂದಾಜು) | 2030 ರ ವೇಳೆಗೆ ಗುರಿ |
|---|---|---|
| **ಸಾಫ್ಟ್ ವೇರ್ ರಫ್ತು** | ₹4.09 ಲಕ್ಷ ಕೋಟಿ | ₹11.5 ಲಕ್ಷ ಕೋಟಿ |
| **ಉದ್ಯೋಗ ಸೃಷ್ಟಿ** | 12 ಲಕ್ಷ ನೇರ ಐಟಿ ಉದ್ಯೋಗಗಳು<br>31 ಲಕ್ಷ ಪರೋಕ್ಷ ಉದ್ಯೋಗಗಳು | 90 ಲಕ್ಷಕ್ಕೂ ಹೆಚ್ಚು ನೇರ ಮತ್ತು ಪರೋಕ್ಷ ಉದ್ಯೋಗಗಳು |
| **ಜಿಎಸ್‌ಡಿಪಿಗೆ (GSDP) ಐಟಿ ವಲಯದ ಕೊಡುಗೆ** | 26% | 36% |

## 33. ಕರ್ನಾಟಕ ಬಾಹ್ಯಾಕಾಶ ತಂತ್ರಜ್ಞಾನ ನೀತಿ, 2025-2030

### ಇದೀಗ ಸುದ್ದಿಯಲ್ಲಿದೆ:

- ರಾಜ್ಯ ಸರ್ಕಾರವು 'ಕರ್ನಾಟಕ ಬಾಹ್ಯಾಕಾಶ ತಂತ್ರಜ್ಞಾನ ನೀತಿ 2025-2030' ಕ್ಕೆ ಅಧಿಕೃತವಾಗಿ ಅನುಮೋದನೆ ನೀಡಿದೆ.

### ಕರ್ನಾಟಕ ಬಾಹ್ಯಾಕಾಶ ತಂತ್ರಜ್ಞಾನ ನೀತಿ, 2025-2030 ರ ಕುರಿತು:

- ಅನಾವರಣ: ನವೆಂಬರ್ 2025 ರಲ್ಲಿ ನಡೆದ ಪ್ರತಿಷ್ಠಿತ **'ಬೆಂಗಳೂರು ತಂತ್ರಜ್ಞಾನ ಶೃಂಗಸಭೆ'ಯಲ್ಲಿ** ಈ ನೀತಿಯನ್ನು ಅನಾವರಣಗೊಳಿಸಲಾಯಿತು.
- ದೃಷ್ಟಿಕೋನ: **ಬಾಹ್ಯಾಕಾಶ ನಾವೀನ್ಯತೆ ಮತ್ತು ಉತ್ಪಾದನಾ ವಲಯದಲ್ಲಿ ರಾಜ್ಯವನ್ನು ಜಾಗತಿಕ ಕೇಂದ್ರವನ್ನಾಗಿ** ರೂಪಿಸುವ ಗುರಿಯನ್ನು ಹೊಂದಿರುವ ಮಹತ್ವದ ಕಾರ್ಯತಂತ್ರದ ನೀಲನಕ್ಷೆಯಾಗಿದೆ.

### ಪ್ರಮುಖ ಉದ್ದೇಶಗಳು

### ಈ ನೀತಿಯು ರಾಜ್ಯದ ಬಾಹ್ಯಾಕಾಶ ಉದ್ಯಮದ ಬೆಳವಣಿಗೆಗಾಗಿ ಈ ಕೆಳಗಿನ ಮಹತ್ವಾಕಾಂಕ್ಷೆಯ ಗುರಿ ಮತ್ತು ಉದ್ದೇಶಗಳನ್ನು ಹೊಂದಿದೆ:

1. **ಮಾರುಕಟ್ಟೆ ಪಾಲು:-** ರಾಷ್ಟ್ರೀಯ ಬಾಹ್ಯಾಕಾಶ ಮಾರುಕಟ್ಟೆಯ **ಶೇ. 50 ರಷ್ಟು** ಪಾಲನ್ನು (2033 ರ ವೇಳೆಗೆ 22 ಶತಕೋಟಿ ಅಮೆರಿಕನ್ ಡಾಲರ್ ಎಂದು ಅಂದಾಜಿಸಲಾಗಿದೆ) ಮತ್ತು ಜಾಗತಿಕ ಮಾರುಕಟ್ಟೆಯ **ಶೇ. 5 ರಷ್ಟು** ಪಾಲನ್ನು ವಶಪಡಿಸಿಕೊಳ್ಳುವುದು.
2. **ಹೂಡಿಕೆ ಆಕರ್ಷಣೆ:-** ರಾಜ್ಯದ ಬಾಹ್ಯಾಕಾಶ ಪರಿಸರ ವ್ಯವಸ್ಥೆಗೆ ಒಟ್ಟಾರೆಯಾಗಿ **3 ಶತಕೋಟಿ ಅಮೆರಿಕನ್ ಡಾಲರ್** ಹೂಡಿಕೆಯನ್ನು ಆಕರ್ಷಿಸುವುದು.
3. **ಮಾನವ ಸಂಪನ್ಮೂಲ ಅಭಿವೃದ್ಧಿ:-** ವಿಶೇಷ ಬಾಹ್ಯಾಕಾಶ ತಂತ್ರಜ್ಞಾನ ಕ್ಷೇತ್ರಗಳಲ್ಲಿ **15,000 ಮಹಿಳೆಯರು ಸೇರಿದಂತೆ ಒಟ್ಟು 50,000 ವಿದ್ಯಾರ್ಥಿಗಳು ಮತ್ತು ವೃತ್ತಿಪರರಿಗೆ ಉನ್ನತ ತರಬೇತಿ ಮತ್ತು ಕೌಶಲ್ಯವನ್ನು** ಒದಗಿಸುವುದು.
4. **ನವೋದ್ಯಮಗಳಿಗೆ ಪ್ರೋತ್ಸಾಹ:- 500 ಬಾಹ್ಯಾಕಾಶ ನವೋದ್ಯಮಗಳು ಹಾಗೂ ಸಣ್ಣ ಮತ್ತು ಮಧ್ಯಮ ಉದ್ದಿಮೆಗಳಿಗೆ** ಪ್ರೋತ್ಸಾಹ ನೀಡುವುದು. ಕರ್ನಾಟಕದಿಂದಲೇ **50 ಉಪಗ್ರಹಗಳ** ವಿನ್ಯಾಸ, ತಯಾರಿಕೆ ಮತ್ತು ಉಡಾವಣೆಗೆ ಅಗತ್ಯವಾದ ನೆರವು ನೀಡುವುದು.

### ನೀತಿಯ ಮಹತ್ವ

- ಈ ನೀತಿಯು ಕೇಂದ್ರ ಸರ್ಕಾರದ **'ಭಾರತೀಯ ಬಾಹ್ಯಾಕಾಶ ನೀತಿ 2023'** ರೊಂದಿಗೆ ಮತ್ತು **2035 ರ ವೇಳೆಗೆ 'ಭಾರತೀಯ ಅಂತರಿಕ್ಷ ನಿಲ್ದಾಣ'**ವನ್ನು ಸ್ಥಾಪಿಸುವ ಹಾಗೂ **2040 ರ ವೇಳೆಗೆ ಭಾರತೀಯ ಗಗನಯಾತ್ರಿಯನ್ನು ಚಂದ್ರನ ಮೇಲೆ** ಇಳಿಸುವ ರಾಷ್ಟ್ರೀಯ ಗುರಿಗಳಿಗೆ ಪೂರಕವಾಗಲಿದೆ.

## 34. ಮೇಕೆದಾಟು ಜಲಾಶಯ ಯೋಜನೆ

### ಇದೀಗ ಸುದ್ದಿಯಲ್ಲಿದೆ:

- **ಕರ್ನಾಟಕ ಮತ್ತು ತಮಿಳುನಾಡು** ನಡುವಿನ ಅಂತರರಾಜ್ಯ ನದಿಯಾದ **ಕಾವೇರಿ ನದಿಗೆ** ಅಡ್ಡಲಾಗಿ **ಮೇಕೆದಾಟುವಿನಲ್ಲಿ** ಕರ್ನಾಟಕವು ಜಲಾಶಯವನ್ನು ನಿರ್ಮಿಸಲು ಉದ್ದೇಶಿಸಿದ ಯೋಜನೆಯನ್ನು ಪ್ರಶ್ನಿಸಿ ತಮಿಳುನಾಡು ಸಲ್ಲಿಸಿದ್ದ ಅರ್ಜಿಯನ್ನು, ಸರ್ವೋಚ್ಚ ನ್ಯಾಯಾಲಯವು "ಅಕಾಲಿಕ" ಎಂದು ಪರಿಗಣಿಸಿ, ವಿಚಾರಣೆಗೆ ಅಂಗೀಕರಿಸಲು ನಿರಾಕರಿಸಿದೆ.

### ಕಾವೇರಿ ನದಿ ವ್ಯವಸ್ಥೆಯ ಬಗ್ಗೆ:

- ಉಗಮ: **ತಲಕಾವೇರಿ (ಕೊಡಗು ಜಿಲ್ಲೆಯ ಬ್ರಹ್ಮಗಿರಿ ಬೆಟ್ಟಗಳಲ್ಲಿ).**
- ಒಟ್ಟು ಉದ್ದ: **805 ಕಿ.ಮೀ.**
- ಹರಿವಿನ ದಿಕ್ಕು: **ಪೂರ್ವಾಭಿಮುಖ.**
- ಹರಿಯುವ ರಾಜ್ಯಗಳು: **ಕರ್ನಾಟಕ, ಕೇರಳ, ತಮಿಳುನಾಡು ಮತ್ತು ಪುದುಚೇರಿ** ಕೇಂದ್ರಾಡಳಿತ ಪ್ರದೇಶ.
- ಉಪನದಿಗಳು: **ಅರ್ಕಾವತಿ, ಶಿಂಷಾ, ಹೇಮಾವತಿ, ಕಪಿಲಾ, ಹೊನ್ನುಹೊಳೆ, ಅಮರಾವತಿ, ಲಕ್ಷ್ಮಣತೀರ್ಥ, ಕಬಿನಿ, ಲೋಕಪಾವನಿ, ಭವಾನಿ ಮತ್ತು ನೊಯ್ಯಲ್.**

### ಮೇಕೆದಾಟು ಯೋಜನೆಯ ಬಗ್ಗೆ:

- **ಯೋಜನೆಯ ಸ್ವರೂಪ:** ಮೇಕೆದಾಟು ಯೋಜನೆಯು ಒಂದು **ಸಮತೋಲನ ಜಲಾಶಯ ಮತ್ತು ಕುಡಿಯುವ ನೀರಿನ** ಪೂರೈಕೆ ಯೋಜನೆಯಾಗಿದೆ.
- ನಿರ್ಮಾಣ ಸ್ಥಳ: ಇದನ್ನು **ಕಾವೇರಿ ಮತ್ತು ಅರ್ಕಾವತಿ** ನದಿಗಳ ಸಂಗಮದಲ್ಲಿ ನಿರ್ಮಿಸಲು ಕರ್ನಾಟಕ ಸರ್ಕಾರವು ಉದ್ದೇಶಿಸಿದೆ.
- ಉದ್ದೇಶ: **ಬೆಂಗಳೂರು ಮಹಾನಗರ ಮತ್ತು ರಾಮನಗರ ಜಿಲ್ಲೆಯ ಕುಡಿಯುವ ನೀರಿನ** ಸಮಸ್ಯೆಗಳನ್ನು ಶಾಶ್ವತವಾಗಿ ಪರಿಹರಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ.
- **ಮಹತ್ವ** : ಕುಡಿಯುವ ನೀರು ಪೂರೈಕೆಯ ಜೊತೆಗೆ, ಈ ಯೋಜನೆಯು **400 ಮೆಗಾವ್ಯಾಟ್ ಸಾಮರ್ಥ್ಯದ ಜಲವಿದ್ಯುತ್ ಉತ್ಪಾದನೆಗೂ** ಸಹಕಾರಿಯಾಗಲಿದೆ.
- **ಯೋಜನೆಯ ಬಗೆಗಿನ ಕಳವಳಗಳು:** ಈ ಯೋಜನೆಯ ಅನುಷ್ಠಾನದಿಂದಾಗಿ **"ಕಾವೇರಿ ವನ್ಯಜೀವಿ ಧಾಮ"ದ ಸುಮಾರು 63% ರಷ್ಟು ಅರಣ್ಯ ಪ್ರದೇಶವು ಮುಳುಗಡೆಯಾಗುವ ಸಾಧ್ಯತೆಯಿದೆ** ಎಂಬ ಆತಂಕ ವ್ಯಕ್ತವಾಗಿದೆ.

## 35. ಇನ್ಫೋಸಿಸ್ ಪ್ರಶಸ್ತಿ, 2025

### ಇದೀಗ ಸುದ್ದಿಯಲ್ಲಿದೆ:

- 2025ನೇ ಸಾಲಿನ ಪ್ರತಿಷ್ಠಿತ ಇನ್ಫೋಸಿಸ್ ಪ್ರಶಸ್ತಿ ಘೋಷಣೆಯಾಗಿದ್ದು, ಪ್ರಶಸ್ತಿ ಪುರಸ್ಕೃತರಾಗಿ ಆಯ್ಕೆಯಾದ ಒಟ್ಟು **ಆರು ಗಣ್ಯರ** ಪಟ್ಟಿಯಲ್ಲಿ **ಪ್ರಾಕೃತ** ಮತ್ತು **ಕನ್ನಡ ಕಾವ್ಯಶಾಸ್ತ್ರದ** ವಿದ್ವಾಂಸರಾದ **ಆಂಡ್ರ್ಯೂ ಒಲೆಟ್** ಹಾಗೂ ಬೆಂಗಳೂರು ಮೂಲದ ವಿಜ್ಞಾನಿ **ಅಂಜನಾ ಬದ್ರಿನಾರಾಯಣನ್** ಅವರು ಸೇರಿದ್ದಾರೆ.

### 2025 ನೇ ಸಾಲಿನ ಇನ್ಫೋಸಿಸ್ ಪ್ರಶಸ್ತಿ ಪುರಸ್ಕೃತರ ವಿವರಣೆ:

| ವಿಭಾಗ | ಪುರಸ್ಕೃತರು |
|---|---|
| **ಅರ್ಥಶಾಸ್ತ್ರ** | ನಿಖಿಲ್ ಅಗರ್ವಾಲ್ |
| **ಇಂಜಿನಿಯರಿಂಗ್ ಮತ್ತು ಕಂಪ್ಯೂಟರ್ ವಿಜ್ಞಾನ** | ಸುಶಾಂತ್ ಸಚ್‌ದೇವ |
| **ಮಾನವಿಯ ಮತ್ತು ಸಮಾಜ ವಿಜ್ಞಾನ** | ಆಂಡ್ರ್ಯೂ ಒಲೆಟ್ |
| **ಜೀವ ವಿಜ್ಞಾನ** | ಅಂಜನಾ ಬದ್ರಿನಾರಾಯಣನ್ |
| **ಗಣಿತ ವಿಜ್ಞಾನ** | ಸವ್ಯಸಾಚಿ ಮುಖರ್ಜಿ |
| **ಭೌತ ವಿಜ್ಞಾನ** | ಕಾರ್ತಿಶ್ ಮಂತಿರಾಮ್ |

### ಇನ್ಫೋಸಿಸ್ ಪ್ರಶಸ್ತಿಯ ಬಗ್ಗೆ:

- ಘೋಷಣೆ: **ಇನ್ಫೋಸಿಸ್ ವಿಜ್ಞಾನ ಪ್ರತಿಷ್ಠಾನ** (ISF), ಆರು ವಿಭಿನ್ನ ವಿಭಾಗಗಳಲ್ಲಿ 2025ನೇ ಸಾಲಿನ ಪ್ರಶಸ್ತಿ ವಿಜೇತರನ್ನು ಘೋಷಿಸಿದೆ. ಅವುಗಳೆಂದರೆ:
  1. ಅರ್ಥಶಾಸ್ತ್ರ
  2. ಇಂಜಿನಿಯರಿಂಗ್ ಮತ್ತು ಕಂಪ್ಯೂಟರ್ ವಿಜ್ಞಾನ
  3. ಮಾನವಿಯ ಮತ್ತು ಸಮಾಜ ವಿಜ್ಞಾನ
  4. ಜೀವ ವಿಜ್ಞಾನ
  5. ಗಣಿತ ವಿಜ್ಞಾನ
  6. ಭೌತ ವಿಜ್ಞಾನ
- **ಉದ್ದೇಶ:** ಭಾರತದ ಪ್ರಗತಿಯ ಮೇಲೆ ಗಮನಾರ್ಹ ಪ್ರಭಾವ ಬೀರುವಂತಹ **ಸಂಶೋಧನೆ ಮತ್ತು ಪಾಂಡಿತ್ಯಪೂರ್ಣ ಸಾಧನೆಗಳನ್ನು ಮಾಡಿದ ವ್ಯಕ್ತಿಗಳನ್ನು** ಗುರುತಿಸಿ ಗೌರವಿಸುವುದು ಈ ಪ್ರಶಸ್ತಿಯ ಮೂಲ ಉದ್ದೇಶವಾಗಿದೆ.
- **ಪ್ರಶಸ್ತಿಯ ಸ್ವರೂಪ:** ಪ್ರತಿಯೊಂದು ವಿಭಾಗದ ಪ್ರಶಸ್ತಿಯು **ಚಿನ್ನದ ಪದಕ, ಪ್ರಶಂಸಾ ಪತ್ರ ಮತ್ತು $100,000** (ಅಥವಾ ಅದಕ್ಕೆ ಸಮನಾದ ಭಾರತೀಯ ರೂಪಾಯಿ ಮೌಲ್ಯ) ನಗದು ಬಹುಮಾನವನ್ನು ಒಳಗೊಂಡಿರುತ್ತದೆ.

## 36. ಕರ್ನಾಟಕ ಋತು ಸ್ರಾವ ರಜೆ ನೀತಿ, 2025

### ಇದೀಗ ಸುದ್ದಿಯಲ್ಲಿದೆ:

- ಕರ್ನಾಟಕ ರಾಜ್ಯ ಸರ್ಕಾರವು **ಮಹಿಳಾ ಉದ್ಯೋಗಿಗಳಿಗೆ ತಿಂಗಳಿಗೆ ಒಂದು ದಿನದ ವೇತನ ಸಹಿತ ರಜೆ** ನೀಡುವ 'ಋತು ಸ್ರಾವ ರಜೆ ನೀತಿ'ಯನ್ನು ಅಧಿಕೃತವಾಗಿ ಜಾರಿಗೊಳಿಸಿದೆ.

### ಕರ್ನಾಟಕ ಋತು ಸ್ರಾವ ರಜೆ ನೀತಿ-2025 ರ ಬಗ್ಗೆ:

- **ಅರ್ಹತೆ:** ಈ ನೀತಿಯ ಅನ್ವಯ, ರಾಜ್ಯದ ಮಹಿಳಾ ಉದ್ಯೋಗಿಗಳು **ವಾರ್ಷಿಕವಾಗಿ 12 ದಿನಗಳ** ಋತು ಸ್ರಾವ ರಜೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.
- **ಆರೋಗ್ಯ ಮತ್ತು ಹಕ್ಕುಗಳು:** ಉದ್ಯೋಗ ಸ್ಥಳದಲ್ಲಿ ಮಹಿಳೆಯರ ಋತು ಸ್ರಾವದ **ಆರೋಗ್ಯ ಮತ್ತು ಹಕ್ಕುಗಳನ್ನು** ಗುರುತಿಸುವ ನಿಟ್ಟಿನಲ್ಲಿ ಇದೊಂದು ಮಹತ್ವದ ಹೆಜ್ಜೆಯಾಗಿದೆ.
- **ಸಮಿತಿ:** ಈ ನೀತಿಯ ರೂಪುರೇಷೆಗಳನ್ನು ಅಧ್ಯಯನ ಮಾಡಲು ಮತ್ತು ಸೂಕ್ತ ಶಿಫಾರಸುಗಳನ್ನು ನೀಡಲು ಸರ್ಕಾರವು **ಡಾ. ಸಪ್ನಾ ಎಸ್.** ನೇತೃತ್ವದ ಸಮಿತಿಯನ್ನು ಸರ್ಕಾರವು ನೇಮಿಸಿತ್ತು.
- **ಉದ್ದೇಶ ಮತ್ತು ಮಹತ್ವ:** ಉದ್ಯೋಗದ ಸ್ಥಳವನ್ನು ಹೆಚ್ಚು ಸಮಗ್ರ ಮತ್ತು **ಮುಜುಗರ ರಹಿತವನ್ನಾಗಿ** ಮಾಡುವುದು ಇದರ ಮೂಲ ಉದ್ದೇಶವಾಗಿದೆ. ಇದು **ಸರಕಾರಿ** ಮತ್ತು **ಖಾಸಗಿ** ಕ್ಷೇತ್ರಗಳೆರಡರಲ್ಲೂ ವ್ಯಾಪಕ ವ್ಯಾಪ್ತಿಯನ್ನು ಹೊಂದಿರುವುದರಿಂದ, ಭಾರತದ ಪಾಲಿಗೆ ಇದು ಐತಿಹಾಸಿಕ ಹೆಜ್ಜೆಯಾಗಿದೆ.

### ನೀತಿಯ ಪ್ರಮುಖ ಲಕ್ಷಣಗಳು

- ವಯೋಮಿತಿ ಮತ್ತು ವ್ಯಾಪ್ತಿ: **18 ರಿಂದ 52 ವರ್ಷ** ವಯಸ್ಸಿನ ಮಹಿಳೆಯರು ಋತು ಸ್ರಾವ ರಜೆ ಪಡೆಯಲು ಅರ್ಹರಾಗಿರುತ್ತಾರೆ. ಇದು **ಕಾಯಂ, ಗುತ್ತಿಗೆ** ಮತ್ತು **ಹೊರಗುತ್ತಿಗೆ** ಆಧಾರಿತ ಸಿಬ್ಬಂದಿಗೆ ಅನ್ವಯಿಸುತ್ತದೆ.
- **ಅನ್ವಯವಾಗುವ ಕಾಯಿದೆಗಳು:** ಈ ನೀತಿಯು ಕೆಳಕಂಡ ಕಾಯಿದೆಗಳಡಿ ನೋಂದಾಯಿತವಾದ ಸಂಸ್ಥೆಗಳಿಗೆ ಅನ್ವಯಿಸುತ್ತದೆ:
  - ಕಾರ್ಖಾನೆಗಳ ಕಾಯಿದೆ, 1948.
  - ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಕಾಯಿದೆ, 1961.
  - ತೋಟ (ಪ್ಲಾಂಟೇಶನ್) ದ ಕಾರ್ಮಿಕರ ಕಾಯಿದೆ, 1951.
  - ಬೀಡಿ ಮತ್ತು ಸಿಗಾರ್ ಕಾರ್ಮಿಕರ (ಉದ್ಯೋಗದ ಷರತ್ತುಗಳು) ಕಾಯಿದೆ, 1966.
  - ಮೋಟಾರು ಸಾರಿಗೆ ಕಾರ್ಮಿಕರ ಕಾಯಿದೆ, 1961.
- ಷರತ್ತುಗಳು: ಈ ರಜೆಯನ್ನು ಬಳಸಿಕೊಳ್ಳದಿದ್ದರೆ **ಮುಂದಿನ ತಿಂಗಳಿಗೆ ವರ್ಗಾಯಿಸಿಕೊಳ್ಳಲು ಅವಕಾಶವಿರುವುದಿಲ್ಲ.** ರಜೆ ಪಡೆಯಲು ಯಾವುದೇ **ವೈದ್ಯಕೀಯ ಪ್ರಮಾಣಪತ್ರ ಸಲ್ಲಿಸುವುದು ಕಡ್ಡಾಯವಲ್ಲ.**
- ಪ್ರಸ್ತುತ ಹೊರಡಿಸಲಾದ ಸರ್ಕಾರಿ ಆದೇಶದಲ್ಲಿ, **ಸರ್ಕಾರಿ ನೌಕರರು, ಅಂಗನವಾಡಿ ಕಾರ್ಯಕರ್ತರು ಅಥವಾ ಆಶಾ ಕಾರ್ಯಕರ್ತರಿಗೆ** ಈ ರಜೆ ಅನ್ವಯವಾಗುವ ಬಗ್ಗೆ ಯಾವುದೇ ಸ್ಪಷ್ಟನೆ ನೀಡಿಲ್ಲ.

## 37. "ಸನ್ಮಿತ್ರ" ಉಪಕ್ರಮ

### ಇದೀಗ ಸುದ್ದಿಯಲ್ಲಿದೆ:

- **ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯು ಮಾದಕ ವ್ಯಸನ ಮುಕ್ತ ಸಮಾಜ ನಿರ್ಮಾಣದ** ನಿಟ್ಟಿನಲ್ಲಿ, 'ಸನ್ಮಿತ್ರ' (ಒಬ್ಬ ಒಳ್ಳೆಯ ಸ್ನೇಹಿತ) ಎಂಬ ವಿನೂತನ ಯೋಜನೆಯನ್ನು ಜಾರಿಗೆ ತಂದಿದೆ.

### 'ಸನ್ಮಿತ್ರ' ಉಪಕ್ರಮದದ ಬಗ್ಗೆ

- ಉದ್ದೇಶ: **ಮಾದಕ ದ್ರವ್ಯ ವ್ಯಸನದಿಂದ ಬಳಲುತ್ತಿರುವ ವ್ಯಕ್ತಿಗಳಿಗೆ ನಿರಂತರ ಬೆಂಬಲ, ಪುನರ್ವಸತಿ ಮತ್ತು ಮೇಲ್ವಿಚಾರಣೆಯನ್ನು** ಒದಗಿಸುವುದು ಈ ಉಪಕ್ರಮದ ಪ್ರಮುಖ ಉದ್ದೇಶವಾಗಿದೆ.
- ವಿಶಿಷ್ಟ ವಿಧಾನ: ಈ ಕಾರ್ಯಕ್ರಮವು ಮಾದಕ ವ್ಯಸನದ

ಸಮಸ್ಯೆಯನ್ನು ಕೇವಲ **ಕಾನೂನು ಜಾರಿ** ದೃಷ್ಟಿಕೋನದಿಂದ ನೋಡದೆ, **ಸಹಾನುಭೂತಿ, ಸೂಕ್ತ ಮಾರ್ಗದರ್ಶನ ಮತ್ತು ರಚನಾತ್ಮಕ ಪುನರ್ವಸತಿಯ** ಮೂಲಕ ಪರಿಹರಿಸಲು ಯತ್ನಿಸುತ್ತದೆ.

- **ಸನ್ಮಿತ್ರ ಸಹಾಯವಾಣಿ:** ರಾಜ್ಯದ ಪ್ರತಿಯೊಂದು **ಪೊಲೀಸ್ ಠಾಣೆಯಲ್ಲಿ** ಮೀಸಲಾದ **'ಸನ್ಮಿತ್ರ ಸಹಾಯವಾಣಿ'** ಅನ್ನು ಸ್ಥಾಪಿಸಲಾಗುವುದು.
- **ಸಿಬ್ಬಂದಿಯ ಜವಾಬ್ದಾರಿ:** ಸನ್ಮಿತ್ರ ಯೋಜನೆಯಡಿ ನಿಯೋಜಿತರಾದ ಪೊಲೀಸ್ ಸಿಬ್ಬಂದಿ, **ಬಾಧಿತ ವ್ಯಕ್ತಿಗಳೊಂದಿಗೆ ನಿರಂತರ ಸಂಪರ್ಕದಲ್ಲಿರಬೇಕು.** ಅವರ **ಕುಟುಂಬದ** ಸದಸ್ಯರೊಂದಿಗೆ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಮೂಲಕ ಮತ್ತು **ಮಾನಸಿಕ ಆರೋಗ್ಯ ತಜ್ಞರೊಂದಿಗೆ** ಸಮನ್ವಯ ಸಾಧಿಸುವ ಮೂಲಕ ವ್ಯಕ್ತಿಯ ಚೇತರಿಕೆಯ ಮಾಸಿಕ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಬೇಕು.
- ವರದಿ ನಿರ್ವಹಣೆ: **ಪೊಲೀಸ್ ಠಾಣಾಧಿಕಾರಿಗಳು ಪ್ರತಿ ಎರಡು ವಾರಗಳಿಗೊಮ್ಮೆ ಸನ್ಮಿತ್ರ ಸಿಬ್ಬಂದಿಯಿಂದ ಪ್ರಗತಿಯ ವರದಿಗಳನ್ನು ಸಂಗ್ರಹಿಸಬೇಕು.** ತದನಂತರ, **ಗೌಪ್ಯ ಮಾಸಿಕ ವರದಿಗಳನ್ನು** ಮೊಹರು ಮಾಡಿದ ಲಕೋಟೆಗಳಲ್ಲಿ ಸಂಬಂಧಪಟ್ಟ **ಪೊಲೀಸ್ ವರಿಷ್ಠಾಧಿಕಾರಿ** (SP) ಅಥವಾ **ಉಪ ಪೊಲೀಸ್ ಆಯುಕ್ತರಿಗೆ** (DCP) ಸಲ್ಲಿಸಬೇಕು.

## 38. ಟಾಟಾ ಟ್ರಾನ್ಸ್‌ಫಾರ್ಮೇಷನ್ (ಪರಿವರ್ತನಾ) ಪ್ರಶಸ್ತಿ, 2025

### ಇದೀಗ ಸುದ್ದಿಯಲ್ಲಿದೆ:

- **ನ್ಯೂಯಾರ್ಕ್ ಅಕಾಡೆಮಿ ಆಫ್ ಸೈನ್ಸಸ್ ಮತ್ತು ಟಾಟಾ ಸನ್ಸ್** ಸಂಸ್ಥೆಗಳು ಜಂಟಿಯಾಗಿ, 2025ನೇ ಸಾಲಿನ ಪ್ರತಿಷ್ಠಿತ 'ಟಾಟಾ ಟ್ರಾನ್ಸ್‌ಫಾರ್ಮೇಷನ್ ಪ್ರಶಸ್ತಿ'ಗೆ ಬೆಂಗಳೂರು ಮೂಲದ ಮೂವರು ವಿಜ್ಞಾನಿಗಳನ್ನು ವಿಜೇತರನ್ನಾಗಿ ಘೋಷಿಸಿವೆ.

### ಪ್ರಶಸ್ತಿ ವಿಜೇತರು ಮತ್ತು ಅವರ ಕ್ಷೇತ್ರಗಳು:

1. **ಪಡುಬಿದ್ರಿ ವಿ. ಶಿವಪ್ರಸಾದ್:** ರಾಷ್ಟ್ರೀಯ ಜೈವಿಕ ವಿಜ್ಞಾನ ಕೇಂದ್ರ (NCBS).
2. **ಬಾಲಸುಬ್ರಮಣಿಯನ್ ಗೋಪಾಲ್:** ಭಾರತೀಯ ವಿಜ್ಞಾನ ಸಂಸ್ಥೆ (IISc). ಇವರು ಆಹಾರ ಭದ್ರತೆಯಲ್ಲಿನ ಸಂಶೋಧನೆಗಾಗಿ ಆಯ್ಕೆಯಾಗಿದ್ದಾರೆ.
3. **ಅಂಬರೀಶ್ ಘೋಷ್:** ಇವರು ಸುಸ್ಥಿರತೆ ಮತ್ತು ಆರೋಗ್ಯ ರಕ್ಷಣೆ ಕ್ಷೇತ್ರಗಳಿಗೆ ನೀಡಿದ ಕೊಡುಗೆಗಾಗಿ ಆಯ್ಕೆಯಾಗಿದ್ದಾರೆ.

### ಆಯ್ಕೆ ಪ್ರಕ್ರಿಯೆ ಮತ್ತು ಪ್ರಶಸ್ತಿ ವಿವರ

- **ಆಯ್ಕೆ:** ದೇಶದ 27 ರಾಜ್ಯಗಳಿಂದ ಸಲ್ಲಿಕೆಯಾಗಿದ್ದ 212 ನಾಮನಿರ್ದೇಶನಗಳನ್ನು ಪರಿಶೀಲಿಸಿ, ವಿಜ್ಞಾನಿಗಳು, ವೈದ್ಯರು, ತಂತ್ರಜ್ಞರು ಮತ್ತು ಇಂಜಿನಿಯರ್‌ಗಳನ್ನೊಳಗೊಂಡ ಅಂತರರಾಷ್ಟ್ರೀಯ ತೀರ್ಪುಗಾರರ ಮಂಡಳಿಯು ಈ ವಿಜೇತರನ್ನು ಅಂತಿಮಗೊಳಿಸಿದೆ.
- **ಬಹುಮಾನ:** ಪ್ರತಿಯೊಬ್ಬ ವಿಜೇತರಿಗೆ ತಮ್ಮ ಸಂಶೋಧನೆಯನ್ನು ಮುಂದುವರಿಸಲು ಮತ್ತು ಅದರ ನೈಜ ಪರಿಣಾಮವನ್ನು ವಿಸ್ತರಿಸಲು **ತಲಾ ₹2 ಕೋಟಿ ಅನುದಾನವನ್ನು** ನೀಡಲಾಗುತ್ತದೆ.

## 39. ಮಕ್ಕಳ ಹಕ್ಕುಗಳ ಸೂಚ್ಯಂಕ

### ಇದೀಗ ಸುದ್ದಿಯಲ್ಲಿದೆ:

- **ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗವು (KSCPCR)** 'ಮಕ್ಕಳ ಹಕ್ಕುಗಳ ಸೂಚ್ಯಂಕ'ವನ್ನು ಬಿಡುಗಡೆ ಮಾಡಿದೆ. ಇಡೀ ದೇಶದಲ್ಲೇ ಇಂತಹದೊಂದು ಸಮಗ್ರ ದಾಖಲೆಯನ್ನು ಸಿದ್ಧಪಡಿಸಿರುವುದು ಇದೇ ಮೊದಲಾಗಿದೆ.

### ಮಕ್ಕಳ ಹಕ್ಕುಗಳ ಸೂಚ್ಯಂಕದ ಬಗ್ಗೆ:

- **ಸಮಗ್ರ ಮಾಹಿತಿ:** ಈ ದಾಖಲೆಯು **ಮಕ್ಕಳ ಕಲ್ಯಾಣಕ್ಕಾಗಿ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಜಾರಿಯಲ್ಲಿರುವ ಕಾನೂನುಗಳು ಮತ್ತು ಯೋಜನೆಗಳ** ವಿವರವಾದ ಮಾಹಿತಿಯನ್ನು ಒದಗಿಸುತ್ತದೆ.
- **ಮೌಲ್ಯಮಾಪನ:** ಯೋಜನೆಗಳ ಅನುಷ್ಠಾನದ ಪರಿಣಾಮಕಾರಿತ್ವವನ್ನು ಇದು ವಿಶ್ಲೇಷಿಸುತ್ತದೆ. ಜೊತೆಗೆ, ಪ್ರಸ್ತುತ ವ್ಯವಸ್ಥೆಯನ್ನು ಸುಧಾರಿಸಲು ಅಗತ್ಯವಾದ ಬದಲಾವಣೆಗಳನ್ನು ಸೂಚಿಸುತ್ತದೆ.
- **ಗುರಿ: ಮಕ್ಕಳ ಹಕ್ಕುಗಳು, ರಕ್ಷಣೆ ಮತ್ತು ಕಲ್ಯಾಣವನ್ನು ಖಾತ್ರಿಪಡಿಸುವುದು** ಇದರ ಪ್ರಮುಖ ಗುರಿಯಾಗಿದೆ.

### ಈ ಸೂಚ್ಯಂಕದಲ್ಲಿ ಕರ್ನಾಟಕದ 10ನೇ ಸ್ಥಾನ ಪಡೆದಿದೆ:

- **ಶ್ರೇಯಾಂಕ:** ಮಕ್ಕಳ ಹಕ್ಕುಗಳು ಮತ್ತು ಯೋಗಕ್ಷೇಮವನ್ನು ಸಾಕಾರಗೊಳಿಸುವಲ್ಲಿ ಕರ್ನಾಟಕದ ಸಾಧನೆಯು **'ಮಧ್ಯಮ' ಮಟ್ಟದಲ್ಲಿದೆ. 'ಮಕ್ಕಳ ಹಕ್ಕುಗಳ ಸೂಚ್ಯಂಕ 2023'** ರ ವರದಿಯ ಪ್ರಕಾರ, ದೇಶದ **30 ರಾಜ್ಯಗಳ ಪೈಕಿ ಕರ್ನಾಟಕವು 10ನೇ ಸ್ಥಾನ ಪಡೆದಿದೆ.**
- **ಆಯಾಮಗಳು :** ಈ ಸೂಚ್ಯಂಕವನ್ನು ಈ ಕೆಳಗಿನ ಆರು ಪ್ರಮುಖ ಆಯಾಮಗಳ ಆಧಾರದ ಮೇಲೆ ಲೆಕ್ಕಹಾಕಲಾಗಿದೆ:
    1. ಜೀವಿಸುವ ಹಕ್ಕು
    2. ಬದುಕಲು ಪೂರಕವಾದ ಪರಿಸರದ ಹಕ್ಕು
    3. ಪೋಷಣೆಯ ಹಕ್ಕು
    4. ರಕ್ಷಣೆಯ ಹಕ್ಕು
    5. ಶಿಕ್ಷಣದ ಹಕ್ಕು
    6. ಭಾಗವಹಿಸುವಿಕೆಯ ಹಕ್ಕು

## 40. ಬೆಂಗಳೂರು ತಂತ್ರಜ್ಞಾನ ಶೃಂಗಸಭೆ, 2025 (BTS)

### ಇದೀಗ ಸುದ್ದಿಯಲ್ಲಿದೆ:

- 'ಬೆಂಗಳೂರು ತಂತ್ರಜ್ಞಾನ ಶೃಂಗಸಭೆ-2025' (BTS 2025) ನವೆಂಬರ್ 18 ರಿಂದ 20 ರವರೆಗೆ **'ಬೆಂಗಳೂರು ಅಂತರರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರ'ದಲ್ಲಿ** (BIEC) ಯಶಸ್ವಿಯಾಗಿ ಜರುಗಿತು.

### ಬೆಂಗಳೂರು ತಂತ್ರಜ್ಞಾನ ಶೃಂಗಸಭೆ, 2025 ರ ಪ್ರಮುಖ ಅಂಶಗಳು:

- 2025ರ ಧ್ಯೇಯವಾಕ್ಯ: **"ಫ್ಯೂಚರೈಸ್"**
- ಆಯೋಜಕರು: ಕರ್ನಾಟಕ ಸರ್ಕಾರದ **ಎಲೆಕ್ಟ್ರಾನಿಕ್ಸ್,**

**ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯು,** ಉದ್ಯಮ ವಲಯದ ಪಾಲುದಾರರ ಸಹಯೋಗದೊಂದಿಗೆ ಈ ಕಾರ್ಯಕ್ರಮವನ್ನು ಆಯೋಜಿಸಿತ್ತು.

- ಮಹತ್ವ: ಜಾಗತೀಕ ನಾವೀನ್ಯಕಾರರು, ಸಂಶೋಧಕರು, ಉದ್ಯಮಿಗಳು ಮತ್ತು ನೀತಿ ನಿರೂಪಕರನ್ನು ಒಂದೇ ವೇದಿಕೆಯಡಿ ತರುವುದು ಈ ಶೃಂಗಸಭೆಯ ಉದ್ದೇಶವಾಗಿತ್ತು. ಈ ಮೂಲಕ, **ಜಾಗತೀಕ ತಂತ್ರಜ್ಞಾನ ಮತ್ತು ನಾವೀನ್ಯತಾ ಕೇಂದ್ರವಾಗಿ** ಕರ್ನಾಟಕದ ಸ್ಥಾನಮಾನವನ್ನು ಈ ಶೃಂಗಸಭೆಯು ಮತ್ತಷ್ಟು ಬಲಪಡಿಸಿದೆ.

## 41. ಮಲೆನಾಡು ಜೇಡ



### ಇದೀಗ ಸುದ್ದಿಯಲ್ಲಿದೆ:

- **ಚಿಕ್ಕಮಗಳೂರು** ಜಿಲ್ಲೆಯ ಗ್ರಾಮವೊಂದರಲ್ಲಿ ಜಿಗಿಯುವ ಜೇಡಗಳ ಹೊಸ ಪ್ರಭೇದವೊಂದನ್ನು ಪತ್ತೆಹಚ್ಚಿರುವ ಸಂಶೋಧಕರು, ಅದಕ್ಕೆ ಮಲೆನಾಡಿನ ಹೆಸರನ್ನಿಟ್ಟು ಗೌರವಿಸಿದ್ದಾರೆ.

### ಶೋಧನೆಯ ವಿವರಗಳು:

- **ಅನ್ವೇಷಣೆ: ಪಶ್ಚಿಮ ಘಟ್ಟಗಳಲ್ಲಿ** ಕಂಡುಬರುವ ಜೀವವೈವಿಧ್ಯತೆಯ ಕುರಿತು ಅಧ್ಯಯನ ನಡೆಸುತ್ತಿದ್ದ ಸಂಶೋಧಕರ ತಂಡವು ಈ ಹೊಸ ಪ್ರಭೇದವನ್ನು ಗುರುತಿಸಿದೆ.
- **ಸ್ಥಳ: ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ಮಧುಗುಂಡಿ ಗ್ರಾಮದಲ್ಲಿ** ಈ ಜೇಡ ಪತ್ತೆಯಾಗಿದೆ.
- **ವರ್ಗೀಕರಣ:** ಇದು **'ಪಿಲಿಯಾ' ಎಂಬ ಜಿಗಿಯುವ ಜೇಡಗಳ** ಕುಲಕ್ಕೆ ಸೇರಿದ ಹೊಸ ಪ್ರಭೇದವಾಗಿದೆ.
- ನಾಮಕರಣ: ಈ ಜೇಡವು ಪತ್ತೆಯಾದ ಭೌಗೋಳಿಕ ಪ್ರದೇಶ ಮಲೆನಾಡಿಗೆ ಗೌರವ ಸಲ್ಲಿಸುವ ಸಂಕೇತವಾಗಿ, ಸಂಶೋಧಕರು ಇದಕ್ಕೆ ವೈಜ್ಞಾನಿಕವಾಗಿ **"ಪಿಲಿಯಾ ಮಲೆನಾಡು"** ಎಂದು ನಾಮಕರಣ ಮಾಡಿದ್ದಾರೆ.

## 42. ಹಂತ -3 ರ 'ಪ್ರವೇಶಸಾಧ್ಯತೆ ವರ್ಧನೆ ಮಾನ್ಯತೆ' ಪಡೆದ ಭಾರತದ ಮೊದಲ ವಿಮಾನ ನಿಲ್ದಾಣ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಾಗಿದೆ

### ಇದೀಗ ಸುದ್ದಿಯಲ್ಲಿದೆ:

- **ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳ ಮಂಡಳಿ (ACI)** ನೀಡುವ ಪ್ರತಿಷ್ಠಿತ **'ಪ್ರವೇಶಸಾಧ್ಯತೆ ವರ್ಧನೆ ಮಾನ್ಯತೆ' (AEA)** ಕಾರ್ಯಕ್ರಮದ ಅಡಿಯಲ್ಲಿ, ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು **'ಹಂತ-3' ರ** ಮಾನ್ಯತೆಯನ್ನು ಪಡೆದುಕೊಂಡಿದೆ. ಈ ಮೂಲಕ, **ಈ ಸಾಧನೆಗೈದ ಭಾರತದ ಮೊಟ್ಟಮೊದಲ ವಿಮಾನ ನಿಲ್ದಾಣ** ಎಂಬ ಹೆಗ್ಗಳಿಕೆಗೆ ಇದು ಪಾತ್ರವಾಗಿದೆ.

## 43. ಮೀನುಗಾರರ ಸಂಕಷ್ಟ ಪರಿಹಾರ ನಿಧಿ

### ಇದೀಗ ಸುದ್ದಿಯಲ್ಲಿದೆ:

- ರಾಜ್ಯದ ಮೀನುಗಾರಿಕೆ ವಲಯವನ್ನು ಬಲಪಡಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಮಹತ್ವದ ನಿರ್ಧಾರ ಕೈಗೊಂಡಿದೆ. 'ಮೀನುಗಾರರ ಸಂಕಷ್ಟ ಪರಿಹಾರ ನಿಧಿ'ಯ ಅಡಿಯಲ್ಲಿ ನೀಡಲಾಗುವ ಪರಿಹಾರ ಮೊತ್ತವನ್ನು **₹6 ಲಕ್ಷದಿಂದ ₹10 ಲಕ್ಷಕ್ಕೆ** ಹೆಚ್ಚಿಸಿರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ.
- 2024–25 ನೇ ಸಾಲಿನಲ್ಲಿ **9.63 ಲಕ್ಷ ಟನ್** ಮೀನು ಉತ್ಪಾದನೆ ಮಾಡುವ ಮೂಲಕ, ಒಟ್ಟು ಮೀನು ಉತ್ಪಾದನೆಯಲ್ಲಿ ಕರ್ನಾಟಕವು ರಾಷ್ಟ್ರಮಟ್ಟದಲ್ಲಿ **ಮೂರನೇ ಸ್ಥಾನವನ್ನು** ಕಾಯ್ದುಕೊಂಡಿದೆ.

### ಮೀನುಗಾರರ ಸಂಕಷ್ಟ ಪರಿಹಾರ ನಿಧಿಯ ಬಗ್ಗೆ:

- ಉದ್ದೇಶ:- ಮೀನುಗಾರಿಕೆಯಲ್ಲಿ ತೊಡಗಿರುವಾಗ ಸಮುದ್ರದಲ್ಲಿ ಅಥವಾ ಭೂಮಿಯ ಮೇಲೆ ಸಂಭವಿಸುವ **ಅಪಘಾತಗಳು, ನೈಸರ್ಗಿಕ ವಿಪತ್ತುಗಳು ಅಥವಾ ಅಕಾಲಿಕ ಮರಣದಿಂದಾಗಿ** ಸಂಕಷ್ಟಕ್ಕೆ ಸಿಲುಕುವ **ಮೀನುಗಾರರಿಗೆ ಮತ್ತು ಅವರ ಕುಟುಂಬಗಳಿಗೆ** ತಕ್ಷಣದ ಆರ್ಥಿಕ ಪರಿಹಾರ ಹಾಗೂ ಬೆಂಬಲವನ್ನು ಒದಗಿಸುವುದು ಇದರ ಮೂಲ ಉದ್ದೇಶವಾಗಿದೆ.
- ನಿರ್ವಹಣಾ ಪ್ರಾಧಿಕಾರ: ಈ ನಿಧಿಯ ನಿರ್ವಹಣೆಯನ್ನು ಕರ್ನಾಟಕ ಸರ್ಕಾರದ **'ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ'**ಯು ನಿರ್ವಹಿಸುತ್ತದೆ.
- ಪರಿಹಾರದ ಮೊತ್ತ: ಸಮುದ್ರದಲ್ಲಿ ಮೀನುಗಾರಿಕೆಗೆ ತೆರಳಿದಾಗ ಕಣ್ಮರೆಯಾದ ಅಥವಾ ಮೃತಪಟ್ಟ ಮೀನುಗಾರರ ಕುಟುಂಬಕ್ಕೆ ನೀಡಲಾಗುತ್ತಿದ್ದ ಪರಿಹಾರ ಧನವನ್ನು ರಾಜ್ಯ ಸರ್ಕಾರವು ಇತ್ತೀಚೆಗೆ **₹6 ಲಕ್ಷದಿಂದ ₹10 ಲಕ್ಷಕ್ಕೆ** ಏರಿಸಿದೆ.
- **ಅರ್ಹತೆ:-** ಪರಿಹಾರವನ್ನು ಕೋರುವ ಅರ್ಜಿದಾರರು **ಇಲಾಖೆಯಲ್ಲಿ ನೋಂದಾಯಿತ ಮೀನುಗಾರರಾಗಿರಬೇಕು.** ಅಲ್ಲದೆ, ಪರಿಹಾರದ **ನಷ್ಟದ ಸ್ವರೂಪಕ್ಕೆ** (ಉದಾಹರಣೆಗೆ: ಜೀವಹಾನಿ, ದೋಣಿ ಅಥವಾ ಮೀನುಗಾರಿಕೆ ಉಪಕರಣಗಳಿಗೆ ಹಾನಿ) ಅನುಗುಣವಾಗಿ ನಿಗದಿಪಡಿಸಲಾದ ನಿರ್ದಿಷ್ಟ ಮಾನದಂಡಗಳನ್ನು ಪೂರೈಸಿರಬೇಕು.

## 44. ಉಡುಪಿ ಜಿಲ್ಲೆಯಲ್ಲಿ ಬೃಹತ್ ಶಿಲಾಯುಗದ ಮೆನ್ಹಿರ್‌ಗಳ ಪತ್ತೆ



### ಇದೀಗ ಸುದ್ದಿಯಲ್ಲಿದೆ:

- ಉಡುಪಿಯ **ಆದಿಮ ಕಲಾ ಟ್ರಸ್ಟ್** (ರಿ.) ಕುಂದಾಪುರ ಪ್ರದೇಶದಲ್ಲಿ ಇತ್ತೀಚೆಗೆ ಕೈಗೊಂಡ **ಪುರಾತತ್ವ ಅನ್ವೇಷಣೆಗಳಲ್ಲಿ** ಎರಡು ಮೆನ್ಹಿರ್‌ಗಳನ್ನು ಪತ್ತೆಹಚ್ಚಲಾಗಿದೆ.
- ಸ್ಥಳೀಯವಾಗಿ **'ನಿಲ್ಸಕಲ್ಲು '** ಅಥವಾ **'ಸ್ವತಂತ್ರವಾಗಿ ನಿಂತಿರುವ ಕಲ್ಲುಗಳು'** ಎಂದು ಕರೆಯಲ್ಪಡುವ ಈ ರಚನೆಗಳು, **ಬೃಹತ್ ಶಿಲಾಯುಗದ** ಅವಧಿಗೆ ಸೇರಿವೆ ಎಂದು ತಜ್ಞರು ಗುರುತಿಸಿದ್ದಾರೆ.

### ಪತ್ತೆಯಾದ ಸ್ಥಳಗಳು ಮತ್ತು ಅಳತೆಗಳು:

### ಈ ಎರಡು ಮೆನ್ಹಿರ್‌ಗಳು ಪ್ರತ್ಯೇಕ ಗ್ರಾಮಗಳಲ್ಲಿ ಪತ್ತೆಯಾಗಿದ್ದು, ವಿಶಿಷ್ಟ ಆಯಾಮಗಳನ್ನು ಹೊಂದಿವೆ:

1. **ಹಿಲ್ಕೋಡ್ ಮೆನ್ಹಿರ್:** ನೇರಳಕಟ್ಟೆ-ಅಜ್ರಿ ರಸ್ತೆಯಲ್ಲಿರುವ ಹಿಲ್ಕೋಡ್‌ನಲ್ಲಿ ಒಂದು ಮೆನ್ಹಿರ್ ಪತ್ತೆಯಾಗಿದೆ. ಈ ನಿರ್ದಿಷ್ಟ 'ನಿಲ್ಸ್‌ಕಲ್' ಸುಮಾರು **135 ಸೆಂ.ಮೀ** ಎತ್ತರವಿದೆ.
2. **ಮಾವಿನಕೆರೆ ಮೆನ್ಹಿರ್:** ಎರಡನೇ ಮೆನ್ಹಿರ್ ಕೆಂಚನೂರು ಗ್ರಾಮದ ಮಾವಿನಕೆರೆಯಲ್ಲಿ ಪತ್ತೆಯಾಗಿದೆ. ಇದು ಸುಮಾರು **112 ಸೆಂ.ಮೀ** ಎತ್ತರವಿದ್ದು , ವಾಯುವ್ಯ ದಿಕ್ಕಿಗೆ ಸ್ವಲ್ಪ ವಾಲಿದಂತೆ ಕಂಡುಬರುತ್ತದೆ.

### "ನಿಲ್ಸಕಲ್ಲು" ಎಂದರೇನು?

- **ಭೂಮಿಯ ಮೇಲೆ ಲಂಭವಾಗಿ, ಸ್ವಲ್ಪ ವಾಲಿದಂತೆ ನಿಂತು ಬೃಹತ್ ಶಿಲಾಯುಗದ ಸಮಾಧಿಯ ಮೇಲೆ ಅಥವಾ ಸಮಾಧಿ ಸಮೀಪದಲ್ಲಿ ಮೃತರ ಸ್ಮರಣಾರ್ಥವಾಗಿ ನಿಲ್ಲಿಸಲಾದ ಒರಟಾದ ಬೃಹತ್ ಶಿಲೆಗಳನ್ನು ನಿಲ್ಸಕಲ್ಲು, ನಿಂತಿಕಲ್ಲು, ಗರ್ಭಿಣಿಕಲ್ಲು, ಆನೆಕಲ್ಲು, ರಕ್ಕಸಕಲ್ಲು ಹೆಸರುಗಳಿಂದ ಕರೆಯಲಾಗುತ್ತದೆ.** ದಕ್ಷಿಣ ಭಾರತದೆಲ್ಲೆಡೆ ಇಂತಹ ಕಲ್ಲುಗಳು ಕಂಡುಬರುತ್ತವೆ.

## 45. ಕರ್ನಾಟಕ ವಿಕಲಚೇತನರ ಹಕ್ಕುಗಳ ಮಸೂದೆ, 2025

### ಇದೀಗ ಸುದ್ದಿಯಲ್ಲಿದೆ:

- ಹೊಸ ಕರ್ನಾಟಕ ವಿಕಲಚೇತನರ ಹಕ್ಕುಗಳ ಮಸೂದೆ, 2025 ರ ಮೂಲಕ ವಿಕಲಚೇತನರ ಹಕ್ಕುಗಳನ್ನು ವಿಸ್ತರಿಸಲು ಕರ್ನಾಟಕ ಸರ್ಕಾರ ಮುಂದಾಗಿದೆ.

### ಮಸೂದೆಯ ಪ್ರಮುಖಾಂಶಗಳು:

- **ಉದ್ಯೋಗ ಮೀಸಲಾತಿ: 20 ಅಥವಾ ಅದಕ್ಕಿಂತ ಹೆಚ್ಚು** ಉದ್ಯೋಗಿಗಳನ್ನು ಹೊಂದಿರುವ ರಾಜ್ಯದ ಎಲ್ಲಾ **ಖಾಸಗಿ** ಸಂಸ್ಥೆಗಳಲ್ಲಿ ವಿಕಲಚೇತನರಿಗೆ **ಶೇ. 5 ರಷ್ಟು** ಮೀಸಲಾತಿಯನ್ನು ಕಲ್ಪಿಸುವ 'ಉದ್ಯೋಗ ಮತ್ತು ಶಿಕ್ಷಣದಲ್ಲಿ ಕರ್ನಾಟಕ ವಿಕಲಚೇತನರ ಹಕ್ಕುಗಳ ಮಸೂದೆ, 2025' ರ ಕರಡನ್ನು ರಾಜ್ಯ ಸರ್ಕಾರವು ಬಿಡುಗಡೆ ಮಾಡಿದೆ.
- **ಶೈಕ್ಷಣಿಕ ಮೀಸಲಾತಿ:** ಶಿಕ್ಷಣ ಸಂಸ್ಥೆಗಳು ಪ್ರತಿ ಕೋರ್ಸ್‌ನಲ್ಲಿ **ಶೇ. 10 ರಷ್ಟು** ಆಸನಗಳನ್ನು ವಿಕಲಚೇತನ ವಿದ್ಯಾರ್ಥಿಗಳಿಗೆ ಕಾಯ್ದಿರಿಸುವುದನ್ನು ಈ ಕರಡು ಮಸೂದೆ ಕಡ್ಡಾಯಗೊಳಿಸಿದೆ. ಉದ್ಯೋಗ ಮತ್ತು ಉನ್ನತ ಶಿಕ್ಷಣದಲ್ಲಿ ಒಳಗೊಳ್ಳುವಿಕೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಇದೊಂದು ಮಹತ್ವದ ಹೆಜ್ಜೆಯಾಗಿದೆ.

### ಅನುಷ್ಠಾನದ ವಿವರಗಳು

1. **ಹಂತ-ಹಂತವಾಗಿ ಜಾರಿ:** ಕರಡು ಮಸೂದೆಯು **ಖಾಸಗಿ ವಲಯದಲ್ಲಿ ಶೇ. 5 ರಷ್ಟು ಉದ್ಯೋಗ** ಮೀಸಲಾತಿಯನ್ನು ಹಂತಹಂತವಾಗಿ ಜಾರಿಗೆ ತರಲು ನಿರ್ಧರಿಸಿದೆ.
2. **ನಿಯಂತ್ರಣ ಮತ್ತು ವರದಿ:** ಪ್ರಸ್ತಾಪಿತ ರಾಜ್ಯ ನಿಯಂತ್ರಕ ಪ್ರಾಧಿಕಾರವು ಸೂಚಿಸುವ ಮಾನದಂಡಗಳ ಆಧಾರದ ಮೇಲೆ ಕಂಪನಿಗಳು ಈ ಹುದ್ದೆಗಳನ್ನು ಹಂಚಿಕೆ ಮಾಡಬೇಕು. ಸಂಸ್ಥೆಗಳು **ವಾರ್ಷಿಕ ಅನುಸರಣಾ ವರದಿಗಳನ್ನು ಸಲ್ಲಿಸುವುದು ಕಡ್ಡಾಯವಾಗಿದೆ.** ಭರ್ತಿಯಾಗದ ಹುದ್ದೆಗಳನ್ನು ಮುಂದಿನ ಮೂರು ನೇಮಕಾತಿಗಳವರೆಗೆ ಮುಂದುವರೆಸಲು ಅವಕಾಶವಿದೆ.
3. **ವಿನಾಯಿತಿಗಳು :** ಸಮಂಜಸವಾದ ಸೌಕರ್ಯಗಳನ್ನು ಒದಗಿಸಿದಾಗಲೂ, ಅತ್ಯಗತ್ಯ ಉದ್ಯೋಗ ಕಾರ್ಯಗಳನ್ನು ನಿರ್ವಹಿಸಲು ಅಸಾಧ್ಯವಾದ ಸಂದರ್ಭಗಳಲ್ಲಿ ಮಾತ್ರ ವಿನಾಯಿತಿಗಳನ್ನು ನೀಡಲಾಗುತ್ತದೆ.
4. **ಶಿಕ್ಷಣದಲ್ಲಿ ನಿರ್ದಿಷ್ಟತೆ:** ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಮಸೂದೆಯು **ಶೇ. 10 ರಷ್ಟು** ಮೀಸಲಾತಿಯನ್ನು 'ಸಂಸ್ಥೆಯ ಮಟ್ಟದಲ್ಲಿ' ಅನ್ವಯಿಸದೆ, **'ಕೋರ್ಸ್-ನಿರ್ದಿಷ್ಟವಾಗಿ'** ಜಾರಿಗೊಳಿಸಲು ಸೂಚಿಸಿದೆ. ಕಾಲೇಜುಗಳು ವಿವಿಧ ವಿಭಾಗಗಳ ಸೀಟುಗಳನ್ನು ಸರಾಸರಿ ಮಾಡಿ ಮೀಸಲಾತಿ ಪ್ರಮಾಣವನ್ನು ತಗ್ಗಿಸುವುದನ್ನು ತಡೆಯಲು ಈ ಕ್ರಮ ಕೈಗೊಳ್ಳಲಾಗಿದೆ.

## 46. ಚಾಮರಾಜನಗರದಲ್ಲಿ ಬೃಹತ್ ಶಿಲಾಯುಗದ ಉತ್ಖನನ: ಅಪರೂಪದ ಶವಸಂಸ್ಕಾರ ಪದ್ಧತಿ ಮತ್ತು ಶಿಲಾ ಕಲೆ ಪತ್ತೆ

### ಇದೀಗ ಸುದ್ದಿಯಲ್ಲಿದೆ:

- ಚಾಮರಾಜನಗರ ಜಿಲ್ಲೆಯ ದೊಡ್ಡಾಲತ್ತೂರಿನಲ್ಲಿ ನಡೆದ ಇತ್ತೀಚಿನ ಉತ್ಖನನಗಳು, ದಕ್ಷಿಣ ಕರ್ನಾಟಕದ ಆರಂಭಿಕ ಬೃಹತ್ ಶಿಲಾಯುಗದ **ಶವಸಂಸ್ಕಾರ ಪದ್ಧತಿ** ಮತ್ತು ಸಂಪ್ರದಾಯಗಳ ಮೇಲೆ ಹೊಸ ಬೆಳಕು ಚೆಲ್ಲಿವೆ.
- ಇಲ್ಲಿ ಕಂಡುಬಂದಿರುವ ಅಸಾಮಾನ್ಯ ವಿನ್ಯಾಸಗಳು ಮತ್ತು ಬಂಡೆಗಳ ಮೇಲಿನ **ಅಪರೂಪದ ಕೆತ್ತನೆಗಳು** ಐತಿಹಾಸಿಕವಾಗಿ ಮಹತ್ವದ್ದಾಗಿವೆ.

### ಸ್ಥಳ ಮತ್ತು ಹಿನ್ನೆಲೆ:

- ಹನೂರು ತಾಲೂಕಿನ ಕೌದಳ್ಳಿಯ ನೈಋತ್ಯಕ್ಕೆ 5 ಕಿ.ಮೀ ದೂರದಲ್ಲಿರುವ **ದೊಡ್ಡಾಲತ್ತೂರು,** ಈ ಪ್ರದೇಶದಲ್ಲಿ ಸುಸ್ಥಿತಿಯಲ್ಲಿರುವ ಕೆಲವೇ ಕೆಲವು ಬೃಹತ್ ಶಿಲಾಯುಗದ ತಾಣಗಳಲ್ಲಿ ಒಂದಾಗಿದೆ. ಇಲ್ಲಿ ಹೆಚ್ಚಿನ ಸಂಖ್ಯೆಯ ಸಮಾಧಿಗಳು ಕಂಡು ಬರುತ್ತವೆ.

### ಉತ್ಖನನದ ಪ್ರಮುಖಾಂಶಗಳು

- ಸಮಾಧಿಗಳ ವಿಧಗಳು:- ಉತ್ಖನನದಲ್ಲಿ ಒಟ್ಟು **13 ಸಮಾಧಿಗಳನ್ನು** ಪತ್ತೆಹಚ್ಚಲಾಗಿದೆ. ಇವು ವಿವಿಧ ವ್ಯಾಸದ ನೈಸರ್ಗಿಕ ಬಂಡೆಗಳಿಂದ ನಿರ್ಮಿಸಲಾದ **'ಶಿಲಾವೃತ್ತಗಳು'** ಮತ್ತು **'ಶಿಲೆಗಳ ರಾಶಿಯ ವೃತ್ತಗಳನ್ನು'** ಒಳಗೊಂಡಿವೆ.
  - ಇವುಗಳಲ್ಲಿ ನಾಲ್ಕು **'ಕಲ್ಮನೆ ಸಮಾಧಿಗಳು'** ಆಗಿದ್ದರೆ, ಉಳಿದವು **'ಬರಣಿ ಸಮಾಧಿಗಳು'** ಆಗಿವೆ.
- ಪತ್ತೆಯಾದ ಅವಶೇಷಗಳು:- ಬೃಹತ್ ಶಿಲಾಯುಗಕ್ಕೆ ವಿಶಿಷ್ಟವಾದ **ಕಪ್ಪು ಮತ್ತು ಕೆಂಪು ಮಡಕೆಗಳು , ಕಪ್ಪು ಮಡಕೆಗಳು, ಕೆಂಪು ಮಡಕೆಗಳು ಹಾಗೂ ಕಬ್ಬಿಣದ ವಸ್ತುಗಳು** ಇಲ್ಲಿ ದೊರೆತಿವೆ. ಜೊತೆಗೆ **ಅಸ್ಥಿಪಂಜರ ಮತ್ತು ಪ್ರಾಣಿಗಳ ಅವಶೇಷಗಳು ಹಾಗೂ ಕೆಲವು ಮಣಿಗಳು** ಕೂಡ ಲಭ್ಯವಾಗಿವೆ.
- ವಿಶೇಷ ಆವಿಷ್ಕಾರ: ಸಂಶೋಧಕರ ಪ್ರಕಾರ, ಇಲ್ಲಿ ಪತ್ತೆಯಾದ ಅತ್ಯಂತ ಕುತೂಹಲಕಾರಿ ವಸ್ತುವೆಂದರೆ **ಕಬ್ಬಿಣದ ವಸ್ತು.** ಇದು **ವೃತ್ತಾಕಾರದಲ್ಲಿದ್ದು, ಎರಡೂ ಬದಿಗಳಲ್ಲಿ ಎರಡು ಕುಣಿಕೆಗಳನ್ನು ಹೊಂದಿದೆ** ಮತ್ತು ಇದು **ಕಬ್ಬಿಣದ ಗುರಾಣಿಯನ್ನು** ಹೋಲುತ್ತದೆ.
  - ಈ ಸಮಾಧಿಯಲ್ಲಿ **ಕೊಡಲಿ, ಬಾಣ ಮತ್ತು ಎರಡು ಬಾಯಿಯ ಕತ್ತಿಯಂತಹ** ಕಬ್ಬಿಣದ ಆಯುಧಗಳು ಪತ್ತೆಯಾಗಿವೆ. ಇದೇ **ಸಮಾಧಿಯ ಬಂಡೆಗಳ ಮೇಲೆ ಮಾನವ ಆಕೃತಿಗಳನ್ನು ಕೆತ್ತಲಾಗಿದೆ.**
  - ಕರ್ನಾಟಕದ ಈ ಭಾಗದಲ್ಲಿ ಶಿಲಾ ಕಲೆ ಅಪರೂಪವಾಗಿರುವುದರಿಂದ ಈ ಆವಿಷ್ಕಾರವು ಐತಿಹಾಸಿಕವಾಗಿ ಮಹತ್ವದ್ದಾಗಿದೆ.
- **ಕಾಲನಿರ್ಣಯ:-** ಬರಣಿ ಮತ್ತು ಕಲ್ಮನೆ ಸಮಾಧಿಗಳಿಂದ ಸಂಗ್ರಹಿಸಲಾದ ಇದ್ದಿಲಿನ ಮಾದರಿಗಳನ್ನು **'AMS ಕಾರ್ಬನ್-14 ವಿಶ್ಲೇಷಣೆ'ಗೆ** ಒಳಪಡಿಸಲಾಗಿದೆ. ಇದರನ್ವಯ, ಈ ಸಮಾಧಿಗಳು **ಕ್ರಿ.ಪೂ. 6 ನೇ ಶತಮಾನದಿಂದ ಕ್ರಿ.ಶ. 4 ನೇ ಶತಮಾನದ** ಕಾಲಘಟ್ಟಕ್ಕೆ ಸೇರಿವೆ ಎಂದು ನಿರ್ಧರಿಸಲಾಗಿದೆ. ಇದು ಪರ್ಯಾಯ ದ್ವೀಪ ಭಾರತದ ಇತರೆಡೆಗಳಲ್ಲಿ ಕಂಡುಬರುವ **ಬೃಹತ್ ಶಿಲಾಯುಗದ ವಾಸಸ್ಥಾನದ** ಹಂತಗಳೊಂದಿಗೆ ಹೊಂದಿಕೆಯಾಗುತ್ತದೆ.

## 47. ಸಾಲುಮರದ ತಿಮ್ಮಕ್ಕ



### ಇದೀಗ ಸುದ್ದಿಯಲ್ಲಿ:

- ಪದ್ಮಶ್ರೀ ಪುರಸ್ಕೃತೆ ಹಾಗೂ ಪರಿಸರ ಸಂರಕ್ಷಣೆಯ ಸಾಕಾರಮೂರ್ತಿ, ಸುಮಾರು 385 ಆಲದ ಮರಗಳನ್ನು ನೆಟ್ಟು ಪೋಷಿಸಿದ ಕೀರ್ತಿಗೆ ಭಾಜನರಾಗಿದ್ದ ಸಾಲುಮರದ ತಿಮ್ಮಕ್ಕ ಅವರು ಬೆಂಗಳೂರಿನಲ್ಲಿ ತಮ್ಮ 114 ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ.

### ವೈಯಕ್ತಿಕ ಪರಿಚಯ:

- **ಪೂರ್ಣ ಹೆಸರು:** ಸಾಲುಮರದ ತಿಮ್ಮಕ್ಕ (ಮೂಲ ನಾಮ: ತಿಮ್ಮಕ್ಕ).
- **ಬಿರುದುಗಳು:** ಇವರು **"ವೃಕ್ಷ ಮಾತೆ" ಮತ್ತು "ಸಾಲುಮರದ ತಿಮ್ಮಕ್ಕ"** ಎಂದೇ ಜಗದ್ವಿಖ್ಯಾತರಾಗಿದ್ದಾರೆ.
- **ಜನ್ಮಸ್ಥಳ:** ಇವರು ಕರ್ನಾಟಕದ **ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನಲ್ಲಿ** ಜನಿಸಿದರು.
- **ಕಾರ್ಯಕ್ಷೇತ್ರ:** ಇವರ ಪರಿಸರ ಕಾಳಜಿಯ ಕಾರ್ಯಗಳು **ರಾಮನಗರ ಜಿಲ್ಲೆಯ ಮಾಗಡಿ ತಾಲೂಕಿನ ಹುಲಿಕಲ್ ಗ್ರಾಮದ** ಸುತ್ತಮುತ್ತ ಕೇಂದ್ರೀಕೃತವಾಗಿದ್ದವು.
- **ಪತಿ:** ಇವರು **ಬಿಕ್ಕಲ ಚಿಕ್ಕಯ್ಯ** ಅವರನ್ನು ವಿವಾಹವಾಗಿದ್ದರು. 1991 ರಲ್ಲಿ ಚಿಕ್ಕಯ್ಯ ಅವರು ನಿಧನರಾಗುವವರೆಗೂ, ಮರಗಳನ್ನು ನೆಡುವ ಕಾಯಕದಲ್ಲಿ ತಿಮ್ಮಕ್ಕ ಅವರಿಗೆ ಜೊತೆಯಾಗಿದ್ದರು.
- **ಜೀವಿತಾವಧಿ:** ಇವರು 2025 ರ ನವೆಂಬರ್ 14 ರಂದು, ಅಂದಾಜು 114 ವರ್ಷ ವಯಸ್ಸಿನಲ್ಲಿ ನಿಧನರಾದರು.

### ಪರಿಸರ ಕ್ಷೇತ್ರದ ಸಾಧನೆ

- ಸಸ್ಯ ಪ್ರಭೇದ: ಇವರು ಪ್ರಮುಖವಾಗಿ **ಆಲದ ಮರಗಳನ್ನು** (ವೈಜ್ಞಾನಿಕ ಹೆಸರು: ಫಿಕಸ್ ಬೆಂಗಾಲೆನ್ಸಿಸ್) ನೆಟ್ಟರು.
- **ಸ್ಥಳ: ಹುಲಿಕಲ್ ಮತ್ತು ಕುದೂರು ನಡುವಿನ ರಾಜ್ಯ ಹೆದ್ದಾರಿ-94** ರ 4 ರಿಂದ 4.5 ಕಿ.ಮೀ ಉದ್ದದ ರಸ್ತೆಯ ಇಕ್ಕೆಲಗಳಲ್ಲಿ ಈ ಮರಗಳನ್ನು ನೆಟ್ಟು ಪೋಷಿಸಿದ್ದಾರೆ.

- **ಮರಗಳ ಸಂಖ್ಯೆ:** ಈ ನಿರ್ದಿಷ್ಟ ಸಾಲಿನಲ್ಲಿ ಅವರು **385 ಆಲದ ಮರಗಳನ್ನು** ನೆಟ್ಟು ಬೆಳೆಸಿದ್ದಾರೆ.
- **ಒಟ್ಟು ಕೊಡುಗೆ:** ತಮ್ಮ ಜೀವಿತಾವಧಿಯಲ್ಲಿ ಅವರು ಒಟ್ಟಾರೆಯಾಗಿ **8,000 ಕ್ಕೂ ಹೆಚ್ಚು ಮರಗಳನ್ನು** ನೆಟ್ಟಿದ್ದಾರೆ ಎಂದು ಅಂದಾಜಿಸಲಾಗಿದೆ.
- **ವಿಧಾನ :** ಸಸಿಗಳ ರಕ್ಷಣೆಗಾಗಿ ಮುಳ್ಳಿನ ಪೊದೆಗಳನ್ನು ಬೇಲಿಯನ್ನಾಗಿ ಬಳಸುತ್ತಿದ್ದರು ಮತ್ತು ಪ್ರತಿದಿನ 4 ಕಿಲೋಮೀಟರ್‌ಗಳಷ್ಟು ದೂರ ನಡೆದು, ಕೊಡಗಳಲ್ಲಿ ನೀರು ಹೊತ್ತು ತಂದು ಸಸಿಗಳಿಗೆ ಉಣಿಸುತ್ತಿದ್ದರು.

### ಪ್ರಮುಖ ಪ್ರಶಸ್ತಿಗಳು ಮತ್ತು ಮನ್ನಣೆಗಳು

- **ಸಂಪುಟ ದರ್ಜೆ ಸ್ಥಾನಮಾನ(2022):** ಕರ್ನಾಟಕ ಸರ್ಕಾರವು ಇವರಿಗೆ ಸಚಿವ ಸಂಪುಟ ದರ್ಜೆ ಸ್ಥಾನಮಾನದೊಂದಿಗೆ **"ಪರಿಸರ ರಾಯಭಾರಿ"** ಎಂಬ ಗೌರವವನ್ನು ನೀಡಿತ್ತು.
- **ಪದ್ಮಶ್ರೀ (2019):** ಅಂದಿನ **ರಾಷ್ಟ್ರಪತಿ ರಾಮ್ ನಾಥ್ ಕೋವಿಂದ್ ಅವರಿಂದ** ಭಾರತದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳಲ್ಲಿ ಒಂದಾದ 'ಪದ್ಮಶ್ರೀ' ಪ್ರಶಸ್ತಿಯನ್ನು ಇವರು ಸ್ವೀಕರಿಸಿದರು.
- **ಬಿಬಿಸಿ 100 ಮಹಿಳೆಯರು (2016):** ಬಿಬಿಸಿ ಸಂಸ್ಥೆಯು ಪಟ್ಟಿ ಮಾಡಿದ ವಿಶ್ವದ ಅತ್ಯಂತ ಪ್ರಭಾವಶಾಲಿ ಮತ್ತು ಸ್ಫೂರ್ತಿದಾಯಕ ಮಹಿಳೆಯರ ಪಟ್ಟಿಯಲ್ಲಿ ಇವರು ಸ್ಥಾನ ಪಡೆದಿದ್ದರು.
- **ನಾಡೋಜ ಪ್ರಶಸ್ತಿ (2010): ಹಂಪಿ ಕನ್ನಡ ವಿಶ್ವವಿದ್ಯಾಲಯವು** ಇವರಿಗೆ ಪ್ರತಿಷ್ಠಿತ 'ನಾಡೋಜ' ಪ್ರಶಸ್ತಿ ನೀಡಿ ಗೌರವಿಸಿದೆ.
- **ರಾಷ್ಟ್ರೀಯ ನಾಗರಿಕರ ಪ್ರಶಸ್ತಿ (1995):** ತಳಮಟ್ಟದಲ್ಲಿ ಇವರು ಮಾಡಿದ ಪರಿಸರ ಸೇವೆಗಾಗಿ **ಭಾರತ ಸರ್ಕಾರವು** ಈ ಪ್ರಶಸ್ತಿ ನೀಡಿ ಗೌರವಿಸಿತು.
- **ಇಂದಿರಾ ಪ್ರಿಯದರ್ಶಿನಿ ವೃಕ್ಷಮಿತ್ರ ಪ್ರಶಸ್ತಿ (1997):** ಅರಣ್ಯೀಕರಣಕ್ಕೆ ನೀಡಿದ ಅನನ್ಯ ಕೊಡುಗೆಗಾಗಿ ಇವರು ಈ ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದರು.
- **ಅಂತರರಾಷ್ಟ್ರೀಯ ಗೌರವ: ಅಮೆರಿಕದ ಲಾಸ್ ಏಂಜಲೀಸ್‌ನಲ್ಲಿರುವ** ಪರಿಸರ ಸಂಸ್ಥೆಯೊಂದಕ್ಕೆ **"ತಿಮ್ಮಕ್ಕಾಸ್ ರಿಸೋರ್ಸಸ್ ಫಾರ್ ಎನ್ವಿರಾನ್ಮೆಂಟಲ್ ಎಜುಕೇಶನ್"** ಎಂದು ಹೆಸರಿಡುವ ಮೂಲಕ ಗೌರವ ಸೂಚಿಸಲಾಗಿದೆ.

### ಸರ್ಕಾರದ ಉಪಕ್ರಮಗಳು ಮತ್ತು ಪರಂಪರೆ

- **ಸಾಲುಮರದ ತಿಮ್ಮಕ್ಕ ವೃಕ್ಷ ಉದ್ಯಾನವನ:** ರಾಜ್ಯದಲ್ಲಿ ಹಸಿರು ಹೊದಿಕೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ, ಕರ್ನಾಟಕ ರಾಜ್ಯ ಸರ್ಕಾರವು ಪ್ರತಿ **ವಿಧಾನಸಭಾ ಕ್ಷೇತ್ರದಲ್ಲೂ** ತಿಮ್ಮಕ್ಕನವರ ಹೆಸರಿನಲ್ಲಿ ವೃಕ್ಷ ಉದ್ಯಾನವನವನ್ನು ಸ್ಥಾಪಿಸಿದೆ.
- **ಮರಗಳ ಸಂರಕ್ಷಣೆ:** 2019 ರಲ್ಲಿ, ಬಾಗೇಪಲ್ಲಿ-ಹಲಗೂರು ರಸ್ತೆ ಅಗಲೀಕರಣ ಯೋಜನೆಯನ್ನು ಜಾರಿಗೊಳಿಸುವಾಗ, ತಿಮ್ಮಕ್ಕನವರು ನೆಟ್ಟ ಪಾರಂಪರಿಕ ಆಲದ ಮರಗಳನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಯೋಜನೆಯ ನಕ್ಷೆಯನ್ನೇ ಬದಲಾಯಿಸಲಾಯಿತು.
- **ಸ್ಮಾರಕ ನಿಧಿ (2025):** ತಿಮ್ಮಕ್ಕ ಅವರ ನಿಧನದ ನಂತರ, ಅವರ ಹೆಸರಿನಲ್ಲಿ **ವಾರ್ಷಿಕ ಪರಿಸರ ಪ್ರಶಸ್ತಿಯನ್ನು** ಸ್ಥಾಪಿಸಲು ಕರ್ನಾಟಕ ಸರ್ಕಾರವು **₹1 ಕೋಟಿಗಳ 'ಮೂಲ ನಿಧಿ'**ಯನ್ನು ಘೋಷಿಸಿದೆ.
- **114 ಸಸಿಗಳು:** ನಿಧನದ ವೇಳೆಗಿದ್ದ ಅವರ ವಯಸ್ಸಿನ ಗೌರವಾರ್ಥವಾಗಿ, ಸರ್ಕಾರವು ರಾಜ್ಯದ **ಆಯ್ದ ವಿಶಿಷ್ಟ ಸ್ಥಳಗಳಲ್ಲಿ 114 ಸಸಿಗಳನ್ನು ನೆಡುವುದಾಗಿ ಘೋಷಿಸಿದೆ.**

# ಅನನ್ಯ ಸಾಧನ - ಸಂಕ್ಷಿಪ್ತ ಸುದ್ದಿಗಳು

## ಪ್ರಮುಖ ದಿನಾಚರಣೆಗಳು

### 1. ವಿಶ್ವ ಸುನಾಮಿ ಜಾಗೃತಿ ದಿನ

- ಆಚರಿಸುವ ದಿನ: **ನವೆಂಬರ್ 5**
- ಸಂಸ್ಥೆ: **ವಿಶ್ವಸಂಸ್ಥೆ (UNDRR)**
- **ಉದ್ದೇಶ:** ಸುನಾಮಿ ಅಪಾಯಗಳು, ಮುನ್ನೆಚ್ಚರಿಕೆ ವ್ಯವಸ್ಥೆಗಳು ಮತ್ತು ಕರಾವಳಿ ಸ್ಥಿತಿಸ್ಥಾಪಕತ್ವದ ಕುರಿತು ಜನಜಾಗೃತಿ ಮೂಡಿಸುವುದು.
- 2025 ರ ಧ್ಯೇಯವಾಕ್ಯ: **"ಸುನಾಮಿಗೆ ಸನ್ನದ್ಧರಾಗಿರಿ: ಸುನಾಮಿ ಪೂರ್ವಸಿದ್ಧತೆಯಲ್ಲಿ ಹೂಡಿಕೆ ಮಾಡಿ".**

### 2. ಶಾಂತಿ ಮತ್ತು ಅಭಿವೃದ್ಧಿಗಾಗಿ ವಿಶ್ವ ವಿಜ್ಞಾನ ದಿನ

- ಆಚರಿಸುವ ದಿನ: **ನವೆಂಬರ್ 10**
- ಸಂಸ್ಥೆ: **ಯುನೆಸ್ಕೋ**
- **ಉದ್ದೇಶ:** ಸಮಾಜದ ಒಳಿತಿಗಾಗಿ ಮತ್ತು ಶಾಂತಿ ನಿರ್ಮಾಣಕ್ಕಾಗಿ **ವಿಜ್ಞಾನದ ಜವಾಬ್ದಾರಿಯುತ** ಬಳಕೆಯನ್ನು ಉತ್ತೇಜಿಸುವುದು.
- 2025 ರ ಧ್ಯೇಯವಾಕ್ಯ: **"ನಂಬಿಕೆ, ಪರಿವರ್ತನೆ ಮತ್ತು ನಾಳೆ: 2050 ಕ್ಕೆ ನಮಗೆ ಬೇಕಾಗಿರುವ ವಿಜ್ಞಾನ".**

### 3. ರಾಷ್ಟ್ರೀಯ ಶಿಕ್ಷಣ ದಿನ

- ಆಚರಿಸುವ ದಿನ: **ನವೆಂಬರ್ 11**
- ಸಂಸ್ಥೆ: **ಶಿಕ್ಷಣ ಸಚಿವಾಲಯ,** ಭಾರತ ಸರ್ಕಾರ.
- **ಉದ್ದೇಶ:** ಇದನ್ನು **ಮೌಲಾನಾ ಅಬುಲ್ ಕಲಾಂ ಆಜಾದ್** ಅವರ ಜನ್ಮದಿನದ ಸ್ಮರಣಾರ್ಥವಾಗಿ ಆಚರಿಸಲಾಗುತ್ತದೆ ; ಶೈಕ್ಷಣಿಕ ಸುಧಾರಣೆಗಳಿಗೆ ಒತ್ತು ನೀಡುವುದು ಇದರ ಮುಖ್ಯ ಉದ್ದೇಶವಾಗಿದೆ.
- 2025 ರ ಧ್ಯೇಯವಾಕ್ಯ: **"ತಂತ್ರಜ್ಞಾನ + ನೈತಿಕತೆ = ಕಲಿಕೆಯ ಭವಿಷ್ಯ".**

### 4. ಸಾರ್ವಜನಿಕ ಸೇವಾ ಪ್ರಸಾರ ದಿನ (ಭಾರತ)

- ಆಚರಿಸುವ ದಿನ: **ನವೆಂಬರ್ 12**
- ಸಂಸ್ಥೆ: **ಪ್ರಸಾರ ಭಾರತಿ / ಆಕಾಶವಾಣಿ**
- **ಉದ್ದೇಶ:** 1947 ರಲ್ಲಿ **ಮಹಾತ್ಮ ಗಾಂಧೀಜಿಯವರು ಆಕಾಶವಾಣಿ ದೆಹಲಿ ಕೇಂದ್ರಕ್ಕೆ** ಭೇಟಿ ನೀಡಿದ ಐತಿಹಾಸಿಕ ಕ್ಷಣವನ್ನು ಸ್ಮರಿಸುವುದು.
- 2025 ರ ಧ್ಯೇಯವಾಕ್ಯ: **"ಪ್ರಸಾರ: ಒಂದು ಸಾರ್ವಜನಿಕ ಸಂಪನ್ಮೂಲ".**

## 5. ವಿಶ್ವ ಮಧುಮೇಹ ದಿನ

- ಆಚರಿಸುವ ದಿನ: **ನವೆಂಬರ್ 14**
- ಸಂಸ್ಥೆ: **ಅಂತರರಾಷ್ಟ್ರೀಯ ಮಧುಮೇಹ ಒಕ್ಕೂಟ (IDF) ಮತ್ತು ವಿಶ್ವ ಆರೋಗ್ಯ ಸಂಸ್ಥೆ (WHO).**
- **ಉದ್ದೇಶ:** ಮಧುಮೇಹ ತಡೆಗಟ್ಟುವಿಕೆ, ರೋಗನಿರ್ಣಯ ಮತ್ತು ಚಿಕಿತ್ಸೆಯ ಬಗ್ಗೆ ಜಾಗೃತಿ ಮೂಡಿಸುವುದು.
- 2025 ರ ಧ್ಯೇಯವಾಕ್ಯ: **"ಜೀವನದ ಎಲ್ಲಾ ಹಂತಗಳಲ್ಲಿ ಮಧುಮೇಹ".**

## 6. ಮಕ್ಕಳ ದಿನಾಚರಣೆ

- ಆಚರಿಸುವ ದಿನ: **ನವೆಂಬರ್ 14**
- ಸಂಸ್ಥೆ: **ಭಾರತ ಸರ್ಕಾರ**
- **ಉದ್ದೇಶ:** ಈ ದಿನಾಚರಣೆಯನ್ನು **ಪಂಡಿತ್ ಜವಾಹರಲಾಲ್ ನೆಹರು** ಅವರ ಜನ್ಮದಿನಾಚರಣೆಯ ನೆನಪಿನಲ್ಲಿ ಆಚರಿಸಲಾಗುತ್ತದೆ; ಮಕ್ಕಳ ಕಲ್ಯಾಣ ಮತ್ತು ಹಕ್ಕುಗಳನ್ನು ಉತ್ತೇಜಿಸುವುದು ಇದರ ಮುಖ್ಯ ಉದ್ದೇಶವಾಗಿದೆ.
- 2025 ರ ಧ್ಯೇಯವಾಕ್ಯ: **"ಪ್ರತಿಯೊಂದು ಮಗುವಿಗೆ, ಪ್ರತಿಯೊಂದು ಹಕ್ಕು".**

## 7. ಅಂತರರಾಷ್ಟ್ರೀಯ ಸಹಿಷ್ಣುತಾ ದಿನ

- ಆಚರಿಸುವ ದಿನ: **ನವೆಂಬರ್ 16**
- ಸಂಸ್ಥೆ: **ವಿಶ್ವಸಂಸ್ಥೆ**
- **ಉದ್ದೇಶ:** ಸಮಾಜದಲ್ಲಿ ಸಹಿಷ್ಣುತೆ, ವೈವಿಧ್ಯತೆ ಮತ್ತು ಅಹಿಂಸಾ ತತ್ವಗಳನ್ನು ಉತ್ತೇಜಿಸುವುದು.
- 2025 ರ ಧ್ಯೇಯವಾಕ್ಯ: **"ವಿಶ್ವದಾದ್ಯಂತ ಪರಸ್ಪರ ಗೌರವ ಮತ್ತು ತಿಳುವಳಿಕೆಯನ್ನು ಉತ್ತೇಜಿಸುವುದು"**

## 8. ಅಂತರರಾಷ್ಟ್ರೀಯ ಪುರುಷರ ದಿನ

- ಆಚರಿಸುವ ದಿನ: **ನವೆಂಬರ್ 19**
- ಸಂಸ್ಥೆ: **ಅಂತರರಾಷ್ಟ್ರೀಯ ಪುರುಷರ ದಿನದ ಸಮಿತಿ**
- **ಉದ್ದೇಶ:** ಪುರುಷರ ಆರೋಗ್ಯ, ಲಿಂಗ ಸಮಾನತೆ ಮತ್ತು ಜವಾಬ್ದಾರಿಯುತ ಪುರುಷ ಲಕ್ಷಣಗಳನ್ನು ಉತ್ತೇಜಿಸುವುದು.
- 2025 ರ ಧ್ಯೇಯವಾಕ್ಯ: **"ಪುರುಷರು ಮತ್ತು ಬಾಲಕರನ್ನು ಸಂಭ್ರಮಿಸುವುದು".**

## 9. ವಿಶ್ವ ಶೌಚಾಲಯ ದಿನ

- ಆಚರಿಸುವ ದಿನ: **ನವೆಂಬರ್ 19**
- ಸಂಸ್ಥೆ: **ವಿಶ್ವಸಂಸ್ಥೆ / UN-Water**
- **ಉದ್ದೇಶ:** ನೈರ್ಮಲ್ಯದ ಸವಾಲುಗಳು ಮತ್ತು **ಸುಸ್ಥಿರ ಅಭಿವೃದ್ಧಿ ಗುರಿ 6** ರ ಪ್ರಗತಿಯನ್ನು ಎತ್ತಿ ತೋರಿಸುವುದು.
- 2025 ರ ಧ್ಯೇಯವಾಕ್ಯ: **"ಬದಲಾಗುತ್ತಿರುವ ಜಗತ್ತಿನಲ್ಲಿ ನೈರ್ಮಲ್ಯ".**

## 10. ವಿಶ್ವ ಮಕ್ಕಳ ದಿನ

- ಆಚರಿಸುವ ದಿನ: **ನವೆಂಬರ್ 20**
- ಸಂಸ್ಥೆ: **ವಿಶ್ವಸಂಸ್ಥೆ / ಯುನಿಸೆಫ್**
- **ಉದ್ದೇಶ:** ಜಾಗತಿಕವಾಗಿ ಮಕ್ಕಳ ಹಕ್ಕುಗಳು ಮತ್ತು ಕಲ್ಯಾಣಕ್ಕಾಗಿ ಪ್ರತಿಪಾದಿಸುವುದು.
- 2025 ರ ಧ್ಯೇಯವಾಕ್ಯ: **"ನನ್ನ ದಿನ, ನನ್ನ ಹಕ್ಕುಗಳು".**

## 11. ವಿಶ್ವ ದೂರದರ್ಶನ ದಿನ

- ಆಚರಿಸುವ ದಿನ: **ನವೆಂಬರ್ 21**
- ಸಂಸ್ಥೆ: **ವಿಶ್ವಸಂಸ್ಥೆ**
- **ಉದ್ದೇಶ:** ಶಿಕ್ಷಣ ಮತ್ತು ಸಂವಹನ ಮಾಧ್ಯಮವಾಗಿ ದೂರದರ್ಶನದ ಮಹತ್ವವನ್ನು ಗುರುತಿಸುವುದು.

## 12. ಮಹಿಳೆಯರ ಮೇಲಿನ ದೌರ್ಜನ್ಯ ನಿರ್ಮೂಲನೆಗಾಗಿ ಅಂತರರಾಷ್ಟ್ರೀಯ ದಿನ

- ಆಚರಿಸುವ ದಿನ: **ನವೆಂಬರ್ 25**
- ಸಂಸ್ಥೆ: **ವಿಶ್ವಸಂಸ್ಥೆ**
- **ಉದ್ದೇಶ:** ಲಿಂಗ ಆಧಾರಿತ ಹಿಂಸಾಚಾರದ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಜಾಗತಿಕ ಕ್ರಮಗಳನ್ನು ಉತ್ತೇಜಿಸುವುದು.
- 2025 ರ ಧ್ಯೇಯವಾಕ್ಯ: "#ಕ್ಷಮಿಸುವುದೇ ಇಲ್ಲ ಮಹಿಳೆಯರ ಮೇಲಿನ ದೌರ್ಜನ್ಯವನ್ನು ಕೊನೆಗೊಳಿಸಲು ಒಂದಾಗೋಣ" ("#NoExcuse UNiTE to End Violence against Women")

## 13. ಭಾರತದ ಸಂವಿಧಾನದ ದಿನ

- ಆಚರಿಸುವ ದಿನ: **ನವೆಂಬರ್ 26**
- ಸಂಸ್ಥೆ: **ಭಾರತ ಸರ್ಕಾರ**
- **ಉದ್ದೇಶ:** ನವೆಂಬರ್ 26, 1949 ರ ಭಾರತೀಯ ಸಂವಿಧಾನದ ಅಂಗೀಕಾರವನ್ನು ಸ್ಮರಿಸುವುದು.
- 2025 ರ ಧ್ಯೇಯವಾಕ್ಯ: **"ಹಮಾರಾ ಸಂವಿಧಾನ – ಹಮಾರಾ ಸ್ವಾಭಿಮಾನ್"** (ನಮ್ಮ ಸಂವಿಧಾನ – ನಮ್ಮ ಸ್ವಾಭಿಮಾನ).

# ಪ್ರಶಸ್ತಿ-ಪುರಸ್ಕಾರಗಳು

## 1. ನಗರ ಸಾರಿಗೆಯಲ್ಲಿನ ಉತ್ಕೃಷ್ಟತೆಗಾಗಿ ಕೆಎಸ್ಆರ್‌ಟಿಸಿ ಗೆ ರಾಷ್ಟ್ರೀಯ ಪ್ರಶಸ್ತಿ – 2025

### ಇದೀಗ ಸುದ್ದಿಯಲ್ಲಿದೆ:

- **ದೃಷ್ಟಿಚೇತನ ಪ್ರಯಾಣಿಕರ** ಅನುಕೂಲಕ್ಕಾಗಿ ಜಾರಿಗೆ ತಂದಿರುವ ವಿಶಿಷ್ಟ ಉಪಕ್ರಮಕ್ಕಾಗಿ, **ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು** (ಕೆಎಸ್ಆರ್‌ಟಿಸಿ) ಕೇಂದ್ರ ಸರ್ಕಾರದಿಂದ ರಾಷ್ಟ್ರೀಯ ಪ್ರಶಸ್ತಿಗೆ ಭಾಜನವಾಗಿದೆ.

### ಪ್ರಮುಖ ಅಂಶಗಳು

- ಪ್ರಶಸ್ತಿ ವಿವರ: **ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು** ನೀಡುವ ಪ್ರತಿಷ್ಠಿತ **'ನಗರ ಸಾರಿಗೆಯಲ್ಲಿನ ಉತ್ಕೃಷ್ಟತೆಗಾಗಿ ರಾಷ್ಟ್ರೀಯ ಪ್ರಶಸ್ತಿ – 2025'** ಕ್ಕೆ ಕೆಎಸ್ಆರ್‌ಟಿಸಿ ಭಾಜನವಾಗಿದೆ.
- **ಯೋಜನೆ: ದೃಷ್ಟಿಚೇತನ** ಪ್ರಯಾಣಿಕರಿಗಾಗಿ ರೂಪಿಸಲಾದ, ಈ ರೀತಿಯ ಮೊದಲ ಉಪಕ್ರಮವಾದ **"ಧ್ವನಿ ಸ್ಪಂದನ"** ಯೋಜನೆಗಾಗಿ ಈ ಗೌರವ ಲಭಿಸಿದೆ.
- **ಉದ್ದೇಶ:** ಎಲ್ಲರನ್ನೂ ಒಳಗೊಳ್ಳುವ ಮತ್ತು ಸುಗಮವಾಗಿ ಪ್ರವೇಶಿಸಬಹುದಾದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ನಿರ್ಮಿಸುವುದು ಈ ಯೋಜನೆಯ ಗುರಿಯಾಗಿದೆ.

## 2. ಅಂತರರಾಷ್ಟ್ರೀಯ ಎಮ್ಮಿ ಪ್ರಶಸ್ತಿಗಳು, 2025




### 2025 ರ ಎಮ್ಮಿ ಪ್ರಶಸ್ತಿ ವಿಜೇತರು

### ಪ್ರಮುಖ ಕಾರ್ಯಕ್ರಮ ವಿಭಾಗಗಳು

| ವಿಭಾಗ | ವಿಜೇತರು | ದೇಶ |
|---|---|---|
| ನಾಟಕ ಸರಣಿ | ರೈವಲ್ಸ್ | ಯುನೈಟೆಡ್ ಕಿಂಗ್‌ಡಮ್ |
| ಹಾಸ್ಯ ಸರಣಿ | ಲುಡ್ವಿಗ್ | ಯುನೈಟೆಡ್ ಕಿಂಗ್‌ಡಮ್ |
| ಟಿವಿ ಚಲನಚಿತ್ರ / ಕಿರು-ಸರಣಿ | ಲಾಸ್ಟ್ ಬಾಯ್ಸ್ ಅಂಡ್ ಫೇರೀಸ್ | ಯುನೈಟೆಡ್ ಕಿಂಗ್‌ಡಮ್ |
| ಟೆಲಿ ನೋವೆಲಾ | ದೇಹಾ [ದಿ ಗುಡ್ & ದಿ ಬ್ಯಾಡ್] | ಟರ್ಕಿ |
| ಸಾಕ್ಷ್ಯಚಿತ್ರ | ಹೆಲ್ ಜಂಪರ್ | ಯುನೈಟೆಡ್ ಕಿಂಗ್‌ಡಮ್ |
| ಕಲಾ ಕಾರ್ಯಕ್ರಮಗಳು | ರಿಯುಚಿ ಸಕಮೊಟೊ: ಲಾಸ್ಟ್ ಡೇಸ್ | ಜಪಾನ್ |
| ಪ್ರಚಲಿತ ವಿದ್ಯಮಾನಗಳು | ಡಿಸ್ಪ್ಯಾಚಸ್: ಕಿಲ್ ಝೋನ್: ಇನ್ ಸೈಡ್ ಗಾಜಾ | ಯುನೈಟೆಡ್ ಕಿಂಗ್‌ಡಮ್ |
| ಸುದ್ದಿ | ಗಾಜಾ, ಸರ್ಚ್ ಫಾರ್ ಲೈಫ್ | ಕತಾರ್ (ಅಲ್ ಜಜೀರಾ) |
| ಮಕ್ಕಳು: ಅನಿಮೇಷನ್ | ಬ್ಲೂಯಿ | ಆಸ್ಟ್ರೇಲಿಯಾ |
| ಕಿರು-ರೂಪದ ಸರಣಿ | ಲಾ ಮೀಡಿಯೇಟ್ರಿಸ್ [ದಿ ಮೀಡಿಯೇಟರ್] | ಕೆನಡಾ |

### ಪ್ರದರ್ಶನ ವಿಭಾಗಗಳು

| ವಿಭಾಗ | ವಿಜೇತರು | ಕೃತಿ | ದೇಶ |
|---|---|---|---|
| ಅತ್ಯುತ್ತಮ ಪ್ರದರ್ಶನ (ನಟ) | ಓರಿಯೊಲ್ ಪ್ಲಾ | ಯೋ, ಅಡಿಕ್ಟೊ [ಐ, ಅಡಿಕ್ಟ್] | ಸ್ಪೇನ್ |
| ಅತ್ಯುತ್ತಮ ಪ್ರದರ್ಶನ (ನಟಿ) | ಅನ್ನಾ ಮ್ಯಾಕ್ಸ್‌ವೆಲ್ ಮಾರ್ಟಿನ್ | ಅಂಟಿಲ್ ಐ ಕಿಲ್ ಯು | ಯುನೈಟೆಡ್ ಕಿಂಗ್‌ಡಮ್ |

### ಅಂತರರಾಷ್ಟ್ರೀಯ ಎಮ್ಮಿ ಪ್ರಶಸ್ತಿಗಳು : 2025 ರಲ್ಲಿ ಭಾರತದ ಪ್ರದರ್ಶನ

- 53 ನೇ ಅಂತರರಾಷ್ಟ್ರೀಯ ಎಮ್ಮಿ ಪ್ರಶಸ್ತಿಗಳು 2025 ರಲ್ಲಿ ಭಾರತದ ಉಪಸ್ಥಿತಿಯು ನೆಟ್‌ಫ್ಲಿಕ್ಸ್‌ನ ಜೀವನಚರಿತ್ರೆ ಆಧಾರಿತ ಚಲನಚಿತ್ರ **"ಅಮರ್ ಸಿಂಗ್ ಚಮ್ಕಿಲಾ"** ಮೂಲಕ ಕಂಡುಬಂದಿತು. ಇದನ್ನು ಇಮ್ತಿಯಾಜ್ ಅಲಿ ನಿರ್ದೇಶಿಸಿದ್ದು, ದಿಲ್ಜಿತ್ ದೋಸಾಂಜ್ ನಟಿಸಿದ್ದಾರೆ.
- ಈ ಚಲನಚಿತ್ರವು ಅತ್ಯುತ್ತಮ ಟಿವಿ ಚಲನಚಿತ್ರ / ಕಿರು-ಸರಣಿ ಮತ್ತು ಅತ್ಯುತ್ತಮ ನಟ ಪ್ರದರ್ಶನ (ದಿಲ್ಜಿತ್ ದೋಸಾಂಜ್ ಅವರಿಗೆ), ಹೀಗೆ ಎರಡು ನಾಮನಿರ್ದೇಶನಗಳನ್ನು ಪಡೆದಿತ್ತು
- "ಅಮರ್ ಸಿಂಗ್ ಚಮ್ಕಿಲಾ" ಅವರು ಯಾವುದೇ ವಿಭಾಗದಲ್ಲಿ ಗೆಲ್ಲಲಿಲ್ಲ; ಟಿವಿ ಚಲನಚಿತ್ರ / ಕಿರು-ಸರಣಿ ಪ್ರಶಸ್ತಿಯು ಯುಕೆಯ "ಲಾಸ್ಟ್ ಬಾಯ್ಸ್ ಅಂಡ್ ಫೇರೀಸ್" ಗೆ ಲಭಿಸಿತು.

### ಅಂತರರಾಷ್ಟ್ರೀಯ ಎಮ್ಮಿ ಪ್ರಶಸ್ತಿಗಳ ಬಗ್ಗೆ

- ಅಂತರರಾಷ್ಟ್ರೀಯ ಎಮ್ಮಿ ಪ್ರಶಸ್ತಿಗಳು ಜಾಗತಿಕ ದೂರದರ್ಶನ ಕ್ಷೇತ್ರದ ಅತ್ಯುನ್ನತ ಗೌರವಗಳಾಗಿವೆ. **ಅಮೆರಿಕ ಸಂಯುಕ್ತ ಸಂಸ್ಥಾನದ (US) ಹೊರಗೆ ನಿರ್ಮಿಸಲಾದ ಮತ್ತು ಪ್ರಸಾರವಾದ ಕಾರ್ಯಕ್ರಮಗಳಲ್ಲಿನ ಶ್ರೇಷ್ಠತೆಯನ್ನು ಗುರುತಿಸುವುದು** ಇದರ ಉದ್ದೇಶವಾಗಿದೆ.
- ಇವು ವಿಶಾಲವಾದ ಎಮ್ಮಿ ಪ್ರಶಸ್ತಿಗಳ ಕುಟುಂಬದ ಭಾಗವಾಗಿದ್ದರೂ, **ನಿರ್ದಿಷ್ಟವಾಗಿ ಅಂತರರಾಷ್ಟ್ರೀಯ ವಿಷಯಗಳ ಮೇಲೆ ಕೇಂದ್ರೀಕರಿಸುತ್ತವೆ.**
- ನ್ಯೂಯಾರ್ಕ್ ಮೂಲದ **ಅಂತರರಾಷ್ಟ್ರೀಯ ದೂರದರ್ಶನ ಕಲೆ ಮತ್ತು ವಿಜ್ಞಾನ ಅಕಾಡೆಮಿ ('ಇಂಟರ್ನ್ಯಾಷನಲ್ ಅಕಾಡೆಮಿ ಆಫ್ ಟೆಲಿವಿಷನ್ ಆರ್ಟ್ಸ್ ಅಂಡ್ ಸೈನ್ಸಸ್') ಸಂಸ್ಥೆಯು ಈ ಪ್ರಶಸ್ತಿಗಳನ್ನು ಪ್ರದಾನ ಮಾಡುತ್ತದೆ.**

## 3. ಮಿಸ್ ಯೂನಿವರ್ಸ್ 2025 :




### ಇದೀಗ ಸುದ್ದಿಯಲ್ಲಿದೆ

- ಥೈಲ್ಯಾಂಡ್‌ನಲ್ಲಿ ಜರುಗಿದ 74 ನೇ ಆವೃತ್ತಿಯ ಮಿಸ್ ಯೂನಿವರ್ಸ್ ಸ್ಪರ್ಧೆಯಲ್ಲಿ ಮೆಕ್ಸಿಕೋದ ಫಾತಿಮಾ ಬಾಷ್ ಅವರು 'ಮಿಸ್ ಯೂನಿವರ್ಸ್ 2025' ಕಿರೀಟವನ್ನು ಮುಡಿಗೇರಿಸಿಕೊಂಡರು.

### ವಿಜೇತರು ಮತ್ತು ರನ್ನರ್-ಅಪ್‌ಗಳು

- **ಮಿಸ್ ಯೂನಿವರ್ಸ್ 2025 (ವಿಜೇತೆ): ಫಾತಿಮಾ ಬಾಷ್ – ಮೆಕ್ಸಿಕೊ.**
- **1 ನೇ ರನ್ನರ್-ಅಪ್:** ಪ್ರವೀಣಾರ್ ಸಿಂಗ್ – ಥೈಲ್ಯಾಂಡ್.
- **2 ನೇ ರನ್ನರ್-ಅಪ್:** ಸ್ಟೆಫಾನಿ ಅಬಾಸಲಿ – ವೆನೆಜುವೆಲಾ.
- **3 ನೇ ರನ್ನರ್-ಅಪ್:** ಅಹ್ಟಿಸಾ ಮನಾಲೊ – ಫಿಲಿಪೈನ್ಸ್.
- **4 ನೇ ರನ್ನರ್-ಅಪ್:** ಒಲಿವಿಯಾ ಯೇಸ್ – ಕೋಟ್ ಡಿ ಐವರಿ.

### ಗಮನಿಸಿ:

ಈ ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸಿದ್ದ **ಮನಿಕಾ ವಿಶ್ವಕರ್ಮ** ಅವರು 'ಅಗ್ರ-30' (ಟಾಪ್ 30) ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡರು.

### ಮಿಸ್ ಯೂನಿವರ್ಸ್ ಸ್ಪರ್ಧೆಯ ಬಗ್ಗೆ

- ಮಿಸ್ ಅಮೆರಿಕ ಸ್ಪರ್ಧೆಯಿಂದ ಬೇರ್ಪಟ್ಟ ನಂತರ, **1952** ರಲ್ಲಿ ಅಮೆರಿಕದ ವಸ್ತ್ರ ತಯಾರಿಕಾ ಕಂಪನಿ **'ಪೆಸಿಫಿಕ್ ಮಿಲ್ಸ್' (ಕ್ಯಾಟಲಿನಾ ಸ್ವಿಮ್‌ವೇರ್)** ಈ ಸ್ಪರ್ಧೆಯನ್ನು ಸ್ಥಾಪಿಸಿತು.
- **ಫಿನ್ಲ್ಯಾಂಡ್‌ನ ಆರ್ಮಿ ಕುಸೆಲಾ ಅವರು ಮೊಟ್ಟಮೊದಲ ಮಿಸ್ ಯೂನಿವರ್ಸ್** ಆಗಿ ಹೊರಹೊಮ್ಮಿದರು (ಕ್ಯಾಲಿಫೋರ್ನಿಯಾದ ಲಾಂಗ್ ಬೀಚ್‌ನಲ್ಲಿ ಕಿರೀಟಧಾರಣೆ ಮಾಡಲಾಯಿತು).
- ಪ್ರಸ್ತುತ ಈ ಸ್ಪರ್ಧೆಯನ್ನು **'ಮಿಸ್ ಯೂನಿವರ್ಸ್ ಸಂಸ್ಥೆ'** ಆಯೋಜಿಸುತ್ತದೆ. ಇದರ ಪ್ರಧಾನ ಕಚೇರಿಗಳು ಬ್ಯಾಂಕಾಕ್ (ಥೈಲ್ಯಾಂಡ್), ಮೆಕ್ಸಿಕೊ ನಗರ (ಮೆಕ್ಸಿಕೊ) ಮತ್ತು ನ್ಯೂಯಾರ್ಕ್ (ಯುಎಸ್‌ಎ) ನಲ್ಲಿವೆ.
- ಮಿಸ್ ವರ್ಲ್ಡ್, ಮಿಸ್ ಇಂಟರ್ನ್ಯಾಷನಲ್ ಮತ್ತು ಮಿಸ್ ಅರ್ಥ್ ಸ್ಪರ್ಧೆಗಳೊಂದಿಗೆ ಇದು ಜಗತ್ತಿನ "ಬಿಗ್ ಫೋರ್" (ನಾಲ್ಕು ಪ್ರಮುಖ) ಸೌಂದರ್ಯ ಸ್ಪರ್ಧೆಗಳಲ್ಲಿ ಒಂದಾಗಿದೆ.

### ಮಿಸ್ ಯೂನಿವರ್ಸ್ ವಿಜೇತರಾದ ಭಾರತೀಯರು

| ವಿಜೇತರು | ವರ್ಷ | ಪ್ರಮುಖ ವಿವರಗಳು |
|---|---|---|
| **ಸುಶ್ಮಿತಾ ಸೇನ್** | 1994 | **ಇವರು ಮಿಸ್ ಯೂನಿವರ್ಸ್ ಕಿರೀಟ ಧರಿಸಿದ ಮೊದಲ ಭಾರತೀಯ ಮಹಿಳೆಯಾಗಿದ್ದಾರೆ.** ಇವರು ಫಿಲಿಪೈನ್ಸ್‌ನ ಮನಿಲಾದಲ್ಲಿ ಕಿರೀಟಧಾರಣೆ ಮಾಡಿದರು. |
| **ಲಾರಾ ದತ್ತಾ** | 2000 | ಇವರು ಭಾರತದಿಂದ ಆಯ್ಕೆಯಾದ ಎರಡನೇ ಮಿಸ್ ಯೂನಿವರ್ಸ್. ಸೈಪ್ರಸ್‌ನ ನಿಕೋಸಿಯಾದಲ್ಲಿ ಇವರು ಗೆಲುವು ಸಾಧಿಸಿದರು; ಅಂತಿಮ ಸುತ್ತಿನ ಸಂದರ್ಶನದಲ್ಲಿ ದಾಖಲೆಯ ಅಂಕಗಳನ್ನು ಗಳಿಸಿದ್ದಕ್ಕಾಗಿ ಇವರು ಪ್ರಸಿದ್ಧರಾಗಿದ್ದಾರೆ. |
| **ಹರ್ನಾಜ್ ಕೌರ್ ಸಂಧು** | 2021 | ಇವರು ಮೂರನೇ ಭಾರತೀಯ ಮಿಸ್ ಯೂನಿವರ್ಸ್. ಇಸ್ರೇಲ್‌ನ ಐಲಾಟ್‌ನಲ್ಲಿ ನಡೆದ ಸ್ಪರ್ಧೆಯಲ್ಲಿ ಗೆಲ್ಲುವ ಮೂಲಕ, 21 ವರ್ಷಗಳ ಸುದೀರ್ಘ ಅವಧಿಯ ನಂತರ ಭಾರತಕ್ಕೆ ಕಿರೀಟವನ್ನು ತಂದರು. |

## 4. ಕ್ವಾಲಿಟಿ ರತ್ನ ಪ್ರಶಸ್ತಿ 2025




### ಇದೀಗ ಸುದ್ದಿಯಲ್ಲಿದೆ

- ಗುಣಮಟ್ಟದ ನಾಯಕತ್ವ ಮತ್ತು ಭಾರತದ ತಯಾರಿಕಾ ವಲಯದ ಸಾಮರ್ಥ್ಯಗಳನ್ನು ಹೆಚ್ಚಿಸುವಲ್ಲಿ ನೀಡಿದ ಅನನ್ಯ ಕೊಡುಗೆಗಾಗಿ, **ಟಿವಿಎಸ್ ಮೋಟರ್ ಕಂಪನಿಯ ಗೌರವ ಅಧ್ಯಕ್ಷರಾದ ವೇಣು ಶ್ರೀನಿವಾಸನ್ ಅವರು 2025ನೇ ಸಾಲಿನ ಪ್ರತಿಷ್ಠಿತ 'ಸಿಐಐ ಕ್ವಾಲಿಟಿ ರತ್ನ' ಪ್ರಶಸ್ತಿಗೆ ಭಾಜನರಾಗಿದ್ದಾರೆ.**

### ಪ್ರಶಸ್ತಿಯ ವಿವರಗಳು

- **ಪ್ರಶಸ್ತಿ:** ಸಿಐಐ ಕ್ವಾಲಿಟಿ ರತ್ನ ಪ್ರಶಸ್ತಿ 2025
- **ಪುರಸ್ಕೃತರು:** ವೇಣು ಶ್ರೀನಿವಾಸನ್ (ಗೌರವ ಅಧ್ಯಕ್ಷರು, ಟಿವಿಎಸ್ ಮೋಟರ್ ಕಂಪನಿ).
- **ಪ್ರದಾನ ಮಾಡಿದ ಸಂಸ್ಥೆ: ಭಾರತೀಯ ಕೈಗಾರಿಕಾ ಒಕ್ಕೂಟ**
- **ಸಂದರ್ಭ:** ಸಿಐಐ ಇನ್ಸ್ಟಿಟ್ಯೂಟ್ ಆಫ್ ಕ್ವಾಲಿಟಿ ಆಯೋಜಿಸಿದ್ದ **'ಸಿಐಐ ಎಕ್ಸಲೆನ್ಸ್ ಶೃಂಗಸಭೆ 2025'ರಲ್ಲಿ** ಈ ಪ್ರಶಸ್ತಿಯನ್ನು ನೀಡಲಾಯಿತು.

### ಕ್ವಾಲಿಟಿ ರತ್ನ ಪ್ರಶಸ್ತಿಯ ಬಗ್ಗೆ

- **ಸ್ಥಾಪನೆ: ಸಿಐಐನ 'ಇನ್‌ಸ್ಟಿಟ್ಯೂಟ್ ಆಫ್ ಕ್ವಾಲಿಟಿ'** ನೇತೃತ್ವದಲ್ಲಿನ ಗುಣಮಟ್ಟದ ಆಂದೋಲನದ ಭಾಗವಾಗಿ, **2019ರ** ಸುಮಾರಿಗೆ ಈ ಪ್ರಶಸ್ತಿಯನ್ನು ಸ್ಥಾಪಿಸಲಾಯಿತು.
- **ಉದ್ದೇಶ: ತಯಾರಿಕಾ ಮತ್ತು ಸೇವಾ ವಲಯಗಳಲ್ಲಿ ಅತ್ಯುತ್ತಮ ಗುಣಮಟ್ಟವನ್ನು ಅಳವಡಿಸಿಕೊಳ್ಳುವ ಮೂಲಕ, ಭಾರತದ ಸ್ಪರ್ಧಾತ್ಮಕತೆಯನ್ನು ಬಲಪಡಿಸುವಲ್ಲಿ ಮಹತ್ವದ ಪಾತ್ರವಹಿಸಿದ ನಾಯಕತ್ವವನ್ನು ಗುರುತಿಸುವುದು** ಮತ್ತು ಗೌರವಿಸುವುದು ಇದರ ಮೂಲ ಉದ್ದೇಶವಾಗಿದೆ.

## 5. ಚೆವಲಿಯರ್ ಪ್ರಶಸ್ತಿ

### ಇದೀಗ ಸುದ್ದಿಯಲ್ಲಿದೆ

- ಖ್ಯಾತ ಕಲಾ ನಿರ್ದೇಶಕ 'ಥೋಟ ತರಣಿ' ಅವರು ಫ್ರಾನ್ಸ್ ಸರ್ಕಾರದ ಪ್ರತಿಷ್ಠಿತ 'ಚೆವಲಿಯರ್' ಪ್ರಶಸ್ತಿಗೆ ಭಾಜನರಾಗಿದ್ದಾರೆ.

### ಪ್ರಮುಖ ಅಂಶಗಳು

- ಚೆವಲಿಯರ್ ಪ್ರಶಸ್ತಿಗೆ ಭಾಜನರಾಗುವ ಮೂಲಕ, ಥೋಟ ತರಣಿ ಅವರು **ಶಿವಾಜಿ ಗಣೇಶನ್, ಕಮಲ್ ಹಾಸನ್, ಐಶ್ವರ್ಯ ರೈ ಬಚ್ಚನ್ ಮತ್ತು ಕಲ್ಕಿ ಕೊಕ್ಲಿನ್** ಅವರಂತಹ ಪ್ರತಿಷ್ಠಿತ ಭಾರತೀಯ ಸಾಂಸ್ಕೃತಿಕ ವ್ಯಕ್ತಿಗಳ ಸಾಲಿಗೆ ಸೇರ್ಪಡೆಗೊಂಡಿದ್ದಾರೆ.
- ಭಾರತೀಯ ಚಿತ್ರರಂಗದಲ್ಲಿ ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗಿದೆ. ಇವರು **"ನಾಯಕ್", "ದಳಪತಿ", "ಇಂಡಿಯನ್", "ಸಾಗರ ಸಂಗಮಂ", "ಶಿವಾಜಿ", "ದಶಾವತಾರಂ" ಮತ್ತು "ಪೊನ್ನಿಯಿನ್ ಸೆಲ್ವನ್"** ನಂತಹ ಚಿತ್ರಗಳ ಮೂಲಕ **'ಕಲಾ ನಿರ್ದೇಶನ' ಮತ್ತು 'ನಿರ್ಮಾಣ ವಿನ್ಯಾಸ'** ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿದ್ದಾರೆ.

### ಚೆವಲಿಯರ್ ಪ್ರಶಸ್ತಿ ಪ್ರಶಸ್ತಿಯ ಕುರಿತು

- **ಕಲೆ ಮತ್ತು ಸಾಹಿತ್ಯ ಕ್ಷೇತ್ರಕ್ಕೆ** ಅಥವಾ ಜಾಗತಿಕವಾಗಿ ಈ ಕ್ಷೇತ್ರಗಳ ಉತ್ತೇಜನಕ್ಕೆ ಗಮನಾರ್ಹ ಕೊಡುಗೆ ನೀಡಿದ ವ್ಯಕ್ತಿಗಳಿಗೆ **ಫ್ರೆಂಚ್ ಸರ್ಕಾರವು** ಈ ಗೌರವವನ್ನು ನೀಡುತ್ತದೆ.
- ಈ ಪ್ರಶಸ್ತಿಯನ್ನು ಅಧಿಕೃತವಾಗಿ **'ಚೆವಲಿಯರ್ ಡೆ ಎಲ್'ಆರ್ಡ್ರೆ ಡೆಸ್ ಆರ್ಟ್ಸ್ ಎಟ್ ಡೆಸ್ ಲೆಟ್ರೆಸ್'** ಎಂದು ಕರೆಯಲಾಗುತ್ತದೆ.

## 6. ಬಾಲ ಸಾಹಿತ್ಯ ಪುರಸ್ಕಾರ 2025

### ಇದೀಗ ಸುದ್ದಿಯಲ್ಲಿದೆ

ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿನ ಶ್ರೇಷ್ಠತೆಯನ್ನು ಗೌರವಿಸಲು, ಸಾಹಿತ್ಯ ಅಕಾಡೆಮಿಯು 24 ಭಾರತೀಯ ಭಾಷೆಗಳ ಲೇಖಕರಿಗೆ 2025ನೇ ಸಾಲಿನ ಪ್ರತಿಷ್ಠಿತ 'ಬಾಲ ಸಾಹಿತ್ಯ ಪುರಸ್ಕಾರ"ವನ್ನು ನವೆಂಬರ್ 12, 2025 ರಂದು ಘೋಷಿಸಿದೆ.

### ವಿಜೇತರ ಪಟ್ಟಿ

| ಭಾಷೆ | ಕೃತಿ | ಪ್ರಕಾರ | ಲೇಖಕರು / ಬರಹಗಾರರು |
|---|---|---|---|
| ಅಸ್ಸಾಮಿ | ಮಹಾಭಾರತರ್ ಪದ್ಯ | ಕವನ | ಸುರೇಂದ್ರ ಮೋಹನ್ ದಾಸ್ |
| ಬಂಗಾಳಿ | ಎಚ್ಚಾರ ಗಾಯೆ ಕಥಾ ದಯೇ | ಕಥೆಗಳು | ತ್ರಿದಿಬ್ ಕುಮಾರ್ ಚಟ್ಟೋಪಾಧ್ಯಾಯ |
| ಬೋಡೋ | ಖಂತಿ ಬೊರೊನ್ ಆಂಗ್ ಅಬು ದುಹುಯಿ | ಕಥೆಗಳು | ಬಿನಯ್ ಕುಮಾರ್ ಬ್ರಹ್ಮ |
| ಡೋಗ್ರಿ | ನಾಚಿ ತೋರ್ | ಕವನ | ಪಿ. ಎಲ್. ಪರಿಹಾರ್ "ಶಾದ್" |
| ಇಂಗ್ಲಿಷ್ | ದಕ್ಷಿಣ್: ಸೌತ್ ಇಂಡಿಯನ್ ಮಿತ್ಸ್ ಅಂಡ್ ಫೇಬಲ್ಸ್ ರಿಟೋಲ್ಡ್ | ಕಥೆಗಳು | ನಿತಿನ್ ಕುಶಾಲಪ್ಪ ಎಂ. ಪಿ. |
| ಗುಜರಾತಿ | ತ್ರಿವಕ್ | ಕವನ | ಕೀರ್ತಿದಾ ಬ್ರಹ್ಮಭಟ್ |
| ಹಿಂದಿ | ಏಕ್ ಕಾಲೇ ಬಾರಾ | ಸಣ್ಣ ಕಥೆಗಳು | ಸುಶೀಲ್ ಶುಕ್ಲಾ |
| **ಕನ್ನಡ** | **ನೋಟ್‌ಬುಕ್** | **ಸಣ್ಣ ಕಥೆಗಳು** | **ಕೆ. ಶಿವಲಿಂಗಪ್ಪ ಹಂದಿಹಾಳ** |
| ಕಾಶ್ಮೀರಿ | ಶೂರೆ ತ ತೊತುರು ಗ್ಯಾಶ್ | ಸಣ್ಣ ಕಥೆಗಳು | ಇಶಾರ್ ಮುಬಾಶಿರ್ |
| ಕೊಂಕಣಿ | ಬೆಟಕಡ್ಡೋ ಶಂಕರ್ ಆಣಿ ಹಾರ್ ಕಾರ್ಯೋ | ಕಥೆಗಳು | ನಯೀಮಾ ಅಡಾರ್ಕರ್ |
| ಮೈಥಿಲಿ | ಔಡಿಕಾ | ಸಣ್ಣ ಕಥೆಗಳು | ಮುರಾರಿ ಕನ್ನೈಕ್ |
| ಮಲಯಾಳಂ | ರಂಗಮಂಡಲಚೆ ಯಾದ್ರವಾದಿ | ಕಾದಂಬರಿ | ಶ್ರೀಜಿತ್ ಮೂಲ್ಯೋಡನ್ |
| ಮಣಿಪುರಿ | ಅಂಗಂಗಂಗಿನಾಗೆ ಶಮಹುಂಗ್ಸಿಡಾ | ನಾಟಕ | ಶಾಂತಾ ಎಂ. |
| ಮರಾಠಿ | ಆತಮಂಗ | ಕವನ | ಸುದೀಶ್ ಸಾವಂತ್ |
| ನೇಪಾಳಿ | ಶಾಂತಿ ವನ್ | ಕಾದಂಬರಿ | ಸಾಂಗ್ಮು ಲೆಪ್ಚಾ |
| ಒಡಿಯಾ | ಕೆರೆ ಫುಲಾ ಫುಟಾಚಿ | ಕವನ | ರಾಜಕಿಶೋರ್ ಪರ್ಹಿ |
| ಪಂಜಾಬಿ | ಜಾದೂ ಪಟ್ಕಾ | ಕಾದಂಬರಿ | ಪಾಲ್ ಖಾದಿಮ್; ಭಗವಂತ್ ಸಿಂಗ್; ದರ್ಯೋಪಾಲ್ ಕೈಲಾಶ್ |
| ರಾಜಸ್ಥಾನಿ | ಪನಾಹ್ರವಂಶ್ ನಿ ಪಿರ | ನಾಟಕ | ಜಿತೇಂದ್ರ ಶರ್ಮಾ |
| ಸಂಸ್ಕೃತ | ಬಾಲವಿಯಮ್ | ಕವನ | ಪ್ರೀತಿ ಪೂಜಾರ |
| ಸಂತಾಲಿ | ಸೋನಾ ಮೌ-ಗ್ ಸಂದೇಶ್ | ಕವನ | ಹನ್ಸ್ದಾ (ಹರಾಲಾಲ್) ಮುರ್ಮು |
| ಸಿಂಧಿ | ಅಸ್ಮಾನ್ ಹರಿ | ಕವನ | ಹೀನಾ ಅಗ್ನಾನಿ "ಹೀರ್" |
| ತಮಿಳು | ಒಟ್ರೈ ಸಿರಾಗು ಓವಿಯ | ಕಾದಂಬರಿ | ವಿಷ್ಣುಪುರಂ ಸರವಣನ್ |
| ತೆಲುಗು | ಕಬುರ್ಲ ದೇವತಾ | ಕಥೆ | ಗಂಗಿಸೆಟ್ಟಿ (ಗಂಜಾರೊಟ್ಟಿ) ಶಿವಕುಮಾರ್ |
| ಉರ್ದು | ಕೌಮಿ ಸಿತಾರೆ | ಲೇಖನಗಳು | ಗಜನ್ಫರ್ ಇಕ್ಬಾಲ್ |

### ಬಾಲ ಸಾಹಿತ್ಯ ಪುರಸ್ಕಾರದ ಬಗ್ಗೆ

- **ವಿವರಣೆ:** 'ಬಾಲ ಸಾಹಿತ್ಯ ಪುರಸ್ಕಾರ' (ಸಾಹಿತ್ಯ ಅಕಾಡೆಮಿ ಬಾಲ ಸಾಹಿತ್ಯ ಪುರಸ್ಕಾರ) ವು ಭಾರತದಲ್ಲಿ ನೀಡಲಾಗುವ ಪ್ರತಿಷ್ಠಿತ ಸಾಹಿತ್ಯಿಕ ಗೌರವವಾಗಿದೆ.
- **ನೀಡುವ ಸಂಸ್ಥೆ:** ಭಾರತದ ರಾಷ್ಟ್ರೀಯ ಸಾಹಿತ್ಯ ಸಂಸ್ಥೆಯಾದ **'ಸಾಹಿತ್ಯ ಅಕಾಡೆಮಿ'**ಯು ಮಕ್ಕಳಿಗಾಗಿ ಉತ್ತಮ ಗುಣಮಟ್ಟದ ಬರವಣಿಗೆಯನ್ನು ಉತ್ತೇಜಿಸುವ ಮತ್ತು ಗುರುತಿಸುವ ಸಲುವಾಗಿ ಈ ಪ್ರಶಸ್ತಿಯನ್ನು ನೀಡುತ್ತದೆ.
- **ವ್ಯಾಪ್ತಿ:** ಸಂವಿಧಾನದ **8ನೇ ಅನುಸೂಚಿ**ಯಲ್ಲಿರುವ ಭಾಷೆಗಳು ಸೇರಿದಂತೆ ಒಟ್ಟು **24 ಮಾನ್ಯತೆ ಪಡೆದ ಭಾರತೀಯ ಭಾಷೆಗಳಲ್ಲಿ** ರಚಿತವಾದ **ಮಕ್ಕಳ ಕಾದಂಬರಿಗಳು, ಸಣ್ಣ ಕಥೆಗಳು, ಕವನ, ನಾಟಕಗಳು, ಕಾಲ್ಪನಿಕವಲ್ಲದ (non-fiction) ಬರಹಗಳು ಮತ್ತು ಜಾನಪದ ಸಾಹಿತ್ಯ ಕೃತಿಗಳನ್ನು** ಈ ಪ್ರಶಸ್ತಿ ಒಳಗೊಂಡಿದೆ.
- **ಬಹುಮಾನ:** ಈ ಪ್ರಶಸ್ತಿಯು **₹50,000 ನಗದು ಬಹುಮಾನ** ಮತ್ತು **ತಾಮ್ರದ ಫಲಕವನ್ನು** ಒಳಗೊಂಡಿರುತ್ತದೆ.

# ರಕ್ಷಣೆ

## 1. ಐಎನ್‌ಎಸ್ ಇಕ್ಷಕ್



### ಇದೀಗ ಸುದ್ದಿಯಲ್ಲಿದೆ

- ಭಾರತೀಯ ನೌಕಾಪಡೆಯು **'ಐಎನ್‌ಎಸ್ ಇಕ್ಷಕ್'** ಸಮೀಕ್ಷಾ ನೌಕೆಯನ್ನು ಸೇವೆಗೆ ನಿಯೋಜಿಸಿದೆ.


### ಐಎನ್‌ಎಸ್ ಇಕ್ಷಕ್ ನ ಬಗ್ಗೆ

- ಅತಿದೊಡ್ಡ ಸಮೀಕ್ಷಾ ನೌಕೆ ('ಸರ್ವೆ ವೆಸೆಲ್ ಲಾರ್ಜ್' -SVL) ವರ್ಗದ ಮೂರನೇ ನೌಕೆಯಾದ **ಐಎನ್‌ಎಸ್ ಇಕ್ಷಕ್** ಅನ್ನು, ಕೊಚ್ಚಿಯ ನೌಕಾ ನೆಲೆಯಲ್ಲಿ ನಡೆದ ಸಮಾರಂಭದಲ್ಲಿ ಭಾರತೀಯ ನೌಕಾಪಡೆಗೆ ಅಧಿಕೃತವಾಗಿ **ನಿಯೋಜಿಸಲಾಯಿತು.**
- ಐಎನ್‌ಎಸ್ ಇಕ್ಷಕ್, ಮಹಿಳೆಯರಿಗಾಗಿ ಮೀಸಲಾದ ವಸತಿ ಸೌಕರ್ಯದೊಂದಿಗೆ ವಿನ್ಯಾಸಗೊಳಿಸಲಾದ ಮೊದಲ ಎಸ್‌ವಿಎಲ್ (SVL) ನೌಕೆಯಾಗಿದೆ. ಇದು **ಒಳಗೊಳ್ಳುವಿಕೆಗೆ** ನೌಕಾಪಡೆಯ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ.

## 2. ವಾಯು ಸಮನ್ವಯ-II

- **ವಿವರ:** 'ವಾಯು ಸಮನ್ವಯ-II' ಎಂಬುದು ಭಾರತೀಯ ಸೇನೆಯು ಕೈಗೊಂಡ ಬೃಹತ್ ಪ್ರಮಾಣದ ಡ್ರೋನ್ ಮತ್ತು ಡ್ರೋನ್-ನಿರೋಧಕ ಸಮರಾಭ್ಯಾಸವಾಗಿದೆ.
- **ಸ್ಥಳ ಮತ್ತು ಸಮಯ:** ದಕ್ಷಿಣ ಕಮಾಂಡ್ ನ ಅಡಿಯಲ್ಲಿ ಮರುಭೂಮಿ ವಲಯದಲ್ಲಿ ಅಕ್ಟೋಬರ್ 28–29, 2025 ರಂದು ಇದನ್ನು ನಡೆಸಲಾಯಿತು.
- **ಉದ್ದೇಶ:** ಮುಂದಿನ ತಲೆಮಾರಿನ ಯುದ್ಧಗಳಿಗೆ ಸೇನೆಯ ಸನ್ನದ್ಧತೆಯನ್ನು ಮೌಲ್ಯೀಕರಿಸುವುದು ಇದರ ಪ್ರಮುಖ ಉದ್ದೇಶವಾಗಿತ್ತು.

## 3. ತೇಜಸ್ ಯುದ್ಧ ವಿಮಾನಗಳು




### ಇದೀಗ ಸುದ್ದಿಯಲ್ಲಿದೆ

- ತೇಜಸ್ ಯುದ್ಧ ವಿಮಾನಗಳಿಗೆ ಶಕ್ತಿ ತುಂಬಲು 113 ಜೆಟ್ ಎಂಜಿನ್‌ಗಳ ಪೂರೈಕೆಗಾಗಿ, ಎಚ್‌ಎಎಲ್ ಸಂಸ್ಥೆಯು ಅಮೆರಿಕದ ಜಿಇ ಏರೋಸ್ಪೇಸ್ ಜೊತೆಗೆ $1 ಶತಕೋಟಿ (ಅಂದಾಜು ₹8,000 ಕೋಟಿ) ಮೌಲ್ಯದ ಒಪ್ಪಂದಕ್ಕೆ ಸಹಿ ಹಾಕಿದೆ.

### ಒಪ್ಪಂದದ ಪ್ರಮುಖಾಂಶಗಳು

- **ಪೂರೈಕೆ ಅವಧಿ:** ಈ ಒಪ್ಪಂದದ ಅನ್ವಯ, **F404-GE-IN20** ಎಂಜಿನ್‌ಗಳ ಪೂರೈಕೆಯು 2027 ರಿಂದ ಆರಂಭಗೊಂಡು, 2032 ರ ವೇಳೆಗೆ ಪೂರ್ಣಗೊಳ್ಳಲಿದೆ.
- **ಉದ್ದೇಶ:** 97 **ಲಘು ಯುದ್ಧ ವಿಮಾನ** (LCA) Mk1A ಕಾರ್ಯಕ್ರಮದ ಅನುಷ್ಠಾನಕ್ಕಾಗಿ, ಎಂಜಿನ್‌ಗಳು ಮತ್ತು ಬೆಂಬಲ ಪ್ಯಾಕೇಜ್ ಅನ್ನು ಪಡೆಯಲು ಜನರಲ್ ಎಲೆಕ್ಟ್ರಿಕ್ ಕಂಪನಿಯೊಂದಿಗೆ ಈ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಎಚ್‌ಎಎಲ್ ತಿಳಿಸಿದೆ.

### ತೇಜಸ್ ಬಗ್ಗೆ

- **ವಿಶೇಷತೆ:** ಎಲ್‌ಸಿಎ (LCA) ತೇಜಸ್, 4.5 ನೇ ತಲೆಮಾರಿನ, ಸರ್ವ-ಋತು ಮತ್ತು **ಬಹು-ಪಾತ್ರದ** ಯುದ್ಧ ವಿಮಾನವಾಗಿದೆ.
- **ಸಾಮರ್ಥ್ಯ:** ಆಕ್ರಮಣಕಾರಿ ವಾಯು ಬೆಂಬಲ, ನಿಕಟ ಯುದ್ಧ ಕಾದಾಟ (close combat) ಮತ್ತು ಭೂ ದಾಳಿಯ ಪಾತ್ರಗಳನ್ನು ಸುಲಭವಾಗಿ ನಿರ್ವಹಿಸಲು ಸಮರ್ಥವಾಗಿರುವಂತೆ ಇದನ್ನು ವಿನ್ಯಾಸಗೊಳಿಸಲಾಗಿದೆ.
- **ಕಾರ್ಯಾಚರಣೆ:** ಇದು ಭೂ ಮತ್ತು ಸಮುದ್ರ ಕಾರ್ಯಾಚರಣೆಗಳನ್ನು ಕೈಗೊಳ್ಳಲು ಸಹ ಶಕ್ತವಾಗಿದೆ.

- **ವಿವಿಧ ರೂಪಾಂತರಗಳು:** ಉತ್ಪಾದನೆ ಮತ್ತು ಅಭಿವೃದ್ಧಿಯಲ್ಲಿರುವ ಈ ವಿಮಾನದ ಪ್ರಮುಖ ರೂಪಾಂತರಗಳು ಹೀಗಿವೆ:
  1. ವಾಯುಪಡೆಗಾಗಿ ಏಕ ಆಸನದ ಯುದ್ಧ ವಿಮಾನ.
  2. ನೌಕಾಪಡೆಗಾಗಿ ಏಕ ಆಸನದ ಯುದ್ಧ ವಿಮಾನ.
  3. ವಾಯುಪಡೆಗಾಗಿ ದ್ವಿ ಆಸನದ ತರಬೇತಿ ವಿಮಾನ.
  4. ನೌಕಾಪಡೆಗಾಗಿ ದ್ವಿ ಆಸನದ ತರಬೇತಿ ಆವೃತ್ತಿ.



## 4. ಸೇನಾ ಸಮರಾಭ್ಯಾಸಗಳು

| ಸೇನಾ ಅಭ್ಯಾಸ | ಭಾಗವಹಿಸುವವರು | ಸ್ಥಳ / ವಿವರ |
|---|---|---|
| ತ್ರಿಶೂಲ್ (TSE-2025) | ಭಾರತದ ಮೂರೂ ಸೇನಾ ದಳಗಳು (ಭೂಸೇನೆ, ನೌಕಾಪಡೆ, ವಾಯುಪಡೆ) | ಗುಜರಾತ್ ಮತ್ತು ರಾಜಸ್ಥಾನದ ಭೂ ವಲಯಗಳು ಹಾಗೂ ಉತ್ತರ ಅರಬ್ಬೀ ಸಮುದ್ರ. |
| ಮಿತ್ರ ಶಕ್ತಿ 2025 | ಭಾರತ ಮತ್ತು ಶ್ರೀಲಂಕಾ | ಬೆಳಗಾವಿ (ಕರ್ನಾಟಕ) |
| ಸೂರ್ಯಕಿರಣ್ XIX – 2025 | ಭಾರತ ಮತ್ತು ನೇಪಾಳ | ಪಿಥೋರಗಢ, (ಉತ್ತರಾಖಂಡ.) |
| ಅಜೇಯ ವಾರಿಯರ್-25 | ಭಾರತ ಮತ್ತು ಯುನೈಟೆಡ್ ಕಿಂಗ್‌ಡಮ್ (UK) | ಮಹಾಜನ್ ಫೀಲ್ಡ್ ಫೈರಿಂಗ್ ರೇಂಜ್ (ರಾಜಸ್ಥಾನ) |
| ಗರುಡ-2025 | ಭಾರತ ಮತ್ತು ಫ್ರಾನ್ಸ್ | ಇದೊಂದು ವಾಯು ಸಮರಾಭ್ಯಾಸವಾಗಿದ್ದು, ಈ ಬಾರಿಯ ಆವೃತ್ತಿ ಭಾರತದಲ್ಲಿ ನಡೆಯುತ್ತದೆ. |
| ಭಾರತ-ಯುಎಸ್ ದ್ವಿಪಕ್ಷೀಯ ವಾಯು ಸಮರಾಭ್ಯಾಸ | ಭಾರತ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನ (USA) | ಇದೊಂದು ಕಿರು ವಾಯು ಸಮರಾಭ್ಯಾಸವಾಗಿದೆ. |

## 5. ಮಲಬಾರ್ ಸಮರಾಭ್ಯಾಸ 2025

### ಇದೀಗ ಸುದ್ದಿಯಲ್ಲಿದೆ

- ಬಹುಪಕ್ಷೀಯ **'ಮಲಬಾರ್-2025'** ಸಮರಾಭ್ಯಾಸದಲ್ಲಿ ಭಾಗವಹಿಸಲು, ಭಾರತೀಯ ನೌಕಾಪಡೆಯ ಯುದ್ಧನೌಕೆ **'ಐಎನ್‌ಎಸ್ ಸಹ್ಯಾದ್ರಿ'** ಉತ್ತರ ಪೆಸಿಫಿಕ್ ವಲಯದ **'ಗುವಾಮ್'**ಅನ್ನು ತಲುಪಿದೆ.

### ಮಲಬಾರ್ ಸಮರಾಭ್ಯಾಸ 2025 ರ ಬಗ್ಗೆ

- ಮಲಬಾರ್ 2025 ಎಂಬುದು ಭಾರತ, ಅಮೆರಿಕ (USA), ಜಪಾನ್ ಮತ್ತು ಆಸ್ಟ್ರೇಲಿಯಾ ದೇಶಗಳನ್ನು ಒಳಗೊಂಡಿರುವ **'ಕ್ವಾಡ್'** ಒಕ್ಕೂಟದ ಪ್ರಮುಖ ನೌಕಾ ಸಮರಾಭ್ಯಾಸವಾಗಿದೆ.
- ಈ ಸಮರಾಭ್ಯಾಸವನ್ನು ಪಶ್ಚಿಮ ಪೆಸಿಫಿಕ್ ಸಾಗರದ **ಗುವಾಮ್** ಬಳಿ ಆಯೋಜಿಸಲಾಗಿದೆ. ಇದರ 'ಬಂದರು ಹಂತ' ಮತ್ತು 'ಸಮುದ್ರ ಹಂತ'ಗಳು 2025ರ ನವೆಂಬರ್ 10 ರಿಂದ 18 ರವರೆಗೆ ನಡೆದವು.
- ಈ ಸಮರಾಭ್ಯಾಸವು ಜಂಟಿ ನೌಕಾಪಡೆಯ ಕಸರತ್ತುಗಳು , **ಜಲಾಂತರ್ಗಾಮಿ ನಿರೋಧಕ ಯುದ್ಧ**, ಫಿರಂಗಿ ಕವಾಯತು ಮತ್ತು ವೈಮಾನಿಕ ಕಾರ್ಯಾಚರಣೆಗಳ ಮೇಲೆ ಕೇಂದ್ರೀಕರಿಸಿದೆ.
- ಇದು ಪಾಲುದಾರ ನೌಕಾಪಡೆಗಳ ನಡುವೆ **ಪರಸ್ಪರ ಕಾರ್ಯಸಾಧ್ಯತೆ,** ಸಂವಹನ ಮತ್ತು ಯುದ್ಧತಂತ್ರದ ಸಮನ್ವಯವನ್ನು ಹೆಚ್ಚಿಸುತ್ತದೆ.
- ಇಂಡೋ-ಪೆಸಿಫಿಕ್ ಸಾಗರ ಭದ್ರತೆ, **ನೌಕಾಯಾನ ಸ್ವಾತಂತ್ರ್ಯ** ಮತ್ತು ಉದ್ಭವಿಸುತ್ತಿರುವ ಬೆದರಿಕೆಗಳ ವಿರುದ್ಧ ಪ್ರಾದೇಶಿಕ ತಡೆಗಟ್ಟುವಿಕೆಯನ್ನು ಇದು ಬಲಪಡಿಸುತ್ತದೆ.

## 6. ಐಎನ್‌ಎಸ್ ಸಾವಿತ್ರಿ

- ಜಂಟಿ ನೌಕಾ ಕವಾಯತುಗಳು ಮತ್ತು ವೃತ್ತಿಪರ ವಿನಿಮಯಗಳ ಮೂಲಕ ಭಾರತ ಮತ್ತು ಮೊಜಾಂಬಿಕ್ ನಡುವಿನ **ಕಡಲ ಸಹಕಾರವನ್ನು** ಬಲಪಡಿಸುವ ಉದ್ದೇಶದಿಂದ, ಭಾರತೀಯ ನೌಕಾಪಡೆಯ 'ಕಡಲಾಚೆಯ ಗಸ್ತು ನೌಕೆ'ಯಾದ **ಐಎನ್‌ಎಸ್ ಸಾವಿತ್ರಿ**, ಮೊಜಾಂಬಿಕ್ ದೇಶಕ್ಕೆ ಭೇಟಿ ನೀಡಿತು.
- ಈ ನೌಕೆಯು 2025ರ ನವೆಂಬರ್ 9 ರಿಂದ 12 ರವರೆಗೆ ಮೊಜಾಂಬಿಕ್‌ನ ಪೋರ್ಟ್ ಬೈರಾದಲ್ಲಿ ತಂಗಿತ್ತು.



## 7. ವಿನ್‌ಬ್ಯಾಕ್ಸ್ 2025

- **ಭಾಗವಹಿಸುವ ದೇಶಗಳು:** ಭಾರತ ಮತ್ತು ವಿಯೆಟ್ನಾಂ.
- **ಸ್ಥಳ:** ವಿಯೆಟ್ನಾಂನ ಹನೋಯಿಯಲ್ಲಿರುವ 'ರಾಷ್ಟ್ರೀಯ ಸೇನಾ ತರಬೇತಿ ಕೇಂದ್ರ-4'.
- **ಉದ್ದೇಶಗಳು:**
  - ವಿಶ್ವಸಂಸ್ಥೆಯ **ಶಾಂತಿಪಾಲನಾ ಕಾರ್ಯಾಚರಣೆಗಳಲ್ಲಿ** ಉತ್ತಮ ಪದ್ಧತಿಗಳನ್ನು ಹಂಚಿಕೊಳ್ಳುವುದು.
  - ಇಂಜಿನಿಯರಿಂಗ್, ವೈದ್ಯಕೀಯ ಹಾಗೂ ಮಾನವೀಯ ಕಾರ್ಯಗಳಲ್ಲಿ **ಜಂಟಿ ಕ್ಷೇತ್ರ ಕವಾಯತುಗಳನ್ನು** ನಡೆಸುವುದು.
  - ಈ ಮೂಲಕ, ಎರಡೂ ಪಡೆಗಳ ನಡುವೆ **ಪರಸ್ಪರ ಕಾರ್ಯಸಾಧ್ಯತೆ** ಮತ್ತು ರಕ್ಷಣಾ ಸಹಕಾರವನ್ನು ಹೆಚ್ಚಿಸುವುದು.

## 8. ಅಖಂಡ ಪ್ರಹಾರ್ ಸಮರಾಭ್ಯಾಸ

### ಇದೀಗ ಸುದ್ದಿಯಲ್ಲಿದೆ

- ಭಾರತೀಯ ಸೇನೆಯ ದಕ್ಷಿಣ ಕಮಾಂಡ್ ಅಖಂಡ ಪ್ರಹಾರ್ ಸಮರಾಭ್ಯಾಸವನ್ನು ನಡೆಸಿತು.

### ಅಖಂಡ ಪ್ರಹಾರ್ ಸಮರಾಭ್ಯಾಸದ ಬಗ್ಗೆ

- 'ಆಪರೇಷನ್ ಅಖಂಡ ಪ್ರಹಾರ್' ಎಂಬುದು ಭಾರತೀಯ ಸೇನೆಯು ಕೈಗೊಂಡ ಬೃಹತ್ ಪ್ರಮಾಣದ, **'ಬಹು-ಕ್ಷೇತ್ರ ಯುದ್ಧ ಸಮರಾಭ್ಯಾಸವಾಗಿದೆ'.**
- ಬೃಹತ್ ಪ್ರಮಾಣದ ಭಾರತದ ಮೂರೂ ಸೇನೆಗಳ ಸಮರಾಭ್ಯಾಸವಾದ 'ತ್ರಿಶೂಲ್'ನ ಭಾಗವಾಗಿ, ದಕ್ಷಿಣ ಕಮಾಂಡ್ ಅಡಿಯಲ್ಲಿ ಮುಖ್ಯವಾಗಿ **ರಾಜಸ್ಥಾನದ ಮರುಭೂಮಿ ವಲಯದಲ್ಲಿ** ಈ ಸಮರಾಭ್ಯಾಸವನ್ನು ನಡೆಸಲಾಯಿತು.




## 9. ಐಎನ್‌ಎಸ್ ಮಾಹೆ

- **'ಐಎನ್‌ಎಸ್ ಮಾಹೆ'** ಎಂಬುದು 'ಮಾಹೆ-ವರ್ಗದ' ಮೊದಲ **'ಜಲಾಂತರ್ಗಾಮಿ ನಿರೋಧಕ** ಆಳವಿಲ್ಲದ ಜಲ ನೌಕೆ'' ಯಾಗಿದೆ.
- 2025 ರ ನವೆಂಬರ್ 24 ರಂದು ಮುಂಬೈನ ನೌಕಾ ಹಡಗುಕಟ್ಟೆಯಲ್ಲಿ ಇದನ್ನು ಭಾರತೀಯ ನೌಕಾಪಡೆಗೆ ಅಧಿಕೃತವಾಗಿ **ನಿಯೋಜಿಸಲಾಯಿತು.**
- ಕರಾವಳಿ ಭಾಗದ ಜಲಾಂತರ್ಗಾಮಿ ನಿರೋಧಕ ಸಾಮರ್ಥ್ಯವನ್ನು ಬಲಪಡಿಸುವ ನಿಟ್ಟಿನಲ್ಲಿ, ಇದನ್ನು **ಪಶ್ಚಿಮ ನೌಕಾ ಕಮಾಂಡ್‌ಗೆ** ಸೇರ್ಪಡೆಗೊಳಿಸಲಾಗಿದೆ.




# ಕ್ರೀಡೆ

## 1. ಏಷ್ಯನ್ ಯೂತ್ ಗೇಮ್ಸ್ 2025

### ಇದೀಗ ಸುದ್ದಿಯಲ್ಲಿದೆ

- ಏಷ್ಯನ್ ಯೂತ್ ಗೇಮ್ಸ್ 2025 ,ಈ ಖಂಡಾಂತರ ಕ್ರೀಡಾಕೂಟದಲ್ಲಿ ಭಾರತವು ಒಟ್ಟು 48 ಪದಕಗಳನ್ನು (13 ಚಿನ್ನ, 18 ಬೆಳ್ಳಿ ಮತ್ತು 17 ಕಂಚು) ಜಯಿಸುವ ಮೂಲಕ ತನ್ನ ಸಾರ್ವಕಾಲಿಕ ಶ್ರೇಷ್ಠ ಪ್ರದರ್ಶನವನ್ನು ದಾಖಲಿಸಿದೆ.

ಭಾರತೀಯ ಪದಕ ವಿಜೇತರ ವಿವರಗಳು ಈ ಕೆಳಗಿನಂತಿವೆ.

### ಚಿನ್ನದ ಪದಕ ವಿಜೇತರು (ಭಾರತ)

| ಕ್ರೀಡಾಪಟು/ ತಂಡ | ವಿಭಾಗ | ಕ್ರೀಡೆ | ಪದಕ |
|---|---|---|---|
| ಅಂಜಲಿ | ಬಾಲಕಿಯರ 55 ಕೆಜಿ | ಬೀಚ್ ಕುಸ್ತಿ | ಚಿನ್ನ |
| ಸಾನಿ ಫುಲ್ಮಾಲಿ | ಬಾಲಕರ 60 ಕೆಜಿ | ಬೀಚ್ ಕುಸ್ತಿ | ಚಿನ್ನ |
| ಅರ್ಜುನ್ ರುಹಿಲ್ | ಬಾಲಕರ 90 ಕೆಜಿ | ಬೀಚ್ ಕುಸ್ತಿ | ಚಿನ್ನ |
| ಖುಷಿ ಚಂದ್ | ಬಾಲಕಿಯರ 46 ಕೆಜಿ | ಬಾಕ್ಸಿಂಗ್ | ಚಿನ್ನ |
| ಅಹಾನಾ ಶರ್ಮಾ | ಬಾಲಕಿಯರ 50 ಕೆಜಿ | ಬಾಕ್ಸಿಂಗ್ | ಚಿನ್ನ |
| ಚಂದ್ರಿಕಾ ಪೂಜಾರಿ | ಬಾಲಕಿಯರ 54 ಕೆಜಿ | ಬಾಕ್ಸಿಂಗ್ | ಚಿನ್ನ |
| ಅಂಶಿಕಾ | ಬಾಲಕಿಯರ +80 ಕೆಜಿ | ಬಾಕ್ಸಿಂಗ್ | ಚಿನ್ನ |
| ಭಾರತ ಬಾಲಕಿಯರ ತಂಡ | ಬಾಲಕಿಯರ ತಂಡ | ಕಬಡ್ಡಿ | ಚಿನ್ನ |
| ಭಾರತ ಬಾಲಕರ ತಂಡ | ಬಾಲಕರ ತಂಡ | ಕಬಡ್ಡಿ | ಚಿನ್ನ |
| ಪ್ರೀತಿಸ್ಮಿತಾ ಭೋಯಿ | ಬಾಲಕಿಯರ 44 ಕೆಜಿ ಕ್ಲೀನ್ & ಜರ್ಕ್ | ವೇಟ್‌ಲಿಫ್ಟಿಂಗ್ (ಭಾರ ಎತ್ತುವಿಕೆ) | ಚಿನ್ನ |
| ಮೋನಿ | ಬಾಲಕಿಯರ ಫ್ರೀಸ್ಟೈಲ್ 57 ಕೆಜಿ | ಕುಸ್ತಿ | ಚಿನ್ನ |
| ಯಶಿತಾ | ಬಾಲಕಿಯರ ಫ್ರೀಸ್ಟೈಲ್ 61 ಕೆಜಿ | ಕುಸ್ತಿ | ಚಿನ್ನ |
| ಜೈವೀರ್ ಸಿಂಗ್ | ಬಾಲಕರ ಫ್ರೀಸ್ಟೈಲ್ 55 ಕೆಜಿ | ಕುಸ್ತಿ | ಚಿನ್ನ |

### ಬೆಳ್ಳಿ ಪದಕ ವಿಜೇತರು

| ಕ್ರೀಡಾಪಟು / ತಂಡ | ವಿಭಾಗ | ಕ್ರೀಡೆ | ಪದಕ |
|---|---|---|---|
| ಶೌರ್ಯ ಅಂಬುರೆ | ಬಾಲಕಿಯರ 100 ಮೀ ಹರ್ಡಲ್ಸ್ | ಅಥ್ಲೆಟಿಕ್ಸ್ | ಬೆಳ್ಳಿ |
| ಎಡ್ವಿನಾ ಜೇಸನ್ | ಬಾಲಕಿಯರ 400 ಮೀ | ಅಥ್ಲೆಟಿಕ್ಸ್ | ಬೆಳ್ಳಿ |
| ರಂಜನಾ ಯಾದವ್ | ಬಾಲಕಿಯರ 5000 ಮೀ ನಡಿಗೆ ಓಟ | ಅಥ್ಲೆಟಿಕ್ಸ್ | ಬೆಳ್ಳಿ |
| ಓಶಿನ್ | ಬಾಲಕಿಯರ ಡಿಸ್ಕಸ್ ಥ್ರೋ | ಅಥ್ಲೆಟಿಕ್ಸ್ | ಬೆಳ್ಳಿ |
| ಭಾರತ ಬಾಲಕಿಯರ ಮೆಡ್ಲೆ ರಿಲೇ | ಬಾಲಕಿಯರ ಮೆಡ್ಲೆ ರಿಲೇ | ಅಥ್ಲೆಟಿಕ್ಸ್ | ಬೆಳ್ಳಿ |
| ಸುಜಯ್ ನಾಗನಾಥ್ ತನ್ಪುರೆ | ಬಾಲಕರ 70 ಕೆಜಿ | ಬೀಚ್ ಕುಸ್ತಿ | ಬೆಳ್ಳಿ |
| ರವೀಂದರ್ | ಬಾಲಕರ 80 ಕೆಜಿ | ಬೀಚ್ ಕುಸ್ತಿ | ಬೆಳ್ಳಿ |
| ಹರ್ನೂರ್ ಕೌರ್ | ಬಾಲಕಿಯರ 66 ಕೆಜಿ | ಬಾಕ್ಸಿಂಗ್ | ಬೆಳ್ಳಿ |
| ಲಾಂಚೆಂಬಾ ಎಸ್. ಮೊಯಿಬುಂಗ್‌ಖಾಂಗ್‌ಬಾಮ್ | ಬಾಲಕರ 50 ಕೆಜಿ | ಬಾಕ್ಸಿಂಗ್ | ಬೆಳ್ಳಿ |
| ಮೋನಿಕಾ ಖುಯೆಂಥೆಮ್ | ಬಾಲಕಿಯರ -63 ಕೆಜಿ | ಜೂಡೋ | ಬೆಳ್ಳಿ |

| | | | |
|---|---|---|---|
| ಕನಿಷ್ಕಾ ಬಿಧುರಿ | ಬಾಲಕಿಯರ 52 ಕೆಜಿ | ಕುರಾಶ್ | ಬೆಳ್ಳಿ |
| ಶ್ರಿಯಾ ಮಿಲಿಂದ್ ಸತಮ್ | ಬಾಲಕಿಯರ 50 ಕೆಜಿ ಮಿಕ್ಸೆಡ್ | ಸಮರ ಕಲೆಗಳು (ಮಾರ್ಷಲ್ ಆರ್ಟ್ಸ್ | ಬೆಳ್ಳಿ |
| ತೀರ್ಥಾಂಕ್ ಪೆಗು | ಬಾಲಕರ 200 ಮೀ ಬಟರ್‌ಫ್ಲೈ | ಈಜು | ಬೆಳ್ಳಿ |
| ಪ್ರೀತಿಸ್ಮಿತಾ ಭೋಯಿ | ಬಾಲಕಿಯರ 44 ಕೆಜಿ ಸ್ನ್ಯಾಚ್ | ವೇಟ್‌ಲಿಫ್ಟಿಂಗ್ | ಬೆಳ್ಳಿ |
| ಮಹಾರಾಜನ್ ಆರುಮುಗಪಾಂಡಿಯನ್ | ಬಾಲಕರ 60 ಕೆಜಿ ಸ್ನ್ಯಾಚ್ | ವೇಟ್‌ಲಿಫ್ಟಿಂಗ್ | ಬೆಳ್ಳಿ |
| ಮಹಾರಾಜನ್ ಆರುಮುಗಪಾಂಡಿಯನ್ | ಬಾಲಕರ 60 ಕೆಜಿ ಕ್ಲೀನ್ & ಜರ್ಕ್ | ವೇಟ್‌ಲಿಫ್ಟಿಂಗ್ | ಬೆಳ್ಳಿ |
| ಅಶ್ವಿನಿ ವಿಷ್ಣೋಯಿ | ಬಾಲಕಿಯರ 69 ಕೆಜಿ ಫ್ರೀಸ್ಟೈಲ್ | ಕುಸ್ತಿ | ಬೆಳ್ಳಿ |
| ಗೌರವ್ ಪುನಿಯಾ | ಬಾಲಕರ ಫ್ರೀಸ್ಟೈಲ್ 65 ಕೆಜಿ | ಕುಸ್ತಿ | ಬೆಳ್ಳಿ |

### ಕಂಚಿನ ಪದಕ ವಿಜೇತರು

| ಕ್ರೀಡಾಪಟು / ತಂಡ | ವಿಭಾಗ | ಕ್ರೀಡೆ | ಪದಕ |
|---|---|---|---|
| ಭೂಮಿಕಾ ನೆಹಾಟೆ | ಬಾಲಕಿಯರ 200 ಮೀ | ಅಥ್ಲೆಟಿಕ್ಸ್ | ಕಂಚು |
| ಜಾಸ್ಮಿನ್ ಕೌರ್ | ಬಾಲಕಿಯರ ಶಾಟ್ ಪುಟ್ | ಅಥ್ಲೆಟಿಕ್ಸ್ | ಕಂಚು |
| ಪಲಾಶ್ ಮಂಡಲ್ | ಬಾಲಕರ 5000 ಮೀ ನಡಿಗೆ ಓಟ | ಅಥ್ಲೆಟಿಕ್ಸ್ | ಕಂಚು |
| ಜುಬಿನ್ ಗೊಹೈನ್ | ಬಾಲಕರ ಹೈ ಜಂಪ್ | ಅಥ್ಲೆಟಿಕ್ಸ್ | ಕಂಚು |
| ಅನಂತ್ ದೇಶಮುಖ್ | ಬಾಲಕರ 66 ಕೆಜಿ | ಬಾಕ್ಸಿಂಗ್ | ಕಂಚು |
| ಹರ್ಷಿತ್ | ಬಾಲಕರ -73 ಕೆಜಿ | ಜೂಡೋ | ಕಂಚು |
| ಖುಷಿ | ಬಾಲಕಿಯರ 70 ಕೆಜಿ | ಕುರಾಶ್ | ಕಂಚು |
| ಅರವಿಂದ್ | ಬಾಲಕರ 83 ಕೆಜಿ | ಕುರಾಶ್ | ಕಂಚು |
| ವೀರ್ ಭಾದು | ಬಾಲಕರ 80 ಕೆಜಿ | ಮಿಶ್ರಿತ ಸಮರ ಕಲೆಗಳು (ಮಾರ್ಷಲ್ ಆರ್ಟ್ಸ್) | ಕಂಚು |
| ಅಲ್ಫೋನ್ಸಾ ಜಿನಿಯಾ ವ್ರಿಯಾಂಗ್ | ಬಾಲಕಿಯರ ವಾಯಿ ಕ್ರು 16–17 | ಮೌಯಿ ಥಾಯ್ | ಕಂಚು |
| ಸಿಂಡ್ರೆಲಾ ದಾಸ್ / ಸಾರ್ಥಕ್ ಆರ್ಯ | ಮಿಶ್ರ ಡಬಲ್ಸ್ | ಟೇಬಲ್ ಟೆನ್ನಿಸ್ | ಕಂಚು |
| ದೇಬಶಿಶ್ ದಾಸ್ | ಬಾಲಕರ ವೈಯಕ್ತಿಕ ಪೂಮ್ಸಾ | ಟೇಕ್ವಾಂಡೋ | ಕಂಚು |
| ಶಿವಂಶು ಪಟೇಲ್ / ಯಶ್ವಿನಿ ಸಿಂಗ್ | ಮಿಶ್ರ ಜೋಡಿ ಪೂಮ್ಸಾ | ಟೇಕ್ವಾಂಡೋ | ಕಂಚು |
| ಭಾರತ ಮಿಶ್ರ ತಂಡ | ಮಿಶ್ರ ತಂಡ | ಟೇಕ್ವಾಂಡೋ | ಕಂಚು |
| ಪಾರ್ಥ್ ಚೌಧರಿ | ಬಾಲಕರ 94 ಕೆಜಿ ಕ್ಲೀನ್ & ಜರ್ಕ್ | ವೇಟ್‌ಲಿಫ್ಟಿಂಗ್ | ಕಂಚು |
| ರಚನಾ | ಬಾಲಕಿಯರ ಫ್ರೀಸ್ಟೈಲ್ 43 ಕೆಜಿ | ಕುಸ್ತಿ | ಕಂಚು |
| ಕೋಮಲ್ ವರ್ಮಾ | ಬಾಲಕಿಯರ ಫ್ರೀಸ್ಟೈಲ್ 49 ಕೆಜಿ | ಕುಸ್ತಿ | ಕಂಚು |

### ಕ್ರೀಡಾಕೂಟದಲ್ಲಿ ಅಗ್ರಸ್ಥಾನದಲ್ಲಿರುವ ದೇಶಗಳು

| ಶ್ರೇಯಾಂಕ | ದೇಶ | ಚಿನ್ನ | ಬೆಳ್ಳಿ | ಕಂಚು | ಒಟ್ಟು |
|---|---|---|---|---|---|
| 1 | ಚೀನಾ | 63 | 49 | 35 | 147 |
| 2 | ಉಜ್ಬೇಕಿಸ್ತಾನ್ | 37 | 16 | 28 | 81 |
| 3 | ಕಜಕಿಸ್ತಾನ್ | 24 | 29 | 40 | 93 |
| 4 | ಇರಾನ್ | 22 | 18 | 36 | 76 |
| 5 | ಥೈಲ್ಯಾಂಡ್ | 15 | 15 | 18 | 48 |
| 6 | **ಭಾರತ** | **13** | **18** | **17** | **48** |

## 2. ಡೇವಿಸ್ ಕಪ್ 2025




### ಇದೀಗ ಸುದ್ದಿಯಲ್ಲಿದೆ

- **ಇಟಲಿಯ ಬೊಲೊಗ್ನಾದಲ್ಲಿ** ನಡೆದ 2025ರ ಡೇವಿಸ್ ಕಪ್ ಟೂರ್ನಮೆಂಟ್‌ನ ಫೈನಲ್-8 ಹಂತದ ಪಂದ್ಯದಲ್ಲಿ, **ಇಟಲಿ** ತಂಡವು ಸ್ಪೇನ್ ವಿರುದ್ಧ 2-0 ಅಂತರದ ಜಯಗಳಿಸಿ ಚಾಂಪಿಯನ್ ಆಗಿ ಹೊರಹೊಮ್ಮಿತು. **ಸ್ಪೇನ್** ತಂಡವು 'ರನ್ನರ್-ಅಪ್' ಸ್ಥಾನಕ್ಕೆ ತೃಪ್ತಿಪಡಬೇಕಾಯಿತು.

### ಡೇವಿಸ್ ಕಪ್ ನ ಬಗ್ಗೆ

- ಡೇವಿಸ್ ಕಪ್ ಎಂಬುದು **ಪುರುಷರ ಪ್ರಮುಖ ಅಂತರರಾಷ್ಟ್ರೀಯ ಟೆನ್ನಿಸ್ ಟೂರ್ನಮೆಂಟ್ ಆಗಿದೆ.** ಇದನ್ನು ಸಾಮಾನ್ಯವಾಗಿ **"ಟೆನ್ನಿಸ್ ವಿಶ್ವಕಪ್"** ಎಂದು ಕರೆಯಲಾಗುತ್ತದೆ.
- **'ಅಂತರರಾಷ್ಟ್ರೀಯ ಟೆನ್ನಿಸ್ ಫೆಡರೇಶನ್' (ITF) ಇದನ್ನು ವಾರ್ಷಿಕವಾಗಿ** ಆಯೋಜಿಸುತ್ತದೆ.
- ಈ ಸ್ಪರ್ಧೆಯಲ್ಲಿ **ವೈಯಕ್ತಿಕ ಆಟಗಾರರ ಬದಲಿಗೆ ವಿವಿಧ ದೇಶಗಳ ರಾಷ್ಟ್ರೀಯ ತಂಡಗಳು ಪರಸ್ಪರ ಸೆಣಸಾಡುತ್ತವೆ.**

## 3. ಆಸ್ಟ್ರೇಲಿಯನ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಮೆಂಟ್

### ಇದೀಗ ಸುದ್ದಿಯಲ್ಲಿದೆ

- ಸಿಡ್ನಿಯಲ್ಲಿ ನಡೆದ 2025ರ ಸಾಲಿನ ಆಸ್ಟ್ರೇಲಿಯನ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಮೆಂಟ್‌ನಲ್ಲಿ, ಭಾರತದ ತಾರಾ ಆಟಗಾರ

ಲಕ್ಷ್ಯ ಸೇನ್ ಅವರು ಪುರುಷರ ಸಿಂಗಲ್ಸ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ. ಫೈನಲ್ ಹಣಾಹಣಿಯಲ್ಲಿ ಅವರು ಜಪಾನ್‌ನ ಯುಶಿ ತನಕಾ ಅವರನ್ನು 21–15, 21–11 ಅಂತರದಲ್ಲಿ ಮಣಿಸಿದರು.




### ವಿಜೇತರು

| ವಿಭಾಗ | ವಿಜೇತರು | ರನ್ನರ್-ಅಪ್ | ವಿವರಗಳು |
|---|---|---|---|
| ಪುರುಷರ ಸಿಂಗಲ್ಸ್ | ಲಕ್ಷ್ಯ ಸೇನ್ (ಭಾರತ) | ಯುಶಿ ತನಕಾ (ಜಪಾನ್) | ಸೇನ್ ಅವರು 21–15, 21–11 ಅಂತರದಲ್ಲಿ ಗೆದ್ದರು. ಇದು 2025 ರ ಅವರ ಮೊದಲ BWF ವರ್ಲ್ಡ್ ಟೂರ್ ಪ್ರಶಸ್ತಿ ಮತ್ತು ಮೂರನೇ ಸೂಪರ್ 500 ಕಿರೀಟವಾಗಿದೆ. |
| ಮಹಿಳೆಯರ ಸಿಂಗಲ್ಸ್ | ಆನ್ ಸೆ-ಯಂಗ್ (ಜಪಾನ್) | ಪುತ್ರಿ ಕುಸುಮ ವರ್ದಿನಿ | ಮಹಿಳೆಯರ ಸಿಂಗಲ್ಸ್ ಪ್ರಶಸ್ತಿಯನ್ನು ಗೆದ್ದರು. |
| ಪುರುಷರ ಡಬಲ್ಸ್ | ರೇಮಂಡ್ ಇಂದ್ರ / ನಿಕೋಲಸ್ ಜೋಕ್ವಿನ್ | ಫಜರ್ ಅಲ್ಫಿಯಾನ್ ಮತ್ತು ಮುಹಮ್ಮದ್ ಶೋಹಿಬುಲ್ ಫಿಕ್ರಿ | ಪುರುಷರ ಡಬಲ್ಸ್ ಪ್ರಶಸ್ತಿಯನ್ನು ಗೆದ್ದರು. |
| ಮಹಿಳೆಯರ ಡಬಲ್ಸ್ | ರಾಚೆಲ್ ಅಲೆಸ್ಸ್ಯಾ ರೋಸ್ / ಫೆಬಿ ಸೆಟಿಯಾನಿಂಗ್ರಮ್ | ಫೆಬ್ರಿಯಾನಾ ಕುಸುಮ / ಮೆಲಿಸಾ ಟ್ರಿಯಾಸ್ ಪುಷ್ಪಿತಾ ಸಾರಿ | ಮಹಿಳೆಯರ ಡಬಲ್ಸ್ ಪ್ರಶಸ್ತಿಯನ್ನು ಗೆದ್ದರು. |
| ಮಿಶ್ರ ಡಬಲ್ಸ್ | ಚೆನ್ ಟ್ಯಾಂಗ್ ಜಿ / ತೋಹ್ ಈ ವೀ (ಮಲೇಷ್ಯಾ) | ಜಾಫರ್ ಹಿದಾಯತುಲ್ಲಾ / ಫೆಲಿಷಾ ಪಸರಿಬು (ಇಂಡೋನೇಷ್ಯಾ) | ಮಿಶ್ರ ಡಬಲ್ಸ್ ಪ್ರಶಸ್ತಿಯನ್ನು ಗೆದ್ದರು. |

## 4. ದೃಷ್ಟಿಚೇತನ ಮಹಿಳೆಯರ ಟಿ20 ವಿಶ್ವಕಪ್ 2025

### ಇದೀಗ ಸುದ್ದಿಯಲ್ಲಿದೆ

- ಫೈನಲ್ ಪಂದ್ಯದಲ್ಲಿ ನೇಪಾಳ ತಂಡವನ್ನು ಏಳು ವಿಕೆಟ್‌ಗಳಿಂದ ಮಣಿಸುವ ಮೂಲಕ, ಭಾರತ ತಂಡವು ಉದ್ಘಾಟನಾ 'ದೃಷ್ಟಿಚೇತನ ಮಹಿಳೆಯರ ಟಿ20 ವಿಶ್ವಕಪ್ 2025' ಅನ್ನು ಜಯಿಸಿ, ಐತಿಹಾಸಿಕ ಸಾಧನೆಗೈದಿದೆ.



### ದೃಷ್ಟಿಚೇತನ ಮಹಿಳೆಯರ ಟಿ20 ವಿಶ್ವಕಪ್ ನ ಬಗ್ಗೆ

- **ಆತಿಥ್ಯ: ಇದೇ ಮೊದಲ ಬಾರಿಗೆ** ಆಯೋಜಿಸಲಾದ ದೃಷ್ಟಿಚೇತನ ಮಹಿಳೆಯರ ಟಿ20 ವಿಶ್ವಕಪ್‌ಗೆ **ಭಾರತ ಮತ್ತು ಶ್ರೀಲಂಕಾ ಜಂಟಿಯಾಗಿ ಆತಿಥ್ಯ** ವಹಿಸಿದ್ದವು.
- **ಫೈನಲ್ ಪಂದ್ಯದ ಸ್ಥಳ:** ಫೈನಲ್ ಪಂದ್ಯವು **ಶ್ರೀಲಂಕಾದ ಕೊಲಂಬೊದಲ್ಲಿರುವ 'ಪಿ ಸಾರಾ ಓವಲ್' ಕ್ರೀಡಾಂಗಣ**ದಲ್ಲಿ ನಡೆಯಿತು.
- ಅಜೇಯ ಸಾಧನೆ: ಟೂರ್ನಮೆಂಟ್‌ನಾದ್ಯಂತ ಅಜೇಯವಾಗುಳಿದ ಭಾರತ, ಲೀಗ್ ಹಂತದಲ್ಲಿ ಶ್ರೀಲಂಕಾ, ಆಸ್ಟ್ರೇಲಿಯಾ, ನೇಪಾಳ, ಯುಎಸ್‌ಎ ಮತ್ತು ಪಾಕಿಸ್ತಾನದ ವಿರುದ್ಧ ಹಾಗೂ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಗೆಲುವು ಸಾಧಿಸಿತು.
- **'ಸರಣಿ ಶ್ರೇಷ್ಠ ಪ್ರಶಸ್ತಿ:** ಟೂರ್ನಮೆಂಟ್‌ನ 'ಸರಣಿ ಶ್ರೇಷ್ಠ' ಪ್ರಶಸ್ತಿಯು **ಭಾರತ ತಂಡದ ನಾಯಕಿ 'ವರ್ಷಾ ಉಮಾಪತಿ'** ಅವರಿಗೆ ಲಭಿಸಿತು.

## 5. ವಿಶ್ವ ಬಾಕ್ಸಿಂಗ್ ಕಪ್ ಫೈನಲ್ಸ್ 2025




### ಇದೀಗ ಸುದ್ದಿಯಲ್ಲಿ

- ವಿಶ್ವ ಬಾಕ್ಸಿಂಗ್ ಕಪ್ ಫೈನಲ್ಸ್ 2025 ರಲ್ಲಿ ಒಂಬತ್ತು ಚಿನ್ನದ ಪದಕಗಳನ್ನು ಗೆಲ್ಲುವ ಮೂಲಕ ಮತ್ತು ಒಟ್ಟಾರೆ ಪದಕ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರುವ ಮೂಲಕ ಭಾರತವು ದಾಖಲೆಯ ಪ್ರದರ್ಶನ ನೀಡಿತು.

### ವಿಶ್ವ ಬಾಕ್ಸಿಂಗ್ ಫೈನಲ್ಸ್ 2025: ಭಾರತದ ಸಾಧನೆ

- **ಆತಿಥೇಯ ನಗರ ಮತ್ತು ಸ್ಥಳ:** ಉತ್ತರ ಪ್ರದೇಶದ ಗ್ರೇಟರ್ ನೋಯ್ಡಾದಲ್ಲಿರುವ 'ಶಹೀದ್ ವಿಜಯ್ ಸಿಂಗ್ ಪಥಿಕ್ ಸ್ಪೋರ್ಟ್ಸ್ ಕಾಂಪ್ಲೆಕ್ಸ್'.
- **ಭಾರತದ ಸಾಧನೆ:** ಭಾರತವು **ಒಟ್ಟು 20 ಪದಕ**ಗಳನ್ನು (9 ಚಿನ್ನ, 6 ಬೆಳ್ಳಿ, 5 ಕಂಚು) ಜಯಿಸಿತು. ವಿಶೇಷವೆಂದರೆ, ಭಾಗವಹಿಸಿದ ಎಲ್ಲಾ 20 ಭಾರತೀಯ ಬಾಕ್ಸರ್‌ಗಳು ಪದಕ ಗೆದ್ದಿದ್ದಾರೆ.
  - **ಭಾರತದ ಒಟ್ಟು ಚಿನ್ನದ ಪದಕಗಳು:** ಒಟ್ಟು **9** (ಮಹಿಳಾ ವಿಭಾಗದಲ್ಲಿ 7 ಮತ್ತು ಪುರುಷರ ವಿಭಾಗದಲ್ಲಿ 2).

### ಭಾರತದ ಪದಕ ವಿಜೇತರು

### ಮಹಿಳಾ ವಿಭಾಗ

| ಬಾಕ್ಸರ್ | ತೂಕ ವಿಭಾಗ | ಪದಕ |
|---|---|---|
| ಮೀನಾಕ್ಷಿ ಹೂಡಾ | 48 ಕೆಜಿ | ಚಿನ್ನ |
| ನಿಖತ್ ಜರೀನ್ | 51 ಕೆಜಿ | ಚಿನ್ನ |
| ಪ್ರೀತಿ ಪವಾರ್ | 54 ಕೆಜಿ | ಚಿನ್ನ |
| ಜೈಸ್ಮಿನ್ ಲ್ಯಾಂಬೋರಿಯಾ | 57 ಕೆಜಿ | ಚಿನ್ನ |
| ಪರ್ವೀನ್ ಹೂಡಾ | 60 ಕೆಜಿ | ಚಿನ್ನ |
| ಅರುಂಧತಿ ಚೌಧರಿ | 70 ಕೆಜಿ | ಚಿನ್ನ |
| ನೂಪುರ್ ಶಿಯೋರಾನ್ | 80+ ಕೆಜಿ | ಚಿನ್ನ |
| ಪೂಜಾ ರಾಣಿ | 80 ಕೆಜಿ | ಬೆಳ್ಳಿ |
| ನೀರಜ್ ಫೋಗಟ್ | 65 ಕೆಜಿ | ಕಂಚು |
| ಸ್ವೀಟಿ ಬೂರಾ | 75 ಕೆಜಿ | ಕಂಚು |

### ಪುರುಷರ ವಿಭಾಗ

| ಬಾಕ್ಸರ್ | ತೂಕ ವಿಭಾಗ | ಪದಕ |
|---|---|---|
| ಸಚಿನ್ ಸಿವಾಚ್ | 60 ಕೆಜಿ | ಚಿನ್ನ |
| ಹಿತೇಶ್ ಗುಲಿಯಾ | 70 ಕೆಜಿ | ಚಿನ್ನ |

| | | |
|---|---|---|
| ಜದುಮಣಿ ಸಿಂಗ್ | 50 ಕೆಜಿ | ಬೆಳ್ಳಿ |
| ಪವನ್ ಬರ್ತ್ವಾಲ್ | 55 ಕೆಜಿ | ಬೆಳ್ಳಿ |
| ಅಭಿನಾಶ್ ಜಮ್ವಾಲ್ | 65 ಕೆಜಿ | ಬೆಳ್ಳಿ |
| ಅಂಕುಶ್ ಪಂಘಲ್ | 80 ಕೆಜಿ | ಬೆಳ್ಳಿ |
| ನರೇಂದರ್ ಬೆರ್ವಾಲ್ | 90+ ಕೆಜಿ | ಬೆಳ್ಳಿ |
| ಸುಮಿತ್ ಕುಂಡು | 75 ಕೆಜಿ | ಕಂಚು |
| ಜುಗ್ನು | 85 ಕೆಜಿ | ಕಂಚು |
| ನವೀನ್ | 90 ಕೆಜಿ | ಕಂಚು |

### ವಿಶ್ವ ಬಾಕ್ಸಿಂಗ್ ('ವರ್ಲ್ಡ್ ಬಾಕ್ಸಿಂಗ್') ನ ಬಗ್ಗೆ

- ವಿಶ್ವ ಬಾಕ್ಸಿಂಗ್ ಎಂಬುದು **ಒಲಿಂಪಿಕ್ ಶೈಲಿಯ ಬಾಕ್ಸಿಂಗ್ ಮತ್ತು ಬಾಕ್ಸರ್‌ಗಳ ಹಿತಾಸಕ್ತಿಗಳಿಗೆ ಆದ್ಯತೆ ನೀಡುವ ಲಾಭರಹಿತ ಅಂತರರಾಷ್ಟ್ರೀಯ ಕ್ರೀಡಾ ಒಕ್ಕೂಟವಾಗಿದೆ.**
- **ಒಲಿಂಪಿಕ್ ಆಂದೋಲನದ ಭಾಗವಾಗಿ ಬಾಕ್ಸಿಂಗ್ ಕ್ರೀಡೆಯನ್ನು ಉಳಿಸಿಕೊಳ್ಳುವುದು ಮತ್ತು ಭದ್ರಪಡಿಸುವುದು** ಇದರ ಮುಖ್ಯ ಗುರಿಯಾಗಿದೆ.
- ಈ ಹಿಂದೆ ಇದ್ದ ಒಲಿಂಪಿಕ್ ಬಾಕ್ಸಿಂಗ್ ಮಂಡಳಿಯಲ್ಲಿನ ಸಮಗ್ರತೆ, ಆಡಳಿತ, ಪಾರದರ್ಶಕತೆ ಮತ್ತು ಹಣಕಾಸಿನ ಸಮಸ್ಯೆಗಳ ಬಗ್ಗೆ ಕಾಳಜಿ ಹೊಂದಿದ್ದ **ರಾಷ್ಟ್ರೀಯ ಒಕ್ಕೂಟಗಳು** ಸೇರಿ ಇದನ್ನು ರಚಿಸಿವೆ.
- ಏಪ್ರಿಲ್ 2023 ರಲ್ಲಿ ಇದನ್ನು ಸಾರ್ವಜನಿಕವಾಗಿ ಪ್ರಾರಂಭಿಸಲಾಯಿತು. **2025 ರ ಆರಂಭದ ವೇಳೆಗೆ ಎಲ್ಲಾ ಐದು ಖಂಡಗಳಲ್ಲಿ 60 ಸದಸ್ಯ ರಾಷ್ಟ್ರೀಯ ಒಕ್ಕೂಟಗಳನ್ನು ಇದು ಹೊಂದಿದೆ.**

## 6. ಏಷ್ಯನ್ ಆರ್ಚರಿ ಚಾಂಪಿಯನ್‌ಶಿಪ್ 2025

### ಇದೀಗ ಸುದ್ದಿಯಲ್ಲಿದೆ

- ಏಷ್ಯನ್ ಆರ್ಚರಿ (ಬಿಲ್ಲುಗಾರಿಕೆ) ಚಾಂಪಿಯನ್‌ಶಿಪ್‌ನ 24 ನೇ ಆವೃತ್ತಿಯು 2025ರ ನವೆಂಬರ್ 8 ರಿಂದ 14 ರವರೆಗೆ ಬಾಂಗ್ಲಾದೇಶದ ಢಾಕಾದಲ್ಲಿ ನಡೆಯಿತು.

### ಏಷ್ಯನ್ ಆರ್ಚರಿ ಚಾಂಪಿಯನ್‌ಶಿಪ್ 2025 ರ ಬಗ್ಗೆ

- **ಆತಿಥೇಯ ನಗರ: ಢಾಕಾ (ಬಾಂಗ್ಲಾದೇಶ)**
- **ಅವಧಿ:** 8–14 ನವೆಂಬರ್ 2025.
- **ಭಾಗವಹಿಸುವಿಕೆ:** ಈ ಕೂಟದಲ್ಲಿ 29 ಏಷ್ಯಾದ ರಾಷ್ಟ್ರಗಳಿಂದ 200 ಕ್ಕೂ ಹೆಚ್ಚು ಕ್ರೀಡಾಪಟುಗಳು **'ರಿಕರ್ವ್'** ಮತ್ತು **'ಕಂಪೌಂಡ್'** ವಿಭಾಗಗಳಲ್ಲಿ ಸ್ಪರ್ಧಿಸಿದರು.

### ಭಾರತದ ಪ್ರದರ್ಶನ

- **ಐತಿಹಾಸಿಕ ಸಾಧನೆ: ಪದಕ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆಯುವ ಮೂಲಕ ಭಾರತವು** ಅತ್ಯಂತ ಯಶಸ್ವಿ ರಾಷ್ಟ್ರವಾಗಿ ಹೊರಹೊಮ್ಮಿತು.
- ಪದಕಗಳ ಗಳಿಕೆ: ಭಾರತವು 6 ಚಿನ್ನ, 3 ಬೆಳ್ಳಿ ಮತ್ತು 1 ಕಂಚು ಸೇರಿದಂತೆ ಒಟ್ಟು 10 ಪದಕಗಳನ್ನು ಜಯಿಸಿತು. ಏಷ್ಯನ್ ಆರ್ಚರಿ ಚಾಂಪಿಯನ್‌ಶಿಪ್ ಇತಿಹಾಸದಲ್ಲೇ ಇದು ಭಾರತದ ಅತ್ಯುತ್ತಮ ಪ್ರದರ್ಶನವಾಗಿದೆ.

### ಪ್ರಮುಖ ಚಿನ್ನದ ಪದಕ ವಿಜೇತರು

- **ರಿಕರ್ವ್ ಪುರುಷರ ವೈಯಕ್ತಿಕ:** ಧೀರಜ್ ಬೊಮ್ಮದೇವರ (ಚಿನ್ನ), ರಾಹುಲ್ (ಬೆಳ್ಳಿ).
- **ರಿಕರ್ವ್ ಮಹಿಳೆಯರ ವೈಯಕ್ತಿಕ:** ಅಂಕಿತಾ ಭಕತ್ (ಚಿನ್ನ), ಸಂಗೀತಾ (ಕಂಚು).
- **ರಿಕರ್ವ್ ಪುರುಷರ ತಂಡ:** ಭಾರತೀಯ ತಂಡ (ಅತನು ದಾಸ್, ರಾಹುಲ್, ಯಶದೀಪ್ ಭೋಗೆ) ದಕ್ಷಿಣ ಕೊರಿಯಾವನ್ನು ಮಣಿಸಿ ಚಿನ್ನ ಗೆದ್ದಿತು.
- **ಕಂಪೌಂಡ್ ಮಹಿಳೆಯರ ವೈಯಕ್ತಿಕ:** ಜ್ಯೋತಿ ಸುರೇಖಾ ವೆನ್ನಮ್ (ಚಿನ್ನ), ಪ್ರೀತಿಕಾ ಪ್ರದೀಪ್ (ಬೆಳ್ಳಿ).
- **ಕಂಪೌಂಡ್ ಮಹಿಳೆಯರ ತಂಡ:** ಭಾರತೀಯ ತಂಡ (ಜ್ಯೋತಿ ಸುರೇಖಾ, ದೀಪ್ಶಿಖಾ, ಪ್ರೀತಿಕಾ ಪ್ರದೀಪ್) ಚಿನ್ನ ಜಯಿಸಿತು.
- **ಕಂಪೌಂಡ್ ಮಿಶ್ರ ತಂಡ:** ಭಾರತದ ಜೋಡಿ (ದೀಪ್ಶಿಖಾ, ಅಭಿಷೇಕ್ ವರ್ಮಾ) ಚಿನ್ನದ ಪದಕ ಪಡೆಯಿತು.

### ಒಟ್ಟಾರೆ ಪದಕ ಪಟ್ಟಿ (ಅಗ್ರ ರಾಷ್ಟ್ರಗಳು)

| ಶ್ರೇಯಾಂಕ | ರಾಷ್ಟ್ರ | ಚಿನ್ನ | ಬೆಳ್ಳಿ | ಕಂಚು | ಒಟ್ಟು |
|---|---|---|---|---|---|
| **1** | **ಭಾರತ** | **6** | **3** | **1** | **10** |
| **2** | **ದಕ್ಷಿಣ ಕೊರಿಯಾ** | 2 | 4 | 4 | 10 |
| **3** | **ಚೈನೀಸ್ತೈಪೆ** | 1 | 1 | 0 | 2 |
| **4** | **ಕಜಕಿಸ್ತಾನ್** | 1 | 0 | 0 | 1 |
| **5** | **ಬಾಂಗ್ಲಾದೇಶ** | 0 | 1 | 1 | 2 |

## 7. ಅಕ್ಟೋಬರ್ 2025 ರ ಐಸಿಸಿ ತಿಂಗಳ ಆಟಗಾರರು


- **ತಿಂಗಳ ಪುರುಷ ಆಟಗಾರ: ಸೆನುರಾನ್ ಮುತ್ತುಸಾಮಿ (ದಕ್ಷಿಣ ಆಫ್ರಿಕಾ).**
  - **ಸಾಧನೆ:** ಪಾಕಿಸ್ತಾನ ವಿರುದ್ಧದ ಟೆಸ್ಟ್ ಸರಣಿಯಲ್ಲಿ ನೀಡಿದ ಅತ್ಯುತ್ತಮ ಸರ್ವತೋಮುಖ ಪ್ರದರ್ಶನಕ್ಕಾಗಿ ಇವರನ್ನು ಈ ಗೌರವಕ್ಕೆ ಆಯ್ಕೆ ಮಾಡಲಾಗಿದೆ.

INSTAKAS




### 🗎 ತಿಂಗಳ ಮಹಿಳಾ ಆಟಗಾರ್ತಿ : ಲಾರಾ ವೊಲ್ವಾರ್ಡ್ಟ್ (ದಕ್ಷಿಣ ಆಫ್ರಿಕಾ).

- **ಸಾಧನೆ:** ಐಸಿಸಿ ಮಹಿಳಾ ಕ್ರಿಕೆಟ್ ವಿಶ್ವಕಪ್ 2025 ರಲ್ಲಿ ತೋರಿದ ಪ್ರಚಂಡ ಬ್ಯಾಟಿಂಗ್ ಮತ್ತು ಯಶಸ್ವಿ ನಾಯಕತ್ವಕ್ಕಾಗಿ ಇವರನ್ನು ಗೌರವಿಸಲಾಗಿದೆ. ಈ ಪಂದ್ಯಾವಳಿಯಲ್ಲಿ ಅವರು ಅತಿ ಹೆಚ್ಚು ರನ್ ಗಳಿಸಿದ ಆಟಗಾರ್ತಿಯಾಗಿ ಹೊರಹೊಮ್ಮಿದರು.




## 8. ಸರ್ ಡೇವಿಡ್ ಬೆಕ್‌ಹ್ಯಾಮ್ ಅವರಿಗೆ ನೈಟ್‌ಹುಡ್ ಗೌರವ



### 🗎 ಇದೀಗ ಸುದ್ದಿಯಲ್ಲಿದೆ

- **ಇಂಗ್ಲೆಂಡ್‌ನ ಫುಟ್ಬಾಲ್ ದಿಗ್ಗಜ ಡೇವಿಡ್ ಬೆಕ್‌ಹ್ಯಾಮ್** ಅವರಿಗೆ ಬ್ರಿಟನ್ ರಾಜ ಚಾರ್ಲ್ಸ್ III ಅವರಿಂದ ಅಧಿಕೃತವಾಗಿ **'ನೈಟ್‌ಹುಡ್'** ಗೌರವವನ್ನು ಪ್ರದಾನ ಮಾಡಲಾಗಿದೆ. ಈ ಗೌರವದೊಂದಿಗೆ, ಇನ್ನು ಮುಂದೆ ಅವರನ್ನು **'ಸರ್ ಡೇವಿಡ್ ಬೆಕ್‌ಹ್ಯಾಮ್'** ಎಂದು ಸಂಬೋಧಿಸಲಾಗುತ್ತದೆ.

### 🗎 ಪ್ರಮುಖಾಂಶಗಳು

- 2025 ರ ನವೆಂಬರ್ 4 ರಂದು ವಿಂಡ್ಸರ್ ಕ್ಯಾಸಲ್‌ನಲ್ಲಿ ನಡೆದ ವರ್ಣರಂಜಿತ ಸಮಾರಂಭದಲ್ಲಿ ಈ ಗೌರವವನ್ನು ನೀಡಲಾಯಿತು.
- ಫುಟ್‌ಬಾಲ್ ಕ್ರೀಡೆ, ದತ್ತಿ ಮತ್ತು ಜನೋಪಯೋಗಿ ಕಾರ್ಯಗಳು ಮತ್ತು ಸಾರ್ವಜನಿಕ ಜೀವನಕ್ಕೆ ಸಲ್ಲಿಸಿದ ಅನನ್ಯ ಸೇವೆಗಾಗಿ ಅವರನ್ನು **'ನೈಟ್ ಬ್ಯಾಚುಲರ್'** ಆಗಿ ಗೌರವಿಸಲಾಗಿದೆ.
- ಈ ಸಮಾರಂಭವು 'ಕಿಂಗ್ಸ್‌ಬರ್ತ್‌ಡೇ ಹಾನರ್ಸ್'ನ ಭಾಗವಾಗಿತ್ತು. ಈ ಹಿಂದೆ 2003 ರಲ್ಲಿ ಅವರು **'ಒಬಿಇ'** ಗೌರವ ಪಡೆದಿದ್ದರು. ಇದೀಗ 20 ವರ್ಷಗಳ ನಂತರ ಈ ಉನ್ನತ ಮನ್ನಣೆ ಲಭಿಸಿದ್ದು, ಕ್ರೀಡಾಂಗಣದ ಒಳಗೆ ಮತ್ತು ಹೊರಗೆ ಅವರ ಸಾಧನೆಗಳ ಪರಾಕಾಷ್ಠೆಯನ್ನು ಇದು ಸೂಚಿಸುತ್ತದೆ.

## 9. ಐಸಿಸಿ ಮಹಿಳಾ ಏಕದಿನ ವಿಶ್ವಕಪ್ 2025: ಭಾರತಕ್ಕೆ ಐತಿಹಾಸಿಕ ಜಯ




### 🗎 ಇದೀಗ ಸುದ್ದಿಯಲ್ಲಿದೆ

- ನವಿ ಮುಂಬೈನ ಡಿವೈ ಪಾಟೀಲ್ ಕ್ರೀಡಾಂಗಣದಲ್ಲಿ 2025ರ ನವೆಂಬರ್ 2 ರಂದು ನಡೆದ ಫೈನಲ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾವನ್ನು ಮಣಿಸುವ ಮೂಲಕ, ಭಾರತದ ಮಹಿಳಾ ಕ್ರಿಕೆಟ್ ತಂಡವು ತನ್ನ ಚೊಚ್ಚಲ 'ಐಸಿಸಿ ಮಹಿಳಾ ಏಕದಿನ ವಿಶ್ವಕಪ್' ಪ್ರಶಸ್ತಿಯನ್ನು ಗೆದ್ದು ಇತಿಹಾಸ ನಿರ್ಮಿಸಿದೆ.

### 🗎 ಐಸಿಸಿ ಮಹಿಳಾ ಏಕದಿನ ವಿಶ್ವಕಪ್ 2025: ರ ಪ್ರಮುಖ ಅಂಶಗಳು

- **ಆವೃತ್ತಿ:** 2025 ರ ಈ ವಿಶ್ವಕಪ್ ಪಂದ್ಯಾವಳಿಯು ಮಹಿಳಾ ಕ್ರಿಕೆಟ್ ವಿಶ್ವಕಪ್‌ನ **13ನೇ ಆವೃತ್ತಿಯಾಗಿದೆ**. ಇದು 2022 ರ ಆವೃತ್ತಿಯ ನಂತರ 4 ವರ್ಷಗಳ ಅಂತರದಲ್ಲಿ ನಡೆಯಿತು.
- **ಆತಿಥ್ಯ: ಭಾರತ ಮತ್ತು ಶ್ರೀಲಂಕಾ** ಜಂಟಿಯಾಗಿ ಈ ಪಂದ್ಯಾವಳಿಯನ್ನು ಆಯೋಜಿಸಿದ್ದವು. 2025ರ ಸೆಪ್ಟೆಂಬರ್ 30 ರಿಂದ ನವೆಂಬರ್ 2 ರವರೆಗೆ ನಡೆದ ಈ ಕೂಟದಲ್ಲಿ 8 ತಂಡಗಳು 31 ಪಂದ್ಯಗಳಲ್ಲಿ ಸೆಣಸಾಡಿದವು.
- **ಭಾರತದ ಆತಿಥ್ಯ:** ಭಾರತವು ನಾಲ್ಕನೇ ಬಾರಿಗೆ (ಹಿಂದೆ 1978, 1997 ಮತ್ತು 2013 ರಲ್ಲಿ) ವಿಶ್ವಕಪ್ ಆತಿಥ್ಯ ವಹಿಸಿತ್ತು. ನವಿ ಮುಂಬೈ, ಗುವಾಹಟಿ, ವಿಶಾಖಪಟ್ಟಣಂ ಮತ್ತು ಕೊಲಂಬೊ ಪ್ರಮುಖ ಪಂದ್ಯದ ತಾಣಗಳಾಗಿದ್ದವು.

### 🗎 ಬಹುಮಾನ ಮತ್ತು ಪ್ರಶಸ್ತಿಗಳು

- **ಬಹುಮಾನ ಮೊತ್ತ:** ವಿಶ್ವಕಪ್ ಪಂದ್ಯಾವಳಿಯ ಒಟ್ಟು ಬಹುಮಾನದ ಮೊತ್ತ USD 4.48 ಮಿಲಿಯನ್ (ಅಂದಾಜು ₹39 ಕೋಟಿ). ವಿಶ್ವಕಪ್ ಗೆದ್ದ ಭಾರತೀಯ ತಂಡಕ್ಕೆ **ಬಿಸಿಸಿಐ**

ಪ್ರತ್ಯೇಕವಾಗಿ ₹51 ಕೋಟಿ ನಗದು ಬಹುಮಾನವನ್ನು ಘೋಷಿಸಿತು.

- **ಪಂದ್ಯ ಶ್ರೇಷ್ಠ (ಫೈನಲ್):** ಶಫಾಲಿ ವರ್ಮಾ.
- **ಸರಣಿ ಶ್ರೇಷ್ಠ :** ದೀಪ್ತಿ ಶರ್ಮಾ (22 ವಿಕೆಟ್ ಮತ್ತು 215 ರನ್).

### ಕಳೆದ ನಾಲ್ಕು ಆವೃತ್ತಿಗಳ ವಿಜೇತರು

| ವರ್ಷ | ವಿಜೇತರು | ರನ್ನರ್-ಅಪ್ | ಆತಿಥೇಯ ರಾಷ್ಟ್ರ |
|---|---|---|---|
| 2013 | ಆಸ್ಟ್ರೇಲಿಯಾ | ವೆಸ್ಟ್ ಇಂಡೀಸ್ | ಭಾರತ |
| 2017 | ಇಂಗ್ಲೆಂಡ್ | ಭಾರತ | ಇಂಗ್ಲೆಂಡ್ |
| 2022 | ಆಸ್ಟ್ರೇಲಿಯಾ | ಇಂಗ್ಲೆಂಡ್ | ನ್ಯೂಜಿಲೆಂಡ್ |
| 2025 | ಭಾರತ | ದಕ್ಷಿಣ ಆಫ್ರಿಕಾ | ಭಾರತ & ಶ್ರೀಲಂಕಾ |

# ನೇಮಕಾತಿಗಳು

## 1. ಚೀಫ್ ಆಫ್ ಮೆಟೀರಿಯಲ್ ಆಗಿ ವೈಸ್ ಅಡ್ಮಿರಲ್ ಬಿ. ಶಿವಕುಮಾರ್ ಅಧಿಕಾರ ಸ್ವೀಕಾರ

- **ಇದೀಗ ಸುದ್ದಿಯಲ್ಲಿದೆ :** ವೈಸ್ ಅಡ್ಮಿರಲ್ ಕಿರಣ್ ದೇಶಮುಖ್ ಅವರ ಉತ್ತರಾಧಿಕಾರಿಯಾಗಿ, ವೈಸ್ ಅಡ್ಮಿರಲ್ ಬಿ. ಶಿವಕುಮಾರ್ ಅವರು 2025ರ ನವೆಂಬರ್ 1 ರಂದು ಭಾರತೀಯ ನೌಕಾಪಡೆಯ 40ನೇ **'ಚೀಫ್ ಆಫ್ ಮೆಟೀರಿಯಲ್'** ಆಗಿ ಅಧಿಕಾರ ವಹಿಸಿಕೊಂಡರು.
- **ವೃತ್ತಿಜೀವನ ಮತ್ತು ಸೇವೆ :** ಬಿ. ಶಿವಕುಮಾರ್ ಅವರು ಈ ಹಿಂದೆ ಮುಂಚೂಣಿ ಯುದ್ಧನೌಕೆಗಳಾದ ಐಎನ್‌ಎಸ್ ರಂಜಿತ್, ಕಿರ್ಪಾನ್ ಮತ್ತು ಅಕ್ಷಯ್‌ಗಳಲ್ಲಿ ಸೇವೆ ಸಲ್ಲಿಸಿದ ಅನುಭವ ಹೊಂದಿದ್ದಾರೆ. ಅಲ್ಲದೆ, ಇವರು ಪ್ರಮುಖ ಎಲೆಕ್ಟ್ರಿಕಲ್ ತರಬೇತಿ ನೆಲೆಯಾದ 'ಐಎನ್‌ಎಸ್ ವಲ್ಸುರಾ'ದ ನೇತೃತ್ವವನ್ನು ವಹಿಸಿದ್ದರು.



## 2. ಬಿಐಎಸ್ (BIS) ನ ಮಹಾನಿರ್ದೇಶಕರಾಗಿ ಸಂಜಯ್ ಗರ್ಗ್ ಅಧಿಕಾರ ಸ್ವೀಕಾರ

### ಇದೀಗ ಸುದ್ದಿಯಲ್ಲಿದೆ

- ಕೇರಳ ಕೇಡರ್‌ನ 1994ರ ಬ್ಯಾಚ್‌ನ ಹಿರಿಯ ಐಎಎಸ್ ಅಧಿಕಾರಿಯಾದ **ಸಂಜಯ್ ಗರ್ಗ್ ಬಿಐಎಸ್ ನ ಮಹಾನಿರ್ದೇಶಕರಾಗಿ** ಅಧಿಕಾರ ವಹಿಸಿಕೊಂಡಿದ್ದಾರೆ.
- ಈ ಹುದ್ದೆಗೂ ಮುನ್ನ, ಸಂಜಯ್ ಗರ್ಗ್ ಅವರು ಭಾರತೀಯ ಕೃಷಿ ಸಂಶೋಧನಾ ಮಂಡಳಿಯ ಕಾರ್ಯದರ್ಶಿಯಾಗಿ ಹಾಗೂ ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು.



### ಭಾರತೀಯ ಮಾನಕಗಳ ಬ್ಯುರೋ (BIS) ನ ಬಗ್ಗೆ

- **ಸ್ಥಾಪನೆ:** ಇದು **'ಬಿಐಎಸ್ ಕಾಯಿದೆ 2016'** ರ ಅಡಿಯಲ್ಲಿ ಸ್ಥಾಪಿತವಾದ ಭಾರತದ **ರಾಷ್ಟ್ರೀಯ ಪ್ರಮಾಣೀಕರಣ ಸಂಸ್ಥೆಯಾಗಿದೆ.**
- **ಉದ್ದೇಶ:** ಸರಕುಗಳ **ಪ್ರಮಾಣೀಕರಣ, ಗುರುತು ಮಾಡುವಿಕೆ ಮತ್ತು ಗುಣಮಟ್ಟದ ಪ್ರಮಾಣೀಕರಣ** ಚಟುವಟಿಕೆಗಳ ಸಾಮರಸ್ಯದ ಅಭಿವೃದ್ಧಿಗಾಗಿ ಇದನ್ನು ಸ್ಥಾಪಿಸಲಾಗಿದೆ.
- ತ್ವರಿತ **ಕೈಗಾರಿಕೀಕರಣದ** ಯುಗದಲ್ಲಿ ಗುಣಮಟ್ಟದ ನಿಯಂತ್ರಣ ಮತ್ತು ಸ್ಪರ್ಧಾತ್ಮಕ ದಕ್ಷತೆಯನ್ನು ಖಚಿತಪಡಿಸಿಕೊಳ್ಳಲು **1947 ರಲ್ಲಿ ರಚಿಸಲಾದ 'ಭಾರತ ಮಾನಕಗಳ ಸಂಸ್ಥೆ (ISI)** ಯ ನಂತರದ ಸಂಸ್ಥೆ ಇದಾಗಿದೆ.
- **ಅಂತರರಾಷ್ಟ್ರೀಯ ಪ್ರಾತಿನಿಧ್ಯ:** ಬಿಐಎಸ್, **ಅಂತರರಾಷ್ಟ್ರೀಯ ಮಾನದಂಡಗಳ ಸಂಸ್ಥೆ** (ISO) ಮತ್ತು **ಅಂತರರಾಷ್ಟ್ರೀಯ ಎಲೆಕ್ಟ್ರೋ ಟೆಕ್ನಿಕಲ್ ಆಯೋಗದಲ್ಲಿ** (IEC) ಭಾರತವನ್ನು ಪ್ರತಿನಿಧಿಸುತ್ತದೆ.
- **ನೋಡಲ್ ಸಚಿವಾಲಯ:** ಇದು ಕೇಂದ್ರ **ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಸಚಿವಾಲಯದ** ಆಡಳಿತಾತ್ಮಕ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತದೆ.
- **ಪ್ರಧಾನ ಕಚೇರಿ:** ಇದರ ಪ್ರಧಾನ ಕಚೇರಿ **ನವದೆಹಲಿಯಲ್ಲಿದ್ದು**, ದೇಶಾದ್ಯಂತ ಪ್ರಾದೇಶಿಕ ಮತ್ತು ಶಾಖಾ ಕಚೇರಿಗಳನ್ನು ಹೊಂದಿದೆ.

## 3. ಮಕ್ಕಳ ಹಕ್ಕುಗಳಿಗಾಗಿ ಯುನಿಸೆಫ್ ಇಂಡಿಯಾದ ಸೆಲೆಬ್ರಿಟಿ ಅಡ್ವೊಕೇಟ್ ಆಗಿ ಕೀರ್ತಿ ಸುರೇಶ್

### ಇದೀಗ ಸುದ್ದಿಯಲ್ಲಿದೆ

- ರಾಷ್ಟ್ರೀಯ ಪ್ರಶಸ್ತಿ ವಿಜೇತ ನಟಿ ಕೀರ್ತಿ ಸುರೇಶ್ ಅವರನ್ನು **ಯುನಿಸೆಫ್ ಇಂಡಿಯಾ** ತನ್ನ ನೂತನ **'ಸೆಲೆಬ್ರಿಟಿ ಅಡ್ವೊಕೇಟ್'** ಆಗಿ ನೇಮಕ ಮಾಡಿದೆ.

### ವಿವರಗಳು

- ತಮಿಳು, ತೆಲುಗು ಮತ್ತು ಮಲಯಾಳಂ ಚಿತ್ರರಂಗದಲ್ಲಿ ಪ್ರಸಿದ್ಧ ನಟಿಯಾಗಿರುವ ಕೀರ್ತಿ ಸುರೇಶ್ ಅವರು, ಯುನಿಸೆಫ್ ಜೊತೆಗೂಡಿ ಮಕ್ಕಳ ಹಕ್ಕುಗಳನ್ನು ಪ್ರತಿಪಾದಿಸುವ ಗಣ್ಯರ ಸಾಲಿಗೆ ಸೇರ್ಪಡೆಗೊಂಡಿದ್ದಾರೆ.
- ಈ ಜವಾಬ್ದಾರಿಯಲ್ಲಿ, ಅವರು ಮಕ್ಕಳ ಮತ್ತು ಹದಿಹರೆಯದವರ **ಮಾನಸಿಕ ಆರೋಗ್ಯ** ಮತ್ತು ಯೋಗಕ್ಷೇಮವನ್ನು ಮುನ್ನಡೆಸಲು ಶ್ರಮಿಸಲಿದ್ದಾರೆ. ಅಲ್ಲದೆ, **ಮಕ್ಕಳ ಹಕ್ಕು**ಗಳ ಪ್ರಮುಖ ಆದ್ಯತೆಗಳ ಕುರಿತು ವ್ಯಾಪಕ ಜಾಗೃತಿ ಮೂಡಿಸಲು ಮತ್ತು ಪೂರಕ ಕ್ರಮಗಳನ್ನು ಕೈಗೊಳ್ಳಲು ತಮ್ಮ ಧ್ವನಿ ಮತ್ತು ಪ್ರಭಾವವನ್ನು ಬಳಸಲಿದ್ದಾರೆ.



## 4. ನಾಲ್ಸಾ (NALSA) ಕಾರ್ಯಕಾರಿ ಅಧ್ಯಕ್ಷರಾಗಿ ನ್ಯಾಯಮೂರ್ತಿ ವಿಕ್ರಮ್ ನಾಥ್ ನೇಮಕ

### ಇದೀಗ ಸುದ್ದಿಯಲ್ಲಿದೆ

- ಭಾರತದ ರಾಷ್ಟ್ರಪತಿಗಳು, ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಅವರನ್ನು ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ (NALSA) ನೂತನ ಕಾರ್ಯಕಾರಿ ಅಧ್ಯಕ್ಷರನ್ನಾಗಿ ನಾಮನಿರ್ದೇಶನ ಮಾಡಿದ್ದಾರೆ.

### ಪ್ರಮುಖ ವಿವರಗಳು

- ಈ ನೇಮಕಾತಿಯು 2025ರ ನವೆಂಬರ್ 24 ರಿಂದ ಜಾರಿಗೆ ಬರಲಿದೆ.
- **'ಕಾನೂನು ಸೇವೆಗಳ ಪ್ರಾಧಿಕಾರಗಳ ಕಾಯಿದೆ, 1987'** ರ ಉಪಬಂಧ 3(2)(b) ಅಡಿಯಲ್ಲಿರುವ ಅಧಿಕಾರವನ್ನು ಚಲಾಯಿಸಿ ರಾಷ್ಟ್ರಪತಿಗಳು ಈ ನಾಮನಿರ್ದೇಶನ ಮಾಡಿದ್ದಾರೆ.
- ಈ ಕುರಿತು ಕೇಂದ್ರ **ಕಾನೂನು ಮತ್ತು ನ್ಯಾಯ ಸಚಿವಾಲಯವು** ಅಧಿಕೃತ ಅಧಿಸೂಚನೆಯನ್ನು ಹೊರಡಿಸಿದೆ.



## ನವೆಂಬರ ತಿಂಗಳ ವಸ್ತುನಿಷ್ಠ ಮಾದರಿಯ ಬಹು ಆಯ್ಕೆಯ ಪ್ರಶ್ನೋತ್ತರಗಳು

**1. ರಾಷ್ಟ್ರೀಯ ಅಧಿಕಾರ ವ್ಯಾಪ್ತಿಯಾಚೆಗಿರುವ ಜೀವ ವೈವಿಧ್ಯತೆ (BBNJ) ಅಥವಾ ಹೈ ಸೀಸ್ ಒಪ್ಪಂದದ ಮೂಲಭೂತ ಉದ್ದೇಶವನ್ನು ಈ ಕೆಳಗಿನವುಗಳಲ್ಲಿ ಯಾವುದು ಉತ್ತಮವಾಗಿ ಗುರುತಿಸುತ್ತದೆ?**

A. ವಿಶೇಷ ಆರ್ಥಿಕ ವಲಯಗಳ (EEZ) ವ್ಯಾಪ್ತಿಯಲ್ಲಿ ಆಳ ಸಮುದ್ರದ ಗಣಿಗಾರಿಕೆ ಕಾರ್ಯಾಚರಣೆಗಳನ್ನು ನಿಯಂತ್ರಿಸುವುದು.
B. ರಾಷ್ಟ್ರೀಯ ಅಧಿಕಾರ ವ್ಯಾಪ್ತಿಯಾಚೆಗಿರುವ ಪ್ರದೇಶಗಳಲ್ಲಿನ ಸಮುದ್ರದ ಜೀವ ವೈವಿಧ್ಯತೆಯನ್ನು ಸಂರಕ್ಷಿಸುವುದು ಮತ್ತು ಸುಸ್ಥಿರವಾಗಿ ಬಳಸುವುದು.
C. ಕರಾವಳಿ ರಾಷ್ಟ್ರಗಳ ನಡುವೆ ವ್ಯಾಪಾರ ಸಂಬಂಧಿತ ಸಹಕಾರವನ್ನು ಹೆಚ್ಚಿಸುವುದು.
D. ಪ್ರಾದೇಶಿಕ ಜಲ ಪ್ರದೇಶಗಳೊಳಗೆ ಅಳಿವಿನಂಚಿನಲ್ಲಿರುವ ಪ್ರಭೇದಗಳನ್ನು ಮಾತ್ರ ರಕ್ಷಿಸುವುದು.

**ಉತ್ತರ: B**

**2. ಈ ಕೆಳಗಿನವುಗಳಲ್ಲಿ ಯಾವುದು ಗಲ್ಫ್ ಸಹಕಾರ ಮಂಡಳಿಯ (GCC) ಎಲ್ಲಾ ಸದಸ್ಯ ರಾಷ್ಟ್ರಗಳನ್ನು ಸರಿಯಾಗಿ ಪಟ್ಟಿ ಮಾಡುತ್ತದೆ?**

A. ಸೌದಿ ಅರೇಬಿಯಾ, ಯುಎಇ, ಓಮನ್, ಕತಾರ್, ಬಹ್ರೇನ್, ಕುವೈತ್
B. ಬಹ್ರೇನ್, ಕುವೈತ್, ಕತಾರ್, ಯುಎಇ, ಇರಾನ್, ಸೌದಿ ಅರೇಬಿಯಾ
C. ಬಹ್ರೇನ್, ಯುಎಇ, ಓಮನ್, ಕತಾರ್, ಇರಾಕ್, ಸೌದಿ ಅರೇಬಿಯಾ

D. ಓಮನ್, ಕತಾರ್, ಜೋರ್ಡಾನ್, ಯುಎಇ, ಬಹ್ರೇನ್, ಕುವೈತ್

**ಉತ್ತರ: A**

**3. ತಂಬಾಕು ನಿಯಂತ್ರಣಕ್ಕೆ ಸಂಬಂಧಿಸಿದಂತೆ ಮಾಲ್ಡೀವ್ಸ್‌ನ ಅನನ್ಯ ಜಾಗತಿಕ ಸ್ಥಾನವನ್ನು ಈ ಕೆಳಗಿನ ಯಾವ ಹೇಳಿಕೆಯು ಸರಿಯಾಗಿ ಗುರುತಿಸುತ್ತದೆ?**

A. ಇದು ಎಲ್ಲಾ ತಂಬಾಕು ಆಮದುಗಳನ್ನು ನಿಷೇಧಿಸಿದ ಮೊದಲ ದಕ್ಷಿಣ ಏಷ್ಯಾ ರಾಷ್ಟ್ರವಾಗಿದೆ.

B. ಇದು ತಂಬಾಕು ಎಚ್ಚರಿಕೆಗಳಿಗಾಗಿ ಧೀವೆಹಿ ಭಾಷೆಯನ್ನು ಏಕೈಕ ಭಾಷೆಯನ್ನಾಗಿ ಮಾಡಿದ ಮೊದಲ ದೇಶವಾಗಿದೆ.

C. ಇದು ಸಂಪೂರ್ಣವಾಗಿ ತಂಬಾಕು-ಮುಕ್ತ ಪ್ರವಾಸೋದ್ಯಮ ವಲಯಗಳನ್ನು ಘೋಷಿಸಿದ ಮೊದಲ ದೇಶವಾಗಿದೆ.

D. ಇದು ತಂಬಾಕು ಮತ್ತು ವೇಪಿಂಗ್ (vaping) ಮೇಲೆ ಪೀಳಿಗೆಯ ನಿಷೇಧವನ್ನು ವಿಧಿಸಿದ ಮೊದಲ ದೇಶವಾಗಿದೆ.

**ಉತ್ತರ: D**

**4. ಹಿಂದೂ ಮಹಾಸಾಗರ ಪ್ರದೇಶದಲ್ಲಿ (IOR) ಮಾಲ್ಡೀವ್ಸ್‌ನ ಕಾರ್ಯತಂತ್ರದ ಪ್ರಾಮುಖ್ಯತೆಗೆ ಪ್ರಾಥಮಿಕ ಕಾರಣ ಯಾವುದು?**

A. ಅದರ ದೊಡ್ಡ ನೌಕಾಪಡೆ ಮತ್ತು ಮಿಲಿಟರಿ ನೆಲೆಗಳು.

B. ಪ್ರಮುಖ ಸಾಗರ ವ್ಯಾಪಾರ ಮಾರ್ಗಗಳಲ್ಲಿ ಅದರ ಸ್ಥಾನ.

C. ಅದರ ವ್ಯಾಪಕ ತೈಲ ನಿಕ್ಷೇಪಗಳು.

D. ಜಾಗತಿಕ ಹಣಕಾಸು ಕೇಂದ್ರವಾಗಿ ಅದರ ಸ್ಥಾನಮಾನ.

**ಉತ್ತರ: B**

**5. ಎನ್ಸೆಫಲೋಮಯೋಕಾರ್ಡಿಟಿಸ್ ವೈರಸ್‌ನ (EMCV) ಜೀನೋಮಿಕ್ ಸ್ವರೂಪವನ್ನು ಈ ಕೆಳಗಿನವುಗಳಲ್ಲಿ ಯಾವುದು ಉತ್ತಮವಾಗಿ ವಿವರಿಸುತ್ತದೆ?**

A. ಪಿಕಾರ್ನಾವಿರಿಡೆ ಕುಟುಂಬಕ್ಕೆ ಸೇರಿದ ಒಂದು-ಎಳೆಯ ಆರ್‌ಎನ್‌ಎ ವೈರಸ್.

B. ಹರ್ಪೀಸ್‌ವಿರಿಡೆ ಕುಟುಂಬಕ್ಕೆ ಸೇರಿದ ಎರಡು-ಎಳೆಯ ಡಿಎನ್‌ಎ ವೈರಸ್.

C. ರಿಯೊವಿರಿಡೆ ಕುಟುಂಬಕ್ಕೆ ಸೇರಿದ ಎರಡು-ಎಳೆಯ ಆರ್‌ಎನ್‌ಎ ವೈರಸ್.

D. ಪಾರ್ವೊವಿರಿಡೆ ಕುಟುಂಬಕ್ಕೆ ಸೇರಿದ ಒಂದು -ಎಳೆಯ ಡಿಎನ್‌ಎ ವೈರಸ್.

**ಉತ್ತರ: A**

**6. ಎನ್ಸೆಫಲೋಮಯೋಕಾರ್ಡಿಟಿಸ್ ವೈರಸ್‌ನ (EMCV) ಸಾಂಕ್ರಾಮಿಕ ರೋಗಶಾಸ್ತ್ರದ ಬಗ್ಗೆ ಈ ಕೆಳಗಿನ ಯಾವ ಹೇಳಿಕೆ ಸರಿಯಾಗಿದೆ?**

A. ಇದು ಪ್ರೈಮೇಟ್‌ಗಳಿಗೆ ಮಾತ್ರ ಸೋಂಕು ತಗುಲಿಸುತ್ತದೆ.

B. ಇದು ವ್ಯಾಪಕ ಶ್ರೇಣಿಯ ಸಸ್ತನಿ ಪ್ರಭೇದಗಳ ಮೇಲೆ ಪರಿಣಾಮ ಬೀರುತ್ತದೆ.

C. ಇದು ಉಷ್ಣವಲಯದ ಕಡಲ ಜೀವಿ ಪರಿಸರ ವ್ಯವಸ್ಥೆಗಳಿಗೆ ಮಾತ್ರ ಸೀಮಿತವಾಗಿದೆ.

D. ಇದು ಪ್ರಾಥಮಿಕವಾಗಿ ಸೊಳ್ಳೆ ವಾಹಕಗಳ ಮೂಲಕ ಹರಡುತ್ತದೆ.

**ಉತ್ತರ: B**

**7. ಮೇಲ್ಮನವಿ ನ್ಯಾಯಾಧಿಕಾರಣಗಳ ಕಾನೂನು ಸ್ಥಾನಮಾನದ ಬಗ್ಗೆ ಯಾವ ಹೇಳಿಕೆ ಸರಿಯಾಗಿದೆ?**

A. ಇದು ಸರ್ವೋಚ್ಚ ನ್ಯಾಯಾಲಯದ ಅದೇ ಅಧಿಕಾರಗಳನ್ನು ಹೊಂದಿರುವ ಸಂಪೂರ್ಣ ನ್ಯಾಯಾಂಗ ಸಂಸ್ಥೆಯಾಗಿದೆ.

B. ಇದು ನೀತಿ ನಿಯಮಗಳನ್ನು ನೀಡುವ ಅರೆ-ಶಾಸಕಾಂಗ ಪ್ರಾಧಿಕಾರವಾಗಿದೆ.

C. ಇದು ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ ಮತ್ತು ಇತರ ಪ್ರಾಧಿಕಾರಗಳ ಮೇಲ್ಮನವಿಗಳನ್ನು ವಿಚಾರಣೆ ಮಾಡುವ ಅರೆ-ನ್ಯಾಯಾಂಗ ಸಂಸ್ಥೆಯಾಗಿದೆ.

D. ಇದು ಕಂಪನಿಗಳ ಕಾಯಿದೆಯ ಅನುಸರಣೆಯನ್ನು ಜಾರಿಗೊಳಿಸುವ ಒಂದು ಕಾರ್ಯಕಾರಿ ಸಂಸ್ಥೆಯಾಗಿದೆ.

**ಉತ್ತರ: C**

**8. ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಗೆ (PMFBY) ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. ಇದನ್ನು ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯವು ಅನುಷ್ಠಾನಗೊಳಿಸುತ್ತದೆ.
2. ಎಲ್ಲಾ ಆಹಾರ ಧಾನ್ಯಗಳು ಮತ್ತು ಎಣ್ಣೆಕಾಳು ಬೆಳೆಗಳಿಗೆ ರೈತರು 5% ರ ಏಕರೂಪದ ಪ್ರೀಮಿಯಂ ದರವನ್ನು ಪಾವತಿಸುತ್ತಾರೆ.
3. ನೈಸರ್ಗಿಕ ವಿಕೋಪಗಳು, ಕೀಟಗಳು ಮತ್ತು ರೋಗಗಳಿಂದ ಬೆಳೆ ನಷ್ಟವಾದ ಸಂದರ್ಭಗಳಲ್ಲಿ ರೈತರಿಗೆ ಆರ್ಥಿಕ ಬೆಂಬಲ ನೀಡಲು ಈ ಯೋಜನೆಯನ್ನು ಪ್ರಾರಂಭಿಸಲಾಗಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಎಷ್ಟು ಹೇಳಿಕೆಗಳು ಸರಿಯಾಗಿವೆ?

A. ಒಂದು ಮಾತ್ರ

B. ಎರಡು ಮಾತ್ರ

C. ಎಲ್ಲಾ

D. ಯಾವುದೂ ಇಲ್ಲ

**ಉತ್ತರ: B**

**9. ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ ಅಡಿಯಲ್ಲಿ, ಈ ಕೆಳಗಿನ ಯಾವ ಪ್ರೀಮಿಯಂ ದರವನ್ನು ಅದರ ಬೆಳೆ ವರ್ಗದೊಂದಿಗೆ ಸರಿಯಾಗಿ ಹೊಂದಿಸಲಾಗಿದೆ?**

A. ರಾಬಿ ಬೆಳೆಗಳು – 2%

B. ಖಾರಿಫ್ ಬೆಳೆಗಳು – 1.5%

C. ವಾರ್ಷಿಕ ವಾಣಿಜ್ಯ/ತೋಟಗಾರಿಕಾ ಬೆಳೆಗಳು – 5%

D. ಎಲ್ಲಾ ಬೆಳೆಗಳು – 3%

**ಉತ್ತರ: C**

**10. ಕೋಲ್ ಇಂಡಿಯಾ ಲಿಮಿಟೆಡ್ (CIL) ಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. ಇದು ಕಲ್ಲಿದ್ದಲು ಸಚಿವಾಲಯದ ಅಡಿಯಲ್ಲಿ ಬರುವ ಮಹಾರತ್ನ PSU (ಸಾರ್ವಜನಿಕ ವಲಯದ ಉದ್ದಿಮೆ) ಆಗಿದೆ.
2. ಇದನ್ನು ಎರಡನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಸ್ಥಾಪಿಸಲಾಯಿತು.
3. ಇದು ಭಾರತದ ದೇಶೀಯ ಕಲ್ಲಿದ್ದಲು ಉತ್ಪಾದನೆಯ ಸುಮಾರು 80% ರಷ್ಟನ್ನು ಹೊಂದಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿವೆ?

A. 1 ಮತ್ತು 2 ಮಾತ್ರ

B. 2 ಮತ್ತು 3 ಮಾತ್ರ

C. 1 ಮತ್ತು 3 ಮಾತ್ರ

D. 1, 2 ಮತ್ತು 3

**ಉತ್ತರ: C**

**11. ಸಾರ್ವಜನಿಕ ವಲಯದ ಉದ್ದಿಮೆಗಳಿಗೆ (PSUs)**

**ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. ಸಾರ್ವಜನಿಕ ವಲಯದ ಉದ್ದಿಮೆಗಳು (PSUs) ಎಂದರೆ ಸರ್ಕಾರವು ಕನಿಷ್ಠ 51% ಷೇರು ಬಂಡವಾಳ (ಇಕ್ವಿಟಿ) ವನ್ನು ಹೊಂದಿರುವ ಉದ್ಯಮಗಳು ಎಂದು ವ್ಯಾಖ್ಯಾನಿಸಲಾಗಿದೆ.
2. ಎಲ್ಲಾ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಕಂಪನಿಗಳ ಕಾಯಿದೆ, 2013 ರ ಅಡಿಯಲ್ಲಿ ಸ್ಥಾಪಿಸಲಾಗಿದೆ.
3. ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಸಾರ್ವಜನಿಕ ವಲಯದ ಉದ್ದಿಮೆಗಳ ಮಾಲೀಕತ್ವವನ್ನು ಹೊಂದಬಹುದು.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿವೆ?

A. 1 ಮತ್ತು 3 ಮಾತ್ರ
B. 1 ಮತ್ತು 2 ಮಾತ್ರ
C. 2 ಮತ್ತು 3 ಮಾತ್ರ
D. 1, 2 ಮತ್ತು 3

**ಉತ್ತರ: A**

**12. ಈಶಾನ್ಯ ಪ್ರದೇಶ ವಿಜ್ಞಾನ ಮತ್ತು ತಂತ್ರಜ್ಞಾನ ವಲಯ (NEST Cluster) ಅನ್ನು ಈ ಕೆಳಗಿನ ಯಾರು ಉದ್ಘಾಟಿಸಿದರು?**

A. ಕೇಂದ್ರ ಶಿಕ್ಷಣ ಸಚಿವರು
B. ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು
C. ಕೇಂದ್ರ ಸಂವಹನ ಮತ್ತು ಈಶಾನ್ಯ ಪ್ರದೇಶ ಅಭಿವೃದ್ಧಿ ಸಚಿವರು
D. ಭಾರತದ ಪ್ರಧಾನಮಂತ್ರಿ

**ಉತ್ತರ: C**

**13. 2025 ರಲ್ಲಿ, ಭಾರತದ ಯಾವ ಜೀವಗೋಳ ಮೀಸಲು ಪ್ರದೇಶವನ್ನು ಯುನೆಸ್ಕೋದ ವಿಶ್ವ ಜೀವಗೋಳ ಮೀಸಲು ಜಾಲದಲ್ಲಿ ( WNBR) ಸೇರಿಸಲಾಯಿತು?**

A. ಸಿಮ್ಲಿಪಾಲ್ ಜೀವಗೋಳ ಮೀಸಲು (ಒಡಿಶಾ)
B. ನಂದಾ ದೇವಿ ಜೀವಗೋಳ ಮೀಸಲು (ಉತ್ತರಾಖಂಡ)
C. ಗಲ್ಫ್ ಆಫ್ ಮನ್ನಾರ್ ಜೀವಗೋಳ ಮೀಸಲು (ತಮಿಳುನಾಡು)
D. ಶೀತ ಮರುಭೂಮಿ ಜೀವಗೋಳ ಮೀಸಲು (ಹಿಮಾಚಲ ಪ್ರದೇಶ)

**ಉತ್ತರ: D**

**14. 'ತೋರ್ಖಮ್ ಗಡಿ' ಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. ಇದು ವ್ಯಾಪಾರ ಮತ್ತು ಸಾರಿಗೆಗಾಗಿ ಪ್ರಮುಖ ಲಾಜಿಸ್ಟಿಕಲ್ ಕೇಂದ್ರ (ಹಬ್) ವಾಗಿ ಕಾರ್ಯನಿರ್ವಹಿಸುತ್ತದೆ.
2. ಇದು ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನ ನಡುವಿನ ಏಕೈಕ ಭೂ ಗಡಿರೇಖೆಯಾಗಿದೆ.
3. ಇದು ಎರಡು ದೇಶಗಳ ನಡುವಿನ ಅಂತರರಾಷ್ಟ್ರೀಯ ಗಡಿರೇಖೆಯ ಮೇಲೆ ಇದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಎಷ್ಟು ಹೇಳಿಕೆಗಳು ಸರಿಯಾಗಿವೆ?

A. ಒಂದು ಮಾತ್ರ
B. ಎರಡು ಮಾತ್ರ
C. ಎಲ್ಲಾ
D. ಯಾವುದೂ ಇಲ್ಲ

**ಉತ್ತರ: B**

**15. ಈ ಕೆಳಗಿನ ವೈಶಿಷ್ಟ್ಯಗಳನ್ನು ಪರಿಗಣಿಸಿ:**

1. ಪ್ರತಿ ಕುಟುಂಬಕ್ಕೆ ವರ್ಷಕ್ಕೆ ₹5 ಲಕ್ಷದ ವಿಮಾ ರಕ್ಷಣೆಯನ್ನು ಒದಗಿಸುತ್ತದೆ.
2. ದುರ್ಬಲ ಮತ್ತು ಆರ್ಥಿಕವಾಗಿ ದುರ್ಬಲವಾಗಿರುವ ಕುಟುಂಬಗಳನ್ನು ಗುರಿಯಾಗಿಸುತ್ತದೆ.
3. ಉಚಿತ ದ್ವಿತೀಯ ಮತ್ತು ತೃತೀಯ ಹಂತದ ಆಸ್ಪತ್ರೆ ಚಿಕಿತ್ಸೆಯನ್ನು ಖಚಿತಪಡಿಸುತ್ತದೆ.

ಮೇಲೆ ನೀಡಿರುವ ವೈಶಿಷ್ಟ್ಯಗಳಲ್ಲಿ ಯಾವುವು ಆಯುಷ್ಮಾನ್ ಭಾರತ್ - ಪ್ರಧಾನ ಮಂತ್ರಿ ಜಾನ್ ಆರೋಗ್ಯ ಯೋಜನೆಗೆ ಸಂಬಂಧಪಟ್ಟಿವೆ?

A. 1 ಮತ್ತು 2 ಮಾತ್ರ
B. 2 ಮಾತ್ರ
C. 1 ಮತ್ತು 3 ಮಾತ್ರ
D. 1, 2 ಮತ್ತು 3

**ಉತ್ತರ: D**

**16. "ನೀಲಿ ನಗರಗಳು" ("ಬ್ಲೂ ಸಿಟೀಸ್") ಪರಿಕಲ್ಪನೆಯು ಪ್ರಾಥಮಿಕವಾಗಿ ಈ ಕೆಳಗಿನ ಯಾವುದಕ್ಕೆ ಸಂಬಂಧಿಸಿದೆ?**

A. ಪ್ರಮುಖ ನದಿ ವ್ಯವಸ್ಥೆಗಳ ಉದ್ದಕ್ಕೂ ನೆಲೆಗೊಂಡಿರುವ, ಒಳನಾಡು ಜಲಮಾರ್ಗಗಳನ್ನು ಉತ್ತೇಜಿಸುವ ನಗರಗಳು.
B. ಸಾಗರ ಆಧಾರಿತ ಆರ್ಥಿಕ ಚಟುವಟಿಕೆಗಳನ್ನು ಸುಸ್ಥಿರ ನಗರ ಅಭಿವೃದ್ಧಿಯೊಂದಿಗೆ ಸಂಯೋಜಿಸುವ ಕರಾವಳಿ ಅಥವಾ ಬಂದರು ನಗರಗಳು.
C. ಪ್ರತಿ ವ್ಯಕ್ತಿಗೆ ಹೆಚ್ಚಿನ ಶುದ್ಧ ಕುಡಿಯುವ ನೀರಿನ ಬಳಕೆಯನ್ನು ಹೊಂದಿರುವ ನಗರಗಳು.
D. ಡಿಜಿಟಲ್ ಇಂಡಿಯಾ ಉಪಕ್ರಮದ ಅಡಿಯಲ್ಲಿ ಅಭಿವೃದ್ಧಿಪಡಿಸಲಾದ ಸ್ಮಾರ್ಟ್ ಸಿಟಿಗಳು.

**ಉತ್ತರ: B**

**17. ಭಾರತದ ಬಂದರು ಮೂಲಸೌಕರ್ಯಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. ಸಣ್ಣ ಬಂದರುಗಳನ್ನು ಕೇಂದ್ರ ಸರ್ಕಾರವು ನಿಯಂತ್ರಿಸುತ್ತದೆ.
2. ಪ್ರಮುಖ ಬಂದರುಗಳು ಆಯಾ ರಾಜ್ಯ ಸರ್ಕಾರಗಳ ನ್ಯಾಯವ್ಯಾಪ್ತಿಯಲ್ಲಿರುತ್ತವೆ.
3. ಭಾರತವು 13 ಪ್ರಮುಖ ಬಂದರುಗಳು ಮತ್ತು 200 ಕ್ಕೂ ಹೆಚ್ಚು ಸಣ್ಣ ಬಂದರುಗಳನ್ನು ಹೊಂದಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿವೆ?

A. 1 ಮಾತ್ರ
B. 2 ಮತ್ತು 3 ಮಾತ್ರ
C. 3 ಮಾತ್ರ
D. 1 ಮತ್ತು 3 ಮಾತ್ರ

**ಉತ್ತರ: C**

**18. ರೂಪಾಯಿ ಬೆಂಬಲಿತ 'ಸ್ಥಿರ ನಾಣ್ಯ' (ಸ್ಟೇಬಲ್ ಕಾಯಿನ್) ಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. ಇವುಗಳನ್ನು ಸಾಮಾನ್ಯವಾಗಿ ಭಾರತೀಯ ರೂಪಾಯಿಗೆ 1:1 ಅನುಪಾತದಲ್ಲಿ ಜೋಡಿಸಲಾಗುತ್ತದೆ.
2. ಇವುಗಳು ಹೆಚ್ಚಿನ ಏರಿಳಿತವಿಲ್ಲದೆ ಕ್ರಿಪ್ಟೋ ಸ್ವತ್ತುಗಳ ಪ್ರೋಗ್ರಾಮೆಬಿಲಿಟಿಯನ್ನು ಒದಗಿಸುತ್ತವೆ.
3. ಇವುಗಳನ್ನು ಪ್ರಾಥಮಿಕವಾಗಿ ಕೇವಲ ಊಹಾತ್ಮಕ ಹೂಡಿಕೆ ಲಾಭಗಳಿಗಾಗಿ ವಿನ್ಯಾಸಗೊಳಿಸಲಾಗಿದೆ.

ಮೇಲಿನ ಹೇಳಿಕೆಗಳಲ್ಲಿ ಎಷ್ಟು ಹೇಳಿಕೆಗಳು ಸರಿಯಾಗಿವೆ?

A. ಒಂದು ಮಾತ್ರ
B. ಎರಡು ಮಾತ್ರ
C. ಎಲ್ಲಾ ಮೂರು
D. ಯಾವುದೂ ಇಲ್ಲ

**ಉತ್ತರ: B**

**19. ರಾಷ್ಟ್ರೀಯ ಜೇನುಸಾಕಣೆ ಮತ್ತು ಜೇನು ಮಿಷನ್‌ಗೆ (NBHM) ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. ಇದು ವೈಜ್ಞಾನಿಕ ಜೇನುಸಾಕಣೆಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿರುವ ಒಂದು ಕೇಂದ್ರ ವಲಯದ ಯೋಜನೆಯಾಗಿದೆ.
2. ಇದನ್ನು ರಾಷ್ಟ್ರೀಯ ಜೇನು ಮಂಡಳಿಯ (NBB) ಮೂಲಕ ಅನುಷ್ಠಾನಗೊಳಿಸಲಾಗುತ್ತದೆ.
3. ಇದನ್ನು 'ಸಿಹಿ ಕ್ರಾಂತಿ' (ಸ್ವೀಟ್ ರೆವಲ್ಯೂಷನ್) ಉಪಕ್ರಮದ ಭಾಗವಾಗಿ ಪ್ರಾರಂಭಿಸಲಾಯಿತು.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿವೆ?

A. 1 ಮತ್ತು 2 ಮಾತ್ರ
B. 2 ಮತ್ತು 3 ಮಾತ್ರ
C. 1 ಮತ್ತು 3 ಮಾತ್ರ
D. 1, 2 ಮತ್ತು 3

**ಉತ್ತರ: D**

**20. ಈ ಕೆಳಗಿನ ಯಾವ ಭಾರತೀಯ ರಾಜ್ಯಗಳು ನೇಪಾಳದೊಂದಿಗೆ ಗಡಿಯನ್ನು ಹಂಚಿಕೊಂಡಿವೆ?**

1. ಸಿಕ್ಕಿಂ
2. ಪಶ್ಚಿಮ ಬಂಗಾಳ
3. ಬಿಹಾರ
4. ಉತ್ತರಾಖಂಡ
5. ಹಿಮಾಚಲ ಪ್ರದೇಶ

ಈ ಕೆಳಗಿನ ಸಂಕೇತಗಳನ್ನು ಬಳಸಿ ಸರಿಯಾದ ಉತ್ತರವನ್ನು ಆಯ್ಕೆಮಾಡಿ:

A. 1, 2, 3 ಮತ್ತು 4 ಮಾತ್ರ
B. 1, 3 ಮತ್ತು 5 ಮಾತ್ರ
C. 2 ಮತ್ತು 4 ಮಾತ್ರ
D. 1, 2, 3, 4 ಮತ್ತು 5

**ಉತ್ತರ: A**

**21. ಕಾಲಾಪಾನಿ ಪ್ರದೇಶವು ಈ ಕೆಳಗಿನವುಗಳಲ್ಲಿ ಯಾವುದರ ತ್ರಿ-ಸಂಧಿ (ಮೂರು ಗಡಿಗಳು ಸಂಧಿಸುವ ಸ್ಥಳ) ಯ ಬಳಿ ಇದೆ?**

A. ಭಾರತ - ನೇಪಾಳ - ಚೀನಾ
B. ಭಾರತ - ನೇಪಾಳ - ಭೂತಾನ್
C. ಭಾರತ - ಭೂತಾನ್ - ಚೀನಾ
D. ಭಾರತ - ನೇಪಾಳ - ಬಾಂಗ್ಲಾದೇಶ

**ಉತ್ತರ: A**

**22. ಈ ಕೆಳಗಿನ ಯಾವ ಹೇಳಿಕೆಯು ಮಧುಮೇಹವನ್ನು ಉತ್ತಮವಾಗಿ ವ್ಯಾಖ್ಯಾನಿಸುತ್ತದೆ?**

A. ಇದು ಕೆಂಪು ರಕ್ತ ಕಣಗಳ ಕೊರತೆಯಿಂದ ಉಂಟಾಗುವ ಆನುವಂಶಿಕ ಅಸ್ವಸ್ಥತೆಯಾಗಿದೆ.
B. ಇದು ರಕ್ತದೊತ್ತಡದ ಅಸಮತೋಲನದಿಂದ ಉಂಟಾಗುವ ದೀರ್ಘಕಾಲದ ಚಯಾಪಚಯ ಅಸ್ವಸ್ಥತೆಯಾಗಿದೆ.
C. ಇದು ದೇಹವು ಇನ್ಸುಲಿನ್ ಅನ್ನು ಉತ್ಪಾದಿಸಲು ಅಥವಾ ಸರಿಯಾಗಿ ಬಳಸಲು ಸಾಧ್ಯವಾಗದ ದೀರ್ಘಕಾಲದ ಚಯಾಪಚಯ ಅಸ್ವಸ್ಥತೆಯಾಗಿದೆ
D. ಇದು ಗ್ಲೂಕೋಸ್ ಹೀರಿಕೊಳ್ಳುವಿಕೆಯ ಮೇಲೆ ಪರಿಣಾಮ ಬೀರುವ ವೈರಲ್ ಸೋಂಕಾಗಿದೆ.

**ಉತ್ತರ: C**

**23. ಟೈಪ್ 2 ಮಧುಮೇಹದಲ್ಲಿ, ಸಮಸ್ಯೆಯು ಪ್ರಾಥಮಿಕವಾಗಿ ಏಕೆ ಉದ್ಭವಿಸುತ್ತದೆ?**

A. ದೇಹವು ಇನ್ಸುಲಿನ್ ಅನ್ನು ಉತ್ಪಾದಿಸುವುದಿಲ್ಲ.
B. ಮೇದೋಜ್ಜೀರಕ ಗ್ರಂಥಿಯು ಸೋಂಕಿಗೆ ಒಳಗಾಗುತ್ತದೆ.
C. ಪ್ರತಿರಕ್ಷಣಾ ವ್ಯವಸ್ಥೆಯು ಯಕೃತ್ತಿನ ಮೇಲೆ ದಾಳಿ ಮಾಡುತ್ತದೆ.
D. ದೇಹವು ಸಾಕಷ್ಟು ಇನ್ಸುಲಿನ್ ಅನ್ನು ಉತ್ಪಾದಿಸುತ್ತದೆ ಅಥವಾ ಅದನ್ನು ಪರಿಣಾಮಕಾರಿಯಾಗಿ ಬಳಸಲು ಸಾಧ್ಯವಾಗುವುದಿಲ್ಲ.

**ಉತ್ತರ: D**

**24. ಈ ಕೆಳಗಿನ ಹೆಪಟೈಟಿಸ್ ಪ್ರಕಾರಗಳನ್ನು ಅವುಗಳ ಗುಣಲಕ್ಷಣಗಳೊಂದಿಗೆ ಹೊಂದಿಸಿ:**

| ಹೆಪಟೈಟಿಸ್ ಪ್ರಕಾರಗಳು | ಗುಣಲಕ್ಷಣಗಳು |
|---|---|
| a. ಹೆಪಟೈಟಿಸ್ A | 1. ಸೋಂಕಿಗೆ ಹೆಪಟೈಟಿಸ್ B ಅಗತ್ಯವಿದೆ |
| b. ಹೆಪಟೈಟಿಸ್ C | 2. ದೀರ್ಘಕಾಲದ ಯಕೃತ್ತಿನ ಸಿರೋಸಿಸ್ ಮತ್ತು ಕ್ಯಾನ್ಸರ್‌ಗೆ ಕಾರಣವಾಗಬಹುದು. |
| c. ಹೆಪಟೈಟಿಸ್ D | 3. ಸಾಮಾನ್ಯವಾಗಿ ಸೌಮ್ಯವಾಗಿರುತ್ತದೆ ಮತ್ತು ಸ್ವಯಂ-ಸೀಮಿತವಾಗಿರುತ್ತದೆ |
| d. ಹೆಪಟೈಟಿಸ್ E | 4. ದುರ್ಬಲಗೊಂಡ ರೋಗನಿರೋಧಕ ಶಕ್ತಿ ಹೊಂದಿರುವ ಜನರಲ್ಲಿ ಗಂಭೀರವಾಗಿರುತ್ತದೆ. |

ಸರಿಯಾದ ಸಂಯೋಜನೆಯನ್ನು ಆಯ್ಕೆಮಾಡಿ:

A. a–3, b–2, c–1, d–4
B. a–4, b–1, c–2, d–3
C. a–3, b–1, c–4, d–2
D. a–2, b–3, c–1, d–4

**ಉತ್ತರ: A**

**25. ರುಮಟಾಯ್ಡ್ ಸಂಧಿವಾತಕ್ಕೆ ಸಂಬಂಧಿಸಿದಂತೆ, ಈ ಕೆಳಗಿನವುಗಳಲ್ಲಿ ಯಾವುದು ಸರಿಯಾಗಿದೆ?**

A. ಇದು ಸಾಮಾನ್ಯವಾಗಿ 65 ವರ್ಷಕ್ಕಿಂತ ಮೇಲ್ಪಟ್ಟ ವೃದ್ಧ ವ್ಯಕ್ತಿಗಳ ಮೇಲೆ ಮಾತ್ರ ಪರಿಣಾಮ ಬೀರುತ್ತದೆ.
B. ಇದು ಸಾಮಾನ್ಯವಾಗಿ 30-60 ವರ್ಷದೊಳಗಿನ ವ್ಯಕ್ತಿಗಳ ಮೇಲೆ ಪರಿಣಾಮ ಬೀರುತ್ತದೆ.
C. ಇದು ಹೆಚ್ಚಾಗಿ ಮಕ್ಕಳ ಮೇಲೆ ಪರಿಣಾಮ ಬೀರುತ್ತದೆ.
D. ಇದು ಪುರುಷರು ಮತ್ತು ಮಹಿಳೆಯರ ಮೇಲೆ ಸಮಾನವಾಗಿ ಪರಿಣಾಮ ಬೀರುತ್ತದೆ.

**ಉತ್ತರ: B**

**26. ರುಮಟಾಯ್ಡ್ ಸಂಧಿವಾತವನ್ನು ವ್ಯವಸ್ಥಿತ ರೋಗ ಎಂದು ಪರಿಗಣಿಸಲು ಕಾರಣ:**

A. ಇದು ಮೂಳೆಗಳ ಮೇಲೆ ಮಾತ್ರ ಪರಿಣಾಮ ಬೀರುತ್ತದೆ.
B. ಇದು ಗಾಳಿಯ ಮೂಲಕ ಹರಡುತ್ತದೆ.
C. ಇದು ಶ್ವಾಸಕೋಶ, ಹೃದಯ, ಚರ್ಮ ಮತ್ತು ಕಣ್ಣುಗಳು ಸೇರಿದಂತೆ ಅನೇಕ ಅಂಗಗಳ ಮೇಲೆ ಪರಿಣಾಮ ಬೀರುತ್ತದೆ.
D. ಇದು ಯಾವಾಗಲೂ ಮೊಣಕಾಲುಗಳು ಮತ್ತು ಕೈಗಳಿಗೆ ಸೀಮಿತವಾಗಿರುತ್ತದೆ.

**ಉತ್ತರ: C**

**27. ಸರಂಡಾ ಅರಣ್ಯವು ಭಾರತದ ಯಾವ ಜೈವಿಕ ಭೌಗೋಳಿಕ ವಲಯದಲ್ಲಿದೆ?**

A. ಪಶ್ಚಿಮ ಘಟ್ಟಗಳ ವಲಯ
B. ಟ್ರಾನ್ಸ್-ಹಿಮಾಲಯನ್ ವಲಯ
C. ಛೋಟಾನಾಗ್‌ಪುರ ವಲಯ
D. ದಖನ್ ಪ್ರಸ್ಥಭೂಮಿ ವಲಯ

**ಉತ್ತರ: C**

**28. ಸರಂಡಾ ಅರಣ್ಯದಲ್ಲಿ ಮುಖ್ಯವಾಗಿ ಯಾವ ಬುಡಕಟ್ಟು ಸಮುದಾಯಗಳು ನೆಲೆಸಿವೆ?**

A. ಭಿಲ್ಸ್ ಮತ್ತು ಗೊಂಡ್ಸ್
B. ಹೋ, ಮುಂಡಾ, ಉರಾವೋಣ್ ಸಮುದಾಯಗಳು
C. ಸಂತಾಲ್ ಮತ್ತು ತೋಡಾ
D. ಅಂಗಾಮಿ ಮತ್ತು ಖಾಸಿ ಬುಡಕಟ್ಟು ಜನಾಂಗಗಳು

**ಉತ್ತರ: B**

**29. ಪ್ರತಿಪಾದನೆ (A): ಫೇಮ್ ಇಂಡಿಯಾ ಯೋಜನೆಯು ಸಾರ್ವಜನಿಕ ಸಾರಿಗೆ ವಿದ್ಯುದ್ದೀಕರಣದ ಮೇಲೆ ಮಾತ್ರ ಕೇಂದ್ರೀಕರಿಸುತ್ತದೆ.**

ಕಾರಣ (R): ಈ ಯೋಜನೆಯು ರಾಷ್ಟ್ರೀಯ ಎಲೆಕ್ಟ್ರಿಕ್ ಮೊಬಿಲಿಟಿ ಮಿಷನ್ ಯೋಜನೆಯ ( NEMMP) ಭಾಗವಾಗಿ ಭಾರೀ ಕೈಗಾರಿಕೆಗಳ ಸಚಿವಾಲಯದ ಅಡಿಯಲ್ಲಿ ಅನುಷ್ಠಾನಗೊಳ್ಳುತ್ತದೆ.

ಸರಿಯಾದ ಆಯ್ಕೆಯನ್ನು ಆರಿಸಿ:

A. A ಮತ್ತು R ಎರಡೂ ಸರಿಯಾಗಿವೆ , ಮತ್ತು R ಎಂಬುದು A ಗೆ ಸರಿಯಾದ ವಿವರಣೆಯಾಗಿದೆ
B. A ಮತ್ತು R ಎರಡೂ ಸರಿಯಾಗಿವೆ , ಆದರೆ R ಎಂಬುದು A ಗೆ ಸರಿಯಾದ ವಿವರಣೆಯಲ್ಲ
C. A ಸರಿಯಾಗಿದೆ , ಆದರೆ R ತಪ್ಪಾಗಿದೆ.
D. A ತಪ್ಪಾಗಿದೆ, ಆದರೆ R ಸರಿಯಾಗಿದೆ

**ಉತ್ತರ: D**

**30. ಇತ್ತೀಚೆಗೆ ತನ್ನ ಕಾರ್ಯತಂತ್ರದ ಪ್ರಾಮುಖ್ಯತೆಯಿಂದ ಗಮನ ಸೆಳೆದ ಮುಧ್-ನ್ಯೋಮಾ ವಾಯುನೆಲೆ ಈ ಕೆಳಗಿನ ಯಾವ ಹೇಳಿಕೆಗಳೊಂದಿಗೆ ಸಂಬಂಧಿಸಿದೆ?**

1. ಇದು ಲಡಾಖ್‌ನ ಲೇಹ್ ಜಿಲ್ಲೆಯ ನ್ಯೋಮಾದಲ್ಲಿ ಸುಮಾರು 13,700 ಅಡಿ ಎತ್ತರದಲ್ಲಿದೆ.
2. ಇದರ ನಿರ್ಮಾಣವನ್ನು ಕೇಂದ್ರ ಲೋಕೋಪಯೋಗಿ ಇಲಾಖೆಯು (CPWD) ನಿರ್ವಹಿಸಿದೆ.
3. ವಾಸ್ತವ ನಿಯಂತ್ರಣ ರೇಖೆಯ (LAC) ಸಮೀಪವಿರುವ ಇದರ ಸ್ಥಳವು ದೇಪ್ಸಾಂಗ್ ಬಯಲು ಪ್ರದೇಶಗಳು, ಪಾಂಗೊಂಗ್ ತ್ಸೋ ಮತ್ತು ಚುಶುಲ್ ಕಣಿವೆಯಂತಹ ಪ್ರದೇಶಗಳಲ್ಲಿ ಭಾರತಕ್ಕೆ ಯುದ್ಧತಂತ್ರದ, ಸಾಗಣೆ (ಲಾಜಿಸ್ಟಿಕಲ್) ಮತ್ತು ಕಣ್ಗಾವಲು ಅನುಕೂಲಗಳನ್ನು ಒದಗಿಸುತ್ತದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿವೆ?

A. 1 ಮತ್ತು 2 ಮಾತ್ರ
B. 1 ಮತ್ತು 3 ಮಾತ್ರ
C. 2 ಮತ್ತು 3 ಮಾತ್ರ
D. 1, 2 ಮತ್ತು 3 ಮಾತ್ರ

**ಉತ್ತರ: B**

**31. ಸೀಳು ಕಣಿವೆ ಜ್ವರ (ರಿಫ್ಟ್ ವ್ಯಾಲಿ ಫೀವರ್ -RVF) ಪ್ರಾಥಮಿಕವಾಗಿ ಈ ಕೆಳಗಿನವುಗಳಲ್ಲಿ ಯಾವುದರ ಮೇಲೆ ಪರಿಣಾಮ ಬೀರುತ್ತದೆ?**

A. ಮಾನವರ ಮೇಲೆ ಮಾತ್ರ
B. ಕುರಿ, ಮೇಕೆ, ದನ ಮತ್ತು ಒಂಟೆಗಳಂತಹ ಪ್ರಾಣಿಗಳ ಮೇಲೆ
C. ಪಕ್ಷಿಗಳು ಮತ್ತು ಸರೀಸೃಪಗಳ ಮೇಲೆ
D. ಕಡಲ ಪ್ರಾಣಿಗಳ ಮೇಲೆ

**ಉತ್ತರ: B**

**32. ಕಾಕಂಬಿ (ಮೊಲಾಸಿಸ್) ಮತ್ತು ಭಾರತದಲ್ಲಿ ಅದರ ಕಾರ್ಯತಂತ್ರದ ಪ್ರಾಮುಖ್ಯತೆಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. ಕಾಕಂಬಿಯು ಕಬ್ಬು ಅಥವಾ ಸಕ್ಕರೆ ಗಡ್ಡೆಯ ಸಂಸ್ಕರಣೆಯ ಉಪ-ಉತ್ಪನ್ನವಾಗಿದ್ದು , ಕೈಗಾರಿಕಾ ಹುದುಗುವಿಕೆಗೆ ಸೂಕ್ತವಾದ ಹುದುಗುವ ಸಕ್ಕರೆಯನ್ನು ಹೊಂದಿರುತ್ತದೆ.
2. ಇದು ಭಾರತದ ಎಥೆನಾಲ್ ಮಿಶ್ರಣ ಕಾರ್ಯಕ್ರಮದ ( ಅಡಿಯಲ್ಲಿ ಎಥೆನಾಲ್ ಉತ್ಪಾದನೆಗೆ ಪ್ರಮುಖ ಕಚ್ಚಾ ವಸ್ತುವಾಗಿದ್ದು , ಕಚ್ಚಾ ತೈಲ ಆಮದುಗಳನ್ನು ಕಡಿಮೆ ಮಾಡಲು ನೆರವಾಗುತ್ತದೆ.
3. ಕಾಕಂಬಿಯನ್ನು ಅದರ ಹೆಚ್ಚಿನ ಕ್ಯಾಲೋರಿ ಮೌಲ್ಯದಿಂದಾಗಿ ಪ್ರಾಥಮಿಕವಾಗಿ ಉಷ್ಣ ವಿದ್ಯುತ್ ಉತ್ಪಾದನೆಗೆ ನೇರ ಇಂಧನ ಬದಲಿಯಾಗಿ ಬಳಸಲಾಗುತ್ತದೆ.
4. ಇದು ಆಹಾರ ಉದ್ಯಮ, ಪ್ರಾಣಿಗಳ ಆಹಾರ ಮತ್ತು ಸಿಟ್ರಿಕ್ ಆಮ್ಲ ಹಾಗೂ ಯೀಸ್ಟ್‌ನ ಕೈಗಾರಿಕಾ ಉತ್ಪಾದನೆಯಲ್ಲೂ ಉಪಯೋಗವನ್ನು ಹೊಂದಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿವೆ?

A. 1, 2 ಮತ್ತು 4 ಮಾತ್ರ
B. 1 ಮತ್ತು 3 ಮಾತ್ರ
C. 2 ಮತ್ತು 3 ಮಾತ್ರ
D. 1, 2, 3 ಮತ್ತು 4

**ಉತ್ತರ: A**

**33. ಹೆಚ್ಚು ವಿಷಕಾರಿ ಪ್ರೋಟೀನ್ ಆಗಿರುವ 'ರಿಸಿನ್' ಜಾಗತಿಕ ಭದ್ರತಾ ಕಾಳಜಿಯನ್ನು ಹೆಚ್ಚಿಸಿದೆ. ರಿಸಿನ್ ಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. ರಿಸಿನ್ ಅನ್ನು ಕ್ಯಾಸ್ಟರ್ ಬೀನ್ ಸಸ್ಯದ (ರಿಷಿನಸ್ ಕಮ್ಯುನಿಸ್) ಬೀಜಗಳಿಂದ ಹೊರತೆಗೆಯಲಾಗುತ್ತದೆ ಮತ್ತು ಮಾನವ ಕೋಶಗಳಲ್ಲಿ ಪ್ರೋಟೀನ್ ಸಂಶ್ಲೇಷಣೆಯನ್ನು ಪ್ರತಿಬಂಧಿಸುತ್ತದೆ.
2. ಇದನ್ನು ರಾಸಾಯನಿಕ ಶಸ್ತ್ರಾಸ್ತ್ರಗಳ ಸಮಾವೇಶದ (CWC) ಷೆಡ್ಯೂಲ್-1 ರ ಅಡಿಯಲ್ಲಿ ವರ್ಗೀಕರಿಸಲಾಗಿದೆ, ಇದು ಅದರ ಉತ್ಪಾದನೆ ಮತ್ತು ಬಳಕೆಯನ್ನು ಸಂಶೋಧನೆ, ವೈದ್ಯಕೀಯ ಅಥವಾ ರಕ್ಷಣಾ ಉದ್ದೇಶಗಳಿಗೆ ನಿರ್ಬಂಧಿಸುತ್ತದೆ.
3. ರಿಸಿನ್ ವಿಷವನ್ನು, ಒಡ್ಡಿಕೊಂಡ ತಕ್ಷಣ ನೀಡಿದರೆ, ಸಾಮಾನ್ಯ ಪ್ರತಿಜೀವಕಗಳಿಂದ ಪರಿಣಾಮಕಾರಿಯಾಗಿ ತಟಸ್ಥಗೊಳಿಸಬಹುದು.
4. ರಿಸಿನ್‌ಗೆ ಒಡ್ಡಿಕೊಳ್ಳುವುದು ಕೆಲವೇ ಗಂಟೆಗಳಲ್ಲಿ ಮಾರಕವಾಗಬಹುದು, ಮತ್ತು ಪ್ರಸ್ತುತ ಮಾಹಿತಿಯಂತೆ ಯಾವುದೇ ವಿಷ ಪ್ರತಿಬಂಧಕ ಲಭ್ಯವಿಲ್ಲ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿವೆ?

A. 1 ಮತ್ತು 3 ಮಾತ್ರ
B. 1, 2 ಮತ್ತು 4 ಮಾತ್ರ
C. 2 ಮತ್ತು 3 ಮಾತ್ರ
D. 1, 2, 3 ಮತ್ತು 4

**ಉತ್ತರ: B**

**34. ಹೇಳಿಕೆ 1: ಬೂಕರ್ ಪ್ರಶಸ್ತಿಯನ್ನು ಯುನೈಟೆಡ್ ಕಿಂಗ್‌ಡಮ್ ಮತ್ತು/ಅಥವಾ ಐರ್ಲೆಂಡ್‌ನಲ್ಲಿ ಪ್ರಕಟವಾದ ಕಾದಂಬರಿಗಳಿಗೆ ನೀಡಲಾಗುತ್ತದೆ.**

**ಹೇಳಿಕೆ 2:** ಡೇವಿಡ್ ಸ್ಜಾಲೆ ಅವರ 'ಫ್ಲೆಶ್' ಕೃತಿಯು ಯುನೈಟೆಡ್ ಕಿಂಗ್‌ಡಮ್ ಅಥವಾ ಐರ್ಲೆಂಡ್‌ನಲ್ಲಿ ಪ್ರಕಟವಾದ ಕಾರಣ ಬಹುಮಾನಕ್ಕೆ ಅರ್ಹವಾಗಿತ್ತು.

**ಸರಿಯಾದ ಆಯ್ಕೆಗಳನ್ನು ಆರಿಸಿ:**

A. ಹೇಳಿಕೆ 1 ಮತ್ತು 2 ಎರಡೂ ಸರಿಯಾಗಿವೆ , ಮತ್ತು ಹೇಳಿಕೆ 2 ಎಂಬುದು ಹೇಳಿಕೆ 1 ರ ಸರಿಯಾದ ವಿವರಣೆಯಾಗಿದೆ.
B. ಹೇಳಿಕೆ 1 ಮತ್ತು 2 ಎರಡೂ ಸರಿಯಾಗಿವೆ , ಆದರೆ ಹೇಳಿಕೆ 2 ಎಂಬುದು ಹೇಳಿಕೆ 1 ರ ಸರಿಯಾದ ವಿವರಣೆಯಲ್ಲ.
C. ಹೇಳಿಕೆ 1 ಸರಿಯಾಗಿದೆ, ಹೇಳಿಕೆ 2 ತಪ್ಪಾಗಿದೆ .
D. ಹೇಳಿಕೆ 1 ತಪ್ಪಾಗಿದೆ , ಹೇಳಿಕೆ 2 ಸರಿಯಾಗಿದೆ.

**ಉತ್ತರ: A**

**35. ಭಾರತದಲ್ಲಿ 2016 ರ ನವೆಂಬರ್ 8 ರಂದು ಘೋಷಿಸಲಾದ ನೋಟು ಅಮಾನ್ಯೀಕರಣಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

**ಹೇಳಿಕೆ 1:** ನೋಟು ಅಮಾನ್ಯೀಕರಣವು ಚಲಾವಣೆಯಲ್ಲಿದ್ದ ಸುಮಾರು 86% ಕರೆನ್ಸಿಯನ್ನು ಒಳಗೊಂಡಿರುವ ₹500 ಮತ್ತು ₹1,000 ನೋಟುಗಳನ್ನು ಕಾನೂನುಬದ್ಧವಾಗಿ ಅಮಾನ್ಯಗೊಳಿಸಿತು.

**ಹೇಳಿಕೆ 2:** 2016 ರ ನೋಟು ಅಮಾನ್ಯೀಕರಣದ ಉದ್ದೇಶಗಳು ಕಪ್ಪು ಹಣವನ್ನು ತೊಡೆದುಹಾಕುವುದು, ನಕಲಿ ಕರೆನ್ಸಿಯನ್ನು ತಡೆಯುವುದು, ಡಿಜಿಟಲ್ ಪಾವತಿಗಳನ್ನು ಉತ್ತೇಜಿಸುವುದು ಮತ್ತು ಆರ್ಥಿಕತೆಯನ್ನು ಔಪಚಾರಿಕಗೊಳಿಸುವುದನ್ನು ಒಳಗೊಂಡಿದ್ದವು.

**ಹೇಳಿಕೆ 3:** ನೋಟು ಅಮಾನ್ಯೀಕರಣವು ಭಾರತೀಯ ಆರ್ಥಿಕತೆಯಿಂದ ಕಪ್ಪು ಹಣವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ನೇರವಾಗಿ ಕಾರಣವಾಯಿತು.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿದೆ?

A. 1 ಮತ್ತು 2 ಮಾತ್ರ
B. 2 ಮತ್ತು 3 ಮಾತ್ರ
C. 1 ಮತ್ತು 3 ಮಾತ್ರ
D. 1, 2, ಮತ್ತು 3

**ಉತ್ತರ: A**

**36. ಭಾರತದ ಆದಿತ್ಯ-L1 ಮಿಷನ್‌ಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. ಆದಿತ್ಯ-L1 ಭಾರತದ ಮೊದಲ ಅಂತರಿಕ್ಷ ಆಧಾರಿತ ಸೌರ ವೀಕ್ಷಣಾಲಯವಾಗಿದೆ.
2. ಗಗನನೌಕೆಯನ್ನು ಭೂಮಿಯಿಂದ ಸುಮಾರು 1.5 ದಶಲಕ್ಷ ಕಿ.ಮೀ ದೂರದಲ್ಲಿರುವ ಲಾಗ್ರೇಂಜ್ ಬಿಂದು 1 (L1) ಸುತ್ತಲಿನ ಹಾಲೋ ಕಕ್ಷೆಯಲ್ಲಿ ಇರಿಸಲಾಗುತ್ತದೆ.
3. ಈ ಮಿಷನ್ ಗಗನನೌಕೆಯನ್ನು ಸೂರ್ಯನ ಮೇಲ್ಮೈ ಮತ್ತು ಕರೋನಾವನ್ನು ಅಧ್ಯಯನ ಮಾಡಲು ನೇರವಾಗಿ ಸೂರ್ಯನಿಗೆ ಕಳುಹಿಸುವುದನ್ನು ಒಳಗೊಂಡಿದೆ.
4. L1 ನಲ್ಲಿನ ನಿಯೋಜನೆಯು ಸೂರ್ಯಗ್ರಹಣಗಳ ಸಮಯದಲ್ಲಿಯೂ ಸಹ ಸೂರ್ಯನ ನಿರಂತರ ವೀಕ್ಷಣೆಗೆ ಅವಕಾಶ ನೀಡುತ್ತದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿವೆ?

A. 1 ಮತ್ತು 2 ಮಾತ್ರ
B. 1, 2, ಮತ್ತು 4 ಮಾತ್ರ
C. 1, 3, ಮತ್ತು 4 ಮಾತ್ರ
D. ಮೇಲಿನ ಎಲ್ಲವೂ

**ಉತ್ತರ: B**

**37. ಈ ಕೆಳಗಿನ ಉತ್ಪನ್ನಗಳು ಮತ್ತು ಅವುಗಳ ಭೌಗೋಳಿಕ ಸೂಚಕ ಟ್ಯಾಗ್ (GI Tag) ಪಡೆದ ರಾಜ್ಯಗಳನ್ನು ಹೊಂದಿಸಿ:**

| ಪಟ್ಟಿ I (ಉತ್ಪನ್ನಗಳು ) | ಪಟ್ಟಿ II (ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳು) |
|---|---|
| a. ಕಣ್ಣಾಡಿಪ್ಪಾಯ | 1. ತಮಿಳುನಾಡು |
| b. ಆಪಟಾನಿ ಜವಳಿ | 2. ಅರುಣಾಚಲ ಪ್ರದೇಶ |
| c. ಮಾರ್ತಾಂಡಂ ಜೇನು | 3. ಕೇರಳ |
| d. ಲೇಪ್ಚಾ ತುಂಗ್ಬುಕ್ | 4. ಅಸ್ಸಾಂ |
| e. ಬೋಡೋ ಅರೋನೈ | 5. ಸಿಕ್ಕಿಂ |

ಸರಿಯಾದ ಜೋಡಿಗಳನ್ನು ಆಯ್ಕೆಮಾಡಿ:

A. a–3, b–2, c–1, d–5, e–4
B. a–2, b–1, c–3, d–5, e–4
C. a–1, b–3, c–2, d–4, e–5
D. a–1, b–2, c–3, d–5, e–4

**ಉತ್ತರ: A**

**38. ಜರ್ಮನ್‌ವಾಚ್ ಸಂಸ್ಥೆ ಬಿಡುಗಡೆ ಮಾಡಿದ ಹವಾಮಾನ ಅಪಾಯ ಸೂಚ್ಯಂಕ, 2026 ರ ಪ್ರಕಾರ, 1995 ಮತ್ತು 2024 ರ ನಡುವೆ ತೀವ್ರ ಹವಾಮಾನ ಘಟನೆಗಳಿಂದ ಹೆಚ್ಚು ಪ್ರಭಾವಿತವಾದ ದೇಶಗಳಲ್ಲಿ ಭಾರತದ ಶ್ರೇಯಾಂಕ ಎಷ್ಟು?**

A. 5 ನೇ
B. 7 ನೇ
C. 9 ನೇ
D. 11 ನೇ

**ಉತ್ತರ: C**

**39. ಭಾರತದಲ್ಲಿ ಚೀತಾ ಸಂತತಿಯನ್ನು ಪುನಃ ಪರಿಚಯಿಸುವ ಗುರಿಯನ್ನು ಹೊಂದಿರುವ ಚೀತಾ ಯೋಜನೆ (ಪ್ರಾಜೆಕ್ಟ್ ಚೀತಾ ) ಯನ್ನು ಈ ಕೆಳಗಿನವುಗಳಲ್ಲಿ ಯಾವುದು ಅನುಷ್ಠಾನಗೊಳಿಸುತ್ತಿದೆ?**

A. ಭಾರತೀಯ ವನ್ಯಜೀವಿ ಸಂಸ್ಥೆ (WII)
B. ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ
C. ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ
D. ಭಾರತೀಯ ಪ್ರಾಣಿ ಶಾಸ್ತ್ರೀಯ ಸಮೀಕ್ಷೆ (ZSI)

**ಉತ್ತರ: B**

**40. ಚೀತಾಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ?**

1. ಚೀತಾಗಳು ಪ್ರಪಂಚದ ಅತ್ಯಂತ ವೇಗದ ಸಸ್ತನಿಗಳಾಗಿವೆ.
2. ಭಾರತದಲ್ಲಿ ಅಳಿವಿನಂಚಿಗೆ ತಲುಪಿದ ಏಕೈಕ ದೊಡ್ಡ ಮಾಂಸಾಹಾರಿಗಳು, ಚೀತಾಗಳಾಗಿವೆ.
3. ಚೀತಾಗಳು ಸಿಂಹಗಳಂತೆ ಗರ್ಜಿಸಲು ಸಾಧ್ಯವಿಲ್ಲ.
4. ಆಫ್ರಿಕನ್ ಚೀತಾ ದುರ್ಬಲ (Vulnerable), ಮತ್ತು ಏಷ್ಯಾಟಿಕ್ ಚೀತಾ ತೀವ್ರವಾಗಿ ಅಳಿವಿನಂಚಿನಲ್ಲಿರುವ (Critically Endangered) ಪ್ರಭೇದವಾಗಿದೆ.

ಸರಿಯಾದ ಆಯ್ಕೆಗಳನ್ನು ಆರಿಸಿ:

A. 1, 2 ಮತ್ತು 4 ಮಾತ್ರ

B. 1, 2 ಮತ್ತು 3 ಮಾತ್ರ
C. 2, 3 ಮತ್ತು 4 ಮಾತ್ರ
D. 1, 3 ಮತ್ತು 4 ಮಾತ್ರ

**ಉತ್ತರ: A**

**41. ಈ ಕೆಳಗಿನವುಗಳಲ್ಲಿ ಭೂತಾನ್‌ನಲ್ಲಿ ಭಾರತವು ಪ್ರಾರಂಭಿಸಿದ ಪ್ರಮುಖ ದ್ವಿಪಕ್ಷೀಯ ಯೋಜನೆಗಳು ಯಾವುವು?**

1. ಪುನಾತ್ಸಂಗ್ಟು ಮತ್ತು ಮಂಗದೇಚ್ಛು ಜಲವಿದ್ಯುತ್ ಯೋಜನೆಗಳು
2. ಇಸ್ರೋದ (ISRO) ಗ್ರೌಂಡ್ ಅರ್ಥ್ ಸ್ಟೇಷನ್
3. ರೂಪೇ ಕಾರ್ಡ್
4. ಭಾರತದ ರಾಷ್ಟ್ರೀಯ ಜ್ಞಾನ ಜಾಲ

ಸರಿಯಾದ ಆಯ್ಕೆಗಳನ್ನು ಆರಿಸಿ:
A. 1 ಮತ್ತು 2 ಮಾತ್ರ
B. 1, 2, ಮತ್ತು 3 ಮಾತ್ರ
C. 1, 2, 3, ಮತ್ತು 4
D. 2, 3, ಮತ್ತು 4 ಮಾತ್ರ

**ಉತ್ತರ: C**

**42. 'ದೆಹಲಿ ಘೋಷಣೆ 2025' ಅನ್ನು ಈ ಕೆಳಗಿನ ಯಾವ ಸಂಸ್ಥೆಯು ಅಳವಡಿಸಿಕೊಂಡಿದೆ?**

A. ಭಾರತೀಯ ರಿಸರ್ವ್ ಬ್ಯಾಂಕ್
B. ನಗರ ಸಹಕಾರಿ ಬ್ಯಾಂಕುಗಳು ಮತ್ತು ಕ್ರೆಡಿಟ್ ಸೊಸೈಟಿಗಳ ರಾಷ್ಟ್ರೀಯ ಒಕ್ಕೂಟ
C. ಭಾರತೀಯ ಭದ್ರತೆ ಮತ್ತು ವಿನಿಮಯ ಮಂಡಳಿ
D. ಭಾರತೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್

**ಉತ್ತರ: B**

**43. ಈ ಕೆಳಗಿನವುಗಳಲ್ಲಿ ಯಾವುದು/ಯಾವುವು ನಗರ ಸಹಕಾರಿ ಬ್ಯಾಂಕುಗಳ (UCBs) ಗುಣಲಕ್ಷಣಗಳಾಗಿವೆ?**

1. ಅವು ಪ್ರಾಥಮಿಕವಾಗಿ ಗ್ರಾಮೀಣ ಜನಸಂಖ್ಯೆಗೆ ಸೇವೆ ಸಲ್ಲಿಸುತ್ತವೆ.
2. ಅವು ಸಹಕಾರ, ಪ್ರಜಾಪ್ರಭುತ್ವದ ನಿರ್ಧಾರ ಕೈಗೊಳ್ಳುವಿಕೆ ಮತ್ತು ಮುಕ್ತ ಸದಸ್ಯತ್ವದ ತತ್ವಗಳ ಮೇಲೆ ಕಾರ್ಯನಿರ್ವಹಿಸುತ್ತವೆ.
3. ಅವು ಸಣ್ಣ ವ್ಯಾಪಾರಗಳು ಮತ್ತು ಸಂಬಳ ಪಡೆಯುವ ವ್ಯಕ್ತಿಗಳಿಗೆ ಠೇವಣಿಗಳು, ಸಾಲಗಳು ಮತ್ತು ಕ್ರೆಡಿಟ್ ಸೌಲಭ್ಯಗಳನ್ನು ನೀಡುತ್ತವೆ.

ಸರಿಯಾದ ಆಯ್ಕೆಗಳನ್ನು ಆರಿಸಿ:
A. 1 ಮತ್ತು 2 ಮಾತ್ರ
B. 2 ಮತ್ತು 3 ಮಾತ್ರ
C. 1 ಮತ್ತು 3 ಮಾತ್ರ
D. 1, 2, ಮತ್ತು 3

**ಉತ್ತರ: B**

**44. 'ಜೈವಿಕ ಶುದ್ಧೀಕರಣ'ವು ಇತರ ಶುದ್ಧೀಕರಣ ವಿಧಾನಗಳಿಗಿಂತ ಏಕೆ ಭಿನ್ನವಾಗಿದೆ?**

A. ಇದು ಮಾಲಿನ್ಯಕಾರಕಗಳನ್ನು ವಿಘಟಿಸಲು ಅಥವಾ ಪರಿವರ್ತಿಸಲು ಸೂಕ್ಷ್ಮಜೀವಿಗಳ ಮೇಲೆ ಅವಲಂಬಿತವಾಗಿದೆ.
B. ಇದು ಕೇವಲ ಯಾಂತ್ರಿಕ ಪ್ರತ್ಯೇಕತೆಯ ತಂತ್ರಗಳನ್ನು ಬಳಸುತ್ತದೆ.
C. ಇದನ್ನು ಪ್ಲಾಸ್ಟಿಕ್ ತ್ಯಾಜ್ಯವನ್ನು ಸಂಸ್ಕರಿಸಲು ಮಾತ್ರ ಬಳಸಲಾಗುತ್ತದೆ.
D. ಇದು ಕಲುಷಿತ ಮಣ್ಣಿನ ದಹನವನ್ನು ಒಳಗೊಂಡಿರುತ್ತದೆ.

**ಉತ್ತರ: A**

**45. ಡಂಪ್‌ಸೈಟ್ (ತ್ಯಾಜ್ಯ ವಿಲೇವಾರಿ ಸ್ಥಳ) ಶುದ್ಧೀಕರಣ ವೇಗವರ್ಧಕ ಕಾರ್ಯಕ್ರಮ (DRAP) ಯಾವ ರಾಷ್ಟ್ರೀಯ ಗುರಿಗೆ ನೇರವಾಗಿ ಕೊಡುಗೆ ನೀಡುತ್ತದೆ?**

A. 2025 ರ ವೇಳೆಗೆ 100% ನಗರ ತ್ಯಾಜ್ಯ ವಿಭಜನೆಯನ್ನು ಸಾಧಿಸುವುದು.
B. 2070 ರ ವೇಳೆಗೆ ನಿವ್ವಳ-ಶೂನ್ಯ ಹೊರಸೂಸುವಿಕೆಯನ್ನು ಸಾಧಿಸುವುದು.
C. 2030 ರ ವೇಳೆಗೆ ಮರುಬಳಕೆ ಸಾಮರ್ಥ್ಯವನ್ನು ದ್ವಿಗುಣಗೊಳಿಸುವುದು.
D. ಸೆಪ್ಟೆಂಬರ್ 2026 ರ ವೇಳೆಗೆ "ಲಕ್ಷ್ಯ ಶೂನ್ಯ ಡಂಪ್‌ಸೈಟ್‌ಗಳು" - ಇದನ್ನು ಸಾಧಿಸುವುದು.

**ಉತ್ತರ: D**

**46. ಇತ್ತೀಚೆಗೆ ಸುದ್ದಿಯಲ್ಲಿದ್ದ "ಮೆಗಾಚೈಲ್ (ಹ್ಯಾಕೆರಿಯಾಪಿಸ್) ಲೂಸಿಫರ್" ಎಂಬುದು ಯಾವ ಜೀವಿಗಳ ಗುಂಪಿಗೆ ಸೇರಿದೆ?**

A. ಉಭಯಚರಗಳು
B. ಜೇನುನೊಣಗಳ ಪ್ರಭೇದಗಳು
C. ಕಡಲ ಕಠಿಣಚರ್ಮಿಗಳು
D. ಸಿಹಿನೀರಿನ ಮೃದ್ವಂಗಿಗಳು

**ಉತ್ತರ: B**

**47. ಗಗನಯಾನ ಮಿಷನ್‌ಗೆ ಸಂಬಂಧಿಸಿದಂತೆ LVM3 ನ ಸೂಕ್ತತೆಯನ್ನು ಈ ಕೆಳಗಿನವುಗಳಲ್ಲಿ ಯಾವುದು ಸರಿಯಾಗಿ ಪ್ರತ್ಯೇಕಿಸುತ್ತದೆ?**

A. ಇದು ಸ್ಟ್ರಾಪ್-ಆನ್ ಬೂಸ್ಟರ್‌ಗಳನ್ನು ಹೊಂದಿರುವ ಭಾರತದ ಏಕೈಕ ರಾಕೆಟ್ ಆಗಿದೆ.
B. ಇದು ಮಾರ್ಪಾಡುಗಳ ನಂತರ ಮಾನವ ದರ್ಜೆಗೆ ಸೂಕ್ತವಾಗಿದ್ದು, 4-ಟನ್ ಪೇಲೋಡ್‌ಗಳನ್ನು ಭೂ ಸ್ಥಿರ ವರ್ಗಾವಣೆ ಕಕ್ಷೆಗೆ ಇರಿಸಲು ಸಾಮರ್ಥ್ಯವಿರುವ ಏಕೈಕ ಭಾರತೀಯ ಉಡಾವಣಾ ವಾಹನವಾಗಿದೆ.
C. ಇದು ಸಿಬ್ಬಂದಿ ಕಾರ್ಯಾಚರಣೆಗಳಿಗಾಗಿ ಅಳವಡಿಸಲಾದ ಸೌರ-ವಿದ್ಯುತ್ ಪ್ರೊಪಲ್ಷನ್ ಹಂತವನ್ನು ಬಳಸುತ್ತದೆ.
D. ಇದನ್ನು ಮೂಲತಃ ಮರುಬಳಕೆ ಮಾಡಬಹುದಾದ ಕಕ್ಷೆಯ ವರ್ಗದ ರಾಕೆಟ್ ಆಗಿ ಅಭಿವೃದ್ಧಿಪಡಿಸಲಾಗಿದೆ.

**ಉತ್ತರ: B**

**48. ಪ್ರತಿಪಾದನೆ (A): ಕ್ರಯೋಸ್ಫಿಯರ್ (ಶೀತಾವರಣ/ ಹಿಮಮಂಡಲ) ಅನ್ನು ಜಾಗತಿಕ ಹವಾಮಾನ ವ್ಯವಸ್ಥೆಯ ನಿರ್ಣಾಯಕ ಅಂಶವೆಂದು ಪರಿಗಣಿಸಲಾಗಿದೆ.**

ಕಾರಣ (R): ಹೆಪ್ಪುಗಟ್ಟಿದ ಮೇಲ್ಮೈಗಳು ಹೆಚ್ಚಿನ "ಪ್ರತಿಫಲನ ಸಾಮರ್ಥ್ಯ" (ಆಲ್ಬೆಡೋ) ವನ್ನು ಹೊಂದಿರುತ್ತವೆ, ಇದು ಸೌರ ವಿಕಿರಣದ ಒಂದು ಮಹತ್ವದ ಭಾಗವನ್ನು ಬಾಹ್ಯಾಕಾಶಕ್ಕೆ ಪ್ರತಿಫಲಿಸುತ್ತದೆ.

A. A ಮತ್ತು R ಎರಡೂ ಸರಿಯಾಗಿವೆ, ಮತ್ತು R ಎಂಬುದು A ಗೆ ಸರಿಯಾದ ವಿವರಣೆಯಾಗಿದೆ.
B. A ಮತ್ತು R ಎರಡೂ ಸರಿಯಾಗಿವೆ, ಆದರೆ R ಎಂಬುದು A ಗೆ ಸರಿಯಾದ ವಿವರಣೆಯಲ್ಲ.
C. A ಸರಿಯಾಗಿದೆ, ಆದರೆ R ತಪ್ಪಾಗಿದೆ.
D. A ತಪ್ಪಾಗಿದೆ, ಆದರೆ R ಸರಿಯಾಗಿದೆ.

**ಉತ್ತರ: A**

**49. ರಾಷ್ಟ್ರೀಯ ಜಲ ಪ್ರಶಸ್ತಿಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. ಇದು ಜಲ ಸಂರಕ್ಷಣೆ ಮತ್ತು ದಕ್ಷ ಜಲ ಸಂಪನ್ಮೂಲ ನಿರ್ವಹಣೆಯಲ್ಲಿನ ಅಮೋಘ ಪ್ರಯತ್ನಗಳಿಗೆ ಬಹುಮಾನ ನೀಡುವ ಗುರಿಯನ್ನು ಹೊಂದಿದೆ.
2. ಈ ಪ್ರಶಸ್ತಿಗಳು 'ಜಲ ಸಮೃದ್ಧ ಭಾರತ'ದ ಸರ್ಕಾರದ

ದೃಷ್ಟಿಕೋನವನ್ನು ಉತ್ತೇಜಿಸುತ್ತವೆ.
3. ಮಹಾರಾಷ್ಟ್ರವು 'ಅತ್ಯುತ್ತಮ ರಾಜ್ಯ' ವಿಭಾಗದಲ್ಲಿ ಮೊದಲ ಬಹುಮಾನವನ್ನು ಪಡೆದುಕೊಂಡಿದೆ. ಗುಜರಾತ್ ಮತ್ತು ಹರಿಯಾಣ ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನಗಳನ್ನು ಪಡೆದಿವೆ.
4. ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ಈ ಪ್ರಶಸ್ತಿಗಳನ್ನು ನಿರ್ವಹಿಸುತ್ತದೆ.

ಮೇಲಿನ ಹೇಳಿಕೆಗಳಲ್ಲಿ ಎಷ್ಟು ಹೇಳಿಕೆಗಳು ಸರಿಯಾಗಿವೆ?
A. ಒಂದು ಮಾತ್ರ
B. ಎರಡು ಮಾತ್ರ
C. ಮೂರು ಮಾತ್ರ
D. ಎಲ್ಲಾ ನಾಲ್ಕು

**ಉತ್ತರ: C**

**50. ಪ್ರತಿಪಾದನೆ ( A): ಜಲಜನಕವನ್ನು ಒಂದು ಪ್ರಮುಖ ಭವಿಷ್ಯದ ಶಕ್ತಿ ವಾಹಕವೆಂದು ಪರಿಗಣಿಸಲಾಗಿದೆ.**
**ಕಾರಣ (R):** ಇದು ಬ್ರಹ್ಮಾಂಡದಲ್ಲಿ ಅತ್ಯಂತ ಹಗುರವಾದ, ಹೆಚ್ಚು ಹೇರಳವಾದ, ಮತ್ತು ಹೆಚ್ಚು ದಹಿಸುವ ರಾಸಾಯನಿಕ ಧಾತುವಾಗಿದೆ.
A. A ಮತ್ತು R ಎರಡೂ ಸರಿಯಾಗಿವೆ, ಮತ್ತು R ಎಂಬುದು A ಗೆ ಸರಿಯಾದ ವಿವರಣೆಯಾಗಿದೆ
B. A ಮತ್ತು R ಎರಡೂ ಸರಿಯಾಗಿವೆ, ಆದರೆ R ಎಂಬುದು A ಗೆ ಸರಿಯಾದ ವಿವರಣೆಯಲ್ಲ
C. A ಸರಿಯಾಗಿದೆ, ಆದರೆ R ತಪ್ಪಾಗಿದೆ
D. A ತಪ್ಪಾಗಿದೆ, ಆದರೆ R ಸರಿಯಾಗಿದೆ

**ಉತ್ತರ: B**

**51. ಜಾಗತಿಕ ಕ್ರಯೋಸ್ಪಿಯರ್ (ಶೀತಾವರಣ/ಹಿಮಮಂಡಲ) ಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**
1. ಇದು ಭೂಮಿಯ ಧ್ರುವ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿದೆ.
2. ನೀರ್ಗಲ್ಲು ಬೆಟ್ಟಗಳನ್ನು ಶೀತಾವರಣದ ಭಾಗವೆಂದು ಪರಿಗಣಿಸಲಾಗುತ್ತದೆ.
3. ಶೀತ ಕೆಳಭೂಸ್ತರ (Permafrost) ಎಂದರೆ ಸತತ ಎರಡಕ್ಕಿಂತ ಹೆಚ್ಚು ವರ್ಷಗಳ ಕಾಲ ಹೆಪ್ಪುಗಟ್ಟಿದ ನೆಲ ಎಂದರ್ಥ.
4. ಋತುಮಾನದ ಸರೋವರ ಮತ್ತು ಹಿಮನದಿಯನ್ನು ಕ್ರಯೋಸ್ಪಿಯರ್ ನಿಂದ ಹೊರಗಿಡಲಾಗಿದೆ.

ಮೇಲಿನ ಹೇಳಿಕೆಗಳಲ್ಲಿ ಎಷ್ಟು ಹೇಳಿಕೆಗಳು ಸರಿಯಾಗಿವೆ?
A. ಒಂದು ಮಾತ್ರ
B. ಎರಡು ಮಾತ್ರ
C. ಮೂರು ಮಾತ್ರ
D. ಎಲ್ಲಾ ನಾಲ್ಕು

**ಉತ್ತರ: B**

**52. FGM-148 ಜಾವೆಲಿನ್ ವ್ಯವಸ್ಥೆಗೆ ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**
1. ಇದು 'ಅತಿಗೆಂಪು ಇಮೇಜಿಂಗ್ ಸೀಕರ್' ಅನ್ನು ಬಳಸುತ್ತದೆ, ಇದು ನಿಜವಾದ "ಫೈರ್-ಅಂಡ್-ಫರ್ಗೆಟ್" (ಹೊಡೆದು ಮರೆತುಬಿಡಿ) ಸಾಮರ್ಥ್ಯವನ್ನು ಒದಗಿಸುತ್ತದೆ.
2. ಇದು ಕವಚ ರಕ್ಷಿತ ಗುರಿಗಳ ವಿರುದ್ಧ 'ಮೇಲ್ಭಾಗದ ದಾಳಿ ಹಾಗೂ ನೇರ ದಾಳಿ ವಿಧಾನಗಳೆರಡರಲ್ಲೂ ಕಾರ್ಯನಿರ್ವಹಿಸಲು ಸಮರ್ಥವಾಗಿದೆ.
3. ಕ್ಷಿಪಣಿಯು ಗುರಿಯನ್ನು ಅಪ್ಪಳಿಸುವವರೆಗೆ ಇದಕ್ಕೆ ನಿರ್ವಾಹಕರಿಂದ ನಿರಂತರ ಮಾರ್ಗದರ್ಶನದ ಅಗತ್ಯವಿರುತ್ತದೆ.
4. ಇದು ಮಧ್ಯಮ-ಶ್ರೇಣಿಯ ದಾಳಿ ಸಾಮರ್ಥ್ಯವನ್ನು ಹೊಂದಿರುವ, ಒಬ್ಬ ವ್ಯಕ್ತಿಯೇ ಸಾಗಿಸಬಲ್ಲ 'ಟ್ಯಾಂಕ್ ನಿರೋಧಕ ನಿರ್ದೇಶಿತ ಕ್ಷಿಪಣಿ' ವ್ಯವಸ್ಥೆಯಾಗಿದೆ.

**ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ?**
A. 1, 2 ಮತ್ತು 4 ಮಾತ್ರ
B. 1 ಮತ್ತು 3 ಮಾತ್ರ
C. 2 ಮತ್ತು 3 ಮಾತ್ರ
D. 1, 2, 3 ಮತ್ತು 4

**ಉತ್ತರ: A**

**53. ORS (ಮೌಖಿಕ ಪುನರ್ಜಲೀಕರಣ ಲವಣಗಳು) ಅನ್ನು ಪ್ರಾಥಮಿಕವಾಗಿ ಈ ಕೆಳಗಿನವುಗಳಲ್ಲಿ ಯಾವ ಉದ್ದೇಶಕ್ಕಾಗಿ ಬಳಸಲಾಗುತ್ತದೆ?**
A. ದೀರ್ಘಕಾಲದ ಮೂತ್ರಪಿಂಡದ ಕಾಯಿಲೆಗಳ ಚಿಕಿತ್ಸೆಗಾಗಿ.
B. ತೀವ್ರ ಅತಿಸಾರದಿಂದ ಉಂಟಾಗುವ ನಿರ್ಜಲೀಕರಣದ ತಡೆಗಟ್ಟುವಿಕೆ ಮತ್ತು ಚಿಕಿತ್ಸೆಗಾಗಿ.
C. ಮಕ್ಕಳಲ್ಲಿ ಅಧಿಕ ರಕ್ತದೊತ್ತಡದ ನಿರ್ವಹಣೆಗಾಗಿ.
D. ಮಲೇರಿಯಾದಿಂದ ಉಂಟಾಗುವ ನಿರ್ಜಲೀಕರಣದ ಚಿಕಿತ್ಸೆಗಾಗಿ.

**ಉತ್ತರ: B**

**54. 'ಜಂಟಿ ಕ್ರೆಡಿಟಿಂಗ್ (ಸಾಲ) ವ್ಯವಸ್ಥೆ'ಗೆ (JCM) ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**
1. ಇದು ಜಪಾನ್ ಪ್ರಾರಂಭಿಸಿದ ಒಂದು ದ್ವಿಪಕ್ಷೀಯ ಇಂಗಾಲದ ಮಾರುಕಟ್ಟೆ ಚೌಕಟ್ಟಾಗಿದೆ.
2. JCM ಅಡಿಯಲ್ಲಿ, ಪಾಲುದಾರ ರಾಷ್ಟ್ರಗಳಲ್ಲಿ ಉತ್ಪತ್ತಿಯಾಗುವ ಇಂಗಾಲದ ಕ್ರೆಡಿಟ್‌ಗಳನ್ನು ಜಪಾನ್ ಮಾತ್ರ ಬಳಸಿಕೊಳ್ಳಬಹುದು.
3. JCM ತಂತ್ರಜ್ಞಾನ ವರ್ಗಾವಣೆ ಮತ್ತು ಹಣಕಾಸಿನ ನೆರವಿನ ಮೂಲಕ ಕಡಿಮೆ ಇಂಗಾಲದ ತಂತ್ರಜ್ಞಾನಗಳ ಅಳವಡಿಕೆಯನ್ನು ಬೆಂಬಲಿಸುತ್ತದೆ.

**ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ?**
A. 1 ಮತ್ತು 3 ಮಾತ್ರ
B. 2 ಮತ್ತು 3 ಮಾತ್ರ
C. 1 ಮತ್ತು 2 ಮಾತ್ರ
D. 1, 2 ಮತ್ತು 3

**ಉತ್ತರ: A**

**55. 'ಅಕಾಂತೋಸಿಸ್ ನಿಗ್ರಿಕನ್ಸ್' ಗೆ ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**
1. ಇದು ಸಾಮಾನ್ಯವಾಗಿ ದೇಹದ ಮಡಿಕೆಗಳಲ್ಲಿ ಕಂಡುಬರುವ ಕಪ್ಪು, ವೆಲ್ವೆಟ್‌ನಂತಹ (ಮೃದುವಾದ) ಚರ್ಮದ ಕಲೆಗಳಿಂದ ಗುರುತಿಸಲ್ಪಡುತ್ತದೆ.
2. ಈ ಸ್ಥಿತಿಯು ಹಠಾತ್ತನೆ ಗಂಟೆಗಳು ಅಥವಾ ದಿನಗಳಲ್ಲಿ ಕಾಣಿಸಿ, ತೀವ್ರ ಹಾರ್ಮೋನುಗಳ ಅಸಮತೋಲನವನ್ನು ಸೂಚಿಸುತ್ತದೆ.
3. ಇದು ಇನ್ಸುಲಿನ್ ಪ್ರತಿರೋಧದೊಂದಿಗೆ ಬಲವಾಗಿ ಸಂಬಂಧ ಹೊಂದಿದೆ ಮತ್ತು ಮಧುಮೇಹ ಪೂರ್ವ ಹಂತದ ಆರಂಭಿಕ ಸೂಚಕವಾಗಿ ಕಾರ್ಯನಿರ್ವಹಿಸುತ್ತದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ?
A. 1 ಮತ್ತು 2 ಮಾತ್ರ
B. 2 ಮತ್ತು 3 ಮಾತ್ರ
C. 1 ಮತ್ತು 3 ಮಾತ್ರ
D. 1, 2 ಮತ್ತು 3

**ಉತ್ತರ: C**

**56. ಭಾರತ ಅಂತರರಾಷ್ಟ್ರೀಯ ವ್ಯಾಪಾರ ಮೇಳಕ್ಕೆ (IITF)**

**ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. ಇದನ್ನು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ವಾರ್ಷಿಕವಾಗಿ ಆಯೋಜಿಸುತ್ತದೆ.
2. ಇದು ಪ್ರತಿ ವರ್ಷ ನವದೆಹಲಿಯ ಪ್ರಗತಿ ಮೈದಾನದಲ್ಲಿ ನಡೆಯುತ್ತದೆ.
3. IITF ನ ಮೊದಲ ಆವೃತ್ತಿಯನ್ನು 1990 ರಲ್ಲಿ ಪ್ರಾರಂಭಿಸಲಾಯಿತು.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿವೆ?

A. 2 ಮತ್ತು 3 ಮಾತ್ರ
B. 1 ಮತ್ತು 2 ಮಾತ್ರ
C. 1 ಮತ್ತು 3 ಮಾತ್ರ
D. 1, 2 ಮತ್ತು 3

**ಉತ್ತರ: B**

**57. ಪ್ರತಿಪಾದನೆ (A): ಮೀಥೇನ್ ಅನ್ನು ಅಲ್ಪಾವಧಿಯ ಹವಾಮಾನ ಮಾಲಿನ್ಯಕಾರಕ ಎಂದು ವರ್ಗೀಕರಿಸಲಾಗಿದೆ.**

**ಕಾರಣ (R):** ಇದರ ವಾತಾವರಣದ ಜೀವಿತಾವಧಿಯು ಸುಮಾರು 12 ವರ್ಷಗಳು. ಇದು ಇಂಗಾಲದ ಡೈಆಕ್ಸೈಡ್ (CO2) ಗೆ ಹೋಲಿಸಿದರೆ ಗಮನಾರ್ಹವಾಗಿ ಕಡಿಮೆಯಾಗಿದೆ.

ಸರಿಯಾದ ಆಯ್ಕೆಯನ್ನು ಆರಿಸಿ:

A. A ಮತ್ತು R ಎರಡೂ ಸರಿಯಾಗಿವೆ, ಮತ್ತು R ಎಂಬುದು A ಯ ಸರಿಯಾದ ವಿವರಣೆಯಾಗಿದೆ.
B. A ಮತ್ತು R ಎರಡೂ ಸರಿಯಾಗಿವೆ, ಆದರೆ R ಎಂಬುದು A ಯ ಸರಿಯಾದ ವಿವರಣೆಯಲ್ಲ.
C. A ಸರಿಯಾಗಿದೆ, ಆದರೆ R ತಪ್ಪಾಗಿದೆ.
D. A ತಪ್ಪಾಗಿದೆ, ಆದರೆ R ಸರಿಯಾಗಿದೆ.

**ಉತ್ತರ: A**

**58. ಕೆಳಗಿನ ಜಾಗತಿಕ ವಲಯಗಳನ್ನು ಅವುಗಳ ಅಂದಾಜು ಮೀಥೇನ್ ಹೊರಸೂಸುವಿಕೆಗಳ ಪಾಲಿನೊಂದಿಗೆ ಹೊಂದಿಸಿ:**

| ಪಟ್ಟಿ I (ವಲಯ) | ಪಟ್ಟಿ II (ಶೇಕಡಾವಾರು ಪಾಲು) |
|---|---|
| 1. ಕೃಷಿ | a. 35% |
| 2. ಶಕ್ತಿ | b. 20% |
| 3. ತ್ಯಾಜ್ಯ | c. 40% |

ಸರಿಯಾದ ಹೊಂದಾಣಿಕೆಯ ಸಂಯೋಜನೆಯನ್ನು ಆರಿಸಿ:

A. 1-c, 2-a, 3-b
B. 1-a, 2-c, 3-b
C. 1-c, 2-b, 3-a
D. 1-b, 2-a, 3-c

**ಉತ್ತರ: A**

**59. 'ಕೋಡೆಕ್ಸ್ ಆಲಿಮೆಂಟೇರಿಯಸ್ ಆಯೋಗ'ಕ್ಕೆ ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. ಇದು ಗ್ರಾಹಕರ ಆರೋಗ್ಯವನ್ನು ರಕ್ಷಿಸಲು ಮತ್ತು ಆಹಾರ ವ್ಯಾಪಾರದಲ್ಲಿ ನ್ಯಾಯೋಚಿತ ಪದ್ಧತಿಗಳನ್ನು ಖಚಿತಪಡಿಸಿಕೊಳ್ಳಲು FAO ಮತ್ತು WHO ಗಳ ಸಹಯೋಗದೊಂದಿಗೆ ಸ್ಥಾಪಿಸಲಾದ ಒಂದು ಆಯೋಗವಾಗಿದೆ.
2. ಇದು ಯುರೋಪಿಯನ್ ಒಕ್ಕೂಟವನ್ನು ಒಳಗೊಂಡಂತೆ ಒಟ್ಟು 189 ಸದಸ್ಯತ್ವರನ್ನು ಹೊಂದಿದೆ.
3. ಇದರ ಅಧಿವೇಶನಗಳು ಪ್ರತಿ ಎರಡು ವರ್ಷಗಳಿಗೊಮ್ಮೆ, ರೋಮ್ ಮತ್ತು ಜಿನೀವಾ ನಗರಗಳ ನಡುವೆ ಪರ್ಯಾಯವಾಗಿ ನಡೆಯುತ್ತವೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ?

A. 1 ಮತ್ತು 2 ಮಾತ್ರ
B. 2 ಮತ್ತು 3 ಮಾತ್ರ
C. 1 ಮತ್ತು 3 ಮಾತ್ರ
D. 1, 2 ಮತ್ತು 3

**ಉತ್ತರ: A**

**60. 'ಜಲ ಆಯವ್ಯಯ' (ವಾಟರ್ ಬಜೆಟಿಂಗ್) ಕ್ಕೆ ಸಂಬಂಧಿಸಿದಂತೆ, ಈ ಕೆಳಗಿನವುಗಳನ್ನು ಪರಿಗಣಿಸಿ:**

1. ಇದು ಪರಿಸರಕ್ಕೆ ಬೇಕಾದ ನೀರಿನ ಅವಶ್ಯಕತೆಗಳನ್ನು ಗಣನೆಗೆ ತೆಗೆದುಕೊಳ್ಳುತ್ತದೆ.
2. ಇದನ್ನು ಭಾರತದ ಬರಪೀಡಿತ ಜಿಲ್ಲೆಗಳಲ್ಲಿ ಮಾತ್ರ ಕಡ್ಡಾಯಗೊಳಿಸಲಾಗಿದೆ.
3. ಇದು ನೀರಿನ ಪೂರೈಕೆ ಮತ್ತು ಬೇಡಿಕೆಯ ನಡುವಿನ ಕೊರತೆಗಳನ್ನು ಗುರುತಿಸಲು ಸಹಾಯ ಮಾಡುತ್ತದೆ.
4. ಇದು ಅಂತರ್ಜಲ ಪುನರ್ಭರ್ತಿಯನ್ನು ಸುಧಾರಿಸಲು ಮಾತ್ರ ಕೊಡುಗೆ ನೀಡುತ್ತದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ?

A. 2 ಮತ್ತು 4
B. 1, 2, ಮತ್ತು 3
C. 1 ಮತ್ತು 3
D. 3 ಮತ್ತು 4

**ಉತ್ತರ: C**

**61. 'ಇಂದಿರಾ ಗಾಂಧಿ ಶಾಂತಿ ಪ್ರಶಸ್ತಿಗೆ' ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. ಇದನ್ನು ಭಾರತ ಸರ್ಕಾರವು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಮೂಲಕ ನೀಡುತ್ತದೆ.
2. ಇದು ಶಾಂತಿ, ನಿಶ್ಯಸ್ತ್ರೀಕರಣ ಮತ್ತು ಅಭಿವೃದ್ಧಿಗೆ ನೀಡಿದ ಕೊಡುಗೆಗಳನ್ನು ಗುರುತಿಸುತ್ತದೆ.
3. ಮಿಚೆಲ್ ಬ್ಯಾಚೆಲೆಟ್ ಅವರು ಈ ಪ್ರಶಸ್ತಿಯ 2024 ರ ಸಾಲಿನ ಪುರಸ್ಕೃತರಾಗಿದ್ದಾರೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿವೆ?

A. 1 ಮತ್ತು 2 ಮಾತ್ರ
B. 2 ಮತ್ತು 3 ಮಾತ್ರ
C. 3 ಮಾತ್ರ
D. 1, 2 ಮತ್ತು 3

**ಉತ್ತರ: B**

**62. 'ಆಂಟಿ-ಮೈಕ್ರೋಬಿಯಲ್ ಪ್ರತಿರೋಧಕತೆ 2.0 ರಾಷ್ಟ್ರೀಯ ಕ್ರಿಯಾ ಯೋಜನೆ 2025–29 ಕ್ಕೆ ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. ಇದು ಭಾರತದಾದ್ಯಂತ AMR ಕಣ್ಗಾವಲು ವ್ಯವಸ್ಥೆಗಳು ಮತ್ತು ಪ್ರಯೋಗಾಲಯ ಸಾಮರ್ಥ್ಯವನ್ನು ಬಲಪಡಿಸುವ ಉದ್ದೇಶವನ್ನು ಹೊಂದಿದೆ.
2. ಇದು NAP-AMR 1.0 ಗೆ ಹೋಲಿಸಿದರೆ ಖಾಸಗಿ ವಲಯವನ್ನು ತೊಡಗಿಸಿಕೊಳ್ಳಲು ಹೆಚ್ಚಿನ ಒತ್ತು ನೀಡುತ್ತದೆ.
3. ಸಾರ್ವಜನಿಕರಲ್ಲಿ ಅರಿವನ್ನು ಮೂಡಿಸುವುದು ಮತ್ತು ಆಂಟಿ ಮೈಕ್ರೋಬಿಯಲ್ ಬಳಕೆಯ ಮೇಲಿನ ನಿಯಂತ್ರಕ ಚೌಕಟ್ಟುಗಳನ್ನು ಸುಧಾರಿಸುವುದು ಇದರ ಉದ್ದೇಶಗಳಲ್ಲಿ ಒಂದಾಗಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿವೆ?

A. 1 ಮತ್ತು 2 ಮಾತ್ರ
B. 2 ಮತ್ತು 3 ಮಾತ್ರ
C. 1 ಮತ್ತು 3 ಮಾತ್ರ
D. 1, 2 ಮತ್ತು 3

**ಉತ್ತರ: D**

**63. ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆ, 2013 (NFSA 2013) ಕ್ಕೆ ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. NFSA ಅಡಿಯಲ್ಲಿ ಆಹಾರದ ಹಕ್ಕನ್ನು ಸಂವಿಧಾನದಲ್ಲಿ ಮೂಲಭೂತ ಹಕ್ಕು ಎಂದು ಸ್ಪಷ್ಟವಾಗಿ ಗುರುತಿಸಲಾಗಿದೆ.
2. ಈ ಕಾಯಿದೆಯ ಅಡಿಯಲ್ಲಿ, ಅಂತ್ಯೋದಯ ಅನ್ನ ಯೋಜನೆ ಕುಟುಂಬಗಳು ಪ್ರತಿ ತಿಂಗಳಿಗೆ 35 ಕೆ.ಜಿ. ಆಹಾರ ಧಾನ್ಯಗಳನ್ನು ಪಡೆಯಲು ಅರ್ಹವಾಗಿವೆ.
3. ಈ ಯೋಜನೆಯ ವ್ಯಾಪ್ತಿಯ ಅನುಪಾತವು ಗ್ರಾಮೀಣ ಮತ್ತು ನಗರ ಜನಸಂಖ್ಯೆಗೆ ಏಕರೂಪವಾಗಿದ್ದು, ಎರಡಕ್ಕೂ ಶೇಕಡಾ 70 ರಷ್ಟಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿವೆ?

A. 2 ಮತ್ತು 4
B. 1 ಮತ್ತು 3 ಮಾತ್ರ
C. 2 ಮತ್ತು 3 ಮಾತ್ರ
D. 1, 2 ಮತ್ತು 3

**ಉತ್ತರ: A**

**64. 'ಯುವ ಫಾರ್ ಆಲ್' ಉಪಕ್ರಮಕ್ಕೆ ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. ಇದನ್ನು 'ಇಂಡಿಯಾ ಎಐ ಮಿಷನ್' ಅಡಿಯಲ್ಲಿ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು (MeitY} ಪ್ರಾರಂಭಿಸಿದೆ.
2. ಇದು ಎಲ್ಲಾ ಸರ್ಕಾರಿ ನೌಕರರಿಗೆ ಕಡ್ಡಾಯ ಪ್ರಮಾಣೀಕರಣ ಕೋರ್ಸ್ ಆಗಿದೆ.
3. ಭಾರತದಾದ್ಯಂತ 1 ಕೋಟಿ ನಾಗರಿಕರಿಗೆ ಮೂಲಭೂತ ಕೃತಕ ಬುದ್ಧಿಮತ್ತೆ ಕೌಶಲ್ಯಗಳನ್ನು ಒದಗಿಸುವ ಗುರಿಯನ್ನು ಈ ಉಪಕ್ರಮವು ಹೊಂದಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿವೆ?

A. 1 ಮತ್ತು 3 ಮಾತ್ರ
B. 1 ಮತ್ತು 2 ಮಾತ್ರ
C. 2 ಮತ್ತು 3 ಮಾತ್ರ
D. 1, 2 ಮತ್ತು 3

**ಉತ್ತರ: A**

**65. ಹನೋಯಿ ಸಮಾವೇಶದ ಪ್ರಾಥಮಿಕ ಉದ್ದೇಶವನ್ನು ಈ ಕೆಳಗಿನವುಗಳಲ್ಲಿ ಯಾವುದು ಉತ್ತಮವಾಗಿ ವಿವರಿಸುತ್ತದೆ?**

A. ಅಂತರರಾಷ್ಟ್ರೀಯ ಗಡಿಗಳಾದ್ಯಂತ ದತ್ತಾಂಶ ರಕ್ಷಣೆ ಮತ್ತು ಗೌಪ್ಯತೆಗಾಗಿ ಜಾಗತಿಕ ಮಾನದಂಡಗಳನ್ನು ಹೊಂದಿಸುವುದು.
B. ವರ್ಧಿತ ಅಂತರರಾಷ್ಟ್ರೀಯ ಸಹಕಾರದ ಮೂಲಕ ಸೈಬರ್ ಅಪರಾಧಗಳ (cybercrimes) ತನಿಖೆ ಮತ್ತು ಕಾನೂನು ಕ್ರಮಕ್ಕೆ ಅನುವು ಮಾಡಿಕೊಡುವ ಜಾಗತಿಕ ಚೌಕಟ್ಟನ್ನು ಸ್ಥಾಪಿಸುವುದು.
C. ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳ ನಡುವೆ ಡಿಜಿಟಲ್ ವ್ಯಾಪಾರ ಮತ್ತು ಇ-ಕಾಮರ್ಸ್ ಸಹಕಾರವನ್ನು ಉತ್ತೇಜಿಸುವುದು.
D. ಖಾಸಗಿ ತಂತ್ರಜ್ಞಾನ ಸಂಸ್ಥೆಗಳ ಸೈಬರ್ ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡಲು ಜಾಗತಿಕ ನಿಯಂತ್ರಕ ಸಂಸ್ಥೆಯನ್ನು ರಚಿಸುವುದು.

**ಉತ್ತರ: B**

**66. 'PPV&FRA ಕಾಯಿದೆ'ಯ ಅಡಿಯಲ್ಲಿ, ನೋಂದಣಿಗೆ ಅರ್ಹವಾದ ಸಸ್ಯ ಪ್ರಭೇದಗಳ ವರ್ಗಗಳಲ್ಲಿ ಈ ಕೆಳಗಿನವುಗಳಲ್ಲಿ ಯಾವುದು ಒಳಗೊಂಡಿಲ್ಲ?**

A. ಹೊಸ ತಳಿ
B. ಮೂಲಭೂತವಾಗಿ ಪಡೆದ ಪ್ರಭೇದ
C. GEAC ನಿಂದ ಅನುಮೋದಿಸಲಾದ ಕುಲಾಂತರಿ (GM) ಪ್ರಭೇದ
D. ಅಸ್ತಿತ್ವದಲ್ಲಿರುವ ಪ್ರಭೇದ

**ಉತ್ತರ: C**

**67. ಭಾರತದಲ್ಲಿನ 'ಡುಗಾಂಗ್ ಸಂರಕ್ಷಣೆಗೆ' ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. ಭಾರತದ ಮೊದಲ ಡುಗಾಂಗ್ ಸಂರಕ್ಷಣಾ ಮೀಸಲು ಪ್ರದೇಶವು ತಮಿಳುನಾಡಿನ ಪಾಕ್ ಕೊಲ್ಲಿ ಪ್ರದೇಶದಲ್ಲಿದೆ.
2. ಡುಗಾಂಗ್ ಅನ್ನು IUCN ಕೆಂಪು ಪಟ್ಟಿಯಲ್ಲಿ 'ದುರ್ಬಲ' ಎಂದು ಪಟ್ಟಿ ಮಾಡಲಾಗಿದೆ.
3. ಡುಗಾಂಗ್ ಅನ್ನು ವನ್ಯಜೀವಿ (ಸಂರಕ್ಷಣಾ) ಕಾಯಿದೆ, 1972 ರ 'ಅನುಸೂಚಿ I' ರ ಅಡಿಯಲ್ಲಿ ರಕ್ಷಿಸಲಾಗಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ?

A. 1 ಮತ್ತು 2 ಮಾತ್ರ
B. 1 ಮತ್ತು 3 ಮಾತ್ರ
C. 2 ಮತ್ತು 3 ಮಾತ್ರ
D. 1, 2 ಮತ್ತು 3

**ಉತ್ತರ: B**

**68. ಭಾರತದಲ್ಲಿ ಡುಗಾಂಗ್‌ಗಳ ಸಂಖ್ಯೆಯ ಇಳಿಮುಖಕ್ಕೆ ಈ ಕೆಳಗಿನ ಯಾವ ಬೆದರಿಕೆಗಳು ಪ್ರಮುಖ ಕಾರಣಗಳಾಗಿವೆ?**

1. ಕಡಲ ಹುಲ್ಲು ಆವಾಸಸ್ಥಾನಗಳ ನಷ್ಟ.
2. ಮೀನುಗಾರಿಕೆ ಬಲೆಗಳಲ್ಲಿ ಆಕಸ್ಮಿಕವಾಗಿ ಸಿಕ್ಕಿಬೀಳುವಿಕೆ.
3. ಕಡಲಾಚೆಯ ಪವನ ವಿದ್ಯುತ್ ಸ್ಥಾವರಗಳಿಂದ ಉಂಟಾಗುವ ನೀರಿನೊಳಗಿನ ಶಬ್ದ ಮಾಲಿನ್ಯ.
4. ಅಕ್ರಮ ಬೇಟೆ.

ಸರಿಯಾದ ಉತ್ತರವನ್ನು ಆರಿಸಿ:

A. 1, 2 ಮತ್ತು 4 ಮಾತ್ರ
B. 1, 3 ಮತ್ತು 4 ಮಾತ್ರ
C. 2, 3 ಮತ್ತು 4 ಮಾತ್ರ
D. 1, 2, 3 ಮತ್ತು 4

**ಉತ್ತರ: A**

**69. ಲೀಡ್ ಐಟಿ('LeadIT') ಗೆ ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. ಇದನ್ನು 2019 ರ ವಿಶ್ವಸಂಸ್ಥೆಯ ಹವಾಮಾನ ಕ್ರಿಯೆ ಶೃಂಗಸಭೆಯಲ್ಲಿ ಭಾರತ, ಸ್ವೀಡನ್ ಮತ್ತು ವಿಶ್ವ ಆರ್ಥಿಕ ವೇದಿಕೆ ಜಂಟಿಯಾಗಿ ಪ್ರಾರಂಭಿಸಿದವು.
2. ಇದು 2050 ರ ವೇಳೆಗೆ 'ನಿವ್ವಳ ಶೂನ್ಯ' ಗುರಿಯತ್ತ ಸಾಗಲು, ಹೊರಸೂಸುವಿಕೆಯನ್ನು ತಗ್ಗಿಸಲು ಕಷ್ಟಕರವಾದ ವಲಯಗಳಲ್ಲಿ ಕೈಗಾರಿಕಾ ಪರಿವರ್ತನೆಯನ್ನು ವೇಗಗೊಳಿಸಲು ಗಮನಹರಿಸುತ್ತದೆ.
3. ಲೀಡ್ ಐಟಿ ಎಂಬುದು ವಿದ್ಯುತ್ ವಲಯವನ್ನು ಇಂಗಾಲ ಮುಕ್ತಗೊಳಿಸಲು ಸಂಪೂರ್ಣವಾಗಿ ಮೀಸಲಾದ ಮೊದಲ ಜಾಗತಿಕ ಉಪಕ್ರಮವಾಗಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿವೆ?

A. 1 ಮತ್ತು 2 ಮಾತ್ರ
B. 2 ಮತ್ತು 3 ಮಾತ್ರ
C. 1 ಮತ್ತು 3 ಮಾತ್ರ
D. 1, 2 ಮತ್ತು 3

**ಉತ್ತರ: A**

**70. ಪ್ರತಿಪಾದನೆ (A): ಕ್ರಿಸ್ಪರ್ ಕ್ಯಾಸ್ 9 (CRISPR-Cas9) ಅನ್ನು ವಂಶವಾಹಿ ಚಿಕಿತ್ಸೆ ಮತ್ತು ಕೃಷಿ ಜೈವಿಕ ತಂತ್ರಜ್ಞಾನದಲ್ಲಿ ಕ್ರಾಂತಿಕಾರಿ ಬದಲಾವಣೆ ಎಂದು ಪರಿಗಣಿಸಲಾಗಿದೆ.**

**ಕಾರಣ (R):** ಇದು ನಿರ್ದಿಷ್ಟ ಜೀನೋಮ್ ಸ್ಥಳಗಳಲ್ಲಿ ಡಿ.ಎನ್.ಎ ಅನುಕ್ರಮಣಿಕೆಗಳ ಹೆಚ್ಚು ಗುರಿಪಡಿಸಿದ ಮತ್ತು ನಿಖರವಾದ ಮಾರ್ಪಾಡಿಗೆ ಅನುವು ಮಾಡಿಕೊಡುತ್ತದೆ.

ಸರಿಯಾದ ಆಯ್ಕೆಯನ್ನು ಆರಿಸಿ:
A. A ಮತ್ತು R ಎರಡೂ ಸರಿಯಾಗಿವೆ, ಮತ್ತು R ಎಂಬುದು A ಯ ಸರಿಯಾದ ವಿವರಣೆಯಾಗಿದೆ.
B. A ಮತ್ತು R ಎರಡೂ ಸರಿಯಾಗಿವೆ, ಆದರೆ R ಎಂಬುದು A ಯ ಸರಿಯಾದ ವಿವರಣೆಯಲ್ಲ.
C. A ಸರಿಯಾಗಿದೆ, ಆದರೆ R ತಪ್ಪಾಗಿದೆ.
D. A ತಪ್ಪಾಗಿದೆ, ಆದರೆ R ಸರಿಯಾಗಿದೆ.

**ಉತ್ತರ: A**

**71. ಅಂತರರಾಷ್ಟ್ರೀಯ ನಿಯಮಾವಳಿಗಳು ಮತ್ತು ಅವುಗಳ ಕಾರ್ಯಗಳ ಈ ಕೆಳಗಿನ ಜೋಡಿಗಳನ್ನು ಪರಿಗಣಿಸಿ:**

| ನಿಯಮಾವಳಿಗಳು (ಪ್ರೋಟೋಕಾಲ್ ಗಳು) | ಕಾರ್ಯಗಳು |
|---|---|
| 1. ಜೈವಿಕ ಸುರಕ್ಷತೆಯ ಮೇಲಿನ ಕಾರ್ಟಜಿನಾ ನಿಯಮಾವಳಿ | ಜೈವಿಕ ಪರಿವರ್ತಿತ ಜೀವಿಗಳು ಮತ್ತು ಕುಲಾಂತರಿ ಜೀವಿಗಳ ಗಡಿಯಾಚೆಗಿನ ಚಲನೆಯನ್ನು ನಿಯಂತ್ರಿಸುತ್ತದೆ. |
| 2. ನಗೋಯಾ ನಿಯಮಾವಳಿ | ಆನುವಂಶಿಕ ಸಂಪನ್ಮೂಲಗಳ ಪ್ರವೇಶ ಮತ್ತು ಲಾಭ ಹಂಚಿಕೆಯನ್ನು ಖಚಿತಪಡಿಸುತ್ತದೆ. |
| 3. ನಗೋಯಾ-ಕೌಲಾಲಂಪುರ್ ಪೂರಕ ನಿಯಮಾವಳಿ | LMO ಗಳಿಂದ ಉಂಟಾಗುವ ಹಾನಿಗೆ ಹೊಣೆಗಾರಿಕೆ ಮತ್ತು ಪರಿಹಾರ |

ಮೇಲೆ ನೀಡಿರುವ ಜೋಡಿಗಳಲ್ಲಿ ಯಾವುದು/ಯಾವುವು ಸರಿಯಾಗಿ ಹೊಂದಾಣಿಕೆಯಾಗಿವೆ?
A. 1 ಮತ್ತು 2 ಮಾತ್ರ
B. 2 ಮತ್ತು 3 ಮಾತ್ರ
C. 1 ಮತ್ತು 3 ಮಾತ್ರ
D. 1, 2 ಮತ್ತು 3

**ಉತ್ತರ: D**

**72. ಚಿತ್ತರಂಜನ್ ದಾಸ್ ಅವರ ಬಗ್ಗೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**
1. ಅಲಿಪೋರ್ ಬಾಂಬ್ ಪ್ರಕರಣದಲ್ಲಿ ಸ್ವಾತಂತ್ರ್ಯ ಹೋರಾಟಗಾರರನ್ನು ನ್ಯಾಯಾಲಯದಲ್ಲಿ ಸಮರ್ಥಿಸಿಕೊಂಡಿದ್ದಕ್ಕಾಗಿ ಅವರು 'ದೇಶಬಂಧು' ಎಂಬ ಬಿರುದನ್ನು ಗಳಿಸಿದರು.
2. ಅವರು ಅರವಿಂದ ಘೋಷ್ ಅವರನ್ನು ನ್ಯಾಯಾಲಯದಲ್ಲಿ ಸಮರ್ಥಿಸಿಕೊಂಡ ನಂತರ ವಕೀಲಿ ವೃತ್ತಿಯಿಂದ ದೂರ ಸರಿದರು ಮತ್ತು ರಾಷ್ಟ್ರೀಯ ಚಳವಳಿಗೆ ಸಂಪೂರ್ಣವಾಗಿ ತೊಡಗಿಸಿಕೊಂಡರು.
3. 1923 ರಲ್ಲಿ ಸ್ವರಾಜ್ ಪಕ್ಷವನ್ನು ಸ್ಥಾಪಿಸಲು ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ಗೆ ರಾಜೀನಾಮೆ ನೀಡಿದರು.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ?
A. 1 ಮತ್ತು 2 ಮಾತ್ರ
B. 2 ಮತ್ತು 3 ಮಾತ್ರ
C. 1 ಮತ್ತು 3 ಮಾತ್ರ
D. 1, 2 ಮತ್ತು 3

**ಉತ್ತರ: A**

**73. 'ಭಾರತ ಅಭಿವೃದ್ಧಿ ಮತ್ತು ಕಾರ್ಯತಂತ್ರದ ನಿಧಿ'ಯ (IDSF) ಪ್ರಮುಖ ವಲಯಗಳ ಆದ್ಯತೆಗೆ ಸಂಬಂಧಿಸಿದಂತೆ, ಈ ಕೆಳಗಿನವುಗಳಲ್ಲಿ ಯಾವುವು ಸೇರಿವೆ?**
1. ಲಾಜಿಸ್ಟಿಕ್ಸ್ ಮತ್ತು ಕೈಗಾರಿಕಾ ಕಾರಿಡಾರ್‌ಗಳು.
2. ಶಿಕ್ಷಣ ಮತ್ತು ಕೌಶಲ್ಯ
3. ರಕ್ಷಣಾ ಸ್ವಾಧೀನಗಳು.
4. 'ಎಂ ಎಸ್ ಎಮ್ ಇ' ಗಳ ಉನ್ನತೀಕರಣ/ವಿಸ್ತರಣೆ

ಸರಿಯಾದ ಉತ್ತರವನ್ನು ಆರಿಸಿ:
A. 1, 2 ಮತ್ತು 4 ಮಾತ್ರ
B. 1 ಮತ್ತು 3 ಮಾತ್ರ
C. 2 ಮತ್ತು 3 ಮಾತ್ರ
D. 1, 2, 3 ಮತ್ತು 4

**ಉತ್ತರ: A**

**74. 'ಸಂಶೋಧನೆ, ಅಭಿವೃದ್ಧಿ ಮತ್ತು ನಾವೀನ್ಯತೆ' (RDI) ಯೋಜನೆ ನಿಧಿಯ ಅಡಿಯಲ್ಲಿ ಈ ಕೆಳಗಿನವುಗಳಲ್ಲಿ ಯಾವುದನ್ನು "ಉದಯೋನ್ಮುಖ ಕ್ಷೇತ್ರಗಳು" ಎಂದು ಪರಿಗಣಿಸಬಹುದು?**
1. ಕೃತಕ ಬುದ್ಧಿಮತ್ತೆ.
2. ಕ್ವಾಂಟಮ್ ತಂತ್ರಜ್ಞಾನಗಳು.
3. ಹಸಿರು ಜಲಜನಕ.
4. ಬ್ಲಾಕ್‌ಚೈನ್ ಆಧಾರಿತ ಆಡಳಿತ ಪರಿಹಾರಗಳು.

ಸರಿಯಾದ ಉತ್ತರವನ್ನು ಆರಿಸಿ:
A. 1 ಮತ್ತು 2 ಮಾತ್ರ
B. 1, 2 ಮತ್ತು 3 ಮಾತ್ರ
C. 2, 3 ಮತ್ತು 4 ಮಾತ್ರ
D. 1, 2, 3 ಮತ್ತು 4

**ಉತ್ತರ: D**

**75. 'ರೌಮರಿ-ದೊಂಡುವಾ ಜೌಗು ಪ್ರದೇಶ ಸಂಕೀರ್ಣ'ಕ್ಕೆ ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**
1. ಇದು ಲಾವೋಖೋವಾ ವನ್ಯಜೀವಿ ಧಾಮದ ವ್ಯಾಪ್ತಿಯಲ್ಲಿದೆ, ಇದು ಕಾಜಿರಂಗ ಹುಲಿ ಮೀಸಲು ಪ್ರದೇಶದ ಭಾಗವಾಗಿದೆ.
2. ಇದು ಕಾಜಿರಂಗ ಹುಲಿ ಮೀಸಲು ಪ್ರದೇಶವನ್ನು ನಮೇರಿ ಹುಲಿ ಮೀಸಲು ಪ್ರದೇಶದೊಂದಿಗೆ ಸಂಪರ್ಕಿಸುವ ಪ್ರಮುಖ 'ಜೀವಿ ಪರಿಸರ ಪಥ' (ವನ್ಯಜೀವಿ ಕಾರಿಡಾರ್) ವಾಗಿ ಕಾರ್ಯನಿರ್ವಹಿಸುತ್ತದೆ.
3. ಇದು ಅಸ್ಸಾಂನ ದೀಪೋರ್ ಬೀಲ್ ಮತ್ತು ಮಣಿಪುರದ ಲೋಕ್ಟಕ್ ಸರೋವರಕ್ಕಿಂತ ಹೆಚ್ಚಿನ ಪಕ್ಷಿ ಪ್ರಭೇದಗಳನ್ನು ವಾರ್ಷಿಕವಾಗಿ ದಾಖಲಿಸುತ್ತದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿವೆ?
A. 1 ಮತ್ತು 2 ಮಾತ್ರ
B. 1 ಮತ್ತು 3 ಮಾತ್ರ
C. 2 ಮತ್ತು 3 ಮಾತ್ರ
D. 1, 2 ಮತ್ತು 3

**ಉತ್ತರ: B**

**76. ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. 1956 ರ ರಾಜ್ಯ ಪುನರ್ವಿಂಗಡಣೆ ಕಾಯಿದೆಯ ನಂತರ ಕರ್ನಾಟಕದ ರಚನೆಯ ಸ್ಮರಣಾರ್ಥವಾಗಿ ಇದನ್ನು ಸ್ಥಾಪಿಸಲಾಯಿತು.
2. ಇದನ್ನು ವ್ಯಕ್ತಿಗಳಿಗೆ ಮಾತ್ರ ನೀಡಲಾಗುತ್ತದೆ ಮತ್ತು ಸಂಸ್ಥೆಗಳಿಗೆ ನೀಡಲಾಗುವುದಿಲ್ಲ.
3. ಇದು ಕರ್ನಾಟಕ ಸರ್ಕಾರ ನೀಡುವ ಎರಡನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯಾಗಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿವೆ?

A. 1 ಮತ್ತು 3 ಮಾತ್ರ
B. 2 ಮತ್ತು 3 ಮಾತ್ರ
C. 1 ಮತ್ತು 2 ಮಾತ್ರ
D. 1, 2 ಮತ್ತು 3

**ಉತ್ತರ: A**

**77. ಕೆಳಗಿನ ಕರ್ನಾಟಕ ರಾಜ್ಯ ಚಲನಚಿತ್ರ ಜೀವಮಾನ ಸಾಧನೆ ಪ್ರಶಸ್ತಿಗಳನ್ನುಅವುಗಳ 2024–25 ರ ಪುರಸ್ಕೃತರೊಂದಿಗೆ ಸರಿಯಾಗಿ ಹೊಂದಿಸಿ:**

| ಪಟ್ಟಿ I (ಪ್ರಶಸ್ತಿ) | ಪಟ್ಟಿ II (ಪುರಸ್ಕೃತರು) |
|---|---|
| a. ಡಾ. ರಾಜ್‌ಕುಮಾರ್ ಪ್ರಶಸ್ತಿ | 1. ರಿಚರ್ಡ್ ಕ್ಯಾಸ್ಟಲಿನೊ |
| b. ಪುಟ್ಟಣ್ಣ ಕಣಗಾಲ್ ಪ್ರಶಸ್ತಿ | 2. ಉಮಾಶ್ರೀ |
| c. ಡಾ. ವಿಷ್ಣುವರ್ಧನ್ ಪ್ರಶಸ್ತಿ | 3. ಎಸ್. ಆರ್. ನಂಜುಂಡೇಗೌಡ |

ಸರಿಯಾದ ಆಯ್ಕೆಯನ್ನು ಆರಿಸಿ:

A. a-2, b-3, c-1
B. a-3, b-1, c-2
C. a-1, b-2, c-3
D. a-2, b-1, c-3

**ಉತ್ತರ: A**

**78. 'ಹೋರ್ಟಿ ರೋಡ್ 2 ಇಂಡಿಯಾ' ಉಪಕ್ರಮಕ್ಕೆ ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. ಇದು ಭಾರತದ ಕೃಷಿ ಸಚಿವಾಲಯ ಮತ್ತು ನೆದರ್ಲ್ಯಾಂಡ್ಸ್‌ನ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ನಡುವಿನ ಸಂಪೂರ್ಣ ದ್ವಿಪಕ್ಷೀಯ ಸರ್ಕಾರದಿಂದ-ಸರ್ಕಾರದ ಕಾರ್ಯಕ್ರಮವಾಗಿದೆ.
2. ಡಚ್ ಪರಿಣತಿಯ ಬೆಂಬಲದೊಂದಿಗೆ ಹಸಿರುಮನೆ ಮತ್ತು ನಿಯಂತ್ರಿತ-ಪರಿಸರ ತಂತ್ರಜ್ಞಾನಗಳ ಮೂಲಕ ಆಧುನಿಕ ತೋಟಗಾರಿಕೆಯನ್ನು ವೇಗವರ್ಧಕಗೊಳಿಸುವುದು ಇದರ ಗುರಿಯಾಗಿದೆ.
3. ಭಾರತದಲ್ಲಿನ ಇದರ ಪ್ರಾಯೋಗಿಕ ಯೋಜನೆಗಳು 2026 ರ ಅಂತ್ಯದ ವೇಳೆಗೆ ಸಂಪೂರ್ಣವಾಗಿ ಕಾರ್ಯನಿರ್ವಹಿಸುವ ನಿರೀಕ್ಷೆಯಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿವೆ?

A. 1 ಮತ್ತು 3 ಮಾತ್ರ
B. 1 ಮತ್ತು 2 ಮಾತ್ರ
C. 2 ಮತ್ತು 3 ಮಾತ್ರ
D. 1, 2 ಮತ್ತು 3

**ಉತ್ತರ: C**

**79. 'ವಿಂಡರ್ಜಿ ಇಂಡಿಯಾ 2025' ನಲ್ಲಿ ಕರ್ನಾಟಕಕ್ಕೆ ಸಿಕ್ಕಿರುವ ಮನ್ನಣೆಗೆ ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. 2024–25 ನೇ ಸಾಲಿನಲ್ಲಿ ಭಾರತದಲ್ಲಿ ಅತಿ ಹೆಚ್ಚು ಸ್ಥಾಪಿತ ಪವನ ವಿದ್ಯುತ್ ಸಾಮರ್ಥ್ಯವನ್ನು ಸಾಧಿಸಿದ್ದಕ್ಕಾಗಿ ಕರ್ನಾಟಕವು ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆಯಿತು.
2. ಚೆನ್ನೈನಲ್ಲಿ ನಡೆದ 'ವಿಂಡರ್ಜಿ ಇಂಡಿಯಾ'ದ ಏಳನೇ ಆವೃತ್ತಿಯ ಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.
3. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ (KREDL) ಅಧಿಕಾರಿಗಳು ಈ ಪ್ರಶಸ್ತಿಯನ್ನು ಸ್ವೀಕರಿಸಿದರು.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿವೆ?

A. 1 ಮತ್ತು 2 ಮಾತ್ರ
B. 2 ಮತ್ತು 3 ಮಾತ್ರ
C. 1 ಮತ್ತು 3 ಮಾತ್ರ
D. 1, 2 ಮತ್ತು 3

**ಉತ್ತರ: B**

**80. ಕರ್ನಾಟಕ ರಾಜ್ಯ ಕೌಶಲ್ಯ ಅಭಿವೃದ್ಧಿ ನೀತಿ 2025–32 ಕ್ಕೆ ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. ಈ ನೀತಿಯು 2032 ರ ವೇಳೆಗೆ 3 ಮಿಲಿಯನ್ (30 ಲಕ್ಷ) ಯುವಜನರಿಗೆ ಕೌಶಲ್ಯ ಒದಗಿಸುವ ಗುರಿಯನ್ನು ಹೊಂದಿದೆ.
2. ಇದು ಐಟಿಐಗಳಲ್ಲಿ ಮಹಿಳೆಯರ ದಾಖಲಾತಿಯನ್ನು ಒಟ್ಟು ದಾಖಲಾತಿಯ ಮೂರನೇ ಒಂದರಷ್ಟು ಭಾಗಕ್ಕೆ ಹೆಚ್ಚಿಸುವ ಗುರಿಯನ್ನು ಒಳಗೊಂಡಿದೆ.
3. ಇದು IMC-K ಅಡಿಯಲ್ಲಿನ ಅಂತರರಾಷ್ಟ್ರೀಯ ಚಲನಶೀಲತೆ ಕಾರ್ಯಕ್ರಮಗಳನ್ನು ಕೇವಲ ಕೊಲ್ಲಿ ರಾಷ್ಟ್ರಗಳಿಗೆ ಮಾತ್ರ ಸೀಮಿತಗೊಳಿಸಲು ಪ್ರಸ್ತಾಪಿಸುತ್ತದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿವೆ?

A. 1 ಮತ್ತು 2 ಮಾತ್ರ
B. 2 ಮತ್ತು 3 ಮಾತ್ರ
C. 1 ಮತ್ತು 3 ಮಾತ್ರ
D. 1, 2 ಮತ್ತು 3

**ಉತ್ತರ: A**

**81. ಇತ್ತೀಚೆಗೆ ಭಾರತದಲ್ಲಿ ಪ್ರಾರಂಭಿಸಲಾದ 'ಮಟ್ಸ್ ಸಹಾಯಕ್' (MUTS Sahayak) ಯೋಜನೆಗೆ ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. ಇದನ್ನು ನೈಋತ್ಯ ರೈಲ್ವೆಯು ಪ್ರಾರಂಭಿಸಿದೆ.
2. ಇದು ಕೈಯಲ್ಲಿ ಹಿಡಿಯುವ ಸಾಧನಗಳ ಮೂಲಕ ಕಾಯ್ದಿರಿಸದ ಟಿಕೆಟ್‌ಗಳನ್ನು ವಿತರಿಸಲು ಅನುವು ಮಾಡಿಕೊಡುತ್ತದೆ.
3. ನೈಋತ್ಯ ರೈಲ್ವೆಯು ಈ ರೀತಿಯ ಯೋಜನೆಯನ್ನು ಪರಿಚಯಿಸಿದ ಭಾರತದ ಎರಡನೇ ರೈಲ್ವೆ ವಲಯವಾಗಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿವೆ?

A. 1 ಮತ್ತು 3 ಮಾತ್ರ
B. 2 ಮತ್ತು 3 ಮಾತ್ರ
C. 1 ಮತ್ತು 2 ಮಾತ್ರ
D. 1, 2 ಮತ್ತು 3

**ಉತ್ತರ: C**

**82. ಪ್ರಸ್ತಾಪಿತ ಹೊನ್ನಾವರ ಆಳ ನೀರಿನ ಬಂದರು ಯಾವ ನದಿಯ ನದೀಮುಖದಲ್ಲಿದೆ?**

A. ನೇತ್ರಾವತಿ ನದಿ
B. ಕಾಳಿ ನದಿ
C. ಶರಾವತಿ ನದಿ
D. ಅಘನಾಶಿನಿ ನದಿ

**ಉತ್ತರ: C**

**83. ಇತ್ತೀಚೆಗೆ ಪ್ರಾರಂಭಿಸಲಾದ 'ಕೋಬ್ರಾ ಬೀಟ್' ವ್ಯವಸ್ಥೆಗೆ ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. ಈ ವ್ಯವಸ್ಥೆಯನ್ನು ಬೆಂಗಳೂರು ಸಂಚಾರ ಪೊಲೀಸ್ ಪರಿಚಯಿಸಿದ್ದಾರೆ.
2. ಇದು ಸಂಚಾರ ದಟ್ಟಣೆಯ ಸೂಕ್ಷ್ಮ-ಮಟ್ಟದ, ಸ್ಥಳ-ನಿರ್ದಿಷ್ಟ ಕಾರಣಗಳನ್ನು ಪರಿಹರಿಸುವ ಗುರಿಯನ್ನು ಹೊಂದಿದೆ.
3. ಇದು ನೈಜ-ಸಮಯದ ಸಂಚಾರ ಕಣ್ಗಾವಲಿಗಾಗಿ ಇರುವ ಡ್ರೋನ್ ಆಧಾರಿತ ಮೇಲ್ವಿಚಾರಣಾ ವ್ಯವಸ್ಥೆಯಾಗಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿವೆ?

A. 1 ಮತ್ತು 2 ಮಾತ್ರ
B. 2 ಮತ್ತು 3 ಮಾತ್ರ
C. 1 ಮತ್ತು 3 ಮಾತ್ರ
D. 1, 2 ಮತ್ತು 3

**ಉತ್ತರ: A**

**84. 'ಲಕ್ಷ್ಯ' ರಾಕೆಟ್‌ಗೆ ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. ಇದನ್ನು ಆರ್.ವಿ. ಕಾಲೇಜ್ ಆಫ್ ಇಂಜಿನಿಯರಿಂಗ್ ಅಭಿವೃದ್ಧಿಪಡಿಸಿದೆ.
2. ಇದು 'ಇನ್- ಸ್ಪೇಸ್' ಮಾಡೆಲ್ ರಾಕೆಟ್ರಿ ಸ್ಪರ್ಧೆ 2024–25 ಅನ್ನು ಗೆದ್ದಿದೆ.
3. ಈ ಸ್ಪರ್ಧೆಯು 2 ಕೆ.ಜಿ ತೂಕದ CANSAT ಅನ್ನು ಹೊತ್ತೊಯ್ಯುವ ಮಾದರಿ ರಾಕೆಟ್ ಅನ್ನು 2,000 ಮೀಟರ್ ಎತ್ತರಕ್ಕೆ ಉಡಾಯಿಸುವುದನ್ನು ಒಳಗೊಂಡಿತ್ತು.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿವೆ?

A. 1 ಮತ್ತು 3 ಮಾತ್ರ
B. 2 ಮತ್ತು 3 ಮಾತ್ರ
C. 1 ಮತ್ತು 2 ಮಾತ್ರ
D. 1, 2 ಮತ್ತು 3

**ಉತ್ತರ: C**

**85. 'ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆ'ಗೆ ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. ಈ ಯೋಜನೆಯು ಕರ್ನಾಟಕದಲ್ಲಿ ವಾರ್ಷಿಕವಾಗಿ 5 ಲಕ್ಷ ಯುವಜನರಿಗೆ ಕೌಶಲ್ಯ ತರಬೇತಿ ನೀಡುವ ಗುರಿಯನ್ನು ಹೊಂದಿದೆ.
2. ಎಲ್ಲಾ ಫಲಾನುಭವಿಗಳಿಗೆ ಕೇವಲ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ (SDEL) ಮೂಲಕವೇ ತರಬೇತಿ ನೀಡಲಾಗುತ್ತದೆ.
3. ಈ ಯೋಜನೆಯು ಗುರಿಪಡಿಸಿದ ಯುವಜನರಲ್ಲಿ ಅರ್ಧದಷ್ಟು ಜನರಿಗೆ ಇತರ ಸರ್ಕಾರಿ ಇಲಾಖೆಗಳು ಅನುಷ್ಠಾನಗೊಳಿಸುವ ಯೋಜನೆಗಳ ಮೂಲಕ ತರಬೇತಿ ನೀಡಲಾಗುತ್ತದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿವೆ?

A. 1 ಮತ್ತು 3 ಮಾತ್ರ
B. 1 ಮತ್ತು 2 ಮಾತ್ರ
C. 2 ಮತ್ತು 3 ಮಾತ್ರ
D. 1, 2 ಮತ್ತು 3

**ಉತ್ತರ: A**

**86. 'ಬೆಂಗಳೂರು ಕೌಶಲ್ಯ ಶೃಂಗಸಭೆ 2025' ಕ್ಕೆ ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. ಇದು ಕಾರ್ಯಪಡೆ ಪರಿವರ್ತನೆಯ ಕುರಿತಾದ ಕರ್ನಾಟಕದ ಪ್ರಮುಖ ವಾರ್ಷಿಕ ಕಾರ್ಯಕ್ರಮವಾಗಿದೆ.
2. ಇದನ್ನು SDEL, KSDC, ಕೃಷಿ ಇಲಾಖೆ ಮತ್ತು ಕರ್ನಾಟಕ ಡಿಜಿಟಲ್ ಆರ್ಥಿಕತೆ ಮಿಷನ್ ಜಂಟಿಯಾಗಿ ಆಯೋಜಿಸಿದ್ದವು.
3. ಈ ಶೃಂಗಸಭೆಯ ಧ್ಯೇಯವಾಕ್ಯ (ಥೀಮ್) "ಕಾರ್ಯಪಡೆ 2030: ಜಾಗತಿಕ ಚಲನಶೀಲತೆಗಾಗಿ ಕೌಶಲ್ಯಗಳು" ಆಗಿತ್ತು.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿವೆ?

A. 1 ಮತ್ತು 3 ಮಾತ್ರ
B. 2 ಮತ್ತು 3 ಮಾತ್ರ
C. 1 ಮತ್ತು 2 ಮಾತ್ರ
D. 1, 2 ಮತ್ತು 3

**ಉತ್ತರ: C**

**87. ಕಬ್ಬಿನ 'ನ್ಯಾಯಯುತ ಮತ್ತು ಲಾಭದಾಯಕ ಬೆಲೆ' (FRP) ಗೆ ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. ಸಕ್ಕರೆ ಕಾರ್ಖಾನೆಗಳು ತಾವು ಖರೀದಿಸಿದ ಕಬ್ಬಿಗೆ ರೈತರಿಗೆ ಪಾವತಿಸಲು ಕಾನೂನುಬದ್ಧವಾಗಿ ಬದ್ಧವಾಗಿರುವ ಕನಿಷ್ಠ ಬೆಲೆ ಇದಾಗಿದೆ.
2. ಕೃಷಿ ವೆಚ್ಚ ಮತ್ತು ಬೆಲೆಗಳ ಆಯೋಗದ (CACP) ಶಿಫಾರಸುಗಳ ಆಧಾರದ ಮೇಲೆ ಆರ್ಥಿಕ ವ್ಯವಹಾರಗಳ ಕ್ಯಾಬಿನೆಟ್ ಸಮಿತಿಯು ಇದನ್ನು ನಿಗದಿಪಡಿಸುತ್ತದೆ.
3. FRP ಯು ಕಬ್ಬು ನಿಯಂತ್ರಣ ಆದೇಶ, 1966 ರ ಅಡಿಯಲ್ಲಿ ನಿಯಂತ್ರಿಸಲ್ಪಡುತ್ತದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿವೆ?

A. 1 ಮಾತ್ರ
B. 1 ಮತ್ತು 2 ಮಾತ್ರ
C. 1, 2 ಮತ್ತು 3
D. 2 ಮತ್ತು 3 ಮಾತ್ರ

**ಉತ್ತರ: C**

**88. 'ಕನಿಷ್ಠ ಬೆಂಬಲ ಬೆಲೆ'ಯ ಅಡಿಯಲ್ಲಿ ಈ ಕೆಳಗಿನ ಯಾವ ಬೆಳೆಗಳನ್ನು 'ವಾಣಿಜ್ಯ ಬೆಳೆಗಳು' ಎಂದು ವರ್ಗೀಕರಿಸಲಾಗಿದೆ?**

A. ಕಬ್ಬು ಮತ್ತು ಹತ್ತಿ
B. ಸೆಣಬು ಮತ್ತು ಕೊಬ್ಬರಿ
C. ತೊಗರಿ ಮತ್ತು ಬೇಳೆ
D. ರಾಗಿ ಮತ್ತು ಹುಚ್ಚೆಳ್ಳು (ನೈಜರ್ ಬೀಜ)

**ಉತ್ತರ: B**

**89. 'ಕರ್ನಾಟಕ ನವೋದ್ಯಮ ನೀತಿ' 2025–30 ಕ್ಕೆ ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. ಈ ನೀತಿಯು ಐದು ವರ್ಷಗಳಲ್ಲಿ 25,000 ಹೊಸ ನವೋದ್ಯಮಗಳನ್ನು ಸ್ಥಾಪಿಸುವ ಗುರಿಯನ್ನು ಹೊಂದಿದೆ.
2. ಈ ನವೋದ್ಯಮಗಳಲ್ಲಿ ಕನಿಷ್ಠ 10,000 ದಷ್ಟನ್ನು ಬೆಂಗಳೂರಿನ ಆಚೆಗಿನ ಪ್ರದೇಶಗಳಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ.

3. ಈ ನೀತಿಯನ್ನು 'ಡಿಜಿಟಲ್ ಇಂಡಿಯಾ ಮಿಷನ್'ನ ಭಾಗವಾಗಿ ಕೇಂದ್ರ ಸಚಿವ ಸಂಪುಟವು ಅನುಮೋದಿಸಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ?

A. 1 ಮತ್ತು 2 ಮಾತ್ರ
B. 2 ಮತ್ತು 3 ಮಾತ್ರ
C. 1 ಮತ್ತು 3 ಮಾತ್ರ
D. 1, 2 ಮತ್ತು 3

**ಉತ್ತರ: A**

**90. 'ಸಂಪನ್ಮೂಲ ಕ್ರೂಢೀಕರಣ ಸಮಿತಿ'ಯ ಅಧ್ಯಕ್ಷತೆಯನ್ನು ಯಾರು ವಹಿಸಿದ್ದರು?**

A. ನಂದನ್ ನಿಲೇಕಣಿ
B. ಕೆ.ಪಿ. ಕೃಷ್ಣನ್
C. ಅಮಿತಾಬ್ ಕಾಂತ್
D. ಎಸ್. ವೆಂಕಟರಮಣನ್

**ಉತ್ತರ: B**

**91. ಕೃಷಿ ಮೇಳ 2025 ರ ಧ್ಯೇಯವಾಕ್ಯ (ಥೀಮ್) ಏನಾಗಿತ್ತು ?**

A. "ಭವಿಷ್ಯದ ಭಾರತಕ್ಕಾಗಿ ಡಿಜಿಟಲ್ ಕೃಷಿ".
B. "ಸ್ಮಾರ್ಟ್ ರೈತರು - ಸ್ಮಾರ್ಟ್ ರಾಷ್ಟ್ರ".
C. "ಸಮೃದ್ಧ ಕೃಷಿ – ವಿಕಸಿತ ಭಾರತ: ಮಣ್ಣು , ನೀರು ಮತ್ತು ಬೆಳೆ"
D. "ಹಸಿರು ಕ್ರಾಂತಿ 2.0".

**ಉತ್ತರ: C**

**92. ಗೃಹ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ಮಸೂದೆ, 2025 ಕ್ಕೆ ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. ಈ ಮಸೂದೆಯು ಕಡ್ಡಾಯ ಕೊಡುಗೆ ಚೌಕಟ್ಟನ್ನು ಪ್ರಸ್ತಾಪಿಸುತ್ತದೆ, ಇದರಲ್ಲಿ ಗೃಹ ಕಾರ್ಮಿಕರು ಮತ್ತು ಉದ್ಯೋಗದಾತರು ರಾಜ್ಯದ ವ್ಯವಸ್ಥೆಯ ಅಡಿಯಲ್ಲಿ ನೋಂದಾಯಿಸಿಕೊಳ್ಳಬೇಕು.
2. ಉದ್ಯೋಗದಾತರು ನೀಡಬೇಕಾದ ಕಲ್ಯಾಣ ಶುಲ್ಕವನ್ನು ಗೃಹ ಕಾರ್ಮಿಕರಿಗೆ ಪಾವತಿಸಬೇಕಾದ ವೇತನದ 5% ಗೆ ಮಿತಿಗೊಳಿಸಲಾಗಿದೆ.
3. ಕಲ್ಯಾಣ ನಿಧಿಗೆ ನೀಡುವ ಎಲ್ಲಾ ಕೊಡುಗೆಗಳನ್ನು ಕೇವಲ ಡಿಜಿಟಲ್ ವಹಿವಾಟುಗಳ ಮೂಲಕವೇ ರವಾನಿಸಬೇಕೆಂದು ಮಸೂದೆ ಕಡ್ಡಾಯಗೊಳಿಸುತ್ತದೆ.

ಮೇಲಿನವುಗಳಲ್ಲಿ ಎಷ್ಟು ಹೇಳಿಕೆಗಳು ಸರಿಯಾಗಿವೆ?

A. ಒಂದು ಮಾತ್ರ
B. ಎರಡು ಮಾತ್ರ
C. ಮೂರೂ ಸರಿ
D. ಯಾವುದೂ ಅಲ್ಲ

**ಉತ್ತರ: C**

**93. ಕಾರಾಗೃಹಗಳ ಕಾರ್ಯನಿರ್ವಹಣೆಯನ್ನು ಪರಿಶೀಲಿಸಲು ಕರ್ನಾಟಕ ಸರ್ಕಾರ ರಚಿಸಿದ ಉನ್ನತ ಮಟ್ಟದ ಸಮಿತಿಯ ನೇತೃತ್ವವನ್ನು ಯಾರು ವಹಿಸಿದ್ದರು?**

A. ಸಂದೀಪ್ ಪಾಟೀಲ್
B. ಹಿತೇಂದ್ರ
C. ಅಮರನಾಥ್ ರೆಡ್ಡಿ
D. ರಿಷ್ಯಂತ್

**ಉತ್ತರ: B**

**94. ಕರ್ನಾಟಕವು ತಾಯಿ ಮರಣ ಪ್ರಮಾಣದಲ್ಲಿ 2024 ಕ್ಕೆ ಹೋಲಿಸಿದರೆ, 2025 ರ ಜನವರಿಯಿಂದ ಅಕ್ಟೋಬರ್‌ವರೆಗೆ ಎಷ್ಟು ಶೇಕಡಾವಾರು ಇಳಿಕೆಯನ್ನು ದಾಖಲಿಸಿದೆ?**

A. 10%
B. 18%
C. 24%
D. 30%

**ಉತ್ತರ: C**

**95. ವಿಜಯಪುರ ಜಿಲ್ಲೆಯಲ್ಲಿ 'ಕೋಟಿ ವೃಕ್ಷ ಅಭಿಯಾನ'ವನ್ನು ಯಾವ ಆಡಳಿತವು ಪ್ರಾರಂಭಿಸಿತು?**

A. ರಾಜ್ಯ ಅರಣ್ಯ ಇಲಾಖೆ ಮಾತ್ರ
B. ಜಿಲ್ಲಾಡಳಿತ
C. ಪರಿಸರ ಸಚಿವಾಲಯ, ಭಾರತ ಸರ್ಕಾರ
D. ಪಂಚಾಯತ್ ರಾಜ್ ಸಂಸ್ಥೆಗಳು

**ಉತ್ತರ: B**

**96. 'ಕಲಾಲೋಕ' ಮಳಿಗೆಯನ್ನು ಯಾವ ಇಲಾಖೆಯು ಸ್ಥಾಪಿಸಿದೆ?**

A. ಪ್ರವಾಸೋದ್ಯಮ ಇಲಾಖೆ
B. ಕೈಗಾರಿಕಾ ಇಲಾಖೆ
C. ಕರ್ನಾಟಕ ಕೈಮಗ್ಗ ಅಭಿವೃದ್ಧಿ ಇಲಾಖೆ
D. ವಾಣಿಜ್ಯ ಸಚಿವಾಲಯ, ಭಾರತ ಸರ್ಕಾರ

**ಉತ್ತರ: B**

**97. ಭಾರತದಲ್ಲಿ ದತ್ತು ಸ್ವೀಕಾರದ ಸಂಖ್ಯೆಯಲ್ಲಿ ಕರ್ನಾಟಕವು ಎಷ್ಟನೇ ಸ್ಥಾನದಲ್ಲಿದೆ.?**

A. ಮೊದಲನೇ
B. ಎರಡನೇ
C. ಮೂರನೇ
D. ನಾಲ್ಕನೇ

**ಉತ್ತರ: D**

**98. 'ಬೆಂಗಳೂರು ಸೇಫ್ ಸಿಟಿ ಯೋಜನೆ'ಗೆ ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. ಇದು ಗೃಹ ಸಚಿವಾಲಯದ ಅಡಿಯಲ್ಲಿನ ತಂತ್ರಜ್ಞಾನ ಆಧಾರಿತ ಉಪಕ್ರಮವಾಗಿದ್ದು, ಇದರ ಸಂಪೂರ್ಣ ಅನುದಾನವನ್ನು ರಾಜ್ಯ ಸರ್ಕಾರವು ಒದಗಿಸುತ್ತದೆ.
2. ನಗರ ಸುರಕ್ಷತೆಯನ್ನು ಹೆಚ್ಚಿಸಲು ಈ ಯೋಜನೆಯು ಸ್ಥಿರ, ಹೈ-ರೆಸಲ್ಯೂಷನ್, ಪ್ಯಾನ್-ಟಿಲ್ಟ್-ಜೂಮ್ ಕ್ಯಾಮೆರಾಗಳು, ಡ್ರೋನ್‌ಗಳು ಮತ್ತು ದೇಹದಲ್ಲಿ ಧರಿಸುವ ಕ್ಯಾಮೆರಾಗಳನ್ನು ಸಂಯೋಜಿಸುತ್ತದೆ.
3. ತುರ್ತು ಪ್ರತಿಕ್ರಿಯೆ ವ್ಯವಸ್ಥೆಯು ಕಮಾಂಡ್ ಸೆಂಟರ್‌ಗಳೊಂದಿಗೆ ಸಂಪರ್ಕ ಹೊಂದಿದ ಮೀಸಲಾದ ಪೊಲೀಸ್ ವಾಹನಗಳು ಮತ್ತು ವಿಧಿವಿಜ್ಞಾನ ವ್ಯಾನ್‌ಗಳನ್ನು ಒಳಗೊಂಡಿದೆ.
4. ಈ ಯೋಜನೆಯು ಪ್ರಾಥಮಿಕವಾಗಿ ಸಂಚಾರ ನಿರ್ವಹಣೆ ಮತ್ತು ಪಾಲಿಕೆ ಸೇವೆಗಳ ಮೇಲೆ ಗಮನಹರಿಸುತ್ತದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿವೆ?

A. 2 ಮತ್ತು 3 ಮಾತ್ರ
B. 1 ಮತ್ತು 4 ಮಾತ್ರ
C. 1, 2 ಮತ್ತು 3 ಮಾತ್ರ
D. ಮೇಲಿನ ನಾಲ್ಕೂ ಹೇಳಿಕೆಗಳು

**ಉತ್ತರ: A**

**99. KEO (ಜ್ಞಾನಾಧಾರಿತ, ಆರ್ಥಿಕ, ಮುಕ್ತ-ಮೂಲ) ಗೆ ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:**

1. KEO ಎಂಬುದು ಕರ್ನಾಟಕ ಸರ್ಕಾರವು ಕಿಯೋನಿಕ್ಸ್ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಿದ ಕೃತಕ ಬುದ್ಧಿಮತ್ತೆ-

ಸನ್ನದ್ಧ ವೈಯಕ್ತಿಕ ಗಣಕಯಂತ್ರವಾಗಿದೆ.

2. ಇದು ಮುಕ್ತ-ಮೂಲ RISC-V ಪ್ರೊಸೆಸರ್ ಮತ್ತು ಲಿನಕ್ಸ್ ಆಧಾರಿತ ಕಾರ್ಯಾಚರಣಾ ವ್ಯವಸ್ಥೆಯ ಮೇಲೆ ನಿರ್ಮಿಸಲ್ಪಟ್ಟಿದೆ.
3. ಕೃತಕ ಬುದ್ಧಿಮತ್ತೆ ಅನ್ವಯಿಕೆಗಳನ್ನು ನಡೆಸಲು KEO ಗೆ ನಿರಂತರ ಅಂತರ್ಜಾಲ ಸಂಪರ್ಕದ ಅಗತ್ಯವಿರುತ್ತದೆ.
4. ಇದನ್ನು ಕರ್ನಾಟಕ ಡಿ.ಎಸ್.ಇ.ಆರ್.ಟಿ ಪಠ್ಯಕ್ರಮದ ಮೇಲೆ ತರಬೇತಿ ಪಡೆದ 'ಬುದ್ದ್' ಎಂಬ ಕೃತಕ ಬುದ್ಧಿಮತ್ತೆ ಸಹಾಯಕದೊಂದಿಗೆ ಪೂರ್ವಭಾವಿಯಾಗಿ ಅಳವಡಿಸಲಾಗಿರುತ್ತದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ಯಾವುವು ಸರಿಯಾಗಿವೆ?

A. 1, 2 ಮತ್ತು 4 ಮಾತ್ರ
B. 1 ಮತ್ತು 3 ಮಾತ್ರ
C. 2, 3 ಮತ್ತು 4 ಮಾತ್ರ
D. ಮೇಲಿನ ನಾಲ್ಕೂ ಹೇಳಿಕೆಗಳು

**ಉತ್ತರ: A**

**100. 'ಡಿಜಿಟಲ್ ನಾಗರಿಕ್' ಕಾರ್ಯಕ್ರಮದ ಅಡಿಯಲ್ಲಿ ಯಾವ ಪೋರ್ಟಲ್ ನ ಮೂಲಕ ಶಿಕ್ಷಕರಿಗೆ ತರಬೇತಿಯನ್ನು ನೀಡಲಾಗುತ್ತದೆ.**

A. ನಿಷ್ಠಾ ಪೋರ್ಟಲ್
B. ದೀಕ್ಷಾ ಪೋರ್ಟಲ್
C. ದಿಶಾ ಪೋರ್ಟಲ್
D. ಸ್ವಯಂ ಪೋರ್ಟಲ್

**ಉತ್ತರ: C**

# Our Initiatives

- **KPSC KAS Pre-Cum-Mains Program**
- **Samartha & Samara KAS Test Series**
- **YouTube Initiatives - Insta Vidyamana**
- **Mentorship Program**
- **Mission Aarakshaka**
  - (PSI/ESI/FDA / SDA/ALL GROUP-C CLASSES)
  - RAKSHAKA - (PSI / ESI / FDA / SDA/ ALL GROUP-C TEST SERIES)

## TOPPERS CORNER



RANJITH K R
TAHASILDAR
KPSC TOPPER 2022



HEMA P
ASSISTANT DIRECTOR OF CO-OPERATIVE AUDIT
KPSC TOPPER 2022



DR CHIKKAPPA NAYAK
TAHASILDAR
KPSC TOPPER 2022



RASHMI V
TAHASILDAR
KPSC TOPPER 2022




DIVYA K SHETTY
DEPUTY SUPERINTENDENT OF EXCISE
KPSC TOPPER 2022



POORNIMA V
TAHASILDAR
KPSC TOPPER 2022

## Our KAS Branches



**DAVANAGERE BRANCH**

#1092 Jadhav Complex, Ring Road, Nijilingappa Layout, Opp to EDU ASIA School Davangere, Karnataka - 577004

**BENGALURU BRANCH**

# 1134/1, 2nd Floor, Beside Sharavathi Hospital, Service Road, Opposite to Attiguppe Metro Station, RPC Layout, Vijayanagar, Bengaluru, Karnataka-560040

**Phone: 080 69 405 206**
**Email: support@insightsias.com**

WWW.INSIGHTSONINDIA.COM INSTACOURSES.INSIGHTSONINDIA.COM